ಸೆಂಬರ್ ೧೯೮೭
ರ. ೨-೫೦

ಕಸ್ತೂರಿ



ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ :

ಕೆ. ಶಾಮರಾವ್

ಸಹಸಂಪಾದಕ :

ಮಾಧವ ನಾ. ಮಹಿಂಷಿ

ಕಲೆ :

ಪಿ. ಆರ್. ಪಾಟೀಲ

ಮುಖಪುಟ :

ಮಂದಸ್ಮಿತ

ಚಿತ್ರ :

ಎಂ. ವಿಶ್ವನಾಥ

ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI, December 1987

ಬೆಳಕಿಂಡಿ

ಮೌನವಾಗಿರುವುದಕ್ಕಿಂತ ಸದ್ದು ಮಾಡುತ್ತಿರುವುದು ಒಳ್ಳೆಯದು ಎಂಬ ಒಂದೇ ಕಾರಣಕ್ಕಾಗಿ ಕೆಲವರು ಮಾತನಾಡುತ್ತಿರುತ್ತಾರೆ.

—ಮಾರ್ಗರೆಟ್ ಹ್ಯಾಲ್ಸೆ

*

ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದೆಂದರೆ ಅದೊಂದು ವೈವಿಧ್ಯವಿಲ್ಲದ ಬೇಸರದ ಕೆಲಸ ಎಂದೇ ಎಲ್ಲರೂ ಭಾವಿಸಿರುತ್ತಾರೆ. ಆದರೂ ಅದನ್ನು ಮಾಡಿ ಮುಗಿಸಿದಾಗ ಒಂದು ಬಗೆಯ ತೃಪ್ತಿ ಸಿಗುತ್ತದೆ. —ಸಾಮರ್ಸೆಟ್ ಮಾಮ್

*

ಒಬ್ಬನಿಗೆ ತನ್ನ ತಂದೆ ಹೇಳುತ್ತಿದ್ದುದೇ ಸರಿ ಎಂದು ಗೊತ್ತಾಗುವ ವೇಳೆಗೆ ಸಾಧಾರಣವಾಗಿ ಅವನಿಗೆ, ತಾನು ಹೇಳುತ್ತಿರುವುದು ತಪ್ಪು ಎಂದು ತಿಳಿದುಕೊಂಡಿರುವ ಮಗನಿರುತ್ತಾನೆ.

—ಚಾರ್ಲ್ಸ್ ವ್ಯಾಂಡ್ಸ್‌ವರ್ಥ್

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಹಚಿಂತನ

ಮೇರಿ ಕೊರೆಲ್ಲಿ ಅಲ್ಲ

ನವಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ 'ಕಣ್ಮರೆಯಾದ ಕಸ್ತೂರಿ' ಎಂಬ ಲೇಖನದಲ್ಲಿ Alice in the Wonderland' ಮೇರಿ ಕೊರೆಲ್ಲಿಯ ಕೃತಿಯ ರೂಪಾಂತರ ಎಂದು ಖಜಾನೆ ಕೃಷ್ಣಮೂರ್ತಿ ಬರೆದಿದ್ದಾರೆ. ಇದು ತಪ್ಪು. ಅದರ ಕರ್ತೃ 'ಲೂಯಿ ಕೆರೋಲ್' ಎಂಬ ಮಿಥ್ಯಾನಾಮದಿಂದ ಬರೆಯುತ್ತಿದ್ದ ರೆವರೆಂಡ್ ಚಾರ್ಲ್ಸ್ ಲಡ್ವಿಗ್ ಡಾಡ್ಜ್‌ಸನ್. ಅವರು ಆಕ್ಸ್‌ಫರ್ಡಿನ ಕ್ರೈಸ್ಟ್ ಚರ್ಚ್ ಕಾಲೇಜಿನಲ್ಲಿ ಗಣಿತ ಪ್ರಾಧ್ಯಾಪಕರಾಗಿದ್ದರು.

ಪುಣೆ —ಡಾ. ಗೋಪಾಲ ಕಾರ್ಕಳ

'Alice in the Wonderland'ನ ಕರ್ತೃ 'ಲೂಯಿ ಕೆರೋಲ್' ಎಂದು ಹೆಸರಿಟ್ಟು ಕೊಂಡು ಮಕ್ಕಳ ಕಥೆಗಳನ್ನು ಬರೆಯುತ್ತಿದ್ದ ಗಣಿತ ಶಾಸ್ತ್ರಜ್ಞ ಚಾರ್ಲ್ಸ್ ಲಡ್ವಿಗ್ ಡಾಡ್ಜ್‌ಸನ್. ಈ ವಿಷಯವನ್ನು ನಾ. ಕಸ್ತೂರಿ ಯವರೇ ತಮ್ಮ 'ಪಾತಾಳದಲ್ಲಿ ಪಾಪಚ್ಚಿ' ಪುಸ್ತಕದ 'ಅರಿಕೆ'ಯಲ್ಲಿ ತಿಳಿಸಿದ್ದಾರೆ.

ಕಾರ್ಕಳ (ದ. ಕ.) —ಸಂಧ್ಯಾ ವಿ. ಎಸ್.

'ಗಂಡಾ' ಅರ್ಥವೇನು?

ಅಕ್ಟೋಬರ್ ೮೭ರ ಸಂಚಿಕೆಯಲ್ಲಿ ಪಾ. ವೆಂ. ರವರು ತಮ್ಮ 'ಪದಾರ್ಥ ಚಿಂತಾಮಣಿ' ಅಂಕಣದಲ್ಲಿ 'ಗಂಡಾಂತರ' ಶಬ್ದದ ವ್ಯುತ್ಪತ್ತಿಯ ಬಗ್ಗೆ ಆಮೂಲಾಗ್ರವಾಗಿ ಚರ್ಚಿಸಿದ್ದಾರೆ. 'ಗಂಡಾ' ಎನ್ನುವ ಶಬ್ದದ ಬಗ್ಗೆ ಬೇರೊಂದು ಅರ್ಥವಿರುವ ಸಾಧ್ಯತೆಯಿದೆ.

ಒಮ್ಮೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಪ್ರಖ್ಯಾತ ಹಿಂದುಸ್ತಾನಿ ಗಾಯಕ ಶ್ರೀ ಬಸವರಾಜ ರಾಜಗುರು ಅವರ ಅಭಿನಂದನ ಕಾರ್ಯಕ್ರಮವಿತ್ತು. ಅಂದು ಪ್ರಖ್ಯಾತವಿದುಷಿ ಗಂಗೂಬಾಯಿ ಹಾನಗಲ್ಲರೂ ಉಪಸ್ಥಿತರಿದ್ದು ಈ 'ಗಂಡಾ' ಶಬ್ದದ ಬಗ್ಗೆ ಚರ್ಚೆ ನಡೆಯಿತು. ಈ 'ಗಂಡಾ' ಶಬ್ದದ ಅರ್ಥ ಅಂದಿನ ಸಂದರ್ಭಕ್ಕೆ ಅನುಗುಣವಾಗಿ ಶಿಷ್ಯನನ್ನು ಸ್ವೀಕರಿಸು, ದೀಕ್ಷೆ ನೀಡು ಎಂದು ನಾನು ಭಾವಿಸಿದ್ದೆ. (ಇದನ್ನು ಪುಷ್ಟೀಕರಿಸಲು ಇದೇ ಸಂಚಿಕೆಯ ಪುಟ ೪೨ರಲ್ಲಿ ಮನ್ಸೂರರವರು 'ಬಾಲ ಗಂಧರ್ವ' ಕುರಿತಾದ ಲೇಖನದಲ್ಲಿ "ಮಂಜೀಖಾನ್‌ಸಾಹೇಬರು ಭಾಸ್ಕರ ಬುವಾರಿಗೆ ಗಂಡಾ ಕಟ್ಟಿದರು" ನೋಡಬಹುದು.) ಹಾಗಾದರೆ ಈ 'ಗಂಡಾ' ಎನ್ನುವ ಶಬ್ದ ಯಾವ ಭಾಷೆಯದು? ಇದರ ಅರ್ಥ ಪಾ. ವೆಂ. ರವರು ತಿಳಿಸಿರುವಂತೆ ಅನಿಷ್ಟಸೂಚಕವೆ?

ಆಳಗಂಚಿ —ಎಂ. ಡಿ. ನಂಜುಂಡಸ್ವಾಮಿ

ಓದುಗ ಶ್ರೀ ನಂಜುಂಡಸ್ವಾಮಿಯವರು ಹೇಳುವ ಗಂಡಾ ಎಂಬುದಕ್ಕೆ ಮಂತ್ರಿಸಿ ಮುಂಗೈ, ತೋಳು ಅಥವಾ ಕೊರಳಲ್ಲಿ ಕಾಣುವ ಕಟ್ಟುವ ಕಾಪು, ದೋರ (ದಾರ) ರಕ್ಷೆ, ರಾಖಿ, ಕಂಕಣ ಇತ್ಯಾದಿಯೆಂದರ್ಥ. ಅದು ಒಂದು ತರಹದ ದೀಕ್ಷಾ ಗ್ರಹಣದ ಸಂಕೇತವೂ ಹೌದು. ಸಂಗೀತ ಗುರುಗಳು ತಮ್ಮ ಸಂಪ್ರದಾಯದ ನಿಷ್ಣ ಪರಿಣಿತ ಶಿಷ್ಯರಿಗೆ ಸಾರ್ವಜನಿಕವಾಗಿ ಗಂಡಾ ಕಟ್ಟಿ ತಮ್ಮ ಶಿಷ್ಯ ಎಂದು ಸ್ವೀಕರಿಸುತ್ತಾರೆ. ಈ ಶಬ್ದ ಹಿಂದಿ ಮರಾಠಿಗಳಲ್ಲಿದೆ. ಕನ್ನಡಕ್ಕೆ ಮರಾಠಿಯಿಂದ ಬಂದಂತಿದೆ. ಆದರೆ ಮರಾಠಿ ವ್ಯುತ್ಪತ್ತಿಕೋಶದ ಡಾ. ಕುಲಕರ್ಣಿಯವರಿಗೆ ಅದರ ಮೂಲದ ಬಗ್ಗೆ ಸಂದೇಹವಿದೆ. ಅದು ದ್ರಾವಿಡ ಅಥವಾ ಅನ್ಯ ದೇಶ್ಯವಿರಬಹುದೆಂದು ಅನುಮಾನಿಸುತ್ತಾರೆ. ನನಗನಿಸುವ ಪ್ರಕಾರ ಗಂಡಾ ಮೂಲ ಶೋಧಕ್ಕೆ ಅಷ್ಟು ದೂರ ಹೋಗಬೇಕಿಲ್ಲ. ಸಂಸ್ಕೃತ ಗ್ರಥ್ (ಕಟ್ಟು, ಗಂಟು ಹಾಕು ಇತ್ಯಾದಿ) ಧಾತುವಿನಿಂದ ಹುಟ್ಟಿದ ಗ್ರಂಥ, ಗ್ರಂಥಿ, ಗ್ರಂಥಿಕ ಇತ್ಯಾದಿ ಪದಗಳಲ್ಲಿ ಗಂಡಾದ ಮೂಲ ಇರಬೇಕು. ಕನ್ನಡ ಗಂಟು ಗ್ರಂಥಿಯದೇ ತದ್ಭವ. ಜನಿವಾರದ ಗಂಟನ್ನು ಗ್ರಂಥಿಯೆನ್ನಲಾಗುತ್ತಿದೆ. ಅಂತೆಯೇ ಕೈಗೆ ದೀಕ್ಷಾ ಚಿಹ್ನವಾದ ದಾರ ಬಿಗಿದು ಗಂಟು ಹಾಕುವುದೇ ಗಂಡಾ ಇರಬೇಕು. 'ರ'ಕಾರ ಸನ್ನಿಧಾನದಲ್ಲಿರುವ 'ತ' ವರ್ಗಾಕ್ಷರಗಳು 'ಟ' ವರ್ಗಕ್ಕೆ ತಿರುಗುವುದು ಸಾಮಾನ್ಯ ಲಕ್ಷಣ. ವಾಗಿದೆ.

ಧಾರವಾಡ —ಪಾವೆಂ.

ದೊಡ್ಡ ವ್ಯಕ್ತಿ

ನವೆಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ

ಶ್ರೀ ಬಿ. ಕೆ. ದಾಸಪ್ಪನವರನ್ನು ಕುರಿತು ಮುರಳೀಧರ ಖಜಾನೆಯವರ ಲೇಖನ ಓದಿದೆ.

ಮೈಸೂರು ಬ್ಯಾಂಕಿನ ಕಾಗದ ನಗರ ಶಾಖೆಯಲ್ಲಿ ಕೆಲಸ ಮಾಡುತ್ತಿರುವ ನಾನು ದಾಸಪ್ಪನವರನ್ನು ವಾರದಲ್ಲಿ ಒಂದು ಸಾರಿಯಾದರೂ ಸಂಧಿಸುತ್ತೇನೆ. ಅವರಿಗಿಂತ ಐವತ್ತು ವರ್ಷಗಳಿಗೂ ಮಿಕ್ಕು ಸಣ್ಣವನಾದ ನನಗೆ ಅವರು 'ಗುಡ್ ಮಾರ್ನಿಂಗ್, ಸರ್' ಎಂದೇ ಹೇಳುತ್ತ ಒಳಬರುವುದು ವಾಡಿಕೆ.

ನಮ್ಮ ಶಾಖೆಯಲ್ಲಿ ಸರ್ ಎಂ. ವಿ. ದಿನಾಚರಣೆ ಸಂದರ್ಭಕ್ಕೆ ಅವರು ಮುಖ್ಯ ಅತಿಥಿಯಾಗಿ ಬಂದಿದ್ದರು. ಅವರ ಕಚೇರಿಯಿಂದ ಬ್ಯಾಂಕಿಗೆ ಬರುವುದಕ್ಕಾಗಲಿ, ಮತ್ತು ಬ್ಯಾಂಕಿನಿಂದ ಮನೆಗೆ ಹೋಗುವುದಕ್ಕಾಗಲೀ ನಮ್ಮ ಸ್ಕೂಟರುಗಳನ್ನು ನಿರಾಕರಿಸಿಬಿಟ್ಟರು. ಅತಿಥಿ ಭಾಷಣವನ್ನು ಕುಳಿತುಕೊಂಡೇ ಮಾಡಲು ಕೇಳಿಕೊಂಡಾಗಲೂ ನಯವಾಗಿ ನಿರಾಕರಿಸಿ ಸುಮಾರು ಒಂದು ಗಂಟೆ ನಿಂತೇ ಮಾತನಾಡಿದರು.

ಇಂಥ ಸ್ನೇಹಪರ, ಸರಳ, ಶಿಸ್ತಿನ ವ್ಯಕ್ತಿಯ ಕುರಿತು 'ಕಸ್ತೂರಿ' ಪ್ರಕಟಿಸಿರುವುದು ಸಂತೋಷದ ವಿಚಾರ.

ಶಿವಮೊಗ್ಗ —ಎನ್. ಎಂ. ಕೃಷ್ಣಮೂರ್ತಿ

'ವಣಕ್ಕಂ' ಮೂಲ

ನವೆಂಬರ್ ತಿಂಗಳ 'ಕಸ್ತೂರಿ'ಯಲ್ಲಿ ಪದಾರ್ಥ ಚಿಂತಾಮಣಿಯಲ್ಲಿ 'ವಣಕ್ಕಂ' ಪದದ ವಿವರಣೆ ಕೊಡುವಾಗ ಪಾ. ವೆಂ. ಅವರು ಸ್ವಲ್ಪ ತಪ್ಪಿದ್ದಾರೆ:

'ವಣಕ್ಕಂ' ಪದ ಕನ್ನಡಿಗರಿಗೆ ಪರಿಚಯವಾಗಿರುವುದು ಮಲೆಯಾಳಿಗಳ ಸಂಪರ್ಕದಿಂದ ಅಲ್ಲ. 'ವಣಕ್ಕಂ' ಬಳಸುವವರು ತಮಿಳು ಭಾಷೆಯ ಜನ. ಮಲಯಾಳಿಗಳು ಪರಸ್ಪರ 'ನಮಸ್ಕಾರಂ' ಎಂದೇ ಹೇಳಿಕೊಳ್ಳುತ್ತಾರೆ. ಮಲಯಾಳಂನಲ್ಲಿ ಅಭಿವಾದನಂ ಎಂಬ ಪದಕ್ಕೆ ಶುಭಾಶಯ, ಶುಭಾಶಂಸೆ, ಶುಭ ಹಾರೈಕೆ ಎಂಬ ಅರ್ಥವ್ಯಾಪ್ತಿಯಿದೆ. 'ವಣಕ್ಕಂ' ಪದದ ಬಳಕೆ ದ್ರಾವಿಡ ಮೂಲದ್ದಾದರೂ ಅದನ್ನು ಮಲಯಾಳಂ ಆಡು ಭಾಷೆ ತನ್ನದಾಗಿಸಿಕೊಂಡಿಲ್ಲ. ಆದರೆ ದೇವರಿಗೆ ನಮಿಸು ಮುಂತಾದ ಪದಪ್ರಯೋಗಗಳಲ್ಲಿ 'ವಣಙುಗ' (ನಮಿಸು) ಎಂದು ಪುಸ್ತಕದ ಭಾಷೆಗಳಲ್ಲಿ, ಅದೂ ಬಲು ವಿರಳವಾಗಿ, ಆ ಪದ ಕಂಡುಬರುತ್ತದೆ.

ಹೊಸಂಗಡಿ (ದ.ಕ.) —ಡಾ. ಅಶೋಕ್ ಕುಮಾರ್

ಮಾಳವಾಡ–ಒಂದು ಚಿಂತನೆ

ಸ. ಸ. ಮಾಳವಾಡರ ಜೀವನದ ಹೃದಯಂಗಮ ನಿರೂಪಣೆ ನೀಡಿದ ಲೇಖಕ 'ಚೆಂಪಾ'ರವರಿಗೆ ವಂದನೆ. ಮಾಳವಾಡರ ಜೊತೆಗೆ ತಾವು ಹಂಚಿಕೊಂಡ ವೈಡಂಬಿಕ, ವೈಚಾರಿಕ ಹಾಗೂ ಮಾನಸಿಕವಾದ ಅಪೂರ್ವ ವಿಷಯಗಳನ್ನು ಲೇಖಕರು ಓದುಗರೆದುರು ಇಟ್ಟಿದ್ದಾರೆ. ಪ್ರಸ್ತುತ ಸಮಾಜಕ್ಕೆ ಮಾಳವಾಡರಂಥ ಪ್ರಮುಖ ವ್ಯಕ್ತಿ ದಾರಿ ದೀವಿಗೆಯಂತೆ ಎಂದು ಲೇಖನ ಸಾಬೀತು ಪಡಿಸಿತು.

ಕಲಬುರ್ಗಿ —ವಿದ್ಯಾಸಾಗರ ಕುಕ್ಕುಂದಾ

ವಿಜ್ಞಾನ–ದರ್ಶನ ಭೇದ...

ಅಕ್ಟೋಬರ್ ಸಂಚಿಕೆಯಲ್ಲಿಯ 'ಆರ್. ಎಸ್. ಇನಾಮದಾರ' ಲೇಖನದ ಬಗ್ಗೆ ಒಂದು ಸಂದೇಹ:

೧೯೫೦ರಲ್ಲಿ ಮೂರು ಗಂಟೆ ಕಾಲ ಮಾತಾಡಿದ ಇನಾಮದಾರರು ವಿಜ್ಞಾನ–ದರ್ಶನಗಳಲ್ಲಿ ಭೇದವಿಲ್ಲ ಎಂಬುದನ್ನು ತಿಳಿಸಿದರೆಂದಿದೆ. ಆದರೆ ಇದು ಎಷ್ಟು ಸರಿ? ಅಥವಾ ಆಂಶಿಕವಾಗಿ ಸತ್ಯವೆಂದು ದನ್ನು ಇಟ್ಟುಕೊಳ್ಳಬೇಕೆ?

ನಾನು ತಿಳಿದ ಮಟ್ಟಿಗೆ ಈತನಕ ವೈಜ್ಞಾನಿಕವಾಗಿ ಆದ ತೀರ್ಮಾನಗಳಿಗೂ ಪ್ರಾಚೀನ ಸಿದ್ಧಾಂತಗಳಿಗೂ ಸಂಬಂಧ ಕಲ್ಪಿಸುವುದು ಸರ್ವಥಾ ಸಾಧ್ಯವಾಗದು.

ಚುಂಚನಹಳ್ಳಿ —ಬಿ. ಎಸ್. ಶ್ರೀನಿವಾಸಾಚಾರ್ಯ

ವಾಸ್ತವ ಕಥೆ

ಅಕ್ಟೋಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ ನಾ. ಡಿಸೋಜರ ಕಥೆ "ಅವರವರ ನಂಬಿಕೆ" ಲೇವಾದೇವಿ ವ್ಯವಹಾರದ ವಾಸ್ತವಿಕ ಚಿತ್ರಣ. ಈ ವ್ಯವಹಾರದ ವಾಸ್ತವಿಕ ಧಂದೆಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸಹಕಾರಿಯಾಗಿದೆ.

ಅರಂತೋಡು (ದ.ಕ.) —ಶೇಖರ ಅರಂತೋಡು

ಕಸ್ತೂರಿ

ವರ್ಷ : ೩೨ ಡಿಸೆಂಬರ್, ೧೯೮೭ ಸಂಚಿಕೆ : ೪

ಸ್ಪಂದನ


ರಾಜೇಶ್ವರಿ, ಇಂದಾಜೆ

ಮಮತಾಮಯಿ ಮಾತೆಯರಲ್ಲಿ ವಾತ್ಸಲ್ಯ ಪೂರಿತ ಹೃದಯವಿರುತ್ತದೆ. ಅಂತೆಯೇ ಮಹಾಪುರುಷರಲ್ಲೂ ಇಂಥ ಗುಣ ಅಡಕವಾಗಿರುತ್ತದೆ ಎನ್ನುವುದಕ್ಕೆ ಸ್ವಾಮಿ ವಿವೇಕಾನಂದರು ಬೇಲೂರು ಮಠದಲ್ಲಿದ್ದಾಗ ನಡೆದ ಈ ಘಟನೆಯೆ ಸಾಕ್ಷಿ. ರಾತ್ರಿ ಸುಮಾರು ಒಂದು ಗಂಟೆಯ ಹೊತ್ತಿನಲ್ಲಿ ಹಠಾತ್ತಾಗಿ ನಿದ್ರೆಯಿಂದೆದ್ದ ಸ್ವಾಮೀಜಿ ತಮ್ಮ ಕೋಣೆಯ ಹೊರಗಡೆ

ವರಾಂಡದಲ್ಲಿ ಶತಪಥ ಹಾಕುತ್ತಿದ್ದರು. ಇದ-ರಿಂದ ಚಕಿತಗೊಂಡ ಶ್ರೀರಾಮಕೃಷ್ಣರ ಇನ್ನೊಬ್ಬ ಶಿಷ್ಯರಾದ ಸ್ವಾಮಿ ವಿಜ್ಞಾನಾನಂದರು, "ಸ್ವಾಮಿಗಳೇ, ನಿದ್ರೆ ಬರಲಿಲ್ಲವೇ?" ಎಂದು ಪ್ರಶ್ನಿಸಿದಾಗ ವಿವೇಕಾನಂದರು, "ನಿದ್ರೆ ಬಂದಿತ್ತು. ಆದರೆ ಒಂದು ಗಂಟೆಯ ಹಿಂದೆ ಅನೇಕರು ಅತ್ಯಂತ ಸಂಕಟದಿಂದ ಆರ್ತನಾದ ಮಾಡಿದಂತೆ ಕೇಳಿಸಿ ಎಚ್ಚರವಾಯಿತು," ಎಂದರು.

ಇದೇನು ವಿಚಿತ್ರ ಎಂದು ವಿಜ್ಞಾನಾನಂದಜೀ ತಮ್ಮ ಕೊಠಡಿಗೆ ತೆರಳಿದರು. ಮರುದಿನ ಪತ್ರಿಕೆಯಲ್ಲಿ ಬಂದ ವರದಿ ಹೀಗಿತ್ತು—ಸಾವಿರಾರು ಮೈಲು ದೂರದ ಭೂಮಧ್ಯ ಸಮುದ್ರದ ಸಮೀಪ ಭೂಕಂಪವಾಗಿ ಸಹಸ್ರಾವಧಿ ಜನರು ಅಸುನೀಗಿದ್ದರು. ಪ್ರಾಣೋತ್ಕ್ರಮಣ ಕಾಲದಲ್ಲಿ ಅವರ ಆರ್ತನಾದದ ಸ್ಪಂದನವನ್ನು ವಿವೇಕಾನಂದರ ಮಾತೃಹೃದಯ ಗುರುತಿಸಿತ್ತು. ಸಾಮಾನ್ಯ ತಾಯಿಯೊಬ್ಬಳು ತನ್ನ ಪ್ರೀತಿಪಾತ್ರರ ಮಕ್ಕಳ ನೋವನ್ನಷ್ಟೆ ಕೆಲವೊಮ್ಮೆ ಅನುಭವಿಸಬಲ್ಲಳು. ಆದರೆ ಆತ್ಮಾನುಭೂತಿಯನ್ನು ಪಡೆದು ನಿಸ್ವಾರ್ಥತೆಯ ಪರಾಕಾಷ್ಠೆಗೇರಿದ ಮಹಾತ್ಮರು, ಕಷ್ಟಸಹಿಷ್ಣುಗಳಾಗಿ ಅಪಾರ ತ್ಯಾಗದಿಂದ ಜೀವಿಗಳ ದುಃಖ ದೂರ ಮಾಡಲು ಅಹರ್ನಿಶಿ ದುಡಿಯುವವರು ಲೋಕದ ದುಃಖವನ್ನು ಎಲ್ಲಾ ಸ್ಥಿತಿಯಲ್ಲೂ ತಿಳಿಯಬಲ್ಲರು. ✡

(ಸಂಗ್ರಹ)



ವಿಜಯ ಮರ್ಚಂಟ್

ಹೃದಯವಂತ 'ವ್ಯಾಪಾರಿ'

ವಸಂತ ಕಲಕೋಟಿ

ಕ್ರಿಕೆಟ್, ಸಮಾಜ ಸೇವೆ ಹಾಗೂ ಉದ್ಯಮ ವಲಯಗಳಲ್ಲಿ ಹೆಸರು ಮಾಡಿದ ವಿಜಯ ಮರ್ಚಂಟ್ ಮೊನ್ನೆ ಅಕ್ಟೋಬರ್ ಇಪ್ಪತ್ತೈದರಂದು ಬೆಳಿಗ್ಗೆ ನಮ್ಮನ್ನಗಲಿ ಹೋದರು. ಐದನೆಯ ಸಲ ಆದ ಹೃದಯಾಘಾತವನ್ನು ತಡೆದು ಕೊಳ್ಳುವುದು ಅವರಿಂದಾಗಲಿಲ್ಲ. ಹದಿನೇಳು ವರುಷಗಳ ಹಿಂದೆ, ಅವರು ಮುಂಬಯಿ ಮಹಾನಗರದ ಶರೀಫರಾಗಿದ್ದಾಗ ಪ್ರಥಮ ಸಲ ಅವರಿಗೆ ಹೃದಯಾಘಾತ ಸಂಭವಿಸಿತ್ತು. ಆ ನಂತರ ಚಿಕ್ಕ ಪುಟ್ಟ ಪ್ರಮಾಣದಲ್ಲಿ ಹೃದಯಾಘಾತಗಳು ಸಂಭವಿಸಿದ್ದರೂ ಧೈರ್ಯದಿಂದ ಹಾಗೂ ಸಮಯೋಚಿತ ಉಪಚಾರದಿಂದ ಅವರು ಹೃದಯಕ್ರಿಯೆಯ ಮೇಲೆ ಹತೋಟಿಯನ್ನು ಸಂಪಾದಿಸಿದ್ದರು. ಮರಣದ ಸಮಯದಲ್ಲಿ ಪತ್ನಿ ಚಂದ್ರಪ್ರಭಾ, ಮಗಳು ಅದಿತಿ ಸಂತಾನಂ ಮಗ ಅಮರ ಅವರು ವಿಜಯಮರ್ಚಂಟರ ಬಳಿಗಿದ್ದರು. ಹಿಂದಿನ ರಾತ್ರಿ ಹೃದಯಾಘಾತ ಸಂಭವಿಸಿದಾಗ ಅವರನ್ನು ಭಾಟಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಮರುದಿವಸ ಬೆಳಿಗ್ಗೆ ತಮ್ಮ ೭೬ನೆಯ ವಯಸ್ಸಿನಲ್ಲಿ ಅವರು ಕೊನೆಯುಸಿರು ಎಳೆದರು. ಪ್ರಸಿದ್ಧಿ, ಪ್ರಚಾರ, ಡಂಭಾಚಾರಗಳಿಂದ ವಿಜಯ ಮರ್ಚಂಟ್ ಬಹು ದೂರ. ತಮ್ಮ ಮರಣದ ನಂತರ ಎರಡು ಗಂಟೆಯ ಒಳಗಾಗಿ ಸಾಯಿನ್‌ದಲ್ಲಿರುವ ವಿದ್ಯುತ್ ಚಿತಾಯಂತ್ರದ ಮುಖಾಂತರ ತಮ್ಮ ಅಂತ್ಯಸಂಸ್ಕಾರವಾಗಬೇಕೆಂದು ಅವರು ತಮ್ಮ ಕುಟುಂಬದವರಿಗೆ ಹೇಳಿದ್ದರು. ತಮಗೆ ಯಾವ ರೀತಿಯ ಶ್ರದ್ಧಾಂಜಲಿ, ಭಾವಾಂಜಲಿ, ಜನರ ಅನುಕಂಪ ಬೇಡವೆಂದಿದ್ದರು. ಇಷ್ಟೇ ಅಲ್ಲ, ತಾವು ಸತ್ತ ನಂತರ ಯಾವ ಧರ್ಮಕ್ರಿಯೆಯೂ ಜರುಗಕೂಡದೆಂದೂ ಆದೇಶಿಸಿದ್ದರು. ತಮ್ಮ ಮರಣದ ನಂತರ ಕಣ್ಣುಗಳನ್ನು ದಾನ ಮಾಡಬೇಕೆಂದು ಹೇಳಿಟ್ಟಿದ್ದರು. ಅವರ ಇಚ್ಛೆಯಂತೆ ಯಾವ ಪ್ರಚಾರ ಗದ್ದಲ, ಆಡಂಬರವಿಲ್ಲದೇ ನಾಲ್ಕು ಗಂಟೆಗಳೊಳಗಾಗಿ ಸಾಯಿನ್ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ಜರುಗಿತು. ವಿಜಯ ಮರ್ಚಂಟರ ಅಂತಿಮ ದರ್ಶನ ಪಡೆಯಲು ಮಹಾನಗರದ ಕ್ರಿಕೆಟ್ ಖ್ಯಾತ ಪಟುಗಳು, ಸಮಾಜ ಸೇವಕರು

ರಾಜಕಾರಣಿಗಳು, ಮೇಯರ್, ಶರೀಫ, ಉದ್ಯೋಗಪತಿಗಳು ಪೆಡ್ಡಾರ ರೋಡಿನಲ್ಲಿರುವ ಮರ್ಚಂಟ್‌ರ ನಿವಾಸ "ಮೇವಾಡ್"ಗೆ ತೆರಳಿ ಶ್ರದ್ಧಾಂಜಲಿ ಸಲ್ಲಿಸಿದರು. ಭಾರತದ ರಾಷ್ಟ್ರಪತಿ ವೆಂಕಟರಾಮನ್, ಉಪರಾಷ್ಟ್ರಪತಿ ಡಾ. ಶಂಕರ ದಯಾಲ ಶರ್ಮಾ, ಪ್ರಧಾನ ಮಂತ್ರಿ ರಾಜೀವ ಗಾಂಧಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಶಂಕರ ರಾವ್ ಚವ್ಹಾಣರಷ್ಟೇ ಅಲ್ಲ, ಹಲವು ರಾಷ್ಟ್ರಗಳ ಖ್ಯಾತ ಆಟಗಾರರು, ಸಮಾಜ ಸೇವಾ ಮುಖಂಡರು ಹಾಗೂ ಉದ್ಯಮಿಗಳು ದಿವಂಗತರ ಕುಟುಂಬಕ್ಕೆ ಶೋಕ ಸಂದೇಶ ಕಳುಹಿಸಿದ್ದಾರೆ. ಭಾರತ – ಪಾಕಿಸ್ತಾನಗಳಲ್ಲಿ ನಡೆಯುತ್ತಿದ್ದ ರಿಲಾಯನ್ಸ್ ವಿಶ್ವ ಕಪ್ ಕ್ರಿಕೆಟ್ ಸ್ಪರ್ಧೆಯಲ್ಲಿ ಭಾಗವಹಿಸಲು ಬಂದಿದ್ದ ಎಂಟು ರಾಷ್ಟ್ರಗಳ ಖ್ಯಾತ ಕ್ರಿಕೆಟ್ ಆಟಗಾರರು ಮರ್ಚಂಟ್‌ರ ಸಾಧನೆಗಳನ್ನು ನೆನೆದು ಶ್ರದ್ಧಾಂಜಲಿಗಳನ್ನು ಸಲ್ಲಿಸಿದರು. ಕೆಲವು ದಿವಸಗಳಿಂದ ವ್ಯಾಧಿಯಿಂದ ಬಳಲುತ್ತಿದ್ದ ಮರ್ಚಂಟ್ ಅಕ್ಟೋಬರ್ ೧೨ರಂದು ತಮ್ಮ ಹುಟ್ಟು ಹಬ್ಬದ ಕಾರ್ಯಕ್ರಮದಲ್ಲೂ ಭಾಗವಹಿಸಲಿಲ್ಲ. ಪ್ರತಿ ವರುಷ ತಮ್ಮ ಹುಟ್ಟು ಹಬ್ಬದಂದು, ತಮ್ಮ ಹಿಂದುಸ್ತಾನ ಮಿಲ್ಸ್‌ನಲ್ಲಿ ಅಂಗವಿಕಲರ ಮದುವೆಗಳನ್ನು ಜರುಗಿಸುವುದು ವಾಡಿಕೆ.

ಇವರು ೧೯೧೧ರ ಅಕ್ಟೋಬರ್ ಹನ್ನೆರಡರಂದು ಮುಂಬಯಿಯಲ್ಲಿ ಖ್ಯಾತ ಉದ್ಯಮಿಗಳಾದ ಥ್ಯಾಕರಸೀ ಕುಟುಂಬದಲ್ಲಿ ಜನಿಸಿದರು. ೧೯೩೨ರಲ್ಲಿ ಸಿಡೆನ್ಹ್ಯಾಮ್ ಕಾಲೇಜಿನಿಂದ ಬಿ. ಕಾಂ. ಪರೀಕ್ಷೆ ಪಾಸಾದರು. ಶಾಲೆಯಲ್ಲಿ ಓದುತ್ತಿರುವಾಗಲೇ ಕ್ರಿಕೆಟ್ ಹಾಗೂ ಟೆನ್ನಿಸ್ ಆಟಗಳಲ್ಲಿ ವಿಶೇಷ ಆಸಕ್ತಿ. ೧೯೨೯ರಿಂದ ೧೯೪೫ರ ಅವಧಿಯಲ್ಲಿ Quadrangular Pentangular ಕ್ರಿಕೆಟ್ ಟೂರ್ನಾಮೆಂಟಿನಲ್ಲಿ ಭಾಗವಹಿಸಿ ೧೯೮೦ ಓಟಗಳನ್ನು ಸಂಪಾದಿಸಿದರು. ಪ್ರತಿ ಆಟಕ್ಕೆ ಅವರದು ೧೦೦ ಓಟಗಳ ಸರಾಸರಿ ಇದೆ. ಅದರಂತೆ ೧೯೩೪ರಿಂದ ೧೯೫೧ರವರೆಗೆ ರಣಜಿ ಟ್ರಾಫಿ ಕ್ರಿಕೆಟ್ ಟೂರ್ನಾಮೆಂಟುಗಳಲ್ಲಿ ಭಾಗವಹಿಸಿ ಮುಂಬಯಿ ತಂಡವನ್ನು ಪ್ರತಿನಿಧಿಸಿ ಒಟ್ಟು ೩೫೦೦ ಓಟಗಳನ್ನು ಸಂಪಾದಿಸಿ ಪ್ರತಿ ಆಟದಲ್ಲಿ ಸರಾಸರಿ ೯೮ ಓಟಗಳನ್ನು ಪಡೆದರು. ೧೯೩೬ರಲ್ಲಿ ಮೊಟ್ಟಮೊದಲು ಭಾರತೀಯ ಕ್ರಿಕೆಟ್ ತಂಡದ ಪ್ರತಿನಿಧಿಯಾಗಿ ಇಂಗ್ಲೆಂಡನ್ನು ಸಂದರ್ಶಿಸಿ ಆ ವರುಷದ ನಿರ್ಣಾಯಕ ಪಂದ್ಯಗಳಲ್ಲಿ ೧೭೭ ಓಟಗಳನ್ನು ಪಡೆದರು. ನಿರ್ಣಾಯಕ ಪಂದ್ಯಗಳ ಆಗಿನ ಓಟಗಳ ಸರಾಸರಿ ೫೧ ಇತ್ತು. ಮರ್ಚಂಟ್ ಸರಾಸರಿಯಲ್ಲಿ ನಾಲ್ಕನೆಯ ಸ್ಥಾನ ದೊರಕಿಸಿದ್ದರು. ೧೯೪೬ರಲ್ಲಿ ಪುನಃ ಭಾರತೀಯ ಕ್ರಿಕೆಟ್ ತಂಡದ ಉಪನಾಯಕರಾಗಿ ಇಂಗ್ಲೆಂಡಿಗೆ ಹೋಗಿ ಪ್ರಥಮ ದರ್ಜೆಯ ನಿರ್ಣಾಯಕ ಪಂದ್ಯಗಳಲ್ಲಿ ೨೩೦೦ ಓಟಗಳನ್ನು ಸಂಪಾದಿಸಿ ದ್ವಿತೀಯ ಸ್ಥಾನ ಪಡೆದರು. ತಮ್ಮ ಇಪ್ಪತ್ತು ವರುಷಗಳ ಕ್ರಿಕೆಟ್ ಜೀವನದಲ್ಲಿ ಪ್ರಥಮ ದರ್ಜೆಯ ಪಂದ್ಯಗಳಲ್ಲಿ ಭಾಗವಹಿಸಿ ಒಟ್ಟು ಹನ್ನೆರಡು ಸಾವಿರಕ್ಕೂ ಮಿಕ್ಕಿ ಓಟಗಳನ್ನು ಸಂಪಾದಿಸಿ ಸರಾಸರಿ ೭೨ ಓಟಗಳನ್ನು ಪಡೆದುದು ಅವರ ಅದ್ಭುತ ಸಾಧನೆಯ ಸಂಕೇತ. ಇದರಲ್ಲಿ ಮರ್ಚಂಟ್ ೪೩ ಶತಕಗಳನ್ನು ಹೊಡೆದಿದ್ದಾರೆ. ಪ್ರಥಮ ದರ್ಜೆಯ ನಿರ್ಣಾಯಕ ಪಂದ್ಯಗಳಲ್ಲಿ ಅವರು ಮೂರು ಶತಕಗಳನ್ನು ಬಾರಿಸಿದ್ದಾರೆ. ಆಗ ಬ್ರಾಡಮನ್‌ರ ನಂತರ ಪ್ರಪಂಚದಲ್ಲಿಯೇ ಅತಿ ಹೆಚ್ಚು ಓಟಗಳನ್ನು ಸಂಪಾದಿಸಿ, ಹೆಚ್ಚಿನ ಸರಾಸರಿ ಸಾಧಿಸಿ ವಿಜಯ ಮರ್ಚಂಟ್ ದ್ವಿತೀಯ ಸ್ಥಾನದಲ್ಲಿದ್ದರು. ವೈಯಕ್ತಿಕ ಸಾಧನೆಗಿಂತ ತಂಡದ ಸಾಧನೆ ದೊಡ್ಡದು ಎಂದು ಅವರು ಹೇಳುತ್ತಿದ್ದರು. ಅವರು ಲಾಲಾ ಅಮರನಾಥ, ಮುಸ್ತಾಕ ಅಲಿ, ನವಾಬ್ ಆಫ್ ಪಟೌಡಿ (ಮನ್ಸೂರ್ ಅಲಿ ಪಟೌಡಿ ಅವರ ತಂದೆ) ಮೊದಲಾದ ಖ್ಯಾತ ಕ್ರಿಕೆಟ್ ಪಟುಗಳೊಂದಿಗೆ ಆಡಿದ್ದಾರೆ. ಅವರ ಸ್ಮರಣಶಕ್ತಿ ಅದ್ಭುತ. ಕ್ರಿಕೆಟ್ ಆಟದ ಆರಂಭದಿಂದ ಇಲ್ಲಿಯವರೆಗೆ ಕ್ರಿಕೆಟ್ ಆಟವಾಡುವ ಎಲ್ಲ ದೇಶಗಳ ಆಟಗಾರರ, ಪಂದ್ಯಗಳ ಇತಿಹಾಸ ಸಾಧನೆಗಳನ್ನು ಆಗಿಂದಾಗ ಉಲ್ಲೇಖಿಸುತ್ತಿದ್ದರು. ಅವರು ಕ್ರಿಕೆಟ್ ಕಾಮೆಂಟರಿ ಹೇಳುವ ಶೈಲಿ, ತಜ್ಞರಾಗಿ

ನೀಡುವ ಕ್ರಿಕೆಟ್ ಪಂದ್ಯದ ವಿವರಣೆ, ವಿಶ್ಲೇಷಣೆಗಳು ವೈಶಿಷ್ಟ್ಯಪೂರ್ಣ. ಆಟದ ನಿಯಮಾವಳಿ ಅವರಿಗೆ ಬಾಯಿಪಾಠ. ಅಂಪಾಯರರ ನಿರ್ಣಯ ಸರಿಯಿರಲಿ, ತಪ್ಪಿರಲಿ ಅದನ್ನು ನಾವು ಒಪ್ಪಿಕೊಳ್ಳಲೇಬೇಕು. ಕ್ರಿಕೆಟ್ಟಿನಲ್ಲಿ ವ್ಯಕ್ತಿಗಿಂತ ಶಿಸ್ತು ಮುಖ್ಯ. ಕ್ರಿಕೆಟ್ ತಂಡವನ್ನು ಪ್ರತಿನಿಧಿಸುವ ವ್ಯಕ್ತಿಗಳು ಕೇವಲ ಆಟಗಾರರಾಗಿರದೇ ರಾಷ್ಟ್ರದ ಪ್ರತಿನಿಧಿಗಳೂ ಆಗಿರುತ್ತಾರೆ ಎಂಬುದು ಅವರ ಅಭಿಮತ. ವಿಜಯ ಮರ್ಚಂಟ್ ಮುಂಬಯಿಯ ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾ ಹಾಗೂ ಮುಂಬಯಿ ಕ್ರಿಕೆಟ್ ಅಸೋಸಿಯೇಶನ್ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ ನಂತರ ಅಧ್ಯಕ್ಷರಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದಾರೆ. ೧೯೬೮-೭೦ರ ಅವಧಿಯಲ್ಲಿ ಅವರು ಭಾರತೀಯ ಕ್ರಿಕೆಟ್ ಮಂಡಳಿಯ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ಭಾರತೀಯ ಕ್ರಿಕೆಟ್ಟಿಗೆ ಹೊಸ ಆಯಾಮ ನೀಡಿದರು. ಅವರ ಅಧ್ಯಕ್ಷತೆಯ ಸಮಯದಲ್ಲಿಯೇ ಅಜಿತ ವಾಡೇಕರರಿಗೆ ಭಾರತೀಯ ತಂಡದ ನಾಯಕಪಟ್ಟ ದೊರಕಿದ್ದು. ಸುನೀಲ ಗಾವಸಕರರ ಪ್ರತಿಭೆಯನ್ನು ಗುರುತಿಸಿ ಭಾರತೀಯ ತಂಡದಲ್ಲಿ ಅವರಿಗೆ ಆಟವಾಡಲು ಅವಕಾಶ ಕಲ್ಪಿಸಿಕೊಟ್ಟ ಶ್ರೇಯಸ್ಸು ಮರ್ಚಂಟರಿಗೆ ಸಲ್ಲಬೇಕು. ಏಕನಾಥ ಸೋಲಕರ, ಫರೂಕ್ ಇಂಜಿನಿಯರ್, ಬುಧಿ ಕುಂದರನ್, ಜಿ. ಆರ್. ವಿಶ್ವನಾಥ, ಬಿ. ಎಸ್. ಚಂದ್ರಶೇಖರ್, ವೆಂಕಟರಾಘವನ್, ಬಿಶನ್‌ಸಿಂಗ್ ಬೇಡಿ ಮುಂತಾದವರ ಪ್ರತಿಭೆ ಅರಳುವುದಕ್ಕೆ ಮರ್ಚಂಟರ ಸಹಕಾರ.- ಸಹಾಯ ಸಾಕಷ್ಟಿದೆ. ಆದರೂ ಮುಂಬಯಿ ಕ್ರಿಕೆಟ್ ಆಟಗಾರರ ಬಗೆಗೆ ಅವರಿಗೆ ಅಭಿಮಾನ ಹೆಚ್ಚಿತ್ತೆಂಬುದನ್ನು ಅಲ್ಲಗಳೆಯುವಂತಿಲ್ಲ. ಕೇವಲ ರಾಜಕೀಯ ಉದ್ದೇಶದಿಂದ ನಿರ್ಮಾಣಗೊಂಡ ಮುಂಬಯಿ ಕ್ರಿಕೆಟ್ ಅಸೋಸಿಯೇಶನ್ನಿನ ವಣಖೇಡೆ ಕ್ರೀಡಾಂಗಣ ರಚನೆ ಅವರಿಗೆ ಸರಿಯೆನಿಸಲಿಲ್ಲ. ಕಾರಣ ಬ್ರೆಬೋರ್ನ್ ಸ್ಟೇಡಿಯಂ ಸರ್ವವಿಧದಿಂದಲೂ ಕ್ರಿಕೆಟ್ ಪಂದ್ಯಗಳಿಗೆ ಉತ್ತಮ ಕ್ರೀಡಾಂಗಣವಿರುವಾಗ ಮತ್ತೊಂದು ಕ್ರೀಡಾಂಗಣ ರಚಿಸುವ ಅವಶ್ಯಕತೆಯಿರಲಿಲ್ಲವೆಂಬುದು ಅವರ ವಾದವಾಗಿತ್ತು. ಆದರೂ ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾ ಮತ್ತು ಮುಂಬಯಿ ಕ್ರಿಕೆಟ್ ಅಸೋಸಿಯೇಶನ್ ಸದಸ್ಯರಲ್ಲಿಯ ಭಿನ್ನಾಭಿಪ್ರಾಯಗಳನ್ನು ದೂರ ಮಾಡುವಲ್ಲಿ ಮರ್ಚಂಟರ ಮಧ್ಯಸ್ಥಿಕೆ ಯಶಸ್ವಿಯಾಯಿತು. ಅವರ ಅದ್ಭುತ ಸಾಧನೆಯನ್ನು ಮನ್ನಿಸಿ ೧೯೪೬ರಲ್ಲಿ ಎಂ. ಸಿ. ಸಿ. ಅವರಿಗೆ ಗೌರವ ಸದಸ್ಯತ್ವ ನೀಡಿ ಸನ್ಮಾನಿಸಿತು. ಅಖಿಲ ಭಾರತ ಕ್ರೀಡಾ ಮಂಡಳಿಯ ಸದಸ್ಯರಾಗಿ ನಂತರ ಉಪಾಧ್ಯಕ್ಷರಾಗಿ ಮರ್ಚಂಟ್ ಹಲವು ವರುಷ ಸೇವೆ ಸಲ್ಲಿಸಿದ್ದಾರೆ.


ಮರ್ಚಂಟರ ಖಾಸಗಿ ಜೀವನ ಹಾಗೂ ಸಾರ್ವಜನಿಕ ಜೀವನದಲ್ಲಿ ವಿಶೇಷ ವ್ಯತ್ಯಾಸ ಕಾಣದು. ತಮ್ಮ ೩೯ನೆಯ ವಯಸ್ಸಿನಲ್ಲಿ ಅವರು ತಮ್ಮ ಕ್ರಿಕೆಟ್ ಅಭಿಮಾನಿಯಾದ ೨೫ ವಯಸ್ಸಿನ ಚಂದ್ರಪ್ರಭಾ ಶಿರೋಡಕರ ಎಂಬ ಮರಾಠಿ ಯುವತಿಯೊಂದಿಗೆ ವಿವಾಹವಾದರು. ವಿಜಯ ಮರ್ಚಂಟರ ಪುತ್ರಿ ಅದಿತಿ ಇಂದು ವಿಖ್ಯಾತ ಭರತನಾಟ್ಯ ಕಲಾವಿದೆ. ಆಕೆ ಸಂತಾನಂ ಅವರೊಂದಿಗೆ ಮದುವೆಯಾದುದು ವಿಜಯ ಮರ್ಚಂಟರಿಗೆ ಇಷ್ಟವಿರಲಿಲ್ಲ. ಅಂತೆಯೇ ಮಗಳು ಹಾಗೂ ಅಳಿಯರೊಂದಿಗೆ ಮರ್ಚಂಟರ ಸಂಬಂಧ ಅಷ್ಟು ಹಿತಕರವಾಗಿರಲಿಲ್ಲ. ಅವರ ಮಗ ಅಮರಗೆ ಈಗ ೨೮ ವಯಸ್ಸು. ತಂದೆಯ ವೃತ್ತಿಯಲ್ಲಿ ಸಹಾಯ ಮಾಡುತ್ತಿದ್ದ ಅವರಿಗೂ ಕ್ರಿಕೆಟ್ ಹುಚ್ಚು. ಅನಾರೋಗ್ಯದಿಂದ ಮರ್ಚಂಟ್ ಬಳಲುತ್ತಿರುವಾಗ ಅಮರ "ಕ್ರಿಕೆಟ್ ವಿಥ್ ವಿಜಯ ಮರ್ಚಂಟ್" ಕಾರ್ಯಕ್ರಮ ನಡೆಸಿದ್ದುಂಟು. ವಿಜಯ ಮರ್ಚಂಟ್ ಥ್ಯಾಕರಸೀ ಗ್ರುಪ್ ಉದ್ಯೋಗ ಸಮೂಹದಲ್ಲಿ ಹಿರಿಯ ಪಾಲುದಾರರು. ಅದಲ್ಲದೇ ಅವರು ಆರು ಉದ್ದಿಮೆ ಸಂಸ್ಥೆಗಳಲ್ಲಿ ಸಂಚಾಲಕ ಮಂಡಳಿಯ ಸದಸ್ಯರೂ ಆಗಿದ್ದರು. ಆಗರ್ಭ ಸಿರಿವಂತ ಕುಟುಂಬಕ್ಕೆ ಸೇರಿದ್ದರೂ ಅವರಿಗೆ ತಮ್ಮ ಸಿರಿವಂತಿಕೆ ಹಾಗೂ ವೃತ್ತಿಯ ಬಗೆಗೆ ಎಳ್ಳಷ್ಟೂ ಗರ್ವವಿದ್ದಿಲ್ಲ. ಬಡವರ ಬಗೆಗೆ, ಅಂಗವಿಕಲರ ಬಗೆಗೆ ತುಂಬ ಪ್ರೀತಿ ಬೆಳೆಸಿಕೊಂಡಿ

ದ್ದರು. ಇತ್ತೀಚೆಗೆ ಅವರ ಕುಟುಂಬದಲ್ಲಿ ಮರ್ಚಂಟರ ಚಟುವಟಿಕೆಗಳ ಬಗ್ಗೆ ಸ್ವಲ್ಪ ಭಿನ್ನಾಭಿಪ್ರಾಯ ಕಂಡುಬಂದಿತ್ತು. ಉದ್ಯೋಗದತ್ತ ಹೆಚ್ಚು ಗಮನ ಹರಿಸದೆ ಅಂಗವಿಕಲರ ಕಲ್ಯಾಣ ಕಾರ್ಯಕ್ರಮದಲ್ಲಿ ವೇಳೆ ಕಳೆಯುತ್ತಿದ್ದಾರೆಂದು ಅವರ ಕುಟುಂಬದ ಕೆಲ ಸದಸ್ಯರ ಟೀಕೆ. ಅದಕ್ಕೆ ಕಾರಣವೇನೆಂದರೆ, ವಿಜಯ ಮರ್ಚಂಟರ ಕಂಪನಿಯ ಕಾರ್ಯಾಲಯದಲ್ಲಿ ಅಂಗವಿಕಲರ ಸಮಸ್ಯೆಗಳನ್ನು ಅರಿತುಕೊಳ್ಳಲು, ಪರಿಹಾರ ದೊರಕಿಸಲು ಅವರು ಒಂದು ಅಂಗ ವಿಕಲ ಕಲ್ಯಾಣ ವಿಭಾಗವನ್ನೇ ಆರಂಭಿಸಿದ್ದು. ೩೯ನೆಯ ವಯಸ್ಸಿನವರೆಗೆ ಅವರು ಕ್ರಿಕೆಟ್ ವಿಶ್ವದಲ್ಲಿ ತಮ್ಮ ಅದ್ವಿತೀಯ ಪ್ರತಿಭೆಯ ಮೂಲಕ ಅದ್ಭುತಗಳನ್ನು ಸಾಧಿಸಿದರು. ಅವರೇ ಆಗಾಗ ಹೇಳುತ್ತಿದ್ದಂತೆ ಅದು ಅವರ ಮೊದಲನೆಯ ಇನಿಂಗ್ಸ್. ನಂತರ, ಅಂದರೆ ತಮ್ಮ ೪೦ನೆಯ ವಯಸ್ಸಿನಿಂದ, ಸಾಯುವವರೆಗೂ ಸುಮಾರು ೩೬ ವರುಷ ಸಮಾಜ ಸೇವೆಗಾಗಿ ತಮ್ಮನ್ನು ಮೀಸಲಾಗಿರಿಸಿಕೊಂಡು ಸಾಕಷ್ಟು ಪಡೆದರು. ಸಕ್ರಿಯ ಕ್ರಿಕೆಟ್ ಆಟದಿಂದ ಖ್ಯಾತಿ ನಿವೃತ್ತಿ ಹೊಂದಿದ ನಂತರ ಮರ್ಚಂಟ್ ಹಲವು ಸಾಮಾಜಿಕ ಸೇವಾ ಸಂಸ್ಥೆಗಳಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ವರಳಿಯಲ್ಲಿರುವ ನ್ಯಾಶನಲ್ ಅಸೋಸಿಯೇಶನ್ ಫಾರ್ ದಿ ಬ್ಲೈಂಡ್ (ರಾಷ್ಟ್ರೀಯ ಅಂಧ ಸೇವಾ ಸಂಸ್ಥೆ) ನಲ್ಲಿ ಮರ್ಚಂಟ್ ಅಧ್ಯಕ್ಷರಾಗಿ ಹಲವು ವರುಷ ಕೆಲಸ ಮಾಡಿದರು. ಇತ್ತೀಚೆಗೆ ಈ ಸಂಸ್ಥೆಯ ಕೆಲವು ಅಧಿಕಾರಿಗಳು ಹಾಗೂ ಸದಸ್ಯರು ಅವ್ಯವಹಾರಗಳಲ್ಲಿ ತೊಡಗಿದುದು ಹಾಗೂ ಸೇವಾಸಂಸ್ಥೆಯಲ್ಲಿ ಕಾರ್ಮಿಕರ ಉಗ್ರ ಆಂದೋಲನ ಆರಂಭವಾದುದು ಮರ್ಚಂಟರಿಗೆ ಸರಿ ಬರಲಿಲ್ಲ. ಅಂತೆಯೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಸರಳ ಹಾಗೂ ಪರಿಶುದ್ಧ ಜೀವನ ನಡೆಸಿದ ಮರ್ಚಂಟರಿಗೆ ರಾಜಕೀಯ ಒಪ್ಪುತ್ತಿರಲಿಲ್ಲ. ಹೀಗಾಗಿ ಅವರು ರಾಜಕೀಯ ಪಕ್ಷಗಳಿಂದ, ಧುರೀಣರಿಂದ ಬಹು ದೂರವಿದ್ದರು. ಭಾಟಿಯಾ ಜನರಲ್ ಆಸ್ಪತ್ರೆ, ಅಖಿಲ ಭಾರತ ಅಂಗವಿಕಲರ ಕ್ರೀಡಾಮಂಡಳಿ, ವಿಕ್ಟೋರಿಯಾ ಸ್ಕೂಲ್ ಫಾರ್ ದಿ ಬ್ಲೈಂಡ್ ಮೊದಲಾದ ಸೇವಾ ಸಂಸ್ಥೆಗಳಲ್ಲಿ ಮರ್ಚಂಟ್ ಉಪಾಧ್ಯಕ್ಷರಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದುಂಟು. ರಾಷ್ಟ್ರೀಯ ಅಂಗವಿಕಲ ಸೇವಾ ಸಂಸ್ಥೆಯ ಅಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಚೆಂಬೂರಿನಲ್ಲಿ ಈ ಸಂಸ್ಥೆ ಒಂದು ಕೋಟಿ ರೂಪಾಯಿಗೂ ಮಿಕ್ಕಿ ಬೆಲೆ ಬಾಳುವ ಕಟ್ಟಡ ಹೊಂದಿದೆ. ಭಾರತದ ಹಲವು ರಾಜ್ಯಗಳಲ್ಲಿ ಈ ಸಂಸ್ಥೆಯ ಶಾಖೆಗಳು ಕೆಲಸ ಮಾಡುತ್ತಿವೆ. ಕೇಂದ್ರ ಸರಕಾರ, ರಾಜ್ಯ ಸರಕಾರಗಳು, ಮಹಾಪಾಲಿಕೆಗಳು ಈ ಸಂಸ್ಥೆಗಳಿಗೆ ಧನ ಸಹಾಯ ನೀಡುತ್ತಿವೆ. ಇದಲ್ಲದೇ ಮರ್ಚಂಟರ ಧುರೀಣತ್ವದ ಫಲವಾಗಿ ಸಾರ್ವಜನಿಕರು ಹಾಗೂ ಉದ್ಯಮಿಗಳು ಬಹು ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡುತ್ತಿದ್ದಾರೆ. ಹಲವು ಪರರಾಷ್ಟ್ರಗಳ ನಾಗರಿಕರು ಸಂಸ್ಥೆಗಳು ಮರ್ಚಂಟರ ಕಾರ್ಯಕ್ಷಮತೆ, ದಕ್ಷತೆ ಹಾಗೂ ಅಂಗವಿಕಲರ ಕಲ್ಯಾಣದ ಬಗೆಗೆ ಅವರಿಗಿದ್ದ ಅಪ್ರತಿಮ ಮಮತೆಗಳಿಂದ ಸ್ಫೂರ್ತಿಗೊಂಡು ಈ ಸಂಸ್ಥೆಗೆ ನೆರವು ನೀಡಿದ್ದಾರೆ. ದೇಶದಲ್ಲಿಯ ಎಲ್ಲ ಹಿರಿ ಕಿರಿಯ ಉದ್ಯೋಗ ಸಂಸ್ಥೆಗಳು, ಕಾರಖಾನೆಗಳ ಮಾಲಿಕರಿಗೆ, ವಿಜಯ ಮರ್ಚಂಟ್ ಮನವಿ ಮಾಡಿಕೊಂಡು, ಅಂಗವಿಕಲರಿಗೆ ಉದ್ಯೋಗಾವಕಾಶ ಮಾಡಿಕೊಡಲು ಪ್ರಯತ್ನಿಸಿದ್ದರು. ಅಂಗವಿಕಲರನ್ನು ಭೆಟ್ಟಿಯಾಗಿ ಅವರಿಗೆ ಮಾರ್ಗದರ್ಶನ ನೀಡಲು ಅವರು ಆಫೀಸಿನಲ್ಲಿ ಪ್ರತಿನಿತ್ಯ ಮಧ್ಯಾಹ್ನ ೪ರಿಂದ ೬ ಗಂಟೆಯವರೆಗೆ ತಮ್ಮ ಸಮಯ ವಿನಿಯೋಗಿಸುತ್ತಿದ್ದರು. ತಮ್ಮ ಹಿಂದುಸ್ತಾನ ಮಿಲ್ಸ್ ಆಶ್ರಯದಲ್ಲಿ ಈವರಗೆ ಮರ್ಚಂಟ್ ೨೦ ಅಂಗವಿಕಲರ ವಿವಾಹಗಳನ್ನು ಏರ್ಪಡಿಸಿ ಅವರಿಗೆ ಉಡುಗೊರೆ ನೀಡಿ ಆ ದಂಪತಿಗಳ ಬದುಕಿಗೆ ಹೊಸ ಆಶಾಕಿರಣ ನೀಡಿದರು. ಕಳೆದ ವರುಷ ನಾನು ವಿಜಯ ಮರ್ಚಂಟರ ಸಂದರ್ಶನ ಪಡೆಯಲು ಅವರ ಆಫೀಸಿಗೆ ಹೋದಾಗ, "ನಾನು ಸಂದರ್ಶನ ಕೊಡುವಷ್ಟು ದೊಡ್ಡ ಮನುಷ್ಯನಲ್ಲ. ನನ್ನ ಕೆಲಸ ನೋಡಬೇಕಿದ್ದರೆ ೧[illegible]-೧೦-೧೯೮೬ರಂದು ಹಿಂದುಸ್ತಾನ ಮಿಲ್ಸಿಗೆ ಬನ್ನಿ. ಅಲ್ಲಿ ಇಬ್ಬರು ಅಂಗವಿಕಲರ ಮದುವೆ ನಡೆಯುವುದಿದೆ. ಅಂಗವಿಕಲ ದಂಪತಿಗಳು ಸುಖ ಜೀವನ ನಡೆಸು

ಪ್ರದೇ ನನಗೆ ತೃಪ್ತಿ ತರುತ್ತದೆ." ಎಂದು ತುಂಬ ವಿನಮ್ರರಾಗಿ ನುಡಿವರು. ಅವರ ಬಗೆಗೆ ಅವರ ಸಾಧನೆಗಳ ಬಗೆಗೆ ಪ್ರಕಟವಾದ ಲೇಖನಗಳು, ಸಂದರ್ಶನಗಳು ತೀರ ವಿರಳ. ಅಂಗವಿಕಲರು ಸ್ವಾವಲಂಬಿಗಳಾಗಿ ಜೀವನ ನಡೆಸಲು ಅನುಕೂಲವಾಗುವಂತೆ ಅವರಿಗೆ ನೌಕರಿ ಕೊಡಿಸುವದಲ್ಲದೆ, ಅನೇಕ ಅಂಗವಿಕಲರಿಗೆ ವ್ಯಾಪಾರ ಮಾಡಲು ಧನಸಹಾಯ, ಅಂಗಡಿಯ ಸ್ಟಾಲುಗಳನ್ನೂ ಮರ್ಚಂಟ್ ದೊರಕಿಸಿ ಕೊಟ್ಟದ್ದುಂಟು. ಅಂಗವಿಕಲರ ಬಗ್ಗೆ ಅನುಕಂಪ ಮಾತ್ರ ಸಾಲದು. ಅವರೂ ತಮ್ಮ ಹಾಗೆ ಸಮಾಜದ ಸಮಾನ ಅಂಗವೆಂದು ತಿಳಿದು ಉಳಿದವರು ವರ್ತಿಸುವದು ಅವಶ್ಯ ಎಂದು ಮರ್ಚಂಟ್, ಅದರಂತೆ ನಡೆದುಕೊಂಡರು.

ಆಗಾಗ ಸಭೆ, ಸಮಾರಂಭಗಳಲ್ಲಿ ವಿಜಯ ಮರ್ಚಂಟ್ ಭಾಗವಹಿಸುತ್ತಿದ್ದರು. ಆದರೆ ಈ ಪ್ರಭೃತಿಗಳಿಗೆ ಸಮಯದ ಪ್ರಜ್ಞೆ ಇಲ್ಲವೆಂದು ಮಂತ್ರಿಗಳು, ಸರಕಾರೀ ಅಧಿಕಾರಿಗಳು ರಾಜಕೀಯ ಮುಖಂಡರು, ಚಲನಚಿತ್ರ ಕಲಾವಿದರು ಮುಖ್ಯ ಅತಿಥಿಗಳಾಗಿ ಬರುವ ಸಮಾರಂಭ-ಕಾರ್ಯಕ್ರಮಗಳಿಗೆ ಅವರು ಹೋಗುತ್ತಿದ್ದುದು ತೀರ ವಿರಳ. ಮರ್ಚಂಟ್ ಕಳೆದ ಹದಿನೈದು ವರುಷಗಳಿಂದ ನೀರು ಕುಡಿಯುತ್ತಿರಲಿಲ್ಲ. ಡಾಕ್ಟರರ ಸಲಹೆಯಂತೆ ಮಿತ ಆಹಾರ. ತಮ್ಮ ಆರೋಗ್ಯವನ್ನು ತುಂಬ ಜಾಗರೂಕವಾಗಿ ಕಾಯ್ದುಕೊಳ್ಳುತ್ತಿದ್ದರು. ಅಂತೆಯೇ ಹದಿನೆಂಟು ವರುಷಗಳ ಹಿಂದೆ ಅವರಿಗೆ ಮೊಟ್ಟ ಮೊದಲು ಹೃದಯವಿಕಾರ ಉಂಟಾಗಿ ನಂತರ ಪುನಃ ಮೂರು ಸಲ ಚಿಕ್ಕ ಪುಟ್ಟ ಹೃದಯಾಘಾತಗಳು ಸಂಭವಿಸಿದರೂ ತಮ್ಮ ೭೬ನೆಯ ವಯಸ್ಸಿನ ವರೆಗೂ ಅವರು ಸುಖವಾಗಿಯೆ ಜೀವಿಸಿದರು. ಇತ್ತೀಚೆಗೆ ಅವರಿಗೆ ಹಣ್ಣುಹಂಪಲ ಮಾತ್ರ ಆಹಾರವಾಗಿತ್ತು.

ಮಹಾರಾಷ್ಟ್ರ ಸರಕಾರವು ೧೯೬೯ರಲ್ಲಿ ವಿಜಯ ಮರ್ಚಂಟರನ್ನು ಮುಂಬಯಿ ಮಹಾನಗರದ ಶರೀಫರೆಂದು ನಿಯಮಿಸಿ ತನ್ನ ಗೌರವ ಸಲ್ಲಿಸಿದೆ. ಆದರೆ ಅದೇ ವರುಷದ ಕೊನೆಗೆ ಹೃದಯವಿಕಾರದ ಅನಾರೋಗ್ಯದಿಂದ ಅವಧಿ ಪೂರ್ವದಲ್ಲಿಯೇ ಮರ್ಚಂಟ್ ಅಧಿಕಾರ ಬಿಟ್ಟು ಕೊಟ್ಟರು. ಲಯನ್ಸ್ ಇಂಟರ್‌ನ್ಯಾಶನಲ್, ರೋಟರಿ ಇಂಟರನ್ಯಾಶನಲ್, ಜಾಯಿಂಟ್ಸ ಇಂಟರ್‌ನ್ಯಾಶನಲ್ ಹೀಗೆ ಹಲವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಗಳು, ಗುಜರಾತ ರಾಜ್ಯದ ಕೆಲವು ಸಮಾಜ ಸೇವಾ ಸಂಸ್ಥೆಗಳು ವಿಜಯ ಮರ್ಚಂಟರ ಅದ್ಭುತ ಸಾಧನೆಯನ್ನು ಗುರುತಿಸಿ ಸನ್ಮಾನಿಸಿವೆ. ಇತ್ತೀಚೆಗೆ ಮುಂಬಯಿಯ ಮೇಯರಾದ ಡಾ. ರಮೇಶ ಪ್ರಭು, ವಿವಿಧ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ, ಪ್ರತಿಭೆ ತೋರಿದ ಹತ್ತು ಗಣ್ಯರನ್ನು ಮಹಾಪಾಲಿಕೆಯ ಆಶ್ರಯದಲ್ಲಿ ಸನ್ಮಾನಿಸಿದರು. ಅವರಲ್ಲಿ ವಿಜಯ ಮರ್ಚಂಟ್ ಸಹ ಒಬ್ಬರು. ಆದರೆ ಅನಾರೋಗ್ಯದಿಂದಾಗಿ ಅವರಿಗೆ ಈ ಸಮಾರಂಭದಲ್ಲಿ ಭಾಗವಹಿಸಲಾಗಲಿಲ್ಲ. ಭಾರತ ಸರಕಾರವು ಮರ್ಚಂಟರ ಸಮಾಜ ಸೇವೆಯನ್ನು ಗುರುತಿಸಿ ಅವರಿಗೆ ೧೯೮೩ರಲ್ಲಿ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೮೭ರಲ್ಲಿ ರಾಷ್ಟ್ರೀಯ ಅಂಧ ಕಲ್ಯಾಣ ಸಂಸ್ಥೆಯು ಅವರಿಗೆ ರುಸ್ತುಮ್ ಅಲಪ್ಸಿವಾಲಾ ಪ್ರಶಸ್ತಿ ನೀಡಿದೆ. ೧೯೭೯ರಲ್ಲಿ ಮಹಾರಾಷ್ಟ್ರ ಸರಕಾರವು ವಿಜಯ ಮರ್ಚಂಟರನ್ನು ಶಿಕ್ಷಣ ಸಲಹಾ ಸಮಿತಿಗೆ ನಿಯಮಿಸಿತ್ತು. ವಿಜಯ ಮರ್ಚಂಟರಿಗೆ ದೊರೆತ ಪುರಸ್ಕಾರ, ಪ್ರಶಸ್ತಿಗಳಿಗಿಂತ ಅವರ ಕಾರ್ಯ ಸಾಧನೆ ತುಂಬ ಹಿರಿದು. ತಮಗೆ ದೊರೆತ ನಗದು ಪುರಸ್ಕಾರಗಳ ಹಣವನ್ನು 'ವಿಜಯ ಮರ್ಚಂಟ್ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್' ನಲ್ಲಿ ತೊಡಗಿಸಿ ಬಡವರ, ಅಂಗವಿಕಲರ ಕಲ್ಯಾಣಪರ ಕಾರ್ಯಕ್ರಮಗಳಿಗೆ ವಿನಿಯೋಗಿಸುತ್ತಿದ್ದರು. ವಿಜಯ ಮರ್ಚಂಟರಂತಹ ಪ್ರಚಂಡ ಹಾಗೂ ಅಸಾಮಾನ್ಯ ವ್ಯಕ್ತಿತ್ವಕ್ಕೆ ಸಲ್ಲಬೇಕಾದ ಗೌರವ, ಪುರಸ್ಕಾರ ತಕ್ಕ ಪ್ರಮಾಣದಲ್ಲಿ ಸಲ್ಲಲಿಲ್ಲವೆಂಬುದು ವಿಷಾದನೀಯ. ಆದರೆ [illegible], ಗೌರವಗಳಿಂದ ಮಾತ್ರವೇ ಮನುಷ್ಯ ದೊಡ್ಡವನಾಗುತ್ತಾನೆಯೆ? ✡



M.K. Publicity

ಅತೀಂದ್ರಿಯ ಶಕ್ತಿಯುಂಟೆ?

ಅಜ್ಜಂಪುರ ಜಿ. ಸೂರಿ

ಆತ್ಮ ಎನ್ನುವುದು ಉಂಟೆ? ಪುನರ್ಜನ್ಮ ಸಿದ್ಧಾಂತವನ್ನು ಎಷ್ಟರಮಟ್ಟಿಗೆ ಒಪ್ಪಬಹುದು? ಪ್ರಾಣಕ್ಕೆ ರೂಪವೆಂಬುದುಂಟೆ? ನಾವು ಎಂದರೆ ಏನು? ಈ ಎಲ್ಲಾ ಪ್ರಶ್ನೆಗಳಿಗೆ ಮನುಷ್ಯ ಅನಾದಿ ಕಾಲದಿಂದ ಉತ್ತರ ಹುಡುಕುತ್ತಲೇ ಬಂದಿದ್ದಾನೆ. ಅಷ್ಟೋ ಇಷ್ಟೋ ತಿಳಿದವರೂ ಇದ್ದಾರೆ, ತಿಳಿಯದವರೂ ಇದ್ದಾರೆ. ಅಂದಿಗೂ ಇಂದಿಗೂ ಇವು ವಿವಾದಾಸ್ಪದ ವಿಷಯಗಳೇ!

ಪರಮಾನಸಶಾಸ್ತ್ರಜ್ಞರು ಕೆಲವು ಘಟನೆಗಳ ಬಗ್ಗೆ ಹೇಳುವುದನ್ನು ಗಮನಿಸಿದರೆ ಇವೆಲ್ಲ ಕಟ್ಟುಕತೆ ಎನಿಸುವುದಿಲ್ಲ. ಇವುಗಳನ್ನು ಶಾಸ್ತ್ರೀಯವಾಗಿ ನಿರೂಪಿಸುವುದಕ್ಕಾಗಿ ಅತ್ಯಂತ ಆಧುನಿಕ ಪ್ರಯೋಗಾಲಯಗಳು ಹುಟ್ಟಿಕೊಂಡಿವೆ. ಈಗಾಗಲೆ ಬಹಳಷ್ಟು ಪರೀಕ್ಷೆಗಳೂ ನಡೆದಿವೆ. ಪರೀಕ್ಷೆ ಮಾಡಿದವರೇನು ಸಾಮಾನ್ಯರಲ್ಲ. ಈ ಶಾಸ್ತ್ರದಲ್ಲಿ ದೊಡ್ಡ ದೊಡ್ಡ ಪದವಿಗಳನ್ನು ಡಾಕ್ಟರೇಟು-ಗಳನ್ನು ಸಂಪಾದಿಸಿದಂಥ ಅತಿರಥ ಮಹಾ-ರಥರು.

ಪರಕಾಯ ಪ್ರವೇಶವೆಂಬುವುದು ಇಂದಿಗೂ ವಿವಾದಾಸ್ಪದ ವಿಷಯವೇ. ಪರಕಾಯ ಪ್ರವೇಶ-ವೆಂದರೆ ತನ್ನ ಶರೀರವನ್ನು ಬಿಟ್ಟು ಬೇರೊಂದು ಶರೀರದಲ್ಲಿ ಪ್ರವೇಶಮಾಡುವುದು. ಇದನ್ನು ಪರಮಾನಸತಜ್ಞರು ಒಪ್ಪುವುದಿಲ್ಲ. ಆದರೂ ಜೀವಿಯು ತನ್ನ ಭೌತಿಕ ಶರೀರವನ್ನು ತ್ಯಜಿಸಿ ಇತರ ಪ್ರದೇಶಗಳಲ್ಲಿ ಸಂಚರಿಸುವ ಘಟನೆಗಳು ಸಂಭವನೀಯ ಎನ್ನುತ್ತಾರೆ. ಆ ಸ್ಥಿತಿಯನ್ನು ಅವರು 'ಸೂಕ್ಷ್ಮ ಶರೀರ' (ಆಸ್ಟ್ರಲ್ ಬಾಡಿ) ಎಂದೂ ಅತೀಂದ್ರಿಯ ಅನುಭವ ಎಂದೂ ಕರೆಯುತ್ತಾರೆ. ಇದನ್ನೇ ನಾವು 'ಸೂಕ್ಷ್ಮ ಶರೀರ ಧಾರಣೆ' ಎನ್ನಬಹುದೇನೋ!

ಕ್ಯಾಲಿಫೋರ್ನಿಯಾದ ಸ್ಟಾನ್‌ಫೋರ್ಡ್ ರಿಸರ್ಚ್ ಇನ್‌ಸ್ಟಿಟ್ಯೂಟಿಗೆ ಸೇರಿದ ಡಾ. ಹೆರಾಲ್ಡ್, ಡಾ. ರಸೆಲ್ ಲೂರ್ಗ್ ಎಂಬುವರು ಈ ಕುರಿತು ಬಹಳಷ್ಟು ಪ್ರಯೋಗಗಳನ್ನು ನಡೆಸಿದ್ದಾರೆ.

ದೇಶವನ್ನೆಲ್ಲ ಸುತ್ತಿ ಅಂಥವರನ್ನು ಕಂಡು, ಪರೀಕ್ಷಿಸಿ ಅದರಲ್ಲಿ ಯಾವ ಮೋಸವಾಗಲಿ, ಚಮತ್ಕಾರವಾಗಲಿ ಇಲ್ಲವೆಂದು ಒಪ್ಪಿಕೊಂಡಿ-ದ್ದಾರೆ ಯಾರಾದರೂ ಸರಿ, ತೀವ್ರವಾದ ಏಕಾಗ್ರತೆಯಿಂದ ಅಭ್ಯಾಸಕ್ಕೆ ತೊಡಗಿದರೆ ಆ ಸ್ಥಿತಿಗೇರಬಹುದು ಎನ್ನುತ್ತಾರೆ. ಹೀಗೆ ಅಭ್ಯಾಸ ಮಾಡಿದ ಪ್ರತಿ ಐವರಲ್ಲಿ ಒಬ್ಬರಿಗೆ ಈ ಅನುಭವವಾಗಲು ಸಾಧ್ಯ ಎಂದು ಅವರು ದೃಢೀಕರಿಸಿದ್ದಾರೆ.

ಅಮೆರಿಕದ ಸೊಸೈಟಿ ಫಾರ್ ಸೈಕಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿಯ ತಜ್ಞರು ಕೂಡ ಈ ಸ್ಥಿತಿಯನ್ನು ಕುರಿತು ಪ್ರಯೋಗಗಳನ್ನು ನಡೆಸಿದ್ದಾರೆ. ಇಂಥ ಅಸಾಧಾರಣ ಶಕ್ತಿ ಇದ್ದ ಒಂಬತ್ತು ಜನರ ಮೇಲೆ ಕ್ಲಿಷ್ಟವಾದ ಪರೀಕ್ಷೆ-ಗಳನ್ನು ನಡೆಸಿ ಸಂತೃಪ್ತರಾಗಿದ್ದಾರೆ. ಒಬ್ಬ ವ್ಯಕ್ತಿಯ ಮಾನಸಿಕ ಪರಿಸ್ಥಿತಿ ಸಕ್ರಮವಾಗಿಲ್ಲದ ವೇಳೆಯಲ್ಲಿ ಹೊಂದಬಹುದಾದ ಭ್ರಮೆ ಇದಲ್ಲ-ವೆಂದು ದೃಢಪಡಿಸಿದ್ದಾರೆ. ಅಷ್ಟೇ ಅಲ್ಲ. ಅಂಥ ವ್ಯಕ್ತಿಯು ತನ್ನ ಶರೀರವನ್ನು ತ್ಯಜಿಸಿ ಸೂಕ್ಷ್ಮ ಶರೀರವನ್ನು ಹೊಕ್ಕು ತಾನು ಹೋದ ತಿರುಗಾ-ಡಿದ್ದ ಸ್ಥಳ, ಜನ, ಸಂಬಂಧಗಳನ್ನು ಸ್ಪಷ್ಟವಾಗಿ ಹೇಳಿ ಗುರುತಿಸಿದಾಗ ಒಪ್ಪಲೇಬೇಕಾಯಿತು. ಆ ಶಕ್ತಿ ಕೆಲವರಿಗೆ ಯಾವ ಸಾಧನೆ ಇಲ್ಲದಿದ್ದರೂ ಲಭ್ಯವಾಗುತ್ತದೆಂಬುದನ್ನು ಗ್ರಹಿಸಿದ್ದಾರೆ.

ಪ್ರಖ್ಯಾತ ಆಂಗ್ಲ ಕಾದಂಬರಿಕಾರ ಅ[illegible] ಹೆಮಿಂಗ್ವೇ ತನ್ನ ಅನುಭವವನ್ನು 'ಎ ಫೇರ್-ವೆಲ್ ಟು ಆರ್ಮ್ಸ್' ಎಂಬ ಕಾದಂಬರಿಯಲ್ಲಿ

ವಿವರಿಸುತ್ತ ಮೊದಲ ಮಹಾಯುದ್ಧ ಸಮಯದಲ್ಲಿ (೧೯೧೮) ತಾನು ಇಟಲಿಯಲ್ಲಿ ಹೋರಾಡುತ್ತಿದ್ದಾಗ ತನ್ನ ಕಾಲಿಗೆ ಪೆಟ್ಟು ತಗಲಿತೆಂದೂ, ಅತೀವ ನೋವಿನಿಂದ ಕೆಳಗೆ ಬಿದ್ದ ಕೂಡಲೆ ತಾನು ತನ್ನ ಶರೀರವನ್ನ ಬಿಟ್ಟು ಕೆಲವು ಕಾಲ ಅಲ್ಲಲ್ಲಿ ಓಡಾಡಿ ನಂತರ ಮತ್ತೆ ತನ್ನ ಶರೀರ ಸೇರಿಕೊಂಡೆನೆಂದೂ ಹೇಳಿಕೊಂಡಿದ್ದಾನೆ.

ಪ್ರೊಫೆಸರ್ ಮೆಲ್ಡೂನ್ ಬರೆದ 'ಪ್ರೊಜೆಕ್ಷನ್ ಆಫ್ ದಿ ಆಸ್ಟ್ರಲ್ ಬಾಡಿ' ಎಂಬ ಪುಸ್ತಕಕ್ಕೆ ಪ್ರಸಿದ್ಧ ಐಂದ್ರಜಾಲಿಕ ಹೆರಾಲ್ಡ್ ಕ್ಯಾರಿಂಗ್ಟನ್ ಮುನ್ನುಡಿ ಬರೆಯುತ್ತ,

"ಇಂಥ ಶಕ್ತಿ ಇದೆಯೆಂದರೆ ನಾನು ಖಂಡಿತ ನಂಬುವವನಲ್ಲ. ಆದರೆ ಆ ಶಕ್ತಿ ಇದ್ದ ಕೆಲವರನ್ನು ಐಂದ್ರಜಾಲಿಕರ ಸಹಕಾರದಿಂದ ಸ್ವತಃ ಪರೀಕ್ಷೆ ನಡೆಸಿದ ಬಳಿಕ ನಂಬಲೇಬೇಕಾಗಿ ಬಂತು," ಎಂದು ಹೇಳಿದ್ದಾನೆ.

ಇಂದ್ರಜಾಲದಲ್ಲಿ ಪ್ರೇಕ್ಷಕರ ಎದುರಿನಲ್ಲಿ ಐಂದ್ರಜಾಲಿಕನು ಒಂದು ಕಡೆ ನಿಂತಂತೆ ಕಂಡರೂ ಆತ ಮತ್ತೊಂದು ಕಡೆಯಿಂದ ಬರಬಲ್ಲ. ಬಹುಶಃ ಇವರು ಕೂಡ ಅದೇ ರೀತಿ ತೋರಿಸಿ ಜನರಿಗೆ ತಪ್ಪು ಕಲ್ಪನೆ ಮೂಡುವಂತೆ ಮಾಡುತ್ತಾರೆಂದು ಆತ ಮೊದಲು ತಿಳಿದಿದ್ದನಂತೆ. ಆದರೆ ಆತ ಕೆಲವು ಪ್ರಯೋಗಗಳನ್ನು ಸ್ವತಃ ಮಾಡಿದಮೇಲೆ ಅಂಥ ಅದ್ಭುತ ಶಕ್ತಿಯೊಂದು ನಿಜಕ್ಕೂ ಇರುವುದಾಗಿ ಒಪ್ಪಿಕೊಂಡನಂತೆ.

ಒಮ್ಮೆ ಒಬ್ಬ ಬ್ರಿಟಿಶ್ ಕರ್ನಲ್ಲನಿಗೆ ಇಂಥದೇ ಅನುಭವವಾಯಿತು. ಆ ಘಟನೆಯನ್ನು ಕುರಿತು ಪ್ರಪಂಚದ ದೊಡ್ಡ ದೊಡ್ಡ ಪತ್ರಿಕೆಗಳೆಲ್ಲ ಭಾರಿ ಪ್ರಚಾರ ಮಾಡಿದವು. ಆ ಕರ್ನಲ್‌ನು ನ್ಯುಮೋನಿಯ ರೋಗದಿಂದ ಆಸ್ಪತ್ರೆಯಲ್ಲಿ ನರಳುತ್ತಿದ್ದ. ಆದರೆ ನರಳುವಿಕೆಗಿಂತ ತಾನು ತನ್ನ ಬಂಧು ಮಿತ್ರರಿಗೆ ತೊಂದರೆ ಕೊಡುತ್ತಿದ್ದೇನಲ್ಲಾ ಎಂಬ ಚಿಂತೆ ಆತನಿಗೆ ಅತಿಯಾಯಿತು. ಸಾಕಷ್ಟು ಔಷಧೋಪಚಾರ ನಡೆಸಿದರೂ ಕಾಯಿಲೆ ವಾಸಿಯಾಗಲಿಲ್ಲ. ಆ ದಿನ ಪರೀಕ್ಷೆ ಮಾಡಲು ಬಂದ ವೈದ್ಯರ ತಂಡ ಆತನನ್ನು ಪರೀಕ್ಷಿಸಿ, ನಿರಾಶೆಯಿಂದ "ಈತ ಇನ್ನು ಇಪ್ಪತ್ನಾಲ್ಕು ಗಂಟೆಯಷ್ಟೂ ಬದುಕಿರಲಾರ" ಎಂದು ಗೊಣಗಿಕೊಂಡಿದ್ದನ್ನು ಕರ್ನಲ್ ಕೇಳಿಸಿಕೊಂಡ.

ಮರುಕ್ಷಣವೇ ಕರ್ನಲ್‌ಗೆ ಶರೀರದ ಭಾರ ಹೆಚ್ಚಾಗುತ್ತಿರುವ ಅನುಭವ! ಭಾರ ಹೆಚ್ಚುತ್ತಾಹೋಗಿ ಇನ್ನೇನು ಮಂಚ ಮುರಿದೇ ಹೋಗುತ್ತದೆಂದು ಆತನಿಗೆ ಅನ್ನಿಸತೊಡಗಿತು. ಅಷ್ಟು ಯಮಭಾರವಾಗಿದ್ದ ಶರೀರ ಇದ್ದಕ್ಕಿದ್ದಂತೆ ಹಗುರವಾದಂತಾಯಿತು. ಕಡೆಗೆ ನೋಡಿದರೆ ಅದೇ ಕೊಠಡಿಯ ಅಲ್ಮೇರಾದಲ್ಲಿ ಕರ್ನಲ್ ಕುಳಿತು ಗಡ್ಡ ಬೆಳೆದು, ನಿಸ್ತೇಜವಾಗಿ ಬಿದ್ದುಕೊಂಡಿದ್ದ ಶರೀರವನ್ನ ನೋಡುತ್ತಿದ್ದ. ಅಷ್ಟರಲ್ಲಿ ಆ ಕೊಠಡಿಗೆ ವೈದ್ಯರು, ದಾದಿಯರು ಬಂದರು. ದಾದಿಯೊಬ್ಬಳು ಕರ್ನಲ್ಲನ ನಾಡಿ ನೋಡಿ ಕಂಗಾಲಾದಳು. ವೈದ್ಯರು ಗಾಬರಿಯಿಂದ ಆತನ ಶರೀರದ ಎಲ್ಲಾ ಭಾಗಗಳಿಗೆ, ಮುಖ್ಯವಾಗಿ ಹೃದಯದ ಭಾಗದಲ್ಲಿ ಮಾಲೀಶು ಮಾಡಿದರು. ಮತ್ತೊಬ್ಬ ವೈದ್ಯ ಆಮ್ಲಜನಕವನ್ನು ತರಲು ಓಡಿದ.

ಒಂದು ನಿಮಿಷದ ನಂತರ ಕರ್ನಲ್ ತನಗೇ ತಿಳಿಯದ ರೀತಿಯಲ್ಲಿ ಶರೀರವನ್ನು ಪ್ರವೇಶಿಸಿದ. ಪರೀಕ್ಷಿಸುತ್ತಿದ್ದ ವೈದ್ಯರು "ಸದ್ಯ ಗಂಡಾಂತರ ಕಳೆಯಿತು." ಎಂದರು.

ಕರ್ನಲ್ ಮೆಲ್ಲಗೆ ಎದ್ದು ಕುಳಿತು "ಏನಾಯ್ತು ಡಾಕ್ಟ್ರೇ?" ಎಂದು ಕೇಳಿದ. "ನೀನು ಬದುಕಿದೆ" ಎಂದರು ವೈದ್ಯರು.

ಇದನ್ನೇ ಪ್ರೊಫೆಸರ್ ಹಿಲ್‌ಮನ್ ಪ್ರಸ್ತಾಪಿಸುತ್ತಾ ಪ್ರತಿಯೊಬ್ಬ ವೈದ್ಯನ ಡೈರಿಯಲ್ಲೂ ಇಂಥ ಘಟನೆಗಳು ಎಷ್ಟೋ ಇರುತ್ತವೆಂದೂ, ರೋಗಿಗಳು ನಡುನಡುವೆ ಉಸಿರಾಟವಾಗಲಿ, ಚಲನೆಯಾಗಲಿ ಇಲ್ಲದೆ ಇರುತ್ತಾರೆಂದೂ, ಸತ್ತೇ ಹೋದರೆಂದು ನಿರ್ಧರಿಸುವಷ್ಟರಲ್ಲೇ ಅವರು ಪುನಃ ಬದುಕಿಕೊಂಡ ಉದಾಹರಣೆಗಳು ಎಷ್ಟೋ ಇವೆಯೆಂದೂ ಹೇಳಿದ್ದಾರೆ. ❀

(ಸಂಗ್ರಹ)

ಪಡೆಯಲಾಗದ್ದಕ್ಕೆ ಆಶೆಪಡುವುದೇ ಸಲ್ಲ.
ಎಳೆಯ ಮರ ಬಾಗೀತು – ಹಳೆಯ ಮರಬೀಗೀತು. — ಯಿದ್ದಿಶ್ ಗಾದೆಗಳು

ಅಂಗವಿಕಲ ಮಗುವಿಗೆ ವಿಶೇಷ ಆರೈಕೆ ಅಗತ್ಯ

ನಿಮ್ಮ ಮಗು ಅಂಗವಿಕಲವಾಗಿದ್ದರೆ ನಿರಾಶರಾಗದಿರಿ

ನಿಮ್ಮ ಮಗುವಿಗೆ ಸಾಧ್ಯವಿರುವ ಎಲ್ಲಾ ಕಾರ್ಯಗಳ ಬಗ್ಗೆ ಚಿಂತಿಸಿರಿ.

ಅಂಗವಿಕಲ ಮಗು ನಿಮ್ಮ ಪ್ರೋತ್ಸಾಹದಿಂದ ಹೆಚು. ಕಡಿಮೆ ಸ್ವಾಭಾವಿಕ ಜೀವನ ನಡೆಸಲು ಮತ್ತು ಅಂಗವಿಕಲರಿಗೆ ಹೊಂದಿಕೊಳ್ಳಲು ಸಾಧ್ಯವಿದೆ.

ಮನೋದೌರ್ಬಲ್ಯದ ಮಗುವಿನೊಂದಿಗ ತಾಳ್ಮೆಯಿಂದ ವರ್ತಿಸಿ. ಆ ಮಗು ತನ್ನ ಮನೋವಿಕಲತೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಕರಿಸಿ.

ನೆನಪಿಡಿ: ಅಂಗವಿಕಲತೆ ಮಗುವಿನ ತಪ್ಪಲ್ಲ ಏನಾದರೂ ಅದು ನಿಮ್ಮ ಮಗು ಅಲ್ಲವೇ ?

ನೆನಪಿಡಿ: ಪ್ರತಿಯೊಂದು ಮಗುವಿನಲ್ಲೂ ವಿಶೇಷ ಚೈತನ್ಯವಿದ. ಅದಕ್ಕೆ ನಿಮ್ಮ ಪ್ರೀತಿಯು ಅಗತ್ಯವಿದ.

ಹೆಚ್ಚಿನ ವಿವರಗಳಿಗೆ :
ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರಕಾರ, ಬೆಂಗಳೂರು
ಇವರನ್ನು ಸಂಪರ್ಕಿಸಿರಿ.

ಕರ್ನಾಟಕ ವಾರ್ತೆ

ಡಿಐಪಿ 559/87

ಕುಖ್ಯಾತ ಕಳ್ಳ
ಪ್ರಖ್ಯಾತ ಪತ್ತೇದಾರನಾದ

ಯೂಜಿನೆ ಫ್ರಾಂಕೋಯಿ ವಿಡಾಕ್

ಕೆ. ವೆಂಕಣ್ಣಾಚಾರ್

ಠಕ್ಕನೊಬ್ಬ ಸರಕಾರಿ ಪತ್ತೇದಾರನಾದ ಎಂಬ ಸಂಗತಿ ವಿಚಿತ್ರವೆನಿಸಿದರೂ ಸತ್ಯವಾಗಿದೆ. ೧೯ನೇ ಶತಮಾನದಲ್ಲಿ ಫ್ರಾನ್ಸ್ ದೇಶದಲ್ಲಿ ಇಂಥ ಸೋಜಿಗದ ಪ್ರಸಂಗ ನಡೆಯಿತು. ಯೂಜಿನ ಫ್ರಾಂಕೊಯಿಂ ವಿಡಾಕ್ ಎಂಬುವವನೇ ಸರಕಾರಿ ಪತ್ತೇದಾರನಾದ ಚತುರ ತಸ್ಕರ.

ಫ್ರಾನ್ಸಿನ ಅರಾಸ್ ಎಂಬಲ್ಲಿ ಕ್ರಿ. ಶ. ೧೭೭೫ರಲ್ಲಿ ಜನಿಸಿದ ವಿಡಾಕ್‌ನಿಗೆ ಬಾಲ್ಯದಿಂದಲೇ ಕಳ್ಳತನ ಸ್ವಭಾವಕ್ಕಂಟಿದ ಹವ್ಯಾಸವಾಗಿತ್ತು. ಹದಿ ವಯಸ್ಸಿನ ವಿಡಾಕ್ ತಂದೆಯ ಹಣವನ್ನೇ ಲಪಟಾಯಿಸಿ ಜೈಲು ಶಿಕ್ಷೆ ಅನುಭವಿಸಿದ್ದ. ಅನಂತರ ಅವನು ದಿನೇ ದಿನೇ ತನ್ನ ವೃತ್ತಿಯಲ್ಲಿ ಪಳಗುತ್ತಾ ಭಯಂಕರ ಚೋರನೇ ಆದ. ಆದರೆ ಒಂದು ದಿನ ಅವನಿಗೆ ಚೋರ ವೃತ್ತಿಯಲ್ಲಿ ಬೇಸರ ಬಂದು ಸೇನೆಯನ್ನು ಸೇರಿದ. ಕೆಲ ಕಾಲದ ನಂತರ ಅದರಲ್ಲೂ ಬೇಜಾರಾಗಿ ಸೇನೆಯಿಂದ ಪರಾರಿಯಾದ. ಆಸ್ಟ್ರಿಯಕ್ಕೆ ತೆರಳಿ ಅಲ್ಲಿನ ಸೈನ್ಯದಲ್ಲಿ ಸಿಪಾಯಿಯಾದ. ಮತ್ತೊಂದು ದಿನ ಅಲ್ಲಿನ ಅಧಿಕಾರಿಗಳಿಗೂ ಎಪ್ಪೆಹಾಕಿ ಪುನಃ ಫ್ರಾನ್ಸಿಗೆ ಬಂದು ಕಳ್ಳತನ, ಮೋಸ, ವಂಚನೆಗಳನ್ನೇ ಅವಲಂಬಿಸಿ ದಾದಾನಂತೆ ಬದುಕತೊಡಗಿದ. ಅದೊಂದು ದಿನ, ಲಿಲ್ ಜೈಲಿನಿಂದ ಕೈದಿಯೊಬ್ಬನನ್ನು ಹೊರಕ್ಕೆ ದಾಟಿಸಲು ಖೊಟ್ಟಿ ಕಾಗದ ಪತ್ರಗಳನ್ನು ಸೃಷ್ಟಿಸುವ ಪ್ರಯತ್ನದಲ್ಲಿ ಏನೋ ಎಡವಟ್ಟಾಗಿ ಸಿಕ್ಕಿ ಬಿದ್ದ. ಪರಿಣಾಮವಾಗಿ ಬ್ರೆಸ್ಟ್ ಎಂಬಲ್ಲಿ ದೋಣಿಗೆ ಹುಟ್ಟುಹಾಕುವ ಭಯಂಕರವಾದ ಗ್ಯಾಲಿಸ್ ಶಿಕ್ಷೆಗೆ ಒಳಗಾದ.

ಬ್ರೆಸ್ಟ್‌ನಲ್ಲಿ ಸರ್ಪ ಕಾವಲಿದ್ದರೂ ಅಲ್ಲಿಂದ ತಪ್ಪಿಸಿಕೊಳ್ಳಲು ವಿಡಾಕ್ ಕುಟಿಲ ತಂತ್ರಗಳನ್ನು ಮಾಡಹತ್ತಿದ. ಆದರೆ ಇಂತಹ ಪ್ರಯತ್ನವೊಂದರಲ್ಲಿ ಸಿಕ್ಕಿಬಿಟ್ಟ. ಅದರ ನಂತರ ವಿಡಾಕ್‌ನನ್ನು ಭಾರವಾದ ಕಬ್ಬಿಣದ ಸರಪಣಿಗಳಿಂದ ಬಂಧಿಸಿ ಮತ್ತಷ್ಟು ಭದ್ರವಾದ ಸೆರೆಮನೆಯಲ್ಲಿ ಇರಿಸುವ ಕ್ರಮವನ್ನು ಕೈಗೊಳ್ಳಲಾಯಿತು. ಇಷ್ಟೆಲ್ಲಾ ಆದರೂ ಆತ ಸುಮ್ಮನೆ ಕೂಡದೆ ಜೈಲಿನಲ್ಲಿದ್ದ ಕೈದಿಗಳನ್ನು ಅಲ್ಲಿನ ಅಧಿಕಾರಿಗಳ ವಿರುದ್ಧ ಬಂಡೇಳಲು ಪ್ರಚೋದಿಸಿದ. ಆದರೆ ಕೈದಿಗಳು ಅಂತಹ ಕಾರ್ಯಕ್ಕೆ ಒಂದೆಗೆದಾಗ ಹತಾಶನಾದ ವಿಡಾಕ್ ಪೋಲೀಸರು ತನ್ನನ್ನು

ಪುನಃ ಗ್ಯಾಲಿಸ್‌ಗೆ ಕಳಿಸದಿದ್ದರೆ ಸುರಳೀತವಾಗಿ ಸೆರೆವಾಸವನ್ನು ಪೂರೈಸುವುದಾಗಿಯೂ, ಭೂಗತ ಪ್ರಪಂಚದ ರಹಸ್ಯ ವ್ಯವಹಾರಗಳ ಬಗೆಗೆ ಪೋಲೀಸರಿಗೆ ಮಾಹಿತಿ ನೀಡುವುದಾಗಿಯೂ ಅರ್ಜಿ ಮಾಡಿಕೊಂಡ.

ಅದನ್ನು ಗಮನಿಸಿದ ಫ್ರಾನ್ಸಿನ ಪೋಲೀಸ್ ವರಿಷ್ಠಾಧಿಕಾರಿ ಎಂ. ಹ್ಯಾರಿ ಅವರಿಗೆ ಹೊಸ ವಿಚಾರ ಹೊಳೆಯಿತು. ಅಪರಾಧ ಪತ್ತೆ ಹಾಗೂ ನಿಯಂತ್ರಣ ಕಾರ್ಯಕ್ಕೆ ವಿಡಾಕ್‌ನಂಥವರ ಸಹಾಯ ಉಪಯುಕ್ತವೆಂದು ಅವರಿಗೆ ಮನದಟ್ಟಾಯಿತು. ಅಂತೆಯೇ ಅವರು ವಿಡಾಕ್‌ನನ್ನು ಲಾಫೋರ್ಸ್ ಜೈಲಿಗೆ ಸ್ಥಳಾಂತರಿಸಿ ಅವನು ನೀಡಿದ ಬಾತ್ಮಿಯನ್ನು ಅನುಸರಿಸಿ ಎಷ್ಟೋ ದಿನಗಳಿಂದ ಕಾನೂನಿನ ಕಣ್ಣಿಗೆ ಮಣ್ಣೆರಚುತ್ತಿದ್ದ ಭಾರಿ ಭಾರಿ ಗುನ್ಹಾಗಾರರನ್ನು ಹಿಡಿದು ಹಾಕಿದರು. ಕೆಲವೇ ದಿನಗಳಲ್ಲಿ ಫ್ರಾನ್ಸಿನಾದ್ಯಂತ



ಕೊಲೆ, ಸುಲಿಗೆ, ಮಾನಭಂಗ, ಅತ್ಯಾಚಾರ ಮೊದಲಾದವು ಅಡಗಿಹೋದವು. ಆ ಕಾಲದಲ್ಲಿ ಅನೇಕ ಪೋಲೀಸ್ ಅಧಿಕಾರಿಗಳು ದುಷ್ಕರ್ಮಿಗಳೊಂದಿಗೆ ಶಾಮೀಲಾಗುತ್ತಿದ್ದುದರಿಂದ-ಎಷ್ಟೋ ಅಪರಾಧಗಳು ಮುಚ್ಚಿಹೋಗುತ್ತಿದ್ದವು. ಆದರೆ ಯಾವುದೇ ಪ್ರಲೋಭನಕ್ಕೆ ಬಗ್ಗದ ವಿಡಾಕ್‌ನ ಎದುರು ಅಂಥವರ ಕುಯುಕ್ತಿಗಳು ಹುಸಿಯಾದವು.

ಕ್ರಮೇಣ ವಿಡಾಕ್‌ನ ವರ್ತನೆಯಲ್ಲಿ ಬದಲಾವಣೆಯಾಯಿತು. ಸೆರೆಯಿಂದ ಬಿಡುಗಡೆಯಾದ ಮೇಲೂ ಅವನ ಸ್ವಭಾವ ಹಾಗೆಯೇ ಉಳಿಯಿತು. ಗುನ್ಹಾಗಾರರಿಗೂ ಅವನು ಇನ್‌ಫಾರ್ಮರ್ ಇರಬಹುದೆಂಬ ಗುಮಾನಿ ಬಂದು ಅವರು ಅವನನ್ನು ದೂರವಿರಿಸಿದರು. ಅನೇಕ ವರ್ಷಗಳ ಕಾಲ ಹ್ಯಾರಿಯುವರು ವಿಡಾಕ್‌ನನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಅವನು ಪೂರ್ಣವಾಗಿ ನಂಬಲರ್ಹ ವ್ಯಕ್ತಿ ಎಂಬುದನ್ನು ಖಚಿತಪಡಿಸಿಕೊಂಡರು. ಈ ವೇಳೆಗೆ ಪೋಲೀಸ್ ಕೆಲಸಕ್ಕೆ ದೈತ್ಯ ಶಕ್ತಿಯೊಂದೇ ಸಾಕು ಎಂಬ ಸಾಂಪ್ರದಾಯಿಕ ಧೋರಣೆಯಲ್ಲಿ ಅವರಿಗೆ ನಂಬಿಕೆ ಕಡಿಮೆಯಾಯಿತು. ಅದಕ್ಕೆ ಜನಸಂಪರ್ಕ, ಮಾನವ ಸ್ವಭಾವಗಳ ಪರಿಚಯ, ಚುರುಕು ಬುದ್ಧಿಗಳು ಸಹಕಾರಿ ಎಂಬುದನ್ನು ಅವರು ಮನಗಂಡರು. ಅಪರಾಧಗಳು ನಿರಂತರವಾಗಿ ನಡೆಯುತ್ತಲೇ ಇರುವುದರಿಂದ ಅದರ ಪತ್ತೆ ಹಾಗೂ ನಿಯಂತ್ರಣಕ್ಕೆ ಒಂದು ಖಾಯಂ ವ್ಯವಸ್ಥೆ ಅಗತ್ಯ ಎಂದು ಅವರು ನಿರ್ಧರಿಸಿದರು. ಅಂತೆಯೇ ಅವರು ಪೋಲೀಸ್ ಇಲಾಖೆಯಲ್ಲಿ ಒಂದು ಸ್ವತಂತ್ರ ವಿಭಾಗವನ್ನು ತೆರೆದು ಅದಕ್ಕೆ ತಮ್ಮ ನಂಬಿಗೆಯ ವಿಡಾಕ್‌ನನ್ನು ಅಧಿಕಾರಿಯಾಗಿ ನೇಮಿಸಿದರು. ಹೀಗೆ ಕುಪ್ರಸಿದ್ಧ ಗುನ್ಹಾಗಾರ ವಿಡಾಕ್ ಸರಕಾರಿ ಪತ್ತೇದಾರನಾದ.

ಆಗ ಅವನು ಅನೇಕ ಮಾಜಿ ಕೈದಿಗಳನ್ನು ತನ್ನ ಸಹಾಯಕರನ್ನಾಗಿ ಮಾಡಿಕೊಂಡ. ಅವರ ನೆರವಿನಿಂದ ಜನರ ಆಸ್ತಿ, ಪ್ರಾಣ, ಗೌರವಗಳಿಗೆ ಧಕ್ಕೆಯುಂಟುಮಾಡುತ್ತಿದ್ದ ಭಾರಿ ಸಂಖ್ಯೆಯ ಸಮಾಜ ವಿದ್ರೋಹಿಗಳನ್ನು ಹಿಡಿದು ಒಳಗೆ ಹಾಕಿಸಿದ. ಇದರ ಪರಿಣಾಮವಾಗಿ ಸಮಾಜದಲ್ಲಿ ಶಾಂತಿ, ವ್ಯವಸ್ಥೆ, ಭದ್ರತೆಗಳು ನೆಲೆಸಿದವು. ಕಾನೂನು ಪಾಲಿಸುವ ಸಜ್ಜನರು ಸಮಾಧಾನದಿಂದ ಉಸಿರಾಡುವಂತಾಯಿತು. ಇದರ ಜೊತೆಗೆ ವಿಡಾಕ್ ವಿವಿಧ ಬಗೆಯ ಅಪರಾಧಗಳು, ಅವುಗಳ ಸಾಮಾನ್ಯ ಲಕ್ಷಣಗಳು, ಎಸಗುವವರ ಸ್ವಭಾವ ವೈಚಿತ್ರ್ಯಗಳು, ಸಂಭವಿಸುವ ದಿನ ಹಾಗೂ ಸಮಯ, ದೇಶದ ಪ್ರಮುಖ ಅಪರಾಧಿಗಳ ಚಹರೆ, ಇತಿಹಾಸ ಮೊದಲಾದವುಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿಡುವ ಪದ್ಧತಿಯನ್ನು ಆರಂಭಿಸಿದ. ಇದರಿಂದ ಅಪರಾಧಿಗಳನ್ನು ಕಂಡಾಗ ಅವರು ಎಸಗಿರಬಹುದಾದ ಅಪರಾಧವನ್ನೂ, ಅಪರಾಧಗಳನ್ನು ಕಂಡಾಗ ಅವನ್ನು ಮಾಡಿರುವ ಅಪರಾಧಿಗಳನ್ನೂ ಬಹು ಮಟ್ಟಿಗೆ ಗುರುತಿಸುವಂತಾಯಿತು.

ದಿನದಿನಕ್ಕೆ ವಿಡಾಕ್‌ನ ಕಚೇರಿಯ ಮಹತ್ವ, ಅಧಿಕಾರ ಹಾಗೂ ಗೌರವ ಹೆಚ್ಚುತ್ತಾ ಹೋದವು. ಹೀಗೆ ಹದಿನೈದು ವರ್ಷಗಳ ಕಾಲ ಪರಿಶ್ರಮ, ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಕೆಲಸ ಮಾಡಿದ ವಿಡಾಕ್ ೧೮೨೭ ರಲ್ಲಿ ಸರಕಾರಿ ಸೇವೆಯಿಂದ ನಿವೃತ್ತನಾದ. ಅನಂತರ ಸೇಂಟ್ ಮ್ಯಾಂಡೆ ಎಂಬಲ್ಲಿ ಕಾಗದದ ಉದ್ದಿಮೆಯೊಂದನ್ನು ಸ್ಥಾಪಿಸಿ ಆ ಮೂಲಕ ಮಾಜಿ ಕೈದಿಗಳ ಸುಧಾರಣೆ ಹಾಗೂ ಪುನರ್ವಸತಿಗಾಗಿ ಶ್ರಮಿಸ ಹತ್ತಿದ. ಆದರೆ ಅವನ ಈ ಉದ್ಯಮ ಸೋಲಿನಲ್ಲಿ ಕೊನೆಗೊಂಡಿತು.

ಸುಮ್ಮನೆ ಕೂರಬಯಸದ ವಿಡಾಕ್ ೧೮೩೩ರಲ್ಲಿ ಖಾಸಗಿ ಪತ್ತೇದಾರಿ ಸಂಸ್ಥೆಯೊಂದನ್ನು ಆರಂಭಿಸಿದ. ಅದರ ಮೂಲಕ ಭ್ರಷ್ಟಜೀವನದ ವಿವಿಧ ಮುಖಗಳನ್ನು ಬಯಲಿಗೆಳೆಯಹತ್ತಿದ. ಸಭ್ಯರ ಮುಖವಾಡ ಧರಿಸಿ ಮಾಡಬಾರದ ಕಾರ್ಯಗಳನ್ನು ಮಾಡುತ್ತಿದ್ದ ಗೋಮುಖ

ಸೌಂಡರಿನಲ್ಲಿ ಎರಡು ಸ್ಥಿರವಾದ ಮೊಳೆಗಳಿದ್ದು ಒಂದು ಕಬ್ಬಿಣದ ಕಡ್ಡಿಯು ಒಂದು ಮೊಳೆಗೆ ಒರಗಿರುತ್ತದೆ. ತಂತಿಯಲ್ಲಿ ವಿದ್ಯುತ್ತನ್ನು ಹರಿಸಿದಾಗ ಇದು ಇನ್ನೊಂದು ಮೊಳೆಗೆ ತಗಲಿ "ಟಿಕ್" ಎನ್ನುವ ಶಬ್ದ ಉಂಟಾಗುತ್ತದೆ. ವಿದ್ಯುತ್ತನ್ನು ಕೀಲಿಯಿಂದ ನಿಲ್ಲಿಸಿದಾಗ ಕಬ್ಬಿಣದ ಕಡ್ಡಿಯು ಸ್ವಸ್ಥಾನಕ್ಕೆ ಬಂದು ಟಕ್ ಎನ್ನುವ ಇನ್ನೊಂದು ಶಬ್ದ ಉಂಟಾಗುತ್ತದೆ. ಹೀಗೆ ಉಂಟಾದ ಎರಡು ಶಬ್ದಗಳ ನಡುವಿನ ಸಮಯಾವಕಾಶವು ಹೆಚ್ಚು ಇದ್ದರೆ ಆ ಸಂಕೇತವನ್ನು ಡ್ಯಾಶ್ (—) ಎಂದೂ, ಸಮಯಾವಕಾಶವು ಕಡಿಮೆ ಇದ್ದರೆ ಆ ಸಂಕೇತವನ್ನು ಡಾಟ್ (.) ಎಂದೂ ಕರೆಯುವರು. ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳಿಗೆ ಮೋರ್ಸ್‌ನು ಡಾಟ್ ಮತ್ತು ಡ್ಯಾಶ್‌ಗಳಿಂದ ಸಂಕೇತಗಳನ್ನು ನಿರ್ಮಿಸಿದನು. ಮೋರ್ಸ್‌ನು ರಚಿಸಿದ ಸಾಂಕೇತಿಕ ಭಾಷೆ ಈಗಲೂ ಬಳಕೆಯಲ್ಲಿದೆ.

ಇಂದು ಯಾವುದಾದರೂ ಸಮಾಚಾರ ಸಂಸ್ಥೆಗೆ ಭೇಟಿಕೊಟ್ಟರೆ ಅಲ್ಲಿರುವ ಟೈಪಿಂಗ್ ಮಶೀನುಗಳು ತಮ್ಮಷ್ಟಕ್ಕೆ ತಾವೇ ಟೈಪು ಮಾಡುವುದನ್ನು ಕಾಣಬಹುದು. ಅದಾವ ಕಾಣದ ಕೈ ಟೈಪು ಮಾಡುತ್ತದೆ ಎಂದು ಆಶ್ಚರ್ಯವಾಗಬಹುದು. ಟೈಪರೈಟರನ್ನು ಹೋಲುವ ಈ ಉಪಕರಣವೇ ಟೆಲಿಪ್ರಿಂಟರ್— ಒಂದು ಕಡೆಯಲ್ಲಿ ಟೈಪು ಮಾಡಿದುದನ್ನು ಇನ್ನೊಂದು ಕಡೆಯಲ್ಲಿ ತದ್ರೀತಿಯಾಗಿ ಮೂಡಿಸುವ ಉಪಕರಣ. ಲಿಖಿತ ವರದಿ ದೊರೆಯುವುದರಿಂದ ಇಂತಹ ಉಪಕರಣಗಳ ಬಳಕೆ, ಸಮಾಚಾರ ಸಂಸ್ಥೆ, ದಿನಪತ್ರಿಕೆಯ ಕಚೇರಿಗಳಲ್ಲಿ ಬಹಳ. ಸಮಾಚಾರ ಸಂಸ್ಥೆಗಳು ಟೆಲಿಪ್ರಿಂಟರ್ ಬಳಸಿ ಒಂದುಕಡೆಯಲ್ಲಿ ತಿಳಿದ ವರದಿಯನ್ನು ತನ್ನ ಸಂಸ್ಥೆಯ ಇನ್ನೊಂದು ಶಾಖೆಗೆ ತಿಳಿಸುವುದು. ಎರಡು ಊರುಗಳಲ್ಲಿ ಒಂದು ದಿನಪತ್ರಿಕೆಯು ಏಕಕಾಲಕ್ಕೆ ಮುದ್ರಿತವಾಗಬೇಕಾದಲ್ಲಿ ಟೆಲಿಪ್ರಿಂಟರ್ ಬೇಕು. ಸಂದೇಶ ಗ್ರಹಿಸುವ ಕಡೆಯಲ್ಲಿ ಟೆಲಿಪ್ರಿಂಟರ್ ಆಪರೇಟರ್ ಇಲ್ಲದಿದ್ದಲ್ಲೂ ಸ್ವಯಂಚಾಲಿತವಾಗಿ ಸಂದೇಶಗಳು ಟೆಲಿಪ್ರಿಂಟರಿನಲ್ಲಿ ಮೂಡಿಬರುತ್ತವೆ.

ಟೆಲಿಪ್ರಿಂಟರ್ ಹೊಂದಿದ ಒಬ್ಬ ಗ್ರಾಹಕನು ಇನ್ನೊಬ್ಬ ನಿಗದಿತಗೊಳಿಸಿದ ಗ್ರಾಹಕನ ಜೊತೆಗೆ ಮಾತ್ರ ಸಂಪರ್ಕ ಸಾಧಿಸಲು ಸಾಧ್ಯವಾಗುವ ಪದ್ಧತಿಗೆ Point to Point ಟೆಲಿಪ್ರಿಂಟರ್ ಪದ್ಧತಿ ಎನ್ನುವರು. ಟೆಲಿಪ್ರಿಂಟರ್ ಹೊಂದಿದ ಬೇರೆ ಬೇರೆ ಗ್ರಾಹಕರ ನಡುವಣ ಸಂಪರ್ಕ ಸಾಧಿಸುವ ಪದ್ಧತಿಗೆ ಟೆಲೆಕ್ಸ ಪದ್ಧತಿ (Telex) ಎನ್ನುವರು. ಈ ಪದ್ಧತಿಯಲ್ಲಿ ಪ್ರತಿಯೊಬ್ಬ ಗ್ರಾಹಕನೂ ಟೆಲಿಪ್ರಿಂಟರ್ ಆಟೊ ಎಕ್ಸ್‌ಚೇಂಜಿನ ಜೊತೆಗೆ ಸಂಪರ್ಕ ಹೊಂದಿರುತ್ತಾನೆ. ದೂರವಾಣಿಯಲ್ಲಿ ಹೇಗೆ ಬೇರೆ ಬೇರೆ ಊರಿನ ಗ್ರಾಹಕರ ಜೊತೆಗೆ ಡಯಲ್ ಮಾಡಿ ಮಾತನಾಡುತ್ತಾರೊ, ಹಾಗೆ ಇಲ್ಲಿಯೂ ಡಯಲ್ ಮಾಡಿ ಬೇರೆ ಬೇರೆ Telex ಗ್ರಾಹಕರ ಜೊತೆಗೆ ಸಂಪರ್ಕ ಕಲ್ಪಿಸಬಹುದು. ಪ್ರತಿ ಊರಿಗೆ ಒಂದು code ನಂಬರ್ ಮತ್ತು ಪ್ರತಿ ಟೆಲಿಪ್ರಿಂಟರಿಗೆ ಒಂದು ಟೆಲಿಪ್ರಿಂಟರ್ ನಂಬರ್ ಕೊಟ್ಟಿರುತ್ತಾರೆ. ಈ ಪದ್ಧತಿಯಲ್ಲಿಯೂ ಗ್ರಹಿಸುವ ಟೆಲಿಪ್ರಿಂಟರ್ "ON" ಸ್ಥಿತಿಯಲ್ಲಿದ್ದು ಸ್ವಯಂಚಾಲಿತವಾಗಿ ಪ್ರತ್ಯುತ್ತರ ಬಂದಲ್ಲಿ ಗ್ರಹಿಸುವ ಕಡೆಯಲ್ಲಿ ಆಪರೇಟರ್ ಇಲ್ಲದಿದ್ದಲ್ಲೂ ಸಂದೇಶ ಮೂಡುತ್ತದೆ. ಲಿಖಿತ ವರದಿ ದೊರೆಯುವುದು ಮತ್ತು ಗ್ರಹಿಸುವ ಕಡೆ ಯಾರೂ ಇರದಿದ್ದರೂ ಸಂದೇಶ ಕಳಿಸಬಹುದು. ಇವೆರಡೂ ಸೌಲಭ್ಯಗಳು ದೂರವಾಣಿಯಲ್ಲಿ ಸಿಗದ ಸೌಲಭ್ಯಗಳಾಗಿವೆ.

ಇಂದು ತಂತಿ ಕಚೇರಿಗಳಲ್ಲಿಯೂ ಹಳೆಯ ಮೋರ್ಸ್ ಉಪಕರಣಗಳಿಗೆ ಬದಲಾಗಿ ಟೆಲಿಪ್ರಿಂಟರನ್ನೇ ಬಳಸುತ್ತಾರೆ. ಪ್ರಾರಂಭದ ದಿನಗಳಲ್ಲಿ ಮೋರ್ಸ್ ಪದ್ಧತಿ ತುಂಬ ಅನುಕೂಲಕರವಾಗಿದ್ದರೂ ಮುಂದೆ ಅವಶ್ಯಕತೆ ಹೆಚ್ಚಾದಂತೆ ಅವುಗಳನ್ನು ಪೂರೈಸುವಲ್ಲಿ ಮೋರ್ಸ್ ಹಿನ್ನಡೆ ಹೊಂದಿಬಿಟ್ಟಿತು. ಕಾರಣ ಇದು ಕೆಲವು ಅವಗುಣಗಳನ್ನು ಹೊಂದಿದೆ.

ಮೊದಲನೆಯದಾಗಿ ಸಾಂಕೇತಿಕ ಭಾಷೆಯು


ಕ್ಲಿಷ್ಟವಾಗಿದ್ದು ಪರಿಣಿತ ಆಪರೇಟರರು ಬೇಕಾಗುತ್ತಾರೆ. ಸಂದೇಶಗಳನ್ನು ಕಳಿಸುವಾಗ ಮತ್ತು ಗ್ರಹಿಸುವಾಗ ಸಂಕೇತಗಳ ಆಯ್ಕೆಯನ್ನು ಆಪರೇಟರರೇ ಮಾಡಬೇಕಾಗುತ್ತದೆ. ಹೀಗಾಗಿ ಸಂದೇಶಗಳನ್ನು ಕಳಿಸುವ ವೇಗ ಕಡಿಮೆಯಾಗುತ್ತದೆ. ಅಪಾರ್ಥವಾಗುವ ಅವಕಾಶವೂ ಹೆಚ್ಚು. ಟೆಲಿಪ್ರಿಂಟರ್ ಪದ್ಧತಿಯಲ್ಲಿ ಸಂಕೇತಗಳ ಆಯ್ಕೆ ಸ್ವಯಂಚಾಲಿತವಾಗಿ ಆಗುವುದರಿಂದ ಸಾಂಕೇತಿಕ ಭಾಷೆಯನ್ನು ಆಪರೇಟರರು ತಿಳಿದಿರುವ ಅಗತ್ಯವೇ ಇಲ್ಲ.

ಮೋರ್ಸ್ ಪದ್ಧತಿಯ ಸಾಂಕೇತಿಕ ಭಾಷೆಯೂ ಕ್ರಮಬದ್ಧವಾಗಿಲ್ಲ. ಬೇರೆ ಬೇರೆ ಅಕ್ಷರ ಸಂಯೋಜಿಸಲು ಬೇಕಾಗುವ ಸಂಕೇತಗಳ ಸಂಖ್ಯೆ ಬೇರೆ ಬೇರೆ. ಟೆಲಿಪ್ರಿಂಟರ್ ಪದ್ಧತಿಯಲ್ಲಿ ಸ್ವಯಂಚಾಲಿತವಾಗಿ ಆಯ್ಕೆಯಾಗಲು ಸರಿಹೊಂದುವ ಕ್ರಮಬದ್ಧವಾದ ಸಾಂಕೇತಿಕ ಭಾಷೆ ಇದ್ದು ಪ್ರತಿ ಅಕ್ಷರ ಸಂಯೋಜಿಸಲು ಬಳಸುವ ಸಂಕೇತಗಳ ಸ್ಥಾನ ಐದು. ಮೋರ್ಸ್ ಪದ್ಧತಿಯಲ್ಲಿ ಏಕಮುಖ ವಿದ್ಯುತ್ತನ್ನು ತಡೆದು ತಡೆದು ಕಳಿಸುವವೇ ಸಂಕೇತವಾದರೆ ಟೆಲಿಪ್ರಿಂಟರ್ ಪದ್ಧತಿಯಲ್ಲಿ +೬೦vನ ಧನ ವಿದ್ಯುತ್ತನ್ನು ಕಳಿಸಿದಾಗ ಮಾರ್ಕ್ ಎಂದು ಕರೆಯಲ್ಪಡುವ ಸಂಕೇತವೂ –೬೦v ನಋಣವಿದ್ಯುತ್ತನ್ನು ಕಳಿಸಿದಾಗ ಸ್ಪೇಸ್ ಎಂದು ಕರೆಯಲ್ಪಡುವ ಸಂಕೇತವೂ ಲೈನಿನ ಮುಖಾಂತರ ಹೋಗುತ್ತವೆ. ಇಂಗ್ಲೀಷ್ ವರ್ಣಮಾಲೆಯ ಪ್ರತಿ ಅಕ್ಷರಗಳಿಗೂ M ಮತ್ತು Sಗಳ ವಿವಿಧ ಸಂಯೋಜನೆಗಳ ಐದು ಸ್ಥಾನದ ಸಂಕೇತಗಳಿವೆ.

ಮೋರ್ಸ್ ಪದ್ಧತಿಯಲ್ಲಿ ಸಂದೇಶ ಕಳಿಸಲು ಎರಡು ಊರುಗಳ ನಡುವೆ ಪ್ರತ್ಯೇಕ ತಂತಿ ಬಳಸಿದ್ದರೆ ಟೆಲಿಪ್ರಿಂಟರ್ ಪದ್ಧತಿಯಲ್ಲಿ ಇದರ ಸಲುವಾಗಿಯೇ ಬೇರೊಂದು ಮಾಧ್ಯಮ ಬೇಕಾಗಿಲ್ಲ. ದೂರವಾಣಿ ಸಂಭಾಷಣೆಗಳ ಜೊತೆಗೆ ದೂರವಾಣಿ ಮಾಧ್ಯಮದ ಮುಖಾಂತರವೇ ಟೆಲಿಪ್ರಿಂಟರ್ ಸಂದೇಶಗಳೂ ಪ್ರವಹಿಸುತ್ತವೆ. ದೂರವಾಣಿಯಲ್ಲಿ ಧ್ವನಿಯ ಅಲೆಗಳಿಗೆ ಅನುಗುಣವಾದ ಪರ್ಯಾಯ ವಿದ್ಯುತ್ (AC) ಅಲೆಗಳನ್ನು ಲೈನಿನ ಮುಖಾಂತರ ಕಳಿಸುತ್ತಾರೆ. ಏಕಮುಖ ವಿದ್ಯುತ್ ಪ್ರವಾಹ (DC) ವನ್ನು ಬಳಸುವುದಿಲ್ಲ. ಹೀಗಾಗಿ ಟೆಲಿಪ್ರಿಂಟರಿನಲ್ಲಿ ಬಳಸುವ ಋಣ ಮತ್ತು ಧನ ವಿದ್ಯುತ್ತನ್ನು ಮೊದಲು ಧ್ವನಿಯ ಅಲೆಯ ಆವರ್ತನಾಂಕದ ಪರ್ಯಾಯ ವಿದ್ಯುತ್ತನ್ನಾಗಿ ಪರಿವರ್ತಿಸಿ ದೂರವಾಣಿ ಮಾಧ್ಯಮದ ಮುಖಾಂತರವೇ ಕಳುಹಿಸುತ್ತಾರೆ. ಹೀಗಾಗಿ ಈ ಪದ್ಧತಿಯನ್ನು Voice Frequency Telegraphy (VFT) ಪದ್ಧತಿ ಎನ್ನುತ್ತಾರೆ. ಈ ಪದ್ಧತಿಯಲ್ಲಿ ಬೇಕಾದಷ್ಟು ಟೆಲಿಗ್ರಾಫ್ ಸಂದೇಶಗಳನ್ನು ಒಂದೇ ಸಲಕ್ಕೆ ಕಳುಹಿಸಬಹುದು. ಆದರೆ ಮೋರ್ಸ್ ಪದ್ಧತಿಯಲ್ಲಿ ಒಂದು ಸಲಕ್ಕೆ ಒಂದೇ ಸಂದೇಶ ಕಳುಹಿಸಲು ಸಾಧ್ಯ. ದೂರವಾಣಿಯಲ್ಲಿ ಒಂದೇ ಮಾಧ್ಯಮದ ಮುಖಾಂತರ ಬಹಳಷ್ಟು ಸಂಭಾಷಣೆಗಳನ್ನು ಒಂದೇ ಸಲಕ್ಕೆ ಕಳುಹಿಸುವರಷ್ಟೇ. ಇಂತಹ ಒಂದು ಸಂಭಾಷಣೆ ನಡೆಯುವ ಚಾನೆಲ್ಲನ್ನು ಟೆಲಿಗ್ರಾಫ್ ಸಲುವಾಗಿ ಬಿಟ್ಟುಕೊಟ್ಟರೆ ೨೪

ಮೋರ್ಸ್ ಪದ್ಧತಿ

ಟೆಲಿಪ್ರಿಂಟರ್ ಪದ್ಧತಿ




ಸಂದೇಶಗಳನ್ನು ಒಂದೇ ಸಲಕ್ಕೆ ಕಳುಹಿಸಬಹುದು. ದೂರವಾಣಿಯಲ್ಲಿ ಬಹಳಷ್ಟು ವಿದ್ಯುತ್ ಅಲೆಗಳನ್ನು ಒಂದು ಸಂಭಾಷಣೆಯಲ್ಲಿ ಬಳಸಿದ್ದರೆ ಟೆಲಿಗ್ರಾಫಿಯಲ್ಲಿ ಮಾರ್ಕ್ ಸಂಕೇತಕ್ಕೆ ಒಂದು ಅಲೆಯೂ, ಸ್ಪೇಸ್ ಸಂಕೇತಕ್ಕೆ ಇನ್ನೊಂದು ಅಲೆಯೂ ಸಾಕು. ಹೀಗಾಗಿ ಒಂದು ದೂರವಾಣಿ ಚಾನೆಲ್ಲನ್ನು ಟೆಲಿಗ್ರಾಫ್ ಸಲುವಾಗಿ ಬಿಟ್ಟುಕೊಟ್ಟರೆ ಸಾಕಷ್ಟು ಟೆಲಿಗ್ರಾಫ್ ಚಾನೆಲ್ಲುಗಳು ದೊರೆಯುತ್ತವೆ. ಈ ಚಾನೆಲ್ಲುಗಳಲ್ಲಿ ಕೆಲವನ್ನು ತಂತಿ ಕಚೇರಿಯವರು ಬಳಸಿದರೆ ಉಳಿದ ಚಾನೆಲ್ಲುಗಳನ್ನು ಸಮಾಚಾರ ಸಂಸ್ಥೆ, ದಿನಪತ್ರಿಕೆಯ ಕಚೇರಿ ಅಥವಾ ಇತರ ಗ್ರಾಹಕರು ಬಳಸುತ್ತಾರೆ.

ಜೊತೆಗೆ ಮಿಂಚಿನ ವೇಗದಲ್ಲಿ ಪಯಣಿಸುತ್ತದೆ.

ಇನ್ನೊಂದು ಊರಿನ Carrier/Co-axial ಕೇಂದ್ರದಲ್ಲಿ ದೊರೆತ ಅಲೆಗಳನ್ನು ವಿಂಗಡಿಸಿ VFT ಕೇಂದ್ರಕ್ಕೆ ಕಳುಹಿಸುತ್ತಾರೆ. ಇಲ್ಲಿ ಪರ್ಯಾಯ ವಿದ್ಯುತ್ ಸಂಕೇತಗಳನ್ನು ±೮೦vನ ಸಂಕೇತಗಳನ್ನಾಗಿ ಪರಿವರ್ತಿಸಿ ಟೆಲಿಪ್ರಿಂಟರಿಗೆ ಕಳುಹಿಸುತ್ತಾರೆ. ಈ ಸಂಕೇತಗಳನ್ನು ಅರ್ಥ ಮಾಡಿಕೊಂಡ ಟೆಲಿಪ್ರಿಂಟರ್ ಮೇಲೆ ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳು ಮೂಡಿ ಬರುತ್ತವೆ.

ಇಷ್ಟೆಲ್ಲ ಕಾರ್ಯ ಕ್ಷಣಾರ್ಧದಲ್ಲಿ ನಡೆದು ಒಂದು ಊರಿನಲ್ಲಿ ಟೈಪು ಮಾಡಿದುದು ಇನ್ನೊಂದೂರಿನ ಟೆಲಿಪ್ರಿಂಟರನಲ್ಲಿ ಮೂಡಿಬರುತ್ತದೆ. ಟೆಲಿಪ್ರಿಂಟರಿನ ಬಳಕೆ ಪ್ರಗತಿಶೀಲ ದೇಶಗಳಷ್ಟೇ ಅಲ್ಲದೇ



ಪ್ರತಿ ಟೆಲಿಪ್ರಿಂಟರಿನಿಂದ ಬಂದ ಎರಡು ತಂತಿಗಳನ್ನು VFT ಕೇಂದ್ರದಲ್ಲಿ ಜೋಡಿಸಿರುತ್ತಾರೆ. ಇಲ್ಲಿ ±೮೦vನ ಏಕಮುಖ ವಿದ್ಯುತ್ಪ್ರವಾಹದ ಸಂಕೇತಗಳನ್ನು ಧ್ವನಿಯ ಅಲೆಯ ಆವರ್ತನಾಂಕವಿರುವ ಬೇರೆ ಬೇರೆ ಪರ್ಯಾಯ ವಿದ್ಯುತ್ ಅಲೆಗಳನ್ನಾಗಿ ಪರಿವರ್ತಿಸುತ್ತಾರೆ. ಈ ಅಲೆಗಳ ಸಮೂಹಗಳನ್ನು ದೂರವಾಣಿ ಮಾಧ್ಯಮದ ಮುಖಾಂತರ ಕಳುಹಿಸಲು ಯೋಗ್ಯ ಸ್ಥಿತಿಗೆ ತರುವುದರ ಸಲುವಾಗಿ Carrier/co-axial ಕೇಂದ್ರಕ್ಕೆ ಕಳುಹಿಸುತ್ತಾರೆ. ಮುಂದೆ ಈ ಸಂಕೇತಗಳು ದೂರವಾಣಿ ಮಾಧ್ಯಮದ ಮುಖಾಂತರ ಇನ್ನೊಂದೂರಿಗೆ ದೂರವಾಣಿ ಸಂಭಾಷಣೆಗಳ

ಪ್ರಗತಿಪರ ದೇಶಗಳಲ್ಲಿಯೂ ಹೆಚ್ಚಾಗಿದೆ. ಮೋರ್ಸನು ಕಂಡು ಹಿಡಿದ ತಂತಿ ಪದ್ಧತಿಯು ದೂರಸಂಪರ್ಕದ ಮೊದಲ ಹೆಜ್ಜೆ. ಮುಂದಿನ ದಿನಗಳಲ್ಲಿ ದೂರವಾಣಿ, ವೈರ್‌ಲೆಸ್, ಆಕಾಶವಾಣಿ, ದೂರದರ್ಶನ ಬಳಕೆಯಲ್ಲಿ ಬಂದು ದೂರಸಂಪರ್ಕವು ಆಧುನಿಕತೆಯತ್ತ ದಾಪುಗಾಲು ಹಾಕುತ್ತಲೇ ಹೋಗಿದೆ. ಮೋರ್ಸನು ಸೋಲು ನಿರಾಶೆಯಲ್ಲಿಯೂ ಧೃತಿಗೆಡದೆ ಛಲದಿಂದ, ಹಲವಾರು ವರ್ಷಗಳ ಸಾಧನೆಯ ಫಲವಾಗಿ ಹುಟ್ಟುಕೊಟ್ಟ ಹಸುಗೂಸು ಇಂದು ಆಕಾಶದೆತ್ತರ ಬೆಳೆದು ತನ್ನ ಜನಕನ ಬುದ್ಧಿಗೇ ಸವಾಲು ಎಸೆಯುವಷ್ಟು ಬೆಳೆದಿದೆ.

ನೇಪಾಳದ
ವೀರಗಾಥೆ

—ವಾ. ಗೋಪಾಲ

ಬಲಭದ್ರ ಕುಂವರನ ಎಪ್ಪತ್ತು ಹುಲಿಗಳು

ವೀರ ಪರಂಪರೆಗೆ ಹೆಸರಾದ ನೇಪಾಳದ ಇತಿಹಾಸದ ಈ ಅಪರಿಚಿತ ಪುಟ ೧೮೧೪ರದು. ಆಗ ಭಾರತದಲ್ಲಿದ್ದ ಇಂಗ್ಲಿಷರು ಮತ್ತು ನೇಪಾಳಿಗರ ನಡುವೆ ಕದನವೇರ್ಪಟ್ಟು ಪೌರಸ್ತ್ಯ ಇತಿಹಾಸದಲ್ಲೇ ಇದೊಂದು ಅವಿಸ್ಮರಣೀಯ ಪ್ರಸಂಗವೆನಿಸಿತು. ಅನನ್ಯ ಸಾಹಸಗಾಥೆಯೂ ಆಯಿತು.

ಬಲಭದ್ರ ಕುಂವರ ಈ ಸಾಹಸಗಾಥೆಯ ನಾಯಕ. ೧೮೧೪ರಲ್ಲಿ ಇಂಗ್ಲಿಷರು ಮತ್ತು ನೇಪಾಳಿಗರ ನಡುವೆ ಸಿಡಿದ ದ್ವೇಷ ಮುಂದೆ ಕದನವಾಗಿ ಮಾರ್ಪಟ್ಟಾಗ ಬಲಭದ್ರ ಕುಂವರ ನೈಋತ್ಯ ನೇಪಾಳದ ಮುಂಚೂಣಿ ರಕ್ಷಕದಳದ ಮುಖ್ಯಸ್ಥನಾಗಿದ್ದ. ಅವಸರವಸರವಾಗಿ ನಲಪಾನಿ ಎಂಬಲ್ಲಿ (ಕಲುಂಗಾ ಎಂದೂ ಕರೆಯಲ್ಪಡುತ್ತದೆ) ಕಟ್ಟಿದ್ದ ಕೋಟೆಯಲ್ಲಿ ಬಲಭದ್ರ ಅಧಿಕಾರವಹಿಸಿ ಕೊಂಡ. ಡೆಹ್ರಾಡೂನಿಗೆ ಈಶಾನ್ಯಕ್ಕೆ ಐದು ಮೈಲು ದೂರದಲ್ಲಿ ಈ ನಲಪಾನಿ ಇದೆ. ಆಕಾಶ-ದೆಡೆ ಚಾಚಿ ನಿಂತ ಸಾಲು ಮರಗಳ ಎದುರಲ್ಲಿ ರಾತ್ರಿಯೊಳಗಾಗಿ ಕಟ್ಟಿದ ನಾಲ್ಕು ಗೋಡೆಗಳ ಈ ಜಾಗವನ್ನು ಕೋಟೆ ಎಂದು ಕರೆಯುವುದು ಅಷ್ಟು ಸರಿಯಾಗದು. ಆಕಾಶವೇ ಈ 'ಕೋಟೆ'ಯ ಮಾಳಿಗೆ. (೧೮೧೪ರ ಅಕ್ಟೋಬರಿನಲ್ಲಿ ಆಕಸ್ಮಿಕವಾಗಿ ಇಂಗ್ಲೀಷರು ದಾಳಿ ಮಾಡಿದ್ದರಿಂದಾಗಿ ಮಾಳಿಗೆ ಹಾಕುವ ಕೆಲಸ ಆಗಲೇ ಇಲ್ಲ.) ತಮ್ಮ ಸಾಮ್ರಾಜ್ಯದ ಗಡಿಯನ್ನು ವಿಸ್ತರಿಸುವ ಇಂಗ್ಲಿಷರ ಇಚ್ಛೆ—ಅದನ್ನು ಬಲವಾಗಿ ವಿರೋಧಿಸಿದ ನೇಪಾಳಿ ದೇಶಪ್ರೇಮ ಈ ಯುದ್ಧವೊಂದು ಹಟವಾಗಿ ಪರಿಣಮಿಸಲು ಕಾರಣವಾದುವು.

ಮೇಜರ್ ಜನರಲ್ ಜಿಲೆಸ್ಪಿ ಇಂಗ್ಲಿಷ್ ಸೈನ್ಯದ ಮುಂದಾಳತ್ವ ವಹಿಸಿಕೊಂಡ. ೧೮೧೪ರ ಅಕ್ಟೋಬರ್ ೨೮ರಂದು ಡೆಹ್ರಾಡೂನನ್ನು ತಲಪಿದ ಆತ ನಲಪಾನಿ ಕೋಟೆಯನ್ನು ಮುತ್ತುವ ಯೋಜನೆ ಹಾಕಿದ. ತುಂಬ ಯೋಚಿಸಿ ಹಾಕಿದ ಯೋಜನೆ ಇದು. ಯಾಕೆಂದರೆ, ನೇಪಾಳದ ಪಶ್ಚಿಮ ಗಡಿಯನ್ನು ಯಮುನಾ ದಡದಲ್ಲಿ ಬಲವಾಗಿ ಕಾಯುತ್ತಿದ್ದ ಇನ್ನೊಬ್ಬ ವೀರ ಜನರಲ್ ಅಮರಸಿಂಗ ಥಾಪಾ ಒಂದು ವೇಳೆ ಬಲಭದ್ರ

ಕುಂವರನನ್ನು ಸೇರಿಬಿಟ್ಟರೆ ತಮ್ಮ ಆಟ ನಡೆಯುವುದಿಲ್ಲವೆಂಬುದು ಜಿಲೆಸ್ಪಿಗೆ ಚೆನ್ನಾಗಿ ಗೊತ್ತಿತ್ತು. ಅಂತೆಯೇ ಸೈನ್ಯವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ನಾಲ್ಕೂ ಕಡೆಯಿಂದ ಏಕಕಾಲಕ್ಕೆ ದಾಳಿ ಮಾಡುವುದು ವಿಹಿತವೆಂದಾತ ಬಗೆದ.

ಇಂಗ್ಲಿಷ್ ಸೈನ್ಯ ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟು ದಿನಾಪುರ, ಬನಾರಸ, ಮೀರತ್ ಮತ್ತು ಲುಧಿಯಾನಗಳಲ್ಲಿ ಠಾಣೆ ಹೂಡಿತು. ಹೀಗೆ ನಾಲ್ಕೂ ಕಡೆಗಳಿಂದ ಒಮ್ಮೆಲೆ ಹೊರಟು ನೇಪಾಳವನ್ನು ಮುತ್ತುವುದು ಇದರ ಉದ್ದೇಶ. ಹೀಗೆ ನಾಲ್ಕು ಕವಲಿನ ಶೂಲದಂತೆ ಬರುತ್ತಿದ್ದ ಇಂಗ್ಲಿಷ್ ಸೈನ್ಯವನ್ನು ಎದುರಿಸಿ ಹಿಮ್ಮೆಟ್ಟಿಸುವ ಎಂಟೆದೆಯ ಬಂಟನಾಗಲೇಬೇಕಾಯಿತು ಬಲಭದ್ರ ಕುಂವರ.

ಜಿಲೆಸ್ಪಿ ತನ್ನ ಸೈನ್ಯವನ್ನು ೬೧೫ ಅಧಿಕಾರಿಗಳು ಮತ್ತು ಸೈನಿಕರನ್ನು ಕರ್ನಲ್ ಕಾರ್ಪೆಂಟರನ ನೇತೃತ್ವದಲ್ಲೂ, ೩೬೩ ಜನರನ್ನು ಕ್ಯಾಪ್ಟನ್-ಫಾಸ್ಟನ ಧುರೀಣತ್ವದಲ್ಲೂ, ೫೪೪ ಜನರನ್ನು ಮೇಜರ್ ಕೆಲ್ಲಿ ಮತ್ತು ೨೮೩ ಜನರನ್ನು ಕ್ಯಾಪ್ಟನ್ ಕ್ಯಾಂಪ್‌ಬೆಲ್ಲನ ಕೈಕೆಳಗೂ ಹಂಚಿಬಿಟ್ಟ. ಇದಲ್ಲದೆ ೧೦೩೯ ಸೈನಿಕರನ್ನು ಜರೂರು ಬಿದ್ದರೆ ಇರಲಿ ಎಂದು ಸಿದ್ಧವಾಗಿಟ್ಟ. ೧೮೧೪ರ ಅಕ್ಟೋಬರ್ ೩೧ರ ಬೆಳಗಿನ ಆರು ಗಂಟೆಗೆ ದಾಳಿ ಶುರುವಾಗಬೇಕೆಂದೂ ನಿರ್ಧಾರವಾಯಿತು.

ಬಲಭದ್ರ ಕುಂವರ ತನ್ನ ಕೋಟೆಯನ್ನು ಬಲ-ಪಡಿಸುವ ಕಾರ್ಯದಲ್ಲಿ ಮಗ್ನನಾಗಿದ್ದ. ಆತನೊಂದಿಗೆ ಇದ್ದವರು ೬೦೦ ಜನ. ಆ ಪೈಕಿ ಕಾದಾಳುಗಳು ೫೦೦ಕ್ಕಿಂತ ಕಡಿಮೆ. ಉಳಿದವರು ಅವರ ಹೆಂಡಂದಿರು ಮತ್ತು ಮಕ್ಕಳು.

ಕೋಟೆಯನ್ನು ಪೂರ್ತಿ ಕಟ್ಟಿ ಮುಗಿಸುವ ಶ್ರಮದಾಯಕ ಕೆಲಸದ ನಂತರ, ರಾತ್ರಿಯಿಡೀ ನಿದ್ದೆಯಿಲ್ಲದೆ ತಾಯ್ನಾಡಿನ ರಕ್ಷಣೆಯ ಕುರಿತು ಚಿಂತಿಸುತ್ತಿದ್ದ ಬಲಭದ್ರ. ಅಕ್ಟೋಬರ್ ೩೦ರ ರಾತ್ರಿ ಆತ ಹೀಗೆ ಚಿಂತಾತುರನಾಗಿ ಒರಗಿದ್ದಾಗ ಇಂಗ್ಲಿಷ್ ಸೈನಿಕ ದೂತನೊಬ್ಬ ಪತ್ರವನ್ನು ತಂದಿರುವುದಾಗಿ ತಿಳಿದು ಅಚ್ಚರಿಗೊಂಡ. ಆ ದೂತನನ್ನು ಬರಮಾಡಿಕೊಂಡ. "ಈ ಪತ್ರವನ್ನೋದಿ ಇದಕ್ಕೆ ಈಗಲೇ ಉತ್ತರ ಬರೆದು ಕೊಡಬೇಕು" ಎಂಬ ದೂತನ ಮಾತಿನಿಂದ ಬಲ-ಭದ್ರ ಕಿಡಿಕಿಡಿಯಾದ. ಪತ್ರವನ್ನು ಕಣ್ಣೆತ್ತಿಯೂ ನೋಡದೆ, ಅದನ್ನು ಚೂರುಚೂರಾಗಿ ಹರಿದು, "ಅಪರಾತ್ರಿಯಲ್ಲಿ ಬಂದ ಪತ್ರವನ್ನೋದುವುದಾ-ಗಲಿ, ಅದಕ್ಕೆ ಉತ್ತರವನ್ನು ಬರೆದು ಕೊಡುವು-ದಾಗಲಿ ನಮ್ಮ ಸಂಪ್ರದಾಯಕ್ಕೆ ವಿರುದ್ಧ. ನಿಮ್ಮ ಕಮಾಂಡರನಿಗೆ ನಾನು ನಾಳೆ ರಣಾಂಗಣದಲ್ಲಿ ಇದಕ್ಕೆ ಉತ್ತರ ನೀಡುವುದಾಗಿ ಹೇಳು" ಎಂದ.

ನೇಪಾಳಿಗರು ಹೆದರಿ ತಮಗೆ ಶರಣಾಗುವರೆಂದು ಬಗೆದಿದ್ದ ಜಿಲೆಸ್ಪಿಗೆ ಈ ಸಮಾಚಾರದಿಂದ ಸಹಜವಾಗಿಯೇ ಸಿಟ್ಟು ಬಂತು. ಆ 'ಬೆಟ್ಟದ ಹುಲಿ' ಬಲಭದ್ರನಿಗೆ ಪಾಠ ಕಲಿಸುವುದೇ ಸರಿ ಎಂದು ನಿರ್ಧರಿಸಿ, ಮೊದಲೇ ಯೋಚಿಸಿದಂತೆ, ಕೋಳಿ ಕೂಗುವ ಹೊತ್ತಿಗೆ ನಲಪಾನಿಯನ್ನು ತಮ್ಮ ತೋಪುಗಳು ನಡುಗಿಸಬೇಕೆಂದು ಸೂಚನೆ ಕೊಟ್ಟ.

ಮರುದಿನ ಮುಂಜಾನೆ ತೋಪು ಉಗುಳಿದ ಗುಂಡು ನಲಪಾನಿಯ ಜನರನ್ನು ಗಾಬರಿಗೊಳಿಸಿ, ಆ ಹೊಗೆ ಆರುವುದರೊಳಗಾಗಿ ನಾಲ್ಕೂ ನಿಟ್ಟಿನಿಂದ ಇಂಗ್ಲಿಷ್ ಸೈನಿಕರು ನುಗ್ಗಿಬಿಟ್ಟರು.

ಆ ಕೋಟೆ ಸುಭದ್ರ ಸ್ಥಳದಲ್ಲಿತ್ತು. ಬೆಟ್ಟವೊಂದರ ಮೇಲೆ, ೫೦೦ ಅಡಿ ಎತ್ತರದಲ್ಲಿ ಅದು ತಲೆಯೆತ್ತಿ ನಿಂತಿತ್ತು. ದುರ್ಗಮವಾದ ಬೆಟ್ಟ ಅದು. ಕಾಲಿಟ್ಟವ ಕಲ್ಲು ಜಾರಿ ಮುಗ್ಗರಿಸಿ ಅಭೇದ್ಯವಾಗಿ ಬೆಳೆದ ಮುಳ್ಳುಕಂಟಿಗಳಲ್ಲಿ ಸಿಕ್ಕಿ ಹಾಕಿಕೊಳ್ಳಬೇಕು. ಬಲಭದ್ರನ ಬಳಿ ಇದ್ದ ಶಸ್ತ್ರಾಸ್ತ್ರಗಳಾದರೂ ಮಿತವು. ಇಂಗ್ಲಿಷರ ಅಸಂಖ್ಯಾತ ತೋಪುಗಳಿದ್ದರೆ ಅವನ ಬಳಿ ಇದ್ದುದು ಒಂದೇ ಒಂದು ಸಣ್ಣ ತೋಪು. ಜತೆಗೆ [illegible]. ಬಿಲ್ಲು ಬಾಣ

ಗಳು. ಅಲ್ಲದೆ ಕೋಟೆಯ ಕಟ್ಟಡಕ್ಕೆ ತಂದು ಹಾಕಿದ್ದ ಕಲ್ಲುಗುಂಡುಗಳು.

ಬಲಭದ್ರನ ಜನ ಉತ್ಕಟ ದೇಶಾಭಿಮಾನಿಗಳು. ಆತನನ್ನು ಅವರೂ, ಅವರನ್ನು ಆತನೂ ಬಲವಾಗಿ ನಂಬಿದ್ದರು. ಜನ್ಮತಃ ಹೋರಾಟಗಾರರಾದ ಅವರಿಗೆ "ಯಾವ ಪ್ರಸಂಗದಲ್ಲೂ ಹಿಮ್ಮೆಟ್ಟುವುದು ಬೇಡ, ಕೊನೆ ಉಸಿರಿನ ತನಕ ಹೋರಾಡೋಣ ವಿನಾ ಶತ್ರು ನಮ್ಮ ನೆಲದಲ್ಲಿ ಕಾಲಿಡುವುದನ್ನು ಕಂಡು ಸುಮ್ಮನಿರುವ ಹೇಡಿಗಳಾಗುವುದು ಬೇಡ" ಎಂದು ಹುರಿದುಂಬಿಸಿದ್ದ. ನಂಬಿಕೆ-ಧೈರ್ಯಗಳು ಇರುವಲ್ಲಿ ಶತ್ರುವಿನ ಅಪಾರ ಶಸ್ತ್ರಗಳೇನು ಮಾಡಿಯಾವು?

ತಮ್ಮ ಗುಂಡಿಗೆ ನೇಪಾಳಿಗರಿಂದ ಗುಂಡಿನಿಂದಲೇ ಉತ್ತರ ಬಂದಾಗ, ಜತೆಗೆ ಅನಿರೀಕ್ಷಿತವಾಗಿ ಬಾಣಗಳ ಸುರಿಮಳೆ ತಮ್ಮ ಮೇಲಾಗತೊಡಗಿದಾಗ ಇಂಗ್ಲಿಷರು ಚಿಂತಿಸಲೇಬೇಕಾಯಿತು. ಅಷ್ಟೇ ಅಲ್ಲ, ಅಲ್ಪಾವಧಿಯಲ್ಲೇ ತಮ್ಮ ಕಡೆಯ ಬಹಳಷ್ಟು ಜನ ಶರಾಘಾತದಿಂದ ಗಾಯಗೊಂಡಾಗ ದಾಳಿ ನಿಲ್ಲಿಸಿ ಡೆಹ್ರಾಡೂನಿಗೆ ಮರಳುವುದೇ ಲೇಸೆಂದು ಅವರು ನಿರ್ಧರಿಸ-ಬೇಕಾಯಿತು.

ಎಂಥ ಆಘಾತ! ಕೈಬೆರಳ ಮೇಲೆಣಿಸುವಷ್ಟು ನೇಪಾಳಿಗರಿಂದ ತಮ್ಮ ಅಸಂಖ್ಯಾತ ಸೈನಿಕರು ಕಂಗೆಟ್ಟು ಗಾಯಗೊಂಡು ಹಿಮ್ಮೆಟ್ಟುವಂತಾಗುವುದೆಂದರೆ? ಬ್ರಿಟಿಶ್ ಸಾಮ್ರಾಜ್ಯಕ್ಕೇ ಅವಮಾನ. ಜಿಲೆಸ್ಪಿಗೆ ಕೋಪ ಕುದಿಯಿತು. ಆತ ಇನ್ನಷ್ಟು ಸೈನ್ಯಬಲದೊಂದಿಗೆ, ಹೆಚ್ಚಿನ ಶಸ್ತ್ರಾಸ್ತ್ರಗಳೊಂದಿಗೆ 'ಬಲಭದ್ರ'ವಾಗಿರುವ, ಆ ಕೋಟೆಯನ್ನು ಬುನಾದಿ ಸಹಿತ ನಾಶಗೊಳಿಸುವ ಘೋಷಣೆಯೊಂದಿಗೆ ಹೊರಟ.

ಬಿಟ್ಟೂಬಿಡದೆ ತೋಪುಗಳ ದಾಳಿ ನಡೆದಾಗ ಆ ಕೋಟೆಯ ಗೋಡೆಗಳು ಬಿರುಕುಬಿಟ್ಟು ಬಿದ್ದು ಜಾರಿ ಬೆಟ್ಟದ ಅಡಿಯನ್ನು ಸೇರತೊಡಗಿದವು. ಆದರೆ ಇಂಗ್ಲಿಷರಿಗೆ ಅಚ್ಚರಿ. ಬಿರುಕುಗಳೆಲ್ಲ ಕೂಡಲೇ ತುಂಬಿಕೊಳ್ಳತೊಡಗಿಬಿಟ್ಟವು! ಕಲ್ಲುಗಾರೆಗಳಿಂದಲ್ಲ, ಮನುಷ್ಯ ದೇಹಗಳಿಂದ! ಆಂಗ್ಲ ಸೈನಿಕರಿಗೆ ಅಲ್ಲೆಲ್ಲ ಜೋನ್ ಆಫ್ ಆರ್ಕ್‌ಳ ಪ್ರತಿರೂಪಗಳೇ ಕಾಣತೊಡಗಿದುವು.

ನೇಪಾಳಿ ಸ್ತ್ರೀಯರು ಪ್ರಾಣದ ಹಂಗು ತೊರೆದು ಕೋಟೆಯ ರಕ್ಷಣೆಗೆ ನಿಂತಿದ್ದರು.

ಆ ದಿನ ಇಂಗ್ಲಿಷರ ಪಾಲಿಗೆ ಒಳ್ಳೆಯದಾಗಿತ್ತು. ಜಿಲೆಸ್ಪಿ ತನ್ನವರನ್ನು ಹುರಿದುಂಬಿಸುತ್ತ ಮುಂದುವರಿದು ಸೈನ್ಯದೊಂದಿಗೆ ಕೋಟೆಯನ್ನು ಸಮೀಪಿಸಿದ. ಕೋಟೆಗೆ ಒಂದೇ ಬಾಗಿಲು. ಅದನ್ನು ಮುರಿಯಲು ಜಿಲೆಸ್ಪಿ ನಿರ್ಧರಿಸಿದ.

ಲೆಫ್ಟನೆಂಟ್ ಎಲಿಸ್ ತನ್ನ ಬಳಿಯಿದ್ದ ಏಣಿಯನ್ನು ಗೋಡೆಗಾನಿಸಿ ಆರೇಳು ಹೆಜ್ಜೆ ಮೇಲೆ ಹೋಗಿದ್ದ. ಎಲ್ಲಿಂದಲೋ ಒಂದು ದೇಶಿ ಬಂದೂಕು ಹಾರಿತು. ಎಲಿಸ್ ಧೊಪ್ಪೆಂದು ಬಿದ್ದು ಹೆಣವಾದ. ತನ್ನ ಕಾಲಡಿಯಲ್ಲಿ ಬಂದು ಬಿದ್ದ ಎಲಿಸ್‌ನ ಹೆಣವನ್ನು ಒಂದರೆಕ್ಷಣ ದಿಟ್ಟಿಸಿದ ಜಿಲೆಸ್ಪಿ ಕೂಡಲೇ ಏಣಿಯನ್ನೇರತೊಡಗಿದ. ದೇಶಿ ಬಂದೂಕಿನಿಂದ ಮತ್ತೊಂದು ಗುಂಡು ಸಿಡಿಯಿತು. ಎಲಿಸ್‌ನ ಹೆಣದ ಪಕ್ಕದಲ್ಲೇ ಜಿಲೆಸ್ಪಿಯೂ ಹೆಣವಾಗಿ ಬಿದ್ದ.

ನಾಯಕನಿಲ್ಲದ ಆಂಗ್ಲ ಸೈನ್ಯ ಮತ್ತೆ ಎರಡನೇ ಬಾರಿ-ಹಿಮ್ಮೆಟ್ಟಬೇಕಾಯಿತು.

ಈಗ ಉಳಿದ ಸೈನ್ಯಾಧಿಕಾರಿಗಳಲ್ಲಿ ಅತಿ ಹಿರಿಯನೆನಿಸಿದ್ದ ಕರ್ನಲ್ ಮಾಬೀ ದಾಳಿಯ ನೇತೃತ್ವ ವಹಿಸಿಕೊಂಡ. ದಾಳಿಯ ಯೋಜನೆಗಳಲ್ಲಿ ಮಹತ್ತರ ಬದಲಾವಣೆಗಳನ್ನು ಮಾಡಿದ. ಇದಕ್ಕಾಗಿ ಸುಧಾರಿತ ಶಸ್ತ್ರಾಸ್ತ್ರಗಳು ಬೇಕಿತ್ತು. ಅವು ದಿಲ್ಲಿಯಿಂದ ಬರಬೇಕು. ಮೂರು ವಾರಗಳವರೆಗೆ ದಾಳಿಯ ಯೋಜನೆ ಮಾಡಲಾಯಿತು. ನವೆಂಬರ್ ೨೪ರಂದು ಡೆಹ್ರಾಡೂನಿನಲ್ಲಿದ್ದ ಕರ್ನಲ್ ಮಾಬೀಗೆ ದಿಲ್ಲಿಯಿಂದ ಶಸ್ತ್ರಾಸ್ತ್ರಗಳ ಸರಬರಾಜನ್ನು ಕುರಿತ ಪತ್ರ ಬಂತು. ಈ ಮೂರು ವಾರಗಳಲ್ಲಿ ನಲಪಾನಿ ಕೋಟೆಯನ್ನು ಇಂಗ್ಲಿಷ್ ಸೈನಿಕರು ಬಲವಾಗಿ

ಕಾಯುತ್ತಿದ್ದರು. ನೇಪಾಳಿಗರಿಗೆ ಆಹಾರ ದಾಸ್ತಾನಿಗೂ, ಹೊಸ ಶಸ್ತ್ರಾಸ್ತ್ರಗಳ ಸಂಗ್ರಹಕ್ಕೂ, ಬಲವರ್ಧನೆಗೂ ಆಂಗ್ಲ ಸೈನಿಕರು ಅವಕಾಶವೀಯಲೇ ಇಲ್ಲ. ಆದರೂ, 'ಹೊಸ ಬಲ'ದ ಇಂಗ್ಲಿಷ್ ಸೈನಿಕರೊಂದಿಗೆ ಕಾದಲು ೧೨,೦೦೦ ಬಲದ ನೇಪಾಳಿ ಸೈನ್ಯ ನಾಲ್ಕೂ ನಿಟ್ಟಿನಲ್ಲಿ ಸಿದ್ಧವಾಗಿ ನಿಂತಿತ್ತು.

ಮೂರು ವಾರಗಳ ಅವಧಿಯಲ್ಲಿ ಇಂಗ್ಲಿಷರಿಗೆ ತಮ್ಮ ಚಟುವಟಿಕೆಯ ವಾಸನೆ ಬಡಿಯದ ಹಾಗೆ, ನೇಪಾಳಿಗರು ಕೋಟೆಯನ್ನು ಬಲಪಡಿಸುವ, ಆಯುಧಗಳನ್ನು ಸಜ್ಜುಗೊಳಿಸುವ, 'ಖುಕ್ರೀ'ಗಳನ್ನು ಮಸೆಯುವ ಕೆಲಸದಲ್ಲಿ ತೊಡಗಿದ್ದರು. ಆದರೂ ಇಂಗ್ಲಿಷರ ದೈತ್ಯಬಲದ ಅರಿವು ಅವರಿಗಿತ್ತು. ಹೀಗಾಗಿ ರೆಪ್ಪೆ ಮುಚ್ಚದೆ, ಶತ್ರುನಾಶ ಇಲ್ಲವೆ ವೀರಸ್ವರ್ಗದ ದೃಢ ಸಂಕಲ್ಪದಿಂದ ಅವರು ಗಟ್ಟಿಯಾಗಿ ನಿಂತಿದ್ದರು.

ನವೆಂಬರ್ ೨೭, ೧೮೧೪. ಇಂಗ್ಲಿಷರ ತೋಪುಗಳು ಗರ್ಜಿಸಿದವು. ನೇಪಾಳಿಗರ ಬಂದೂಕುಗಳು ಪ್ರತಿಧ್ವನಿಸಿದುವು. ತಮ್ಮಲ್ಲಿರುವ ಮದ್ದು ತೀರುವವರೆಗೆ ತೋಪುಗಳನ್ನೂ ನಂತರ ಹರಿತವಾದ ಬಾಣಗಳನ್ನೂ, ಕೊನೆಗೆ ಕೋಟೆ ಕಟ್ಟಲು ತಂದಿಟ್ಟುಕೊಂಡಿದ್ದ ಕಲ್ಲು ಗುಂಡುಗಳನ್ನೂ ಅವರು ಆಯುಧವಾಗಿ ಬಳಸಿ ಇಂಗ್ಲಿಷರನ್ನೆದುರಿಸಿದರು. ಆದರೆ ಇಂಗ್ಲಿಷರದು ನೇಪಾಳಿಗರ ನಾಲ್ಕು ಪಟ್ಟು ಬಲ. ತಾಯಿಯಷ್ಟೇ ಪ್ರೀತಿ ಗೌರವದಿಂದ ಕಾಪಾಡಿಕೊಂಡು ಬಂದಿದ್ದ ನಲಪಾನಿ ಕೋಟೆ ಈಗ ನಡುಗತೊಡಗಿತು. ಹೆಂಗಸರೂ ಮಕ್ಕಳೂ ಸೇರಿದಂತೆ ನೇಪಾಳಿಗರಲ್ಲಿ ಅನೇಕರು ಇಂಗ್ಲಿಷರ ಗುಂಡುಗಳಿಗೆ ಬಲಿಯಾದರು. ಗಾಯಗೊಂಡವರೂ ಬಹಳ. ಔಷಧೋಪಚಾರದ ವ್ಯವಸ್ಥೆಯಂತೂ ಇರಲಿಲ್ಲ. ಗಾಯಾಳುಗಳ ಶುಶ್ರೂಷೆ ದೂರದ ಮಾತಾಯಿತು. ಸತ್ತವರ ಸಂಸ್ಕಾರದೆಡೆಗೆ ಗಮನಹರಿಸಲೂ ಅವರಿಗೆ ಸಾಧ್ಯವಾಗಲಿಲ್ಲ. ಹೆಣಗಳ ನಡುವೆ ಬಿದ್ದು, ನೀರಿಗಾಗಿ ಬಾಯಿ ಬಿಟ್ಟು ಕೊನೆಗೆ ಪ್ರಾಣಬಿಟ್ಟವರು ಅದೆಷ್ಟೋ. ಗಾಬರಿಗೊಂಡ ಅನಾಥ ಮಕ್ಕಳ ಆಕ್ರಂದ ಯಾರಿಗೆ ಕೇಳೀತು?

ಈ ದಾಳಿಯಲ್ಲಿ ಬದುಕಿ ಉಳಿದವರು ಬಲಭದ್ರ ಮತ್ತು ಆತನ ೭೦ ಜನ. ಅವರಿಗೀಗ ನಿಜವಾದ ಬಲಪರೀಕ್ಷೆ. ಕಾಲಿಟ್ಟಲ್ಲಿ ತಮ್ಮವರ ಶವಗಳನ್ನೆಡವುತ್ತ, ಕಣ್ಣೆತ್ತಿ ನೋಡಿದಲ್ಲಿ ರಕ್ತದ ಕಲೆಗಳನ್ನು ನೋಡುತ್ತ, ಸತ್ತ ಮಕ್ಕಳಿಗಾಗಿ ಶೋಕಿಸುವ ತಾಯಂದಿರ ಅಳು–ಸತ್ತ ತಾಯಂದಿರ ಹೆಣದ ಮೇಲೆ ಹೊರಳಾಡಿ ಅಳುವ ಮಕ್ಕಳ ಅಳು ಕೇಳುತ್ತ ಆ ಜನ ಮನಸ್ಸು ಕಲ್ಲು ಮಾಡಿಕೊಂಡರು.

ಇಂಥ ಪರಿಸ್ಥಿತಿಯಲ್ಲಿ ತಲೆಮರೆಸಿಕೊಂಡೋ, ಶತ್ರುವಿಗೆ ಶರಣಾಗಿಯೋ ಬದುಕುವುದೊಂದೇ ಮಾರ್ಗ ಅವರಿಗೆ. ಆದರೆ ತಮ್ಮವರನ್ನೆಲ್ಲ ಬಲಿಗೊಟ್ಟು ತಾವಿಷ್ಟು ಜನ ಮಾತ್ರ ಬದುಕುಳಿಯುವುದರಷ್ಟು ಹೇಯವಾದದ್ದು ಇನ್ನಾವುದಿದ್ದೀತು? ಬಲಭದ್ರ ಮತ್ತವನ ೭೦ ಜನ ಈಗ ಕೋಟೆಯ ಮೇಲಿಂದ ಕಲ್ಲುಬಂಡೆಗಳನ್ನು ಎಸೆಯಲಾರಂಭಿಸಿದರು. ಆದರೆ ಎಷ್ಟು ಕಲ್ಲು ಬಂಡೆಗಳಿರಬೇಕು? ಇದ್ದವೆಲ್ಲ ಕೆಳಗೆ ಬಿದ್ದು ಕೆಲವು ನೂರು ಇಂಗ್ಲಿಷ್ ಸೈನಿಕರನ್ನೂ ಅವರ ಕೆಲವು ತೋಪುಗಳನ್ನೂ ಕೆಡವಿದವು.

ಇಂಗ್ಲೀಷರು ಒಮ್ಮೆಲೇ ಕೋಟೆಯನ್ನು ವಶಪಡಿಸಿಕೊಳ್ಳಲಿಲ್ಲ. ಅಲ್ಲಿದ್ದ 'ಹುಲಿಗಳನ್ನು' ಉಪವಾಸ ಕೆಡವಿ ಕೊಲ್ಲುವ ಯೋಜನೆ ಕರ್ನಲ್ ಮಾಬೀಯದು. ಸಮೀಪದ ಹಳ್ಳದಿಂದ ನಲಪಾನಿ ಕೋಟೆಯ ಜನ ರಾತ್ರಿಯ ಹೊತ್ತಿನಲ್ಲಿ ನೀರು ತೆಗೆದುಕೊಂಡು ಹೋಗುವ ಸುದ್ದಿಯನ್ನು ಗುಪ್ತಚರನೊಬ್ಬ ಮಾಬೀಗೆ ಹೇಳಿದ. ಅವರಿಗೆ ನೀರು ಸಿಗದ ಹಾಗೆ ಮಾಡಿಬಿಟ್ಟರೆ...ನೇಪಾಳಿಗರನ್ನು ಸತಾಯಿಸಲು ಅದರಂಥ ಸುಲಭೋಪಾಯ ಮತ್ತಾವುದಿದ್ದೀತು? ರಾತ್ರೋರಾತ್ರಿ ಆ ಹಳ್ಳದ ಪ್ರವಾಹದ ದಿಕ್ಕನ್ನೇ ಬದಲಿಸಿಬಿಟ್ಟರು ಇಂಗ್ಲಿಷರು.

ಪಾಪ, ಆಹಾರದ ದಾಸ್ತಾನು ತೀರಿಹೋದ ಮೇಲೆ ಆ ಹಳ್ಳದ ನೀರನ್ನೇ ಕುಡಿದು ಹೋರಾಟವನ್ನು ಮುಂದುವರಿಸಿದ್ದ ಆ ಎಪ್ಪತ್ತೊಂದು ಜನಕ್ಕೆ ಬೇರೆ ದಾರಿಯೇ ತೋಚದಾಯಿತು. ಬಾಯಾರಿ ಬಳಲಿ ಬಸವಳಿದ ಅವರಲ್ಲಿದ್ದುದು ಬಲವಲ್ಲ—ಕೇವಲ ದೇಶಪ್ರೇಮ.

ನೇಪಾಳಿಗರ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸಿದ ಕರ್ನಲ್ ಮಾಬೀ ಕೊನೆಗೆ ಕೋಟೆಯನ್ನು ವಶಪಡಿಸಿಕೊಳ್ಳಲು ನಿರ್ಧರಿಸಿಬಿಟ್ಟನಾದರೂ ಆ ಕೋಟೆಯ ಬಾಗಿಲನ್ನು ತೆರೆಸಲು ಇಂಗ್ಲಿಷರ ತೋಪುಗಳಿಗೂ ಬಂದೂಕುಗಳಿಗೂ ಸಾಧ್ಯವಾಗಲೇ ಇಲ್ಲ. ಬಾಗಿಲು ತೆರೆಸುವುದು ಹೇಗೆ? ಕರ್ನಲ್ ಮಾಬೀಗಿದು ಮತ್ತೊಂದು ಚಿಂತೆಯಾಯಿತು.


ಆದರೆ ಒಂದು ದಿನ ಮಧ್ಯರಾತ್ರಿ ಇದ್ದಕ್ಕಿದ್ದಂತೆಯೇ ಕೋಟೆಯ ಬಾಗಿಲನ್ನು ತೆರೆದು ಆ ಎಪ್ಪತ್ತೊಂದು ಜನ ಕಲಿಗಳು ಹೊರಬಂದರು.

ಒಬ್ಬನ ಹಿಂದೊಬ್ಬ ವೀರ ದೃಢವಾದ ಹೆಜ್ಜೆಯಿಟ್ಟು ಗಂಭೀರವಾಗಿ ಹೊರಬರುತ್ತಿರುವುದನ್ನು ಕಂಡು ಇಂಗ್ಲಿಷರು ಅಚ್ಚರಿಗೀಡಾದರು. ಕೂಡಲೇ ಅವರ ಬಂದೂಕುಗಳು ಆ ವೀರರತ್ತ ಸಿಡಿಯತೊಡಗಿ ಕೆಲ ಕ್ಷಣಗಳ ನಂತರ ಸುಮ್ಮನಾದವು. ಆದರೆ ತಮ್ಮನ್ನು ನಾನಾ ವಿಧದ ಹಿಂಸೆಗೀಡು ಮಾಡಿದ ಇಂಗ್ಲಿಷರತ್ತ ಬಿಟ್ಟ-ಗಣ್ಣಿಂದ ನೋಡಿದರು ಆ ವೀರರು. ಸ್ವ-ಇಚ್ಛೆಯಿಂದ ಖಡ್ಗಗಳನ್ನು ಅರ್ಪಿಸಿ ಶರಣಾಗಲು ಬರುತ್ತಿರಬೇಕು ನತದೃಷ್ಟ ನೇಪಾಳಿಗರು ಎಂದು ಬ್ರಿಟಿಶರು ಅಂದುಕೊಂಡರು.

ಕೊನೆಗೂ ನೇಪಾಳಿಗರು ತಮಗೆ ಶರಣಾದರೆಂಬ ಸಂತಸದ ಭರದಲ್ಲಿ ಇಂಗ್ಲಿಷರಿದ್ದಾಗ ಆ ಎಪ್ಪತ್ತೊಂದು ಜನ, ಬ್ರಿಟಿಶ್ ಸೈನಿಕರನ್ನು ಬದಿಗೊತ್ತಿ ದೂಡಿ ಹಳ್ಳದೆಡೆ ಓಡಿದರು.

ಮನದಣಿ ನೀರು ಕುಡಿಯಲು ಅವರನ್ನು ಬಿಟ್ಟ ಇಂಗ್ಲೀಷ್ ಸೈನಿಕರಲ್ಲಿ ಕೆಲವರು ಕೋಟೆಗೆ ನುಗ್ಗಿದರು. ಇನ್ನು ಕೆಲವರು ಈ ಎಪ್ಪತ್ತೊಂದು ಜನರನ್ನು ಬೆನ್ನಟ್ಟಿದರು. ಆದರೆ ಅವರೊಂದಿಗೆ ಹೋರಾಟಕ್ಕಿಳಿದು, ಸೆರೆಯಾಗಿ ಕೊಳೆಯುವುದಕ್ಕಿಂತ ನೇಪಾಳದ ಇತರ ಮೂರು ಗಡಿಗಳಲ್ಲಿ ಕಾವಲಿದ್ದ ತಮ್ಮವರ ಪೈಕಿ ಒಂದು ಪಡೆಯನ್ನು ಸೇರಿಕೊಳ್ಳುವುದು ಸೂಕ್ತವೆಂದು ಬಗೆದು, ಓಡಿ ತಮ್ಮ ಜೀವವನ್ನು ಉಳಿಗೊಳ್ಳಬಯಸಿದ ಇಂಗ್ಲಿಷರ ಕಣ್ಣಿಗೆ ಕಾಣದಂತೆ ಬೆಟ್ಟ-ಗುಡ್ಡಗಳಲ್ಲಿ ಅಡಗಿಕೊಂಡು ಪಾರಾದರು ಆ ವೀರ ನೇಪಾಳಿಗರು. ❀

(ಆಧಾರ)



ನಟ ವಿಲಿಯಂ ಜಿಲ್ಲೆಟ್ ಹುಡುಗನಾಗಿದ್ದಾಗ ಶೀಘ್ರಲಿಪಿಯನ್ನು ಕಲಿಯುತ್ತಿದ್ದ. ಆಗ ಆತ ವಾಸಿಸುತ್ತಿದ್ದುದು ಒಂದು ಬೋರ್ಡಿಂಗ್ ಹೌಸಿನಲ್ಲಿ. ಪ್ರತಿ ಸಂಜೆ ಅಲ್ಲಿ ಜನ ಮಾತಾಡುವುದನ್ನೇ ಶೀಘ್ರಲಿಪಿಯಲ್ಲಿ ಬರೆದುಕೊಂಡು ಅಭ್ಯಾಸ ಮಾಡಬೇಕೆಂದುಕೊಂಡ ವಿಲಿಯಂ. ಕೆಲವು ವರ್ಷಗಳ ನಂತರ ತನ್ನ ಮಿತ್ರನೊಂದಿಗೆ ಮಾತಾಡುತ್ತಿದ್ದಾಗ "ನಾಲ್ಕು ತಿಂಗಳುಗಳ ವರೆಗೆ ಹೀಗೆ ಆ ಎಡೆಬಿಡದ ಸಂಭಾಷಣೆಗಳನ್ನು ಬರೆದುಕೊಂಡ ನೋಟ್ ಬುಕ್ಕುಗಳನ್ನು ಮತ್ತೊಮ್ಮೆ ನೋಡಿದೆ- ಯಾರೂ ಯಾರೊಡನೆಯೂ ಪ್ರಯೋಜನಕರವಾದುದನ್ನು ಮಾತಾಡಿರಲಿಲ್ಲ," ಎಂದ.

ದ. ಕೃ. ಹೆಬಸೂರ

ಇದು ಲೆಕ್ಕಕ್ಕೆ ಸಿಗದ ನಂಟು

ಸೆಪ್ಟೆಂಬರ್ 'ಕಸ್ತೂರಿ'ಯಲ್ಲಿ ಪ್ರಾತಃಸ್ಮರಣೀಯರಾದ ದಿ. ನಾ. ಶ್ರೀ. ರಾಜಪುರೋಹಿತರ ಬಗ್ಗೆ ಸುಂದರ ಲೇಖನ ಪ್ರಕಟಿಸಿದ್ದೀರಿ. ನನಗೆ ಅವರೊಂದಿಗೆ ಬೆಳೆದು ಬಂದಿದ್ದ ಆತ್ಮೀಯತೆ ಅವಿಸ್ಮರಣೀಯ.

೧೯೪೫ ರಿಂದ ೧೯೪೮ರವರೆಗೆ ಅವರ ಸಂಪರ್ಕ ಅವ್ಯಾಹತವಾಗಿ ಸಾಗಿ ಬಂದ ನೆನಪು ಮರೆಯಲಾರದಾಗಿದೆ. ನಾನು ಹುಡುಗ, ಅವರು ಹಿರಿಯರು. ಇಬ್ಬರಲ್ಲಿ 'ನಸ್ಯ'ದ ಗೆಳೆತನವೂ ಆತ್ಮೀಯತೆ ಬೆಳೆಯಲು ಕಾರಣವಾಯಿತು. "ಸಮಾನಶೀಲೇ ವ್ಯಸನೇಷು ಸಖ್ಯಂ" ಎಂಬಂತೆ ಸಮಾನಶೀಲ ನಸ್ಯದಿಂದ ಸಾಗಿತು. ಇಬ್ಬರದೂ ನಸ್ಯವನ್ನೂ ಕೊಂಡುಕೊಳ್ಳಲಾಗದಂಥ ಆರ್ಥಿಕ ಸ್ಥಿತಿ. ರಾಜಪುರೋಹಿತರು ವನಿತಾ ಸೇವಾ ಸಮಾಜದ ಸಂಚಾಲಕರಾಗಿದ್ದ ದಿ. ಡಾ. ಲ. ರಂ. ಪುರಾಣಿಕ (ದಾದಾ) ಅವರಲ್ಲಿ ದಿನಾಲೂ ಎರಡು ತಾಸು ಹರಟೆ ಹೊಡೆಯುತ್ತಿದ್ದರು. ನನ್ನ ಪರಿಚಯುವಾಯಿತು. ಹರಟೆಗಳಲ್ಲಿ- ಇತಿಹಾಸ, ಸಾಹಿತ್ಯ, ಧರ್ಮ, ಇವುಗಳ ಚರ್ಚೆ, ಸಮಾಜದಲ್ಲಿ ಕುಂದು ಕೊರತೆಗಳು, ಹಾಗೂ ನಿವಾರಣೋಪಾಯಗಳು ಇವೇ ಮಾತುಗಳು ಮುಖ್ಯ ವಿಷಯಗಳಾಗಿರುತ್ತಿದ್ದವು. ದಾದಾ ಅವರು ಪುಣೆಯ ಕರ್ವೆಯವರ ಮಹಿಳೋದ್ಧಾರದಂಥ ಸಂಸ್ಥೆಯನ್ನು ಇಲ್ಲಿ ಕಟ್ಟಿ ಬೆಳೆಸಿದವರು. ಇಂಥವರ ಸಹವಾಸದಿಂದ ಶ್ರೀ ರಾಜಪುರೋಹಿತರಲ್ಲಿ ಆದರ, ಅಭಿಮಾನ ಬೆಳೆದವು. ಅವರು ಆಗೀಗ ಊರು ಚಾರು ಕೆಲಸ ಹೇಳುತ್ತಿದ್ದರು. ಅದನ್ನು ಆಸ್ಥೆಯಿಂದ ಮಾಡಿ ಅವರ ಮನೆಗೆ ಹೋಗಿ ವರದಿ ಸಲ್ಲಿಸುತ್ತಿದ್ದೆ. ಶ್ರೀ ರಾಜಪುರೋಹಿತರ ಬಗ್ಗೆ ಇನ್ನೊಂದು ಅಭಿಮಾನವೂ ಕಾರಣವಾಗಿತ್ತು. ಕನ್ನಡ ೯-೧೦ ವರ್ಗಗಳಿಗೆ ಇವರು ಬರೆದ 'ಕರ್ನಾಟಕ ಇತಿಹಾಸ' ಪಠ್ಯ ಪುಸ್ತಕವಾಗಿತ್ತು. ಇಂಥವರ ಒಡನಾಟ ದೊರಕಿದೆಯಲ್ಲಾ ಎಂದು ನನಗೆ ಸಂತೋಷ!

ಪವಾಡ ಸದೃಶ ಅವಿಸ್ಮರಣೀಯ ನೆನಪು

ನಾನಾಗ ೨೦ ವರ್ಷದ ತಾರುಣ್ಯದಲ್ಲಿದ್ದೆ. ಶ್ರೀ ರಾಜಪುರೋಹಿತರು ವಯಸ್ಸಾದವರು. ಇಬ್ಬರೂ ಹೊಸಪೇಟೆಯಲ್ಲಿ ಮತ್ತೀಹಳ್ಳಿ ವಕೀಲರ ಮನೆಯಲ್ಲಿ ವಸ್ತಿ ಮಾಡಿದೆವು. ಮುಂಜಾನೆ ಹಂಪೆಯ ಹತ್ತಿರ ಇರುವ ಆನೆಗುಂದಿ ಬೆಟ್ಟಕ್ಕೆ ಹೋದೆವು. ಇತಿಹಾಸ ಪ್ರಪಂಚದಲ್ಲಿ ಮಹತ್ವದವಾದ ಐದು 'ಒಟ್ಟಲು' ಅಲ್ಲಿ ದೊರಕಿದವು. ಒಂದೇ ದಿನದಲ್ಲಲ್ಲ, ಒಂದು ವಾರದಲ್ಲಿ. 'ಒಟ್ಟಲು' ಅಂದರೆ ಸಣ್ಣ ಗುಹೆ. ಅಲ್ಲಿ ತ್ಯಾಗಿಗಳು ಶೂರರು, ಪ್ರಸಿದ್ಧ ಪುರುಷರು ಸತ್ತ ನಂತರ ಅವರಿಗೆ ಪ್ರಿಯವಾದ ವಸ್ತುಗಳನ್ನು ಇಟ್ಟು, ಕಲ್ಲ ಮೇಲೆ ಆ ವಸ್ತುಗಳು ಹಾಗೂ ಅವರ ಜೀವನ ಚಿತ್ರ ಬಿಡಿಸಿ ಕಲ್ಲು ಬಂಡೆ ಮುಚ್ಚುತ್ತಿದ್ದರು. ಹೀಗೆ ನಾವಿಬ್ಬರೂ ಸಾಗುತ್ತಿರುವಾಗ (ಸರಳ ರಸ್ತೆಯಲ್ಲಲ್ಲ, ಬೆಟ್ಟದ ಮಾರ್ಗದಲ್ಲಿ) ಒಂದು ಗುಹೆ ಕಂಡಿತು. ಅದರಲ್ಲಿ ಒಬ್ಬ ಮನುಷ್ಯ ಚಾಟಿಗೆ ಕೂಡುವ ಸ್ಥಳ, ಅದರಲ್ಲಿ ಒಳಗೆ ದಾರಿ. ನನಗೆ ಗುರುಗಳು, "ದತ್ತಾ ದಾರಿ ಒಳಗೆ ಇದ್ಹಾಂಗ ಅದ, ನೋಡಿ ಬಾ" ಎಂದು ಹೇಳಿದರು. ಆಯಿತು, ಒಡೆಯನ ಹೇಳಿಕೆ, ಕುಳಿತು ದಾರಿ ಹಿಡಿದೆ. ಮುಂದೆ ಮತ್ತೂ ಸಣ್ಣ ಮಾರ್ಗ, ಮಲಗಿ ಹೊಟ್ಟೆ ಹೊಸೆಯುತ್ತ ಸಾಗಿದೆ. ಅಲ್ಲಿ ಚಿಕ್ಕ ಹೊಂಡ. ಹಾವುಸೆ, ದುರ್ವಾಸನೆಯನ್ನು ಕಡೆಗಣಿಸಿ ಮುಂದುವರಿದೆ. ಮುಂದೆ ಒಂದು ಕಾಲು ಒತ್ತಟ್ಟಿಗೆ ಇನ್ನೊಂದು ಕಾಲು ಇನ್ನೊಂದು ಕಡೆ ಇಟ್ಟು ಪಾರಾಗಿ ಹಾಗೇ ಮುಂದೆ ಸಾಗಿದೆ. ಅಲ್ಲಿ ಬೆಳಕು, ವಿಶಾಲ ಸ್ಥಳ. ಸ್ವಚ್ಛವಾಗಿತ್ತು. ಅಲ್ಲಿ ಮಾರುತಿಯ ಮೂರ್ತಿ, ಅದೇ ಪೂಜೆ ಮಾಡಿ, ಶ್ರೀಗಂಧ, ತುಳಸಿ, ಹೂಗಳಿಂದ ಅಲಂಕರಿಸಿ, ಬಾಳೆಹಣ್ಣು ಕಾಯಿ ಪ್ರಸಾದ ಇಟ್ಟಿದ್ದರು. ನಾನೂ ಮಾರುತಿ ಭಕ್ತ. ಹತ್ತು ನಿಮಿಷ ದೇವರ ಧ್ಯಾನದಲ್ಲಿದ್ದೆ. ಆಗ ಒಬ್ಬ ಹಣ್ಣು ಹಣ್ಣು ಮುದುಕಿ ಬಂದಳು. ಗೌರವರ್ಣ, ಕೂದಲು ಬೆಳ್ಳಗೆ ಮಿಂಚುತ್ತಿದ್ದವು. ಹುಬ್ಬುಗಳು ಇಳಿದಿದ್ದವು. ಈ ಮುದುಕಿಯ ವಯಸ್ಸೆಷ್ಟಿರಬಹುದು? ನನ್ನ ಅಂದಾಜಿಗೆ ಲೆಕ್ಕ ಹತ್ತಲಿಲ್ಲ. ನನ್ನನ್ನು ನೋಡಿದಳು — ನೋಡಿದಳು ಅನ್ನುವುದಕ್ಕಿಂತ ನಾನೇ ಆಶ್ಚರ್ಯದಿಂದ ನೋಡಿದೆ. ಭಯವಾಗಲಿಲ್ಲ. ಆಕೆಯ ಕಣ್ಣುಗಳಲ್ಲಿದ್ದ ತೇಜವನ್ನು ವರ್ಣಿಸಲು ಶಕ್ಯವಿಲ್ಲ. ಆ ತೇಜವನ್ನು ನೋಡಿಯೇ ತಣಿಯಬೇಕು. ಹಾಗೇ ನೋಡುತ್ತ ಕುಳಿತೆ. ನಮಸ್ಕಾರ ಮಾಡುವ ಬುದ್ಧಿಯೂ ಬರಲಿಲ್ಲ. ಆಕೆ ಸ್ವಚ್ಛ ಕನ್ನಡದಲ್ಲಿ – "ಇನ್ನು ಮೇಲೆ ಇಲ್ಲಿಗೆ ಬರಬೇಡ ಹಾಗೂ ಈ ಸಂದಿಯನ್ನು ಯಾರೆದುರೂ ಹೇಳಬೇಡ ಹೋಗು!" ಎಂದು ಅಪ್ಪಣೆ ಮಾಡಿ ಮತ್ತೊಂದು ಬಾಗಿಲಿನಿಂದ (ಕಲ್ಲಿನ ಫಡಕು) ಹೊರಟುಹೋದಳು. ನಾನು ದೇವರ ಮೇಲಿನ ನಿರ್ಮಾಲ್ಯ, ಪ್ರಸಾದವನ್ನು ಧೋತರದಲ್ಲಿ ಕಟ್ಟಿಕೊಂಡು ಬೆನ್ನ ಹಿಂದೆ ಗಂಟು ಬರುವಂತೆ ಮಾಡಿಕೊಂಡು ಮರಳಿದೆ. ೧೧ಗಂಟೆಗೆ ಆ ಗುಹೆಯೊಳಗೆ ಹೋದವನು, ಮಧ್ಯಾಹ್ನ ಎರಡು ಗಂಟೆಗೆ ಹೊರಬಂದೆ. ಶ್ರೀ ರಾಜಪುರೋಹಿತರು ನನ್ನ ಚಿಂತೆ ಮಾಡುತ್ತ, ಅಡವಿಯಲ್ಲಿ ಒಂಟಿಯಾಗಿ, ಕಣ್ಣೀರು ಸುರಿಸುತ್ತ ಕುಳಿತಿದ್ದರು. "ಗುರುಗಳೇ" ಎಂದು ನಾನು ಕೂಗಿದಾಗ ಅವರಿಗೆ ಅತ್ಯಂತ ಸಂತೋಷವಾಯಿತು. "ಇತಿಹಾಸ ಸಂಶೋಧನೆಗೆ ಬೆಂಕಿ ಬೀಳಾ, ನೀನು ಸುರಕ್ಷಿತ ಬಂದೆಯಲ್ಲಪ್ಪ, ಸಾಕು. ನಡೆ ಹೋಗೋಣ!" ಎಂದರು. "ಗುರುಗಳೇ ಅಲ್ಲಿ ಬಹಳ ಅದ್ಭುತವಿದೆ. ದಾರಿ ಬಹಳ ಕಠಿಣ" ಎಂದು ನಾನು ಅಲ್ಲಿಯ ವೃತ್ತಾಂತ ಹೇಳಿದಾಗ ಚಿಂತೆಯ ಕಣ್ಣೀರಿನ ಬದಲು, ಆನಂದದ ಕಣ್ಣೀರು ಸುರಿಸಿದರು. ನೀನೇ ಧನ್ಯನೆಂದು ಹರಸಿದರು. ಧಾರವಾಡಕ್ಕೆ ಬಂದ ಮೇಲೆ ತಮ್ಮ ಎಲ್ಲ ಬಳಗದ ಮುಂದೆ ಹೇಳುವದೇ ಹೇಳುವದು, ನನ್ನನ್ನು ಕೊಂಡಾಡುವದೇ ಕೊಂಡಾಡುವದು. ಶ್ರೀ ಬೆಟಗೇರಿ ಕೃಷ್ಣಶರ್ಮರು ನನಗೆ "ಕನಸ

ನ್ಯಾಗ ಕಂಡೇನೋ ಮಾಸ್ತರ?" ಎಂದು ಕೇಳಿದರು. ನಿರ್ಮಾಲ್ಯ, ಶ್ರೀಗಂಧ ತೋರಿಸಿ ಸಾಕ್ಷಿ ಶ್ರೀ ಗುರುಗಳೇ ಎಂದು ಹೇಳಿದಾಗ ನನ್ನನ್ನು ಬಹಳ ಅಭಿಮಾನದಿಂದ ನೋಡುತ್ತ ಬಂದರು. ಅಂದಿನ ಶ್ರೀಗಂಧದ ವಾಸನೆಯನ್ನು ನಾನು ಹಿಂದೆಂದೂ ಕಂಡಿರಲಿಲ್ಲ. ಹೊಸಪೇಟೆಗೆ ಬಂದು ಪುತ್ತೀಹಳ್ಳಿ ವಕೀಲರಿಗೆ ಹೇಳುವಾಗ ಗುರುಗಳು ಶಿರ ಬಗಿದು ಹೇಳಿದರು. ಇದಾದ ಮೇಲೆ ಈ ಗುಹೆ ಕಂಡು ಹಿಡಿಯಲು, ೧೯೬೫ರ ವರೆಗೆ ಹತ್ತಾರು ಸಲ ಸುತ್ತಾಡಿದೆ. ಆ ಸ್ಥಾನ ದೊರಕಲಿಲ್ಲ.


ಗುರುಗಳ ಜೊತೆಗೆ ಲಕ್ಕುಂಡಿ, ಇಟಗಿ, ಡಂಬಳ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ವಿಜಾಪುರ, ಹಂಪೆಗಳಿಗೆಹೋಗಿ ಬಂದಿದ್ದೇನೆ. ಹಂಪೆಗೆ ಆರೇಳು ಸಲವಾದರೂ ಇವರ ಜೊತೆಗೆ ಹೋಗಿ ಬಂದಿದ್ದೇನೆ.

ನನಗೆ ಇತಿಹಾಸದ ಬಗ್ಗೆ ಅಭಿರುಚಿ ಇದ್ದಿಲ್ಲ. ಆದರೆ ಬಿಡುವಿನ ವೇಳೆಯಲ್ಲಿ ಚಾಂದ ಬೀಬಿಗೆ ಆದ ಅಪಮಾನ, ಮುಲಕ್ ಮೈದಾನ ತೋಪು ವಿಜಾಪುರಕ್ಕೆ ಬಂದದ್ದು, ಆದಿಲಶಾಹಿ ಅರಸರ ಆಳಿಕೆ, ವಿಜಯನಗರ ಸಾಮ್ರಾಜ್ಯ ಹಾಗೂ ಅರಸರ ಬಗ್ಗೆ ಕಥೆ ಹೇಳಿ ನನ್ನಲ್ಲಿ ಆಸಕ್ತಿ ಮೂಡಿಸಿದವರು ರಾಜಪುರೋಹಿತರು. ವಿಜಯನಗರದ ಪತನ, ರಕ್ಕಸತಂಗಡಿಗಿ ಯುದ್ಧದ ಬಗ್ಗೆ ಆಗ ಕೇಳಿದ ಕಥೆ, ಅವರು ಹೇಳಿದ ಶೈಲಿ ಇಂದಿಗೂ ಮರೆಯದಂತಾಗಿದೆ. ಅವರು ಹೇಳಿದ ಒಂದು ಮಾತು ಆಗಾಗ ನೆನಪಿಗೆ ಬರುತ್ತದೆ. "ಮರೆತು ಹೋದ ವಿಜಯನಗರ ಸಾಮ್ರಾಜ್ಯ" ಎಂಬುದನ್ನು ಅವರು "ಮರೆಯಲಾರದ ಸಾಮ್ರಾಜ್ಯ ವಿಜಯನಗರ" ಎಂದು ಸ್ಪಷ್ಟೀಕರಿಸುತ್ತಿದ್ದರು. ಹಟವಾದಿಗಳಾಗಿದ್ದ ಅವರ ಮಾತಿನಲ್ಲಿ ಸತ್ವವಿರುತ್ತಿತ್ತು.

ನನ್ನನ್ನು ಮೊದಲು ಅಲ್ಲಲ್ಲಿ ಶಿಲಾಶಾಸನಗಳಿದ್ದ ಸ್ಥಳಕ್ಕೆ ಕರೆದುಕೊಂಡುಹೋಗಿ ತೋರಿಸಿ, ಓದಿಸುತ್ತಿದ್ದರು. ಅಕ್ಷರಗಳ ಪರಿಚಯ ಮಾಡಿಸುತ್ತಿದ್ದರು. ಕಾರಣ ನನ್ನ ಓದೇ ಸ್ವಲ್ಪ! ಏಳನೇ ವರ್ಗ ಪಾಸಾಗಿ ಶಿಕ್ಷಕರ ತರಬೇತಿಗೆ ಬಂದವ! ಸಾಹಿತ್ಯದ ಅಭಿರುಚಿ ಬೆಳೆಸಿ ಪ್ರಾಚೀನ ಸಂಸ್ಕೃತಿ, ಸಾಹಿತ್ಯ, ಕಲೆಗಳ ಬಗೆಗೆ ತುಂಬಾ ಅಭಿಮಾನವನ್ನು ಹುಟ್ಟಿಸಿದರು. ತಾಳೆಗರಿ ಗ್ರಂಥ ಓದಲು ಕೊಡುತ್ತಿದ್ದರು. ಅವು ನನಗೆ ಪ್ರಾರಂಭದಲ್ಲಿ ಕಬ್ಬಿಣದ ಕಡಲೆ. ಹೀಗೆ ನನ್ನನ್ನು ಮನುಷ್ಯನನ್ನಾಗಿ ಮಾಡಲು ಬೇಕಾದ ಸಾಮಗ್ರಿಗಳನ್ನು ನನ್ನ ಚಂಚಲ ಮನಸ್ಸಿನ ತಾರುಣ್ಯದಲ್ಲಿ ತುಂಬಿದರು. ದೈವವಶಾತ್ ನನಗೆ ಲಭಿಸಿದ–ಲಭಿಸುತ್ತಿರುವ ಪ್ರಾಚ್ಯವಸ್ತುಗಳನ್ನು ಅವರಿಗೆ ತೋರಿಸಿದ್ದರೆ ಎಷ್ಟು ಹಿಗ್ಗುತ್ತಿದ್ದರೋ! ಅಲ್ಲದೇ ಅವರೇ ಸ್ಥಾಪಕರಲ್ಲಿ ಒಬ್ಬರಾದ ಕರ್ನಾಟಕ ಇತಿಹಾಸ ಸಂಶೋಧನ ಮಂಡಳಕ್ಕೆ ನನ್ನನ್ನು ಸದಸ್ಯನನ್ನಾಗಿ ಮಾಡಿ, ನನಗೆ ಮತ್ತೊಂದು ವಿಶಾಲ ಕಾರ್ಯ ಕ್ಷೇತ್ರ ತೋರಿಸುತ್ತಿದ್ದರೊ! (ಕರ್ನಾಟಕ ಇತಿಹಾಸ ಸಂಶೋಧನ ಮಂಡಳ ನಾನು ನೀಡಿದ ಅಮೂಲ್ಯ ಗ್ರಂಥಗಳಿಗೆ ಮಾವತಿ ಕೂಡ ನೀಡಲಿಲ್ಲ. ನೀಡಿದ್ದೇನೆಂದು ನಾನೇ ಪತ್ರಿಕೆಯಲ್ಲಿ ಪ್ರಕಟಿಸಿದ್ದೇನೆ.) ಅಷ್ಟರಲ್ಲಿ ನನಗೆ ಬೆಳಕು ನೀಡಿದ ಸೂರ್ಯ ಅಸ್ತಂಗತನಾದ!



ಭೂಮಿ ತನ್ನ ಸದ್ಯದ ಆಕಾರವನ್ನು ಸುಮಾರು ೩೦,೦೦೦ ಲಕ್ಷ ವರ್ಷಗಳ ಹಿಂದೆಯೇ ಪಡೆದುಕೊಂಡಿತು. ಅಂದಿನಿಂದ ಇಲ್ಲಿಯವರೆಗೆ ಭೂಮಿಯ ಮೇಲೆ ಉಲ್ಕೆಗಳ ರೂಪದಲ್ಲಿ ಆಕಾಶದಿಂದ ೧,೫೦,೦೦೦ ಮಿಲಿಯನ್ ಟನ್ನುಗಳಷ್ಟು ಕಬ್ಬಿಣ ಬಿದ್ದಿದೆಯೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.



ಇವರಿಗೆ ನೂರು ತುಂಬಿತು

ಮಾಧವ ನಾ. ಮಹಿಷಿ

೧೯೬೦ರಲ್ಲಿ ನಾನಿನ್ನೂ 'ಕರ್ಮವೀರ'ದಲ್ಲಿ ಕಿರಿಯ ಉಪಸಂಪಾದಕನಾಗಿ ಕೆಲವು ತಿಂಗಳು ಮಾತ್ರ ಕಳೆದಿದ್ದವು. ಕರ್ನಾಟಕ (ಆಗ ಮೈಸೂರು) – ಮಹಾರಾಷ್ಟ್ರ ಗಡಿ ವಿವಾದ ಕತ-ಕತನೆ ಕುದಿಯುತ್ತಿದ್ದ ದಿನಗಳವು. ರಾಷ್ಟ್ರದ ಪ್ರಮುಖ ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಆಗೆಲ್ಲ ನೋಡಸಿಗುತ್ತಿದ್ದುದು ಮಹಾರಾಷ್ಟ್ರ ಪರ ವರದಿ-ಗಳು, ಲೇಖನಗಳು. ಕರ್ನಾಟಕದ ಧುರೀಣರು ತಮ್ಮ ಭೂಮಿಕೆಯನ್ನು ರಾಷ್ಟ್ರಕ್ಕೆ ಅರ್ಥವಾಗುವ ತೆರದಲ್ಲಿ ಮಂಡಿಸುತ್ತಿಲ್ಲವೇಕೆ ಎಂದೇ ನನಗೆ ಹೊಳೆಯುತ್ತಿರಲಿಲ್ಲ. ನಾನು ನನ್ನ ಕೈಲಾದ್ದನ್ನು ಮಾಡಬೇಕೆಂದು ನಿರ್ಧರಿಸಿ ವಿಷಯವನ್ನು ಸಾಕಷ್ಟು ಆಳವಾಗಿ ಓದಿಕೊಂಡು ಇಂಗ್ಲೀಷಿನಲ್ಲಿ MYSORE – MORE SINNED AGAINST ಎಂಬ ಸುದೀರ್ಘ ಲೇಖನವನ್ನು ಬರೆದು ಶುದ್ಧ ಪ್ರತಿಯನ್ನು ತಯಾರಿಸಿದೆ. ಕಾರ್ಯಾ-ಲಯದಲ್ಲಿಯ ಒಬ್ಬಿಬ್ಬರು ಮಿತ್ರರಿಗೆ ತೋರಿ-ಸಿದೆ. ಹಿರಿಯರ ಕಣ್ಣಿಗೂ ಹಾಕಿದೆ. ಮೆಚ್ಚುಗೆಯನ್ನು ಕೇಳಿ ಮನಸ್ಸಿಗೆ ಆನಂದವೇನೋ ಆಯಿತು; ಆದರೆ ಅದನ್ನು ಮುಂಬಯಿ ಅಥವಾ ದಿಲ್ಲಿಯಿಂದ ಪ್ರಕಟವಾಗುವ ಪ್ರಮುಖ ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಪ್ರಕಟಿಸುವ ಬಗೆ ಹೇಗೆಂ-ಬುದು ನನಗೆ ತಿಳಿದಿರಲಿಲ್ಲ. ಆ ಬಗ್ಗೆ ಯಾರಿಂ-ದಲೂ ಮಾರ್ಗದರ್ಶನವೂ ಸಿಗಲಿಲ್ಲ. ಆಗ ನನಗೆ ಸಾಕಷ್ಟು ಪರಿಚಿತರಾಗಿದ್ದ ಹೊರಗಿನವರೊಬ್ಬ-ರನ್ನು ಸಂಧಿಸಿ ಅವರ ಮಾರ್ಗದರ್ಶನ ಕೋರಿದೆ. ಅವರು ವಸ್ತುತಃ 'ಹೊರಗಿನವ'ರಾದರೂ ನಮ್ಮ ಸಂಸ್ಥೆಯಲ್ಲಿ ಅವರಿಗೆ ಸಾಕಷ್ಟು ವರ್ಚಸ್ಸು ಇತ್ತು. ಲೇಖನವನ್ನು ಅವರು ಬಾಯ್ತುಂಬ ಹೊಗಳಿ ಕೊನೆಗೊಂದು ಮಾತು ಹೇಳಿದರು: "ನಿನ್ನ ಲೇಖನ ಎಷ್ಟೇ ಸಮರ್ಥವಾಗಿದ್ದರೂ ಹೊರಗಡೆ ನಿನಗೆ ಹೆಸರೆಲ್ಲಿದೆ? ಪತ್ರಿಕೆಯವರು ಇದನ್ನು ಓದಿಯಾರೆಂಬ ಭರವಸೆ ಕೂಡ ನನಗಿಲ್ಲ. ಇದು ಪ್ರಕಟವಾಗಬೇಕೆಂಬ ಇಚ್ಛೆ ನಿನಗಿದ್ದರೆ ಇದಕ್ಕೆ ತಮ್ಮ ಹೆಸರು ದಾನ ಮಾಡುವಂತೆ ನಾನು 'ರಾಯರ' ಮನವೊಲಿಸುತ್ತೇನೆ. ಅವರ ಹೆಸರಿ-ನಲ್ಲಾದರೆ ಇದು ಬೆಳಕು ಕಾಣಬಹುದು."

ಅವರ ಸಲಹೆ ವ್ಯಾವಹಾರಿಕವಾಗಿರಬಹುದು;

ಆದರೆ ನನ್ನ ಮಗುವಿಗೆ ಬೇರೆ ಯಾರೋ ತಂದೆಯೆಂದು ಒಪ್ಪಿಕೊಳ್ಳಲು ನನ್ನ ಮನಸ್ಸು ಸಹಸಾ ಒಪ್ಪಲಿಲ್ಲ. ಲೇಖನ ಗೂಡು ಸೇರಿತು. ನಂತರ ಅದರ ಪ್ರಕಟನೆಗೆ ನಾನು ಯಾವ ಪ್ರಯತ್ನವನ್ನೂ ಮಾಡಲಿಲ್ಲ.

*

ಮುಂದೊಂದೆರಡು ವರ್ಷಗಳಲ್ಲೇ ಗಡಿ ಸಮಸ್ಯೆಯ ವಿಚಾರಣೆಗಾಗಿ ಮಹಾಜನ, ಸಾಹುಕಾರ ಚೆನ್ನಯ್ಯ, ಭಟ್ ಮತ್ತು ಪಾಟಸ್ಕರರುಳ್ಳ ಒಂದು ಸಮಿತಿ ನೇಮಕವಾಯಿತು. ಅದರೆದುರು ದಿ. ಹುಕ್ಕೇರಿಕರ ರಾಮರಾಯರು ಸಾಕ್ಷಿ ನೀಡಬೇಕಿತ್ತು. ಆಗ 'ಸಂಯುಕ್ತ ಕರ್ನಾಟಕ'ದ ಸಹಾಯಕ ಸಂಪಾದಕರಾಗಿದ್ದ ಶ್ರೀ ಆರ್. ಕೆ. ಜೋಶಿಯವರಿಗೆ ಈ ವಿಷಯದಲ್ಲಿ ಕರ್ನಾಟಕದ ನಿಲುವನ್ನು ಟಿಪ್ಪಣಿ ಮಾಡಿಕೊಡುವಂತೆ ಅವರು ಬರೆದರು. ಆ ಮುಂಚೆ ನನ್ನ ಇಂಗ್ಲಿಷ್ ಲೇಖನದ ಹಸ್ತಪ್ರತಿಯನ್ನು ಓದಿದ್ದ ಶ್ರೀ ಜೋಶಿಯವರು ಅದನ್ನು ನನ್ನಿಂದ ಪಡೆದು ಇಡೀ ಲೇಖನವನ್ನೇ ಹುಕ್ಕೇರಿಕರರಿಗೆ ಕಳಿಸಿಕೊಟ್ಟರು. ಹದಿನೈದು ದಿನಗಳ ನಂತರ ಹಸ್ತಪ್ರತಿ ಸುಸ್ಥಿತಿಯಲ್ಲಿ ನನಗೆ ಮರಳಿ ಬಂತು. ಅಲ್ಲಲ್ಲಿ ಕೆಂಪು ಮಸಿಯಲ್ಲಿ ಗುರುತು ಹಾಕಿಕೊಂಡದ್ದು ಮಾತ್ರ ನನ್ನ ಕಣ್ಣಿಗೆ ಬಿತ್ತು. ನಾನು ಈ ವಿಷಯವನ್ನು ಮರೆತೇಬಿಟ್ಟಾಗ ಒಂದು ಸಂಜೆ ಬಂದ ಪತ್ರ ನನ್ನನ್ನು ಚಕಿತಗೊಳಿಸಿತು. ಅದು ಶ್ರೀ ಹುಕ್ಕೇರಿಕರರು ನನಗೆ ಬರೆದದ್ದು. ನಾನವರಿಗೆ ಪೂರ್ತಿ ಅಪರಿಚಿತ. ಆದರೂ ಆತ್ಮೀಯವಾಗಿ ಬರೆದಿದ್ದರು. ನನ್ನ ತಂದೆ ವಿಕ್ಟೋರಿಯಾ ಹೈಸ್ಕೂಲಲ್ಲಿ ತಮ್ಮ ವಿದ್ಯಾರ್ಥಿಯಾಗಿದ್ದುದನ್ನು ನೆನೆಯಲೂ ಅವರು ಮರೆತಿರಲಿಲ್ಲ. ಗಡಿ ತಂಟೆಯ ಬಗ್ಗೆ ಇಷ್ಟೊಂದು ಪರಿಣಾಮಕಾರಿ ಲೇಖನವನ್ನು ಇದುವರೆಗೆ ತಾವು ನೋಡಿರಲಿಲ್ಲವಾಗಿಯೂ ಅದರ ಪೂರ್ತಿ ಪ್ರಯೋಜನವನ್ನು ತಾವು ಪಡೆದದ್ದಾಗಿಯೂ ಬರೆದಿದ್ದಲ್ಲದೆ ನನ್ನ ಲೇಖನವೃತ್ತಿಯಲ್ಲಿ ಯಶಸ್ಸನ್ನು ಹಾರೈಸಿದ್ದರು.

ನನ್ನ ಲೇಖನ ಪ್ರಕಟವಾಗದಿದ್ದ ವ್ಯಸನವೆಲ್ಲ ಅವರು ಬರೆದ ಆ ಪತ್ರದೊಂದಿಗೆ ಅಳಿಸಿಹೋಯಿತು. ಮಹನೀಯರೊಬ್ಬರಿಗೆ ಕಿಂಚಿತ್ತಾದರೂ ಅದರ ಪ್ರಯೋಜನ ದೊರೆಯಿತಲ್ಲ ಎಂದು ಸಂತೋಷವೂ ಆಯಿತು. ಅಲ್ಲದೆ ಆ ಮಗುವಿನ ತಂದೆ ನಾನೆಂದು ಈ ರಾಯರಾದರೂ ಒಪ್ಪಿದ್ದರಲ್ಲ ಎಂದು ಹೆಮ್ಮೆಯೆನಿಸಿತು. ✻

ಹುಕ್ಕೇರಿಕರ ರಾಮರಾಯರು ೧೯೫೭ಕ್ಕೆ ಮುಂಚೆ ಮುಂಬಯಿ ವಿಧಾನಪರಿಷತ್ತಿನ ಅಧ್ಯಕ್ಷರಾಗಿದ್ದರು. ಆಗೊಂದು ಸಲ (೧೯೫೩–೫೪ರಲ್ಲಿರಬೇಕು) ಅವರು ಧಾರವಾಡದಲ್ಲಿದ್ದಾಗ ಕರ್ನಾಟಕ ಕಾಲೇಜಿನ ರಾಜ್ಯಶಾಸ್ತ್ರ ಸಂಘಕ್ಕೆ ಅತಿಥಿಯಾಗಿ ಆಗಮಿಸಿದ್ದರು. ಆಗೆಲ್ಲ ಕಾಲೇಜು ಮಟ್ಟದಲ್ಲಿ ಇಂಗ್ಲೀಷಿನಲ್ಲಿ ಮಾತಾಡುವುದೇ ಸಂಪ್ರದಾಯವಾಗಿರುತ್ತಿತ್ತು. ವಿಧಾನ ಮಂಡಳದಲ್ಲಿ ರಾಜಕೀಯ ಪಕ್ಷಗಳು ಹೇಗೆ ಕಾರ್ಯ ಮಾಡುತ್ತವೆಂಬುದನ್ನು ವಿವರಿಸುವುದೇ ಅವರ ಭಾಷಣದ ವಿಷಯ. ತಾವು ಇಂಗ್ಲೀಷಿನಲ್ಲಿ ಬರೆಯಬಲ್ಲೆವಾದರೂ ನಿರರ್ಗಳವಾಗಿ ಮಾತಾಡುವ ರೂಢಿ ತಮಗಿಲ್ಲವೆಂದೇ ಅವರು ಮಾತಿಗೆ ಮೊದಲು ಮಾಡಿದರು. ಶುದ್ಧ ಇಂಗ್ಲೀಷ್ ಪ್ರೇಮಿಗಳಿಗೆ ಅವರ ಶೈಲಿ ಎಷ್ಟು ಹಿಡಿಸುತ್ತಿತ್ತೊ ತಿಳಿಯದು. ಆದರೆ ಒಂದು ಹಂತದಲ್ಲಿ ಅವರು ಒಂದು ರಾಜಕೀಯ ಪಕ್ಷದಲ್ಲಿ ಯಾವುದೊಂದು ವಿಷಯದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಅವುಗಳನ್ನು ಪಕ್ಷದ ಸಭೆಯಲ್ಲೇ ಚರ್ಚಿಸಿ ಒಂದು ನಿರ್ಧಾರಕ್ಕೆ ಬರಲಾಗುತ್ತದೆ; ವಿಧಾನ ಮಂಡಳದಲ್ಲಿ ಮಾತ್ರ ಆ ಪಕ್ಷದ ಸದಸ್ಯ ತನ್ನ ವೈಯಕ್ತಿಕ ಭಿನ್ನಾಭಿಪ್ರಾಯವನ್ನು ಬದಿಗಿಟ್ಟು ಮುಖ್ಯ ಗೊತ್ತುವಳಿಯ ಬಗ್ಗೆ ತನ್ನ ಪಕ್ಷದ ನಿಲುವಿಗೆ ಅನುಗುಣವಾಗಿ ಮತ ನೀಡಬೇಕಾಗುತ್ತದೆಂದು ಅವರಿಗೆ ಹೇಳಬೇಕಿತ್ತು. ಆ ಕ್ಷಣಕ್ಕೆ ಅವರ ಇಂಗ್ಲೀಷು ಇದ್ದಲ್ಲೇ ಮಲಗಿತು. "ಅಂದರ ಸದಸ್ಯರೆಲ್ಲ ಕುರುಬನ ಹಿಂದೆ ಹೋಗುವ ಕುರಿಗಳು ಅಂತ ನಿಮ್ಮ ಕಲ್ಪನಾ ಆಗಬಹುದು" ಎಂದು ಪ್ರಾರಂಭಿಸಿ ಮುಂದೆಲ್ಲ ಕನ್ನಡದಲ್ಲೇ ಮಾತಾಡಿ ಮುಗಿಸಿದರು.

- ಮಾ. ನಾ. ಚ.

ಇದುವೆ ಜೀವ ಇದು ಜೀವನ

೧೯೪೦ ರ ಸಮಯ. ನಾನು ಚಿತ್ರದುರ್ಗ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದೆ. ನನ್ನ ಸಹಪಾಠಿಗಳು ಕೆ. ಎಚ್. ರಂಗನಾಥ್, ಬಿ. ಎಲ್. ಗೌಡ, ಕೆ. ಎನ್. ಸುಬ್ರಹ್ಮಣ್ಯಂ, ಮೊದಲಾದದವರು. ನಮ್ಮ ನೆಚ್ಚಿನ ಗುರು ಹೊಯಿಸಳರು ಶಾಂತಿನಿಕೇತನದ ಪದವೀಧರರು.

ವಿದ್ಯಾರ್ಥಿಗಳಿಂದ 'ಪ್ರಭಾತ' ಕೈಬರಹ ಸಂಚಿಕೆ ಹೊರಡಿಸುತ್ತಿದ್ದರು. ಲೇಖನಗಳ ತಲೆ ಬರಹ, ಚಿತ್ರಗಳನ್ನೂ ಬರೆಸಿ ಸಿಂಗರಿಸುತ್ತಿದ್ದರು.

ಸ್ಕೌಟ್ ಮಾಸ್ಟರ್ ಆದ ಹೊಯಿಸಳರು ನನ್ನನ್ನೂ ಬ್ಯಾಂಡ್‌ಸೆಟ್ಟಿನಲ್ಲಿ ತೊಡಗಿಸಿದ್ದರು. ಮೈಸೂರು ಸೀಮೆ ಸ್ಕೌಟ್ ರ್‍ಯಾಲಿ ಬೆಂಗಳೂರಲ್ಲಿ. ಚಿತ್ರದುರ್ಗ ಜಿಲ್ಲಾ ಕ್ಯಾಂಪಿನ ಮಹಾದ್ವಾರವನ್ನು ನನ್ನಿಂದ, ಅರಗಂ ಕೃಷ್ಣಮೂರ್ತಿಗಳಿಂದ ಚಿತ್ರಿಸಿ ಪ್ರೋತ್ಸಾಹಿಸಿದ್ದರು.

ಹೊಯಿಸಳರು ತರಗತಿಗೆ ಬಂದರೆ ನಮಗೆಲ್ಲಾ ಎಲ್ಲಿಲ್ಲದ ಉತ್ಸಾಹ. ಬೋರ್ಡಿನ ಮೇಲೆ ಪದ್ಯದ ಕೊನೆಯ ಪ್ರಾಸದ ನುಡಿಗಳನ್ನು ಬರೆದು ಅದರ ಹಿಂದೆ ಭರ್ತಿಮಾಡಲು ಸೂಚಿಸುತ್ತಿದ್ದರು. ತೋಚಿದಂತೆ ಬರೆದು ಮುಗಿಸಿದ ಮೇಲೆ ಎಲ್ಲರಿಂದಲೂ ಓದಿಸುತ್ತಿದ್ದರು. ಚೆನ್ನಾಗಿ ರಚಿಸಿದವರ ಬೆನ್ನು ತಟ್ಟಿ "ಮುಂದೆ ನೀನು ಒಳ್ಳೆ ಕವಿ ಆಗುವಿ" ಎಂದು ಉತ್ಸಾಹ ತುಂಬುತ್ತಿದ್ದರು.

ಪ್ರತಿ ಭಾನುವಾರ ನಾನು, ಮಿತ್ರ ದಿ. ಸುಬ್ರಮಣ್ಯಂ ಗುರುಗಳ ಮನೆಗೆ ಹೋಗುತ್ತಿದ್ದೆವು. ನಮಗೆ ತಿನ್ನಲು ಏನಾದರೂ ಸಿಗುತ್ತಿತ್ತು. ಜೊತೆಗೆ ಶಾಂತಿನಿಕೇತನದಲ್ಲಿ ಕಲಾವಿದರು ತಯಾರಿಸಿಕೊಳ್ಳುವ ಬಣ್ಣಗಳ ಬಗ್ಗೆ, ಚಿತ್ರಗಳ ಬಗ್ಗೆ ವಿವರ ನೀಡಿ ಕಲಾಸಕ್ತಿ ಕೆರಳಿಸುತ್ತಿದ್ದರು. ಸುಬ್ರಹ್ಮಣ್ಯಂರ [ಮುಂದೆ ಉಪಸಂಪಾದಕ ಡೆಕ್ಕನ್ ಹೆರಾಲ್ಡ್; ಸಂಪಾದಕ ಸದರ್ನ್ ಎಕಾನಮಿಸ್ಟ್] ಇಂಗ್ಲಿಷ್ ಪ್ರಬಂಧಗಳನ್ನು ಓದಿ ನೋಡಿ, ತಿದ್ದಿ ಪ್ರೋತ್ಸಾಹಿಸುತ್ತಿದ್ದರು.

ಹೊಯಿಸಳರು ವಾರದ ಕೊನೆಯಲ್ಲಿ ನಮಗೆ ನಗರದ ಹೊರಗೆ ಗಾಳಿಸಂಚಾರ ಮಾಡಿಸುತ್ತಿದ್ದರು. "ನೋಡ್ರಯ್ಯಾ ಹೀಗೆ ನೀವು ಹೊರಗೆ ಓಡಿಯಾಡಿ ಬನ್ನಿ, ವರ್ಷದಲ್ಲಿ ನಿಮ್ಮ ಆಯುಸ್ಸು ಒಂದು ದಿನ ಹೆಚ್ಚುತ್ತದೆ" ಎನ್ನುತ್ತಿದ್ದರು. ವಿವಿಧ ಗಿಡ, ಮರ, ಬಳ್ಳಿ, ಬಂಡೆ, ಕಲ್ಲುಗಳ ವಿವರ ನೀಡುತ್ತ ಹೊಸದೊಂದು ಜಗತ್ತನ್ನೇ ಚಿತ್ರಿಸುತ್ತಿದ್ದರು.

ಪ್ರತಿದಿನ ಪೇಟೆಗೆ, ಹೊಯಿಸಳರು ವಾಸಿಸುವ ಮನೆಯ ಬೀದಿಯಲ್ಲೇ ಸಾಗುವ ನಮಗೆ ತಿಂಗಳ ಮೊದಲ ಸಂಜೆ ಅವರ ಮನೆಯ ಆವರಣದಲ್ಲಿ ಓರ್ವ ಪಠಾಣನ ದರ್ಶನವಾಗುತ್ತಿತ್ತು. ಒಮ್ಮೆ ಆ ವ್ಯಕ್ತಿ ಇದ್ದಾಗ ನಾನು ಅವರ ಆವರಣದಲ್ಲಿ ಹೋಗಿ ನಿಂತೆ. ದೊಗಳೆ ಪೈಜಾಮು, ನಿಲುವಂಗಿ, ದಪ್ಪನೆ ಪೇಟ, ಗಲ್ಲಿ ಮೀಸೆಯ ಎತ್ತರದ ಭಯಾನಕ ವ್ಯಕ್ತಿಯನ್ನು ಕಂಡು ದೂರದಲ್ಲೆ ನಿಂತೆ. ಹೊಯಿಸಳರು ಆತನಿಗೆ ಏನನ್ನೋ ಕೊಟ್ಟರು. ನನ್ನ ಕಡೆ ತಿರುಗಿ "ಬಾರಯ್ಯಾ 'ಪರ್ಟಿ' (ನನ್ನನ್ನು ಪಿ. ಆರ್. ಟಿ. ಬದಲಿಗೆ 'ಪರ್ಟಿ' ಎಂದೇ ಕರೆಯುತ್ತಿದರು). ಸರಕಾರ ಕೊಡುವ ಸಂಬಳ ಎಲ್ಲಿ ಸಾಲುತ್ತೆ? ಈ ಪಠಾಣನಲ್ಲಿ ಸಾಲ ಮಾಡೋದೇ ಆಗಿದೆ ಅಷ್ಟೆ" ಎಂದು ನೊಂದು ನುಡಿದರು. ಕೊಂಚ ವೇಳೆ ಮೌನ ತಾಳಿದರು.

ಯಾವ ಕೆಟ್ಟ ಚಟದವರೂ ಆಗಿರದ ನನ್ನ ಗುರುಗಳು ಆರ್ಥಿಕ ಮುಗ್ಗಟ್ಟಿನಿಂದ ತೊಳಲಾಡುತ್ತಿದ್ದರೂ ವಿದ್ಯಾರ್ಥಿಗಳೆದುರು ನಗುಮೊಗದಿಂದಿರುತ್ತಿದ್ದರು. ಅವರ ಅಂದಿನ ಕಷ್ಟದ ಜೀವನ ನೆನೆದಾಗಲೆಲ್ಲ ನನ್ನ ಕಣ್ಣು ಹನಿಗೂಡುತ್ತವೆ.

–ಪಿ. ಆರ್. ತಿಪ್ಪೇಸ್ವಾಮಿ

ನಾನು ಸಂಜೆ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದೆ. ಬಿ. ಎ. ತರಗತಿಗಳಿಗೆ ಪಾಠ ಹೇಳಿ ಕೊಡುತ್ತಿದ್ದೆ. ಎಂ. ಎ. ಓದಿದ ತಕ್ಷಣ ಅಧ್ಯಾಪಕಿಯ ಕೆಲಸ ಸಿಕ್ಕಿತ್ತು. ಸಂಜೆ ಕಾಲೇಜಿನ ವಿದ್ಯಾರ್ಥಿಗಳು ೬ ಘಂಟೆಗೆ ಪ್ರಾರಂಭ

ವಾಗುವ ತರಗತಿಗಳಿಗೆ ೬–೧೦ ಅಥವಾ ೬–೧೫ಕ್ಕೆ ಬರುತ್ತಿದ್ದರು. ನಾನು ಮುಂಚೆಯೇ ಹೋಗಿರುತ್ತಿದ್ದೆ. ಹಾಗಾಗಿ ಒಂದು ದಿನ ತರಗತಿಯ ಮುಂಭಾಗದಲ್ಲಿ ನಿಂತುಕೊಂಡು (ನನ್ನ ತರಗತಿ ಎರಡನೇ ಮಹಡಿಯ ಮೇಲೆ ಇತ್ತು) ಪ್ರಕೃತಿಯನ್ನು ವೀಕ್ಷಿಸುತ್ತಿದ್ದೆ. ಒಬ್ಬ ಹುಡುಗ ಬಂದು ನನ್ನ ಜೊತೆ ಸಂಭಾಷಣೆಗೆ ತೊಡಗಿದ. ನೀವು ತಪ್ಪದೆ ತರಗತಿಗಳಿಗೆ ಬರುತ್ತಿದ್ದೀರಾ ಎಂದು ಪ್ರಶ್ನಿಸಿದ. ಹೌದೆಂದೆ. ಎಷ್ಟು ಪಾಠಗಳಾಗಿವೆ, ಯಾಕೆಂದರೆ ಇವತ್ತೇ ನಾನು ಬರುತ್ತಿರುವುದು ಎಂದ. ಹತ್ತು ಪಾಠಗಳಾಗಿವೆ ಎಂದೆ. ಈಗ ಯಾರು ತರಗತಿಯನ್ನು ತೆಗೆದುಕೊಳ್ಳುವುದು ಎಂದ. ನಾನು ನನ್ನ ಹೆಸರು ಹೇಳಿದೆ. ಬನ್ನಿ ತರಗತಿಯಲ್ಲಿ ಹೋಗಿ ಕುಳಿತುಕೊಳ್ಳೋಣ ಎಂದ. ಸರಿಯೆಂದು ಹೋದೆ. ಸುಮಾರು ವಿದ್ಯಾರ್ಥಿಗಳು ತರಗತಿಗೆ ಬಂದ ಮೇಲೆ ನಾನು ಎದ್ದು ಪಾಠ ಪ್ರಾರಂಭಿಸಿದೆ. ನಾನೂ ತನ್ನ ತರಗತಿಯ ವಿದ್ಯಾರ್ಥಿನಿಯೆಂದು ತಿಳಿದು ನನ್ನ ಜೊತೆ ಈವರೆಗೂ ಮಾತನಾಡುತ್ತಿದ್ದ ಆ ಹುಡುಗನ ಮುಖ ನೋಡಲು ನಾನು ಯತ್ನಿಸಲಿಲ್ಲ.

–ನಳಿನಿ ನಾಗರಾಜ್

ಬಾಲ್ಯದಲ್ಲಿ ನಡೆದ ಕೆಲವು ಘಟನೆಗಳು ಬಹಳ ಕಾಲ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದು, ನೆನಪಿಗೆ ಬಂದಾಗ ಕ್ಷಣ ಕಾಲ ನೋವನ್ನು ಮರೆತು ಯಾವುದೋ ಆನಂದ ಸಾಗರದಲ್ಲಿ ತೇಲುವ ಅನುಭವವುಂಟಾಗುತ್ತದೆ. ಅಂತಹ ಘಟನೆಯನ್ನು ಇಲ್ಲಿ ಬರೆಯುತ್ತಿದ್ದೇನೆ.

ಆಗ ನಾನಿನ್ನೂ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆ. ಭಾನುವಾರ ರಜಾದಿನವಾದ್ದರಿಂದ ಕರುವನ್ನು ಮೇಯಿಸಲು ಹೊಲದ ಬಳಿಗೆ ಹೋಗಿದ್ದೆ. ನಾಲ್ಕು ಘಂಟೆಯುವರೆಗೂ ಮೇಯಿಸುತ್ತಿದ್ದೆ. ತುಸು ಹೊತ್ತು ಕಳೆದ ಮೇಲೆ ಅಲ್ಲಿಂದ ಸ್ವಲ್ಪ ದೂರವಿರುವ ಒಂದು ಕಟ್ಟೆಯಲ್ಲಿ ನೀರನ್ನು ಕುಡಿಸಲು ಕರುವನ್ನು ಕರೆದುಕೊಂಡು ಹೋದೆ. ಆ ಕರುವಿನ ಹಗ್ಗವನ್ನು ನನ್ನ ಸೊಂಟಕ್ಕೆ ಕಟ್ಟಿಕೊಂಡಿದ್ದೆ. ನಾನು ಹೋದಂತೆಲ್ಲ ನನ್ನ ಹಿಂದೆ ಬರುತ್ತಿತ್ತು. ಕರು ನೀರನ್ನು ಕುಡಿಯಲು ಪ್ರಾರಂಭಿಸಿತು. ನನಗೂ ಸ್ವಲ್ಪ ಬಾಯಾರಿಕೆಯಾಗಿದ್ದುದರಿಂದ ನಾನೂ ಕಟ್ಟೆಯ ದಡದಲ್ಲಿ ಕುಳಿತು ಎರಡು ಕೈಗಳ ಬೊಗಸೆಯಿಂದ ನೀರನ್ನು ಕುಡಿಯುತ್ತಿದ್ದೆ. ಏನಾಯಿತೋ ಏನೋ! ಆ ಕರು ಕಾಲು ಜಾರಿ ನೀರೊಳಗೆ ಬಿದ್ದಿತು. ಹಗ್ಗವನ್ನು ಸೊಂಟಕ್ಕೆ ಬಿಗಿದುಕೊಂಡಿದ್ದ ನಾನೂ ಕಟ್ಟೆಯೊಳಗೆ ಬಿದ್ದೆ! ಕರು ನೀರೊಳಗೆಲ್ಲಾ ಈಜಾಡಿತು. ನಾನು ದಡಕ್ಕೆಳೆದರೆ ಅದು ನೀರಿಗೆಳೆಯುತ್ತಿತ್ತು! ಸ್ವಲ್ಪ ಹೊತ್ತಾದ ನಂತರ ಕರು ಮೇಲಕ್ಕೆ ಬಂತು. ನನ್ನನ್ನು ನೋಡಿ ಮೇಲಕ್ಕೆ ಹಗ್ಗವನ್ನು ಎಳೆಯುತೊಡಗಿತು. ನಿಧಾನವಾಗಿ ಮೇಲಕ್ಕೆ ಬಂದು, ಕರುವನ್ನು ಪಕ್ಕದಲ್ಲಿದ್ದ ಮರಕ್ಕೆ ಕಟ್ಟಿಹಾಕಿ, ಬಟ್ಟೆಯ ನೀರನ್ನು ಹಿಂಡಿ, ಒಣಗಿಸಿಕೊಂಡು ಮನೆಗೆ ಹೋದೆ.

–ಎಂ. ಬಿ. ಮಂಜುನಾಥಾಚಾರ್

ನಾನಿರುವ ಬಡಾವಣೆಯಲ್ಲಿ ಒಬ್ಬರು ತೀರಿಕೊಂಡಾಗ ನಾನೂ ಸಾಂತ್ವನ ಹೇಳಲು ಅವರ ಮನೆಗೆ ಹೋಗಿದ್ದೆ. ಹೆಂಡತಿಯನ್ನು ಕಳೆದುಕೊಂಡು ಗಂಡ ಒಂದೆಡೆ ಹೇಗೊ ಸಮಾಧಾನದಿಂದ ಕುಳಿತು ಮಕ್ಕಳಿಗೆ ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಸಾವಧಾನವಾಗಿ ಆದೇಶಿಸುತ್ತಿದುದನ್ನು ಕಂಡು ನನಗೆ ಅವರ ಸಹನ ಶಕ್ತಿಯ ಬಗ್ಗೆ ಆಚ್ಚರಿಯೆನಿಸಿತು.

ಪಾಪ ತಾಯಿಯನ್ನು ಕಳೆದುಕೊಂಡ ಆ ಮಕ್ಕಳೆಲ್ಲ ಒಂದೇ ಸಮನೆ ಅಳುತ್ತಿದ್ದರು. ಶವವನ್ನು ಹೊರಗೆ ತಂದಾಗಲಂತೂ ಆ ನಿರ್ಭಾಗ್ಯ ಮಕ್ಕಳ ರೋದನ ಎಂಥ ಕಠಿಣ ಮನಸ್ಸನ್ನೂ ನೋಯಿಸುವಂತಿತ್ತು. ಅವರ ಮಗಳಲ್ಲೊಬ್ಬಳು ಬಗಲಲ್ಲಿ ಮಗುವನ್ನು ಕರೆದುಕೊಂಡು ತಾಯಿಯ ಶವದ ಮುಂದೆ ಗೊಳೋ ಎಂದು ಅಳುತ್ತಿರುವಾಗ ಬಗಲಲ್ಲಿ ಕುಳಿತಿರುವ ಮಗು ಅಳುತ್ತಿರುವ ತನ್ನ ತಾಯಿಯ ಮುಖವನ್ನು ಎರಡೂ ಕೈಗಳಿಂದ ತನ್ನೆಡೆ ತಿರುಗಿಸಿ ಅವಳ ಕಣ್ಣೀರನ್ನು ತನ್ನೆರಡು ಕೈಗಳಿಂದ ಒರೆಸಿದ ದೃಶ್ಯದಿಂದಾಗಿ ಅಲ್ಲಿ ನಿಂತವರೆಲ್ಲರ ಕಣ್ಣುಗಳಲ್ಲಿ ನೀರು ತಂತಾನೆ ತುಂಬಿಕೊಂಡವು.

-ಭೀಮಸೇನ ಪವಾರ

ಪಾದರಕ್ಷೆಗಳ ರೋಚಕ ಇತಿಹಾಸ

ಬಿ. ಪಾಂಡುರಂಗಯ್ಯ

ಪಾದರಕ್ಷೆಗಳ ಬಳಕೆ ಎಂದಿನಿಂದ ಪ್ರಾರಂಭವಾಯಿತೆಂಬುದು ಖಚಿತವಾಗಿ ತಿಳಿದುಬಂದಿಲ್ಲ. ನಮ್ಮ ಪ್ರಾಚೀನ ಆಖ್ಯಾಯಿಕೆಯೊಂದರ ಪ್ರಕಾರ, ಪ್ರಥಮತಃ ಪಾದರಕ್ಷೆಗಳನ್ನು ಆತಪತ್ರದಿಂದ ತಯಾರಿಸಿದವರು ಜಮದಗ್ನಿ ಮಹರ್ಷಿಗಳು. ಅವರು ತಮ್ಮ ಪತ್ನಿ ರೇಣುಕೆ ಬಿಸಿಲಿನಲ್ಲಿ ನಡೆಯಲಾರದೆ ಅನುಭವಿಸುತ್ತಿದ್ದ ಯಾತನೆಯನ್ನು ಕಂಡು ಮನ ಕರಗಿ ಪಾದರಕ್ಷೆಗಳನ್ನು ತಯಾರಿಸಿ ಆಕೆಗೆ ಕೊಟ್ಟರಂತೆ. ಇದರ ಸತ್ಯಾಸತ್ಯವೇನೇ ಇರಲಿ, ಆದಿಮಾನವನ ಜೀವನದಲ್ಲಿ ನಾಗರಿಕತೆಯ ಪ್ರಥಮ ಕಿರಣಗಳು ಪ್ರವೇಶಿಸಿದಾಗ, ಅವನು ಸ್ತ್ರೀಯರ ಕೋಮಲ ಪಾದ ಅಂಗಾಲುಗಳ ರಕ್ಷಣೆಗೆ ಪಾದರಕ್ಷೆಗಳನ್ನು ತಯಾರಿಸಲು ಪ್ರಾರಂಭಿಸಿರಬೇಕು.

ಆದಿಮಾನವ ಉಡುಪುಗಳನ್ನು ಧರಿಸಲು ಪ್ರಾರಂಭಿಸುವುದಕ್ಕಿಂತ ಮೊದಲೇ ಪಾದರಕ್ಷೆಗಳ ಉಪಯೋಗವನ್ನು ಅರಿತಿದ್ದ ಎಂದು ಕೆಲ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಬಹುಶಃ ಇದಕ್ಕೆ ಕಾರಣವಿಲ್ಲದಿಲ್ಲ. ರೋಮನ್ ಮತ್ತು ಗ್ರೀಕ್ ದೇವತೆಗಳ ಪ್ರತಿಮೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ, ಎಲ್ಲಕ್ಕಿಂತ ಮೊದಲು ನಾಗರಿಕ ಮಾನವ ಪಾದರಕ್ಷೆಗಳ ಉಪಯೋಗದ ಮಹತ್ವವನ್ನು ಚೆನ್ನಾಗಿ ಅರಿತಿದ್ದ, ನಂತರ ವೇಷ-ಭೂಷಣಗಳಿಂದ ತನ್ನ ಶರೀರವನ್ನು ಅಲಂಕರಿಸಿಕೊಳ್ಳುವುದನ್ನು ಎಂಬ ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ. ಗ್ರೀಕರ ದೇವತೆ ಆರ್ಫಿಯಸ್ ತನ್ನ ಮೃತ ಪತ್ನಿಯನ್ನು ಹಿಂಬಾಲಿಸುತ್ತಾ ಅಧೋಲೋಕಕ್ಕೆ ಹೋದಾಗ, ಅವನ ಮೈಮೇಲೆ ಯಾವ ವಸ್ತ್ರವೂ ಇರಲಿಲ್ಲವಂತೆ; ಆದರೆ ಅವನು ಕಾಲುಗಳಲ್ಲಿ ಬಹುಮೂಲ್ಯ ಪಾದರಕ್ಷೆಗಳನ್ನು ಧರಿಸಿದ್ದನಂತೆ! ಗ್ರೀಕರ ಮತ್ತೊಬ್ಬ ದೇವತೆ ಹರ್ಮೀಜ್. ಇವನು ನಮ್ಮ ಹಿಂದೂ ದೇವತೆ ವಿಘ್ನೇಶ್ವರನಿದ್ದ ಹಾಗೆ. ಪ್ರಾಚೀನ ಗ್ರೀಸಿನ ಪ್ರಸಿದ್ಧ ನಗರಗಳ ಮಹಾದ್ವಾರಗಳ ಮೇಲೆ ಸ್ಥಾಪಿಸಲ್ಪಡುತ್ತಿದ್ದ ಈತನ ಪ್ರತಿಮೆಗಳು ಸಂಪೂರ್ಣ ನಗ್ನವಾಗಿರುತ್ತಿದ್ದುವು. ಆದರೆ ಕಾಲುಗಳಲ್ಲಿ ಮಾತ್ರ ರೆಕ್ಕೆಯುಳ್ಳ ಪಾದರಕ್ಷೆಗಳನ್ನು ಕೆತ್ತಲಾಗಿರುತ್ತಿತ್ತು. ಇವನ್ನು ಧರಿಸಿದ ತತ್‌ಕ್ಷಣ ಆತ ಗಾಳಿಯಲ್ಲಿ ಹಾರಾಡಲು ಸಮರ್ಥನಾಗುತ್ತಿದ್ದನೆಂಬ ನಂಬಿಕೆಯಿದೆ.

ಅಪೋಲೋ ರೋಮನ್ ನಾಗರಿಕತೆಯ ಅತ್ಯಂತ ಜನಪ್ರಿಯ ಮತ್ತು ಸರ್ವಶ್ರೇಷ್ಠ ದೇವತೆ. ಈತ ಜ್ಞಾನ, ಸೌಂದರ್ಯ ಮತ್ತು ಸಂಗೀತಗಳ ಅಧಿದೇವತೆ. ಈತನ ಕೆಲವು ಪ್ರಾಚೀನ ಪ್ರತಿಮೆಗಳು ಪುರಾತತ್ವಶಾಸ್ತ್ರಜ್ಞರಿಗೆ ಸಿಕ್ಕಿವೆ. ಈ ಪ್ರತಿಮೆಗಳು ಬಾಹುವಿನ ಮೇಲೆ ನೇತಾಡುತ್ತಿರುವ ವಸ್ತ್ರವೊಂದನ್ನು ಬಿಟ್ಟರೆ ಬಹುತೇಕ ನಗ್ನವಾಗಿವೆ. ಆದರೆ ಪ್ರತಿಮೆಗಳ ಪಾದಗಳಲ್ಲಿ ಆ ಕಾಲದ ಸುಂದರ ವಿನ್ಯಾಸದ ಪಾದರಕ್ಷೆಗಳಿವೆ.

ನಮ್ಮ ಪ್ರಾಚೀನ ಪುರಾಣ– ಇತಿಹಾಸಗಳಲ್ಲೂ ಪಾದರಕ್ಷೆಗಳ ಉಲ್ಲೇಖ ಅಲ್ಲಲ್ಲಿ ನಮಗೆ ಕಾಣಸಿಗುತ್ತದೆ. ರಾಮಾಯಣದಲ್ಲಿ ವರ್ಣಿತವಾಗಿರುವ 'ಪಾದುಕಾ ಪಟ್ಟಾಭಿಷೇಕ' ಪ್ರಸಂಗವಂತೂ ಜಾಗತಿಕ ಸಾಹಿತ್ಯದಲ್ಲೇ ಅದ್ವಿತೀಯ ಮತ್ತು

ಅಪರೂಪ ಎಂದರೆ ಉತ್ಪ್ರೇಕ್ಷೆಯಾಗಲಾರದು. ಪೃಥು ಸಿಂಹಾಸನವನ್ನೇರಿದಾಗ, ಭೂದೇವಿಯು ಆತನಿಗೆ ರತ್ನಖಚಿತ ಪಾದುಕೆಗಳನ್ನು ಕಾಣಿಕೆಯಾಗಿ ಅರ್ಪಿಸಿದಳಂತೆ. ಇದು ಭಾಗವತದಲ್ಲಿ ಬರುವ ಪ್ರಸಂಗ. ಮನೋವೇಗದಲ್ಲಿ ಚಲಿಸುವ ಶಕ್ತಿಯುಳ್ಳ ಅಲೌಕಿಕ ಪಾದುಕೆಗಳನ್ನು ಧರಿಸಿ, ಬೇಕೆನಿಸಿದಲ್ಲಿಗೆ ಕ್ಷಣಾರ್ಧದಲ್ಲೇ ಸಂಚರಿಸುವ ಸಾಮರ್ಥ್ಯ ಪಡೆದಿದ್ದ ಯೋಗಿಗಳ ಆಖ್ಯಾಯಿಕೆಗಳೂ ಕಥೆಗಳೂ ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಭಕ್ತಿ ಭಾಂಡಾರಿ ಬಸವಣ್ಣನವರ ಜೀವನದಲ್ಲಿ ನಡೆದ ಒಂದು ಪ್ರಸಂಗ ಅತ್ಯಂತ ಹೃದಯಸ್ಪರ್ಶಿ ಮತ್ತು ಭೋದಪ್ರದವಾಗಿದೆ. ಶಿವಶರಣರಾದ ಹರಳಯ್ಯ ದಂಪತಿಗಳು ತಮ್ಮ ತೊಡೆಯ ಚರ್ಮದಿಂದ ತಯಾರಿಸಿ, ಚಿನ್ನ–ಬೆಳ್ಳಿಗಳ ರೇಕುಗಳಿಂದ ಚಿತ್ತಾಕರ್ಷಕವಾಗಿ ಕುಸುರಿ ಕೆಲಸ ಮಾಡಿದ ಪಾದರಕ್ಷೆಗಳನ್ನು ಬಸವಣ್ಣನವರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದಾಗ, ಅವರು ಅವನ್ನು ಧರಿಸುವ ಯೋಗ್ಯತೆ ತಮ್ಮಲ್ಲಿಲ್ಲವೆಂದು ಹೇಳಿ, ತಲೆಯಮೇಲೆ ಹೊತ್ತುಕೊಂಡು ನಲಿದಾಡಿದರಂತೆ; ಅವುಗಳ ಮಹಿಮೆಯನ್ನು ಹಾಡಿ ಹೊಗಳಿದರಂತೆ!

ಹಿಂದಿಯ ಭಕ್ತ ಕವಿ ತುಲಸೀದಾಸರು ತಮ್ಮ 'ಕವಿತಾವಲಿ'ಯಲ್ಲಿ ಬಾಲರಾಮನ ಸುಂದರ ರೂಪವನ್ನು ವರ್ಣಿಸುವಾಗ, ಅವನು ಪಾದರಕ್ಷೆಗಳನ್ನು ಹಾಕಿಕೊಂಡು ಮಹಲಿನ ತುಂಬಾ ಮುದ್ದು ಮುದ್ದಾಗಿ ಹೆಜ್ಜೆಯಿಡುತ್ತಾ ಸರ್ವಜನಪ್ರಿಯನಾಗಿದ್ದ ಎಂದಿದ್ದಾರೆ. ಆದರೆ ವಿಸ್ಮಯದ ಮಾತೆಂದರೆ, ಸಂತಕವಿ ಸೂರದಾಸರು ತಮ್ಮ ಬಾಲಕೃಷ್ಣನಿಗೆ ಎಲ್ಲಿಯೂ ಪಾದರಕ್ಷೆಗಳನ್ನು ತೊಡಿಸಿಲ್ಲ!

ನಮ್ಮ ಸರ್ವಜ್ಞನ ಅಭಿಮತದಂತೆ ಸುಸಂಸ್ಕೃತರು ಅವಶ್ಯಕವಾಗಿ ಪಾದರಕ್ಷೆಗಳನ್ನು ಧರಿಸಲೇಬೇಕು. ವ್ಯಕ್ತಿಯ ಸದಭಿರುಚಿಯನ್ನು ತೋರ್ಪಡಿಸಲು ಅವು ಅನಿವಾರ್ಯ ಎಂದೇ ಅವನ ಭಾವನೆ. ಅದಕ್ಕೇ ಏನೋ, 'ಬರಿಗಾಲಲಿ ನಡೆಯುವವನ' ಮೇಲೆ ಅವನಿಗೆ ವಿಪರೀತ ಕೋಪ !

ನಾಗರಿಕತೆ ಪ್ರಗತಿ ಹೊಂದಿದಂತೆಲ್ಲ ಮಾನವನ ವೇಷ-ಭೂಷಗಳಲ್ಲೂ ಸಾಕಷ್ಟು ಬದಲಾವಣೆ ತಲೆ ಹಾಕಿತು. ಆದರೆ ವಿಭಿನ್ನ ಹಂತಗಳಲ್ಲಿ ಪಾದರಕ್ಷೆಗಳಲ್ಲಿ ಆದಂಥ ಬದಲಾವಣೆ, ಅವುಗಳ ರೂಪ-ವಿನ್ಯಾಸಗಳಲ್ಲಿ ತೋರಿಬಂದ ವೈವಿಧ್ಯಗಳು ಅನೇಕ.

ಪಾಶ್ಚ್ಯಾತ್ಯ ನಾಗರಿಕತೆಯ ಪ್ರಗತಿಯ ಹಂತದಲ್ಲಿ ಮೊದಲು ಸ್ಯಾಂಡಲ್ಲುಗಳು ಬಳಕೆಗೆ ಬಂದವು; ನಂತರ ತರುಣಿಯರಿಗೆ ಸ್ಲಿಪರ್‌ಗಳು ತಯಾರಾದವು. ಸ್ಲಿಪರ್‌ಗಳೆನೋ ಬಹುಕಾಲ ನಾರೀಮಣಿಯರಿಗೆ ಪ್ರಿಯವಾಗಿಯೇ ಉಳಿದವು. ಆದರೆ ಪುರುಷವರ್ಗಕ್ಕೆ ಸ್ಯಾಂಡಲ್‌ಗಳಿಗಿಂತಲೂ, ಬೂಟುಗಳೇ ಅಪ್ಯಾಯಮಾನವೆನಿಸಿದವು.

ಫ್ಯಾಷನ್ನಿನಲ್ಲಿ ರೋಮನ್ನರು ಯಾವಾಗಲೂ ಮುಂದಿದ್ದಾರೆ. ಅವರು ಜಗತ್ತಿನ ಎಲ್ಲ ಬಗೆಯ ಪಾದರಕ್ಷೆಗಳನ್ನೂ ಮೆಟ್ಟಿ ನೋಡಿದರು. ರೋಮನ್ ಸೈನಿಕರು ಧರಿಸುತ್ತಿದ್ದ ಸ್ಯಾಂಡಲ್ಲುಗಳ ಉಂಗುಟದ ಸ್ಥಾನದಲ್ಲಿ ಲೋಹದ ತೆಳುವಾದ ಉಂಗುರವೊಂದಿರುತ್ತಿತ್ತು. ಅದನ್ನು 'ಕ್ಯಾಲಿಗಾ' ಎಂದು ಕರೆಯುತ್ತಿದ್ದರು. ಇದೇ ಹೆಸರಿನಿಂದಲೇ (ಕ್ಯಾಲಿಗುಲ) ಮುಂದೆ ರೋಮನ್ ಚಕ್ರವರ್ತಿಯೊಬ್ಬ ಪ್ರಸಿದ್ಧನಾದ.

ಪ್ರಾಚೀನ ಕಾಲದಲ್ಲಿ ರೋಮನ್ನರು (ಮಧ್ಯಮ ವರ್ಗದ ಜನರು) 'ಕ್ಯಾಲ್ಕಿಯಸ್' ಎಂಬ ಹೆಸರಿನ ಪಾದರಕ್ಷೆಗಳನ್ನು ಧರಿಸುತ್ತಿದ್ದರಂತೆ. ಈ ಶಬ್ದದಿಂದಲೇ ಮುಂದೆ 'ಶೂಸ್' ಎಂಬ ಪದ ಹುಟ್ಟಿತಂತೆ !

ಇಂಗ್ಲಂಡಿನಿಂದ ಪಿಲಿಗ್ರಿಮ್ಸ್ ಫಾದರ್ ಡೇ ಫ್ಲಾದರ್ ಎಂಬ ಹೆಸರಿನ ಹಡಗಿನಲ್ಲಿ ಅಮೆರಿಕಕ್ಕೆ ಪ್ರಯಾಣ ಬೆಳೆಸಿದಾಗ, ಅವರೊಂದಿಗೆ ಥಾಮಸ್ ಬರ್ಡ್ ಎಂಬ 'ಶೂಮೇಕರ್'

ಇದ್ದನೆಂಬ ಪ್ರತೀತಿಯಿದೆ. ಆವನು ಅಮೇರಿಕವನ್ನು ತಲಪಿದ ನಂತರ ತನ್ನ ಸಹಯಾತ್ರಿಕರಿಗೆ ಪಾದರಕ್ಷೆಗಳ ಕೊರತೆಬಾರಗದಂತೆ ಗಟ್ಟಿಮುಟ್ಟಾದ ಬೂಟುಗಳನ್ನು ತಯಾರಿಸಿಕೊಟ್ಟನಂತೆ. ಇವನ ವಿಶಿಷ್ಟ ಸೇವೆಯನ್ನು ಗುರುತಿಸಿ, ಅಮೇರಿಕದ ಪ್ರಥಮ ಗವರ್ನರ್ ಇವನಿಗೆ ವರ್ಷವೊಂದಕ್ಕೆ ಐವತ್ತು ಡಾಲರುಗಳ ವೇತನವನ್ನು ನಿಗದಿ ಪಡಿಸಿದುದಲ್ಲದೆ, ಐವತ್ತು ಎಕರೆ ಫಲವತ್ತಾದ ಭೂಮಿಯನ್ನೂ ಉಚಿತವಾಗಿಯೇ ಬಹುಮಾನವಾಗಿತ್ತನಂತೆ! ಈತನೇ ಅಮೇರಿಕದ ಪ್ರಪ್ರಥಮ ಕುಶಲಕರ್ಮಿ ಮೋಚಿ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಪಾಶ್ಚಾತ್ಯ ಸಾಹಿತಿಗಳು ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಪಾದರಕ್ಷೆಗಳ ಬಗ್ಗೆ ಉಲ್ಲೇಖಿಸಿದ್ದಾರೆ. "ನಾನು ನನ್ನ ಡಬಲ್ ಸೋಲಿನ ಬೂಟುಗಳನ್ನು ಧರಿಸಿದೆ" ಎಂದು ೧೭೧೨ರಲ್ಲಿ ಒಂದು ಕಡೆ ಎಡಿಸನ್ ಬರೆದಿದ್ದಾನೆ. ೧೭೮೬ರಲ್ಲಿ ಬರ್ನ್ಸ್ ಈ ರೀತಿ ಉಲ್ಲೇಖಿಸಿದ್ದಾನೆ: "ನೀನು ಅಲ್ಲಿಯವರೆಗೆ ಬರುವುದಕ್ಕೆ ನನ್ನ ಇಪ್ಪತ್ತು ಜೊತೆ ಬೂಟುಗಳನ್ನು ಸವೆಸಿರುವೆ." ೧೮೨೩ರಲ್ಲಿ ಸ್ಕಾಟ್ ತನ್ನ ಕಾದಂಬರಿಯ ಪಾತ್ರವೊಂದರ ಬಗ್ಗೆ ಬರೆಯುತ್ತಾ, "ಆತನಿಗೆ ಶೂಸ್ ಮತ್ತು ಕಾಲುಚೀಲಗಳೆಂದರೆ ಎಲ್ಲಿಲ್ಲದ ಆಸಕ್ತಿ; ಆದರೆ ಅದೇ ಹಾಫ್‌ಬೂಟುಗಳನ್ನಾತ ಒಂದು ರೀತಿಯ ತಿರಸ್ಕಾರದ ದೃಷ್ಟಿಯಿಂದ ನೋಡುತ್ತಿದ್ದ" ಎಂದಿದ್ದಾನೆ. ಪ್ರಸಿದ್ಧ ಸಾಹಿತಿ ಡಾ. ಜಾನ್‌ಸನ್ನನು ೧೬೧೬ ರಲ್ಲಿ ಒಂದೆಡೆ ಹೀಗೆ ಬರೆದಿದ್ದಾನೆ: "ಅವರು ನನ್ನ ಚಪ್ಪಟೆ ಹ್ಯಾಟ್‌ನಿಂದ ಹಿಡಿದು, ನನ್ನ ಹೊಳೆಯುವ ಬೂಟುಗಳ ವರೆಗೆ ಎಲ್ಲದರ ಟೀಕೆಯಲ್ಲಿ ತೊಡಗಿರುತ್ತಿದ್ದರು."

ಹದಿನಾಲ್ಕನೇ ಶತಮಾನಗಳವರೆಗೆ ಶೂ ಮತ್ತು ಬೂಟುಗಳ ಅರ್ಥ ಒಂದೇ ಆಗಿತ್ತು. ಆದರೆ ಆಮೇಲೆ ಇವೆರಡೂ ಬೇರೆ ಬೇರೆ ಅರ್ಥದಲ್ಲಿ ಪ್ರಯೋಗಿಸಲ್ಪಡತೊಡಗಿದವು. "ಅವರು ತಮ್ಮ ಶೂ ಮತ್ತು ಬೂಟುಗಳನ್ನು ಒಂದು ಕಪ್ಪು ವಸ್ತುವಿನಿಂದ ಹೊಳೆಯುವ ಹಾಗೆ ಮಾಡುವುದರಲ್ಲಿ ಆನಂದವನ್ನು ಅನುಭವಿಸುತ್ತಿದ್ದರು," ಎಂದು ೧೬೧೭ರಲ್ಲಿ ಮಾರಿಸನ್ ಒಂದೆಡೆ ಬರೆದಿದ್ದಾನೆ.

ಹೈ ಶೂಗಳ (High Shoe) ಉಲ್ಲೇಖ ಮೊದಲ ಬಾರಿಗೆ ೧೩೮೭ರಲ್ಲಿ ಸಿಗುತ್ತದೆ. ಯುದ್ಧಕ್ಕೆ ಹೋಗುವವರು ಹೈ ಶೂಗಳನ್ನು ಧರಿಸುವುದು ಅವಶ್ಯವಾಗಿತ್ತು ಎಂದು ೧೫೫೩ರಲ್ಲಿ ಲ್ಯಾಟಿಮರ್ ಉಲ್ಲೇಖಿಸಿದ್ದಾನೆ. ೧೭೦೨ರಲ್ಲಿ ಜೆ. ಟಿ. ವೀಲರನು ತನ್ನ ಗ್ರಂಥವೊಂದರಲ್ಲಿ ಆಗಿನ ಕಾಲದ ಮುದ್ರೆಗಳ ಬಗ್ಗೆ ಹೀಗೆ ಬರೆದಿದ್ದಾನೆ: "ಒಂದು ನೂರು ಚಿನ್ನದ ಪಾದರಕ್ಷೆಗಳು ಅಥವಾ ಅಷ್ಟೇ ಬೆಳ್ಳಿಯ ಪಗೋಡಗಳು ಅಥವಾ ಅಷ್ಟೇ ರೂಪಾಯಿಗಳು." ಚಿನ್ನದ ಈ ಬೂಟುಗಳು ಹನ್ನೆರಡು ಔನ್ಸ್ ತೂಕವಿರುತ್ತಿದ್ದವು. ೧೭೧೧ರಲ್ಲಿ ಆಂಗ್ಲ ಯಾತ್ರಿಕನೊಬ್ಬ ತನ್ನ ಚೀನೀ ಮಿತ್ರನಿಗೆ, "ಭಾರತದ ಯಾವುದೇ ರಾಜಾಸ್ಥಾನದಲ್ಲಿ ಪ್ರವೇಶ ಸಿಗಬೇಕಾದರೆ ಕೆಲವು ಜೊತೆ ಬೆಳ್ಳಿಯ ಪಾದರಕ್ಷೆಗಳನ್ನು ದರ್ಬಾರಿಗಳಿಗೆ ಲಂಚ ರೂಪದಲ್ಲಿ ಕೊಡಬೇಕಾಗುತ್ತಿತ್ತು" ಎಂದು ಬರೆದಿದ್ದಾನೆ.

ರೋಮನ್ ಚಕ್ರವರ್ತಿ ನೀರೋ ತನ್ನ ಪಾದರಕ್ಷೆಗಳಿಗೆ ತಳಭಾಗದಲ್ಲಿ ಬೆಳ್ಳಿಯ ತಗಡುಗಳನ್ನು ಬಡಿಸುತ್ತಿದ್ದನಂತೆ. ಇದನ್ನು ಟ್ರೈವೀಸಾ ಎಂಬುವವನು ೧೩೮೭ರಲ್ಲಿ ತನ್ನ ಬರಹವೊಂದರಲ್ಲಿ ಉಲ್ಲೇಖಿಸಿದ್ದಾನೆ. ಮೋಚಿಗಳು ನಡೆಸಿದ ಅದ್ಭುತ ಹರತಾಳವೊಂದರ ಬಗೆಗೆ ೧೮೮೮ರ ಫಿಲಿಡೆಲ್ಫಿಯಾ ಲೇಜರ್‌ನಲ್ಲಿ ಉಲ್ಲೇಖವಿದೆ.

ಪಾದರಕ್ಷೆಗಳ ಇತಿಹಾಸದಲ್ಲಿ ಚೀನದ ಮರದ ಬೂಟುಗಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಹಾಗೆ ನೋಡಿದರೆ ಇಂದಿಗೂ ಬೇಲ್ಜಿಯಂನ ರೈತರು ಕಟ್ಟಿಗೆಯ ಚಪ್ಪಲಿಗಳನ್ನೇ ಧರಿಸುತ್ತಾರೆ. ಅವುಗಳ ತೂಕ ಎರಡು-ಮೂರು ಕೆ. ಜಿ. ಗೂ ಜಾಸ್ತಿ ಇರುತ್ತದಂತೆ! ಆದರೆ ಚೀನೀ ತರುಣಿಯರು ಧರಿಸುವ ಮರದ ಬೂಟುಗಳ

ಅವರ ದೈಹಿಕ ವಿಕಾಸದ ರೂಪು-ರೇಷೆಗಳನ್ನೇ ಬದಲಿಸಿಬಿಡುತ್ತವೆ. ಚಿಕ್ಕಂದಿನಿಂದಲೇ ಬಾಲಕಿಯರ ಪಾದಗಳನ್ನು ಈ ಮರದ ಬೂಟುಗಳೊಳಗೆ ಬಂಧಿಸಿಬಿಡಲಾಗುತ್ತದೆ. ಇದರಿಂದ ಅವರ ಪಾದಗಳ ನೈಸರ್ಗಿಕ ಬೆಳವಣಿಗೆ ನಿಂತು ಹೋಗುತ್ತದೆ. ಅವರ ಪುಟ್ಟ ಪಾದಗಳು ಅತ್ಯಂತ ಕೋಮಲವಾಗಿಯೂ ಮನೋಹರವಾಗಿಯೂ ಇದ್ದು ನೃತ್ಯಾಭ್ಯಾಸಕ್ಕೆ ಸಹಕಾರಿಯಾಗಿರುತ್ತವಂತೆ!

ಕಲೆಯ ದೃಷ್ಟಿಯಿಂದ ನೋಡುವುದಾದರೆ ರಜಪೂತ ರಮಣಿಯರು ಉತ್ಕೃಷ್ಟ ಕಲಾವಂತಿಕೆಯಿಂದ ಕೂಡಿದ ಪಾದರಕ್ಷೆಗಳನ್ನು ಧರಿಸುತ್ತಾ ಬಂದಿದ್ದಾರೆ. ಮುತ್ತು ರತ್ನಗಳಿಂದ ಅಲಂಕೃತವಾದ, ಚಿನ್ನದ ರೇಕಿನ ಕುಸುರಿನ ಬಹುಮೂಲ್ಯ ಪಾದರಕ್ಷೆಗಳನ್ನು ರಾಜಪರವಾರದವರು ಉಪಯೋಗಿಸುತ್ತಿದ್ದರು. ಪಾದರಕ್ಷೆಗಳ ಮೇಲ್ಭಾಗಕ್ಕೆ ಮಖಮಲ್ಲಿನ ಅಥವಾ ರೇಷ್ಮೆಯ ಬಟ್ಟೆಯನ್ನು ಹೊಲಿಯಲಾಗುತ್ತಿತ್ತು. ಮಧ್ಯೆ ಮಧ್ಯೆ ಜರದ ಕಸೂತಿಯ ಮತ್ತು ಬುಟ್ಟಾ ಕೆಲಸದಿಂದ ನಯವಾಗಿ, ಮನೋಹರವಾಗಿ ಬಿಡಿಸಲ್ಪಟ್ಟ ಚಿತ್ರಗಳೂ ಇರುತ್ತಿದ್ದುವು!

'ಎನ್‌ಸೈಕ್ಲೋಪೀಡಿಯಾ ಅಮೇರಿಕಾನಾ'ದಲ್ಲಿ ಭಾರತದ ದೈನಿಕ ಜೀವನದಲ್ಲಿ ಶ್ರೇಷ್ಠ ಕುಸುರಿ ಕೆಲಸದಿಂದ ಚಿತ್ತಾಕರ್ಷಕವಾಗಿ ತೋರುತ್ತಿದ್ದ ಪಾದರಕ್ಷೆಗಳನ್ನು ಧರಿಸಲಾಗುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ಮತ್ತೊಂದು ಹಳೆಯ ವಿಶ್ವಕೋಶದಲ್ಲಿ, ಭಾರತದಲ್ಲಿ ಚಿನ್ನ ಮತ್ತು ಬೆಳ್ಳಿಯ ಪಾದರಕ್ಷೆಗಳು ತಯಾರಾಗುತ್ತಿದ್ದವು ಎಂಬ ಉಲ್ಲೇಖವಿದೆ.

ವಿಶ್ವವಿಜೇತ ಅಲೆಗ್ಸಾಂಡರ್ ಚಕ್ರವರ್ತಿ ಧರಿಸುತ್ತಿದ್ದಂಥ ಪಾದರಕ್ಷೆಗಳನ್ನೇ ಗ್ರೀಕ್ ನಾಗರಿಕತೆಯಲ್ಲಿ ಒಲಿಂಪಿಕ್ ಆಟಗಾರರು ಹಾಕಿಕೊಳ್ಳುತ್ತಿದ್ದರಂತೆ. ಅದು ಅವರಲ್ಲಿ ಅದಮ್ಯ ಉತ್ಸಾಹವನ್ನು ಉಕ್ಕಿಸುತ್ತಿದ್ದುವಂತೆ!

ಮೊಘಲ್ ಸಮ್ರಾಟ ಜಹಾಂಗೀರನು ದೇಶ ವಿದೇಶಗಳಲ್ಲಿ ತಯಾರಿಸಲ್ಪಟ್ಟ ಶ್ರೇಷ್ಠಾತಿಶ್ರೇಷ್ಠ ಪಾದರಕ್ಷೆಗಳನ್ನು ಪತ್ನಿ ನೂರ್‌ಜಹಾನಳಿಗೆ ತರಿಸಿ ಕೊಡುತ್ತಿದ್ದನಂತೆ! ಆಕೆಯ ಸುಂದರ, ಸುಕೋಮಲ ಪಾದಗಳನ್ನು ಅವನು ಬಹುವಾಗಿ ಆರಾಧಿಸುತ್ತಿದ್ದನಂತೆ!

ಈಗಂತೂ ಪಾದರಕ್ಷೆಗಳು ವಿವಿಧ ಆಕಾರಗಳಲ್ಲಿ ಚಿತ್ತಾಕರ್ಷಕವಾಗಿ ಹೊರ ಬರುತ್ತಿವೆ. ಅವುಗಳ ತಯಾರಿಕೆಯಲ್ಲಿ ಬಳಸುವ ವಸ್ತು ವೈವಿಧ್ಯವೇ ಅಚ್ಚರಿಪಡುವಂತಹುದು! ವಿವಿಧ ಋತುಗಳಿಗೆ ಸರಿ ಹೊಂದುವಂಥ ಪಾದರಕ್ಷೆಗಳ ತಯಾರಿಕೆಯಲ್ಲಿ ದೇಶ – ವಿದೇಶಗಳ ಸಂಸ್ಥೆಗಳು ಸ್ಪರ್ಧೆಯನ್ನೇ ನಡೆಸುತ್ತಿವೆ.

ನಮ್ಮ ದೇಶದ ಕಾನ್ಪುರ ಮತ್ತು ಕೊಲ್ಹಾಪುರದ ಅತ್ಯಂತ ವಿಶಿಷ್ಟ ಮತ್ತು ಉತ್ಕೃಷ್ಟ ದರ್ಜೆಯ ಚಪ್ಪಲಿಗಳಿಗೆ ವಿದೇಶಗಳಲ್ಲಿ ಅಪಾರ ಬೇಡಿಕೆಯಿದೆ.

ಪಾದರಕ್ಷೆಗಳು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿವೆ. ನಾವು ನಮ್ಮ ದೇಹದ ಮೇಲೆ ಎಂತಹ ಉತ್ಕೃಷ್ಟ ದರ್ಜೆಯ ಬಟ್ಟೆಗಳನ್ನು ಧರಿಸಿದರೂ, ಕಾಲುಗಳಲ್ಲಿ ಚಪ್ಪಲಿಗಳು ಅಥವಾ ಬೂಟುಗಳು ಇಲ್ಲದೇ ಹೋದರೆ ಜನರ ದೃಷ್ಟಿಯಲ್ಲಿ ಹಾಸ್ಯಾಸ್ಪದ ವ್ಯಕ್ತಿಗಳಾಗಿಬಿಡುತ್ತೇವೆ. ಪಾದರಕ್ಷೆಗಳು ನವನಾಗರಿಕತೆಯ ಸಂಕೇತವಾಗಿಬಿಟ್ಟಿವೆ.

ಪಾದರಕ್ಷೆಗಳ ಮತ್ತೊಂದು ರೂಪವಾದ ಪಾದುಕೆಗಳು ಬಹು ಹಿಂದಿನಿಂದಲೂ ನಮ್ಮ ದೇಶದಲ್ಲಿ ಪೂಜಾರ್ಹ ವಸ್ತುಗಳಾಗಿ ಪರಿಗಣಿಸಲ್ಪಟ್ಟಿವೆ. ಮಠಾಧೀಶರು, ಯತಿ ಶ್ರೇಷ್ಠರು ಸಾಧುಸತ್ಪುರುಷರು, ಮಹಾತ್ಮರು ಉಪಯೋಗಿಸುತ್ತಿದ್ದ ಪಾದುಕೆಗಳನ್ನು ಜನಸಾಮಾನ್ಯರು ಭಯ-ಭಕ್ತಿಗಳಿಂದ ಆರಾಧಿಸುತ್ತಾರೆ. ಕೆಲವು ದೇವಸ್ಥಾನಗಳಲ್ಲಿ ಶಿಲೆಯಿಂದ ಕೆತ್ತಲಾದ ಅಥವಾ ಬೆಳ್ಳಿ ಬಂಗಾರಗಳಿಂದ ತಯಾರಿಸಲಾದ ಪಾದುಕೆಗಳಿಗೆ ಇಂದಿಗೂ ಪೂಜೆ ಸಲ್ಲುತ್ತಿರುವುದನ್ನು ಕಾಣಬಹುದು! ✡

ತೇಲುವ ರೈಲುಗಾಡಿಗಳು

ಐ. ಶ್ರೀರಾಮ

ಹಾರುವ ರೈಲುಗಳು ಇವೆಯೆಂದರೆ ನಂಬುತ್ತೀರಾ? 'ಎಂಥ ಹುಚ್ಚು ಕಲ್ಪನೆ' ಎನ್ನುತ್ತಿರಲ್ಲವೆ? ಆದರೆ ಇದು ನಿಜ. ಅಯಸ್ಕಾಂತೀಯ ಬಲದಿಂದಾಗಿ ನೆಲಮಟ್ಟದಿಂದ ಐದಾರು ಅಂಗುಲಗಳಷ್ಟು ಮೇಲಕ್ಕೆ ಏರಿ ಮುಂದೆ ಚಲಿಸುವ ರೈಲುಗಳನ್ನು ಕಂಡುಹಿಡಿಯಲಾಗಿದೆ. ಇದನ್ನು ಅಯಸ್ಕಾಂತೀಯ ತೇಲುವಿಕೆ (magnetic levitation) ಎನ್ನುತ್ತಾರೆ. ಚಕ್ರ ಮತ್ತು ಹಳಿಗಳ ನಡುವಿನ ಘರ್ಷಣೆವಿಲ್ಲದಿರುವುದರಿಂದ ಈ ರೈಲು ಹೆಚ್ಚು ವೇಗವಾಗಿ ಚಲಿಸಲು ಸಾಧ್ಯವಾಗುತ್ತದೆ.

ರೈಲುಗಾಡಿಗಳ ಬಳಕೆಯು ಆರಂಭವಾದಂದಿನಿಂದ ಅವುಗಳ ವೇಗ ಹೆಚ್ಚಿಸುವ ಯತ್ನ ನಿರಂತರವಾಗಿ ನಡೆಯುತ್ತಲೇ ಇದೆ. ಕಳೆದ ಒಂದೂವರೆ ಶತಮಾನದಲ್ಲಿ ನಡೆದ ಸಂಶೋಧನೆಗಳ ಫಲವಾಗಿ ಈಗ ಗಂಟೆಗೆ ೨೭೦ ಕಿಲೋಮೀಟರುಗಳಷ್ಟು ವೇಗವಾಗಿ ಓಡುವ ರೈಲುಗಾಡಿಗಳು ಬಳಕೆಯಲ್ಲಿವೆ. ಫ್ರಾನ್ಸಿನ ಟಿಜಿವಿ (Train a Grande Vitesse) ರೈಲುಗಾಡಿಗಳು ಗಂಟೆಗೆ ೨೭೦ ಕಿಲೋಮೀಟರ್ ವೇಗದಲ್ಲಿ ಕಳೆದ ಕೆಲವು ವರ್ಷಗಳಿಂದ ಓಡುತ್ತಿವೆ. (ಪ್ರಾಯೋಗಿಕವಾಗಿ ಈ ರೈಲುಗಾಡಿಗಳು ಗಂಟೆಗೆ ೩೮೦ ಕಿಲೋಮೀಟರ್ ವೇಗದಲ್ಲಿ ಪ್ಯಾರಿಸ್ಸಿನಿಂದ ಲಿಯನ್‌ವರೆಗೆ ಓಡಿವೆ ಎಂದು ವರದಿಯಾಗಿದೆ.) ಈ ರೈಲುಗಾಡಿಗಳು ಸಾಧಾರಣ ೮೫೦೦ ಅಶ್ವಶಕ್ತಿವುಳ್ಳವಾಗಿದ್ದು ಪ್ರತ್ಯೇಕವಾಗಿ ನಿರ್ಮಿಸಲ್ಪಟ್ಟ ಹಳಿಗಳ ಮೇಲೆ ಓಡುತ್ತವೆ.

ಆದರೆ ವೇಗವನ್ನು ಇನ್ನಷ್ಟು ಹೆಚ್ಚಿಸುವ ಸಲುವಾಗಿ ಅಯಸ್ಕಾಂತೀಯ ತೇಲುವಿಕೆಯ ತತ್ವವನ್ನು ಉಪಯೋಗಿಸಲಾಗುತ್ತಿದೆ. ಜಪಾನಿನಲ್ಲಿ ವಿಜ್ಞಾನಿಗಳು ಕಳೆದ ಹತ್ತು-ಹದಿನೈದು ವರ್ಷಗಳಿಂದ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಗಂಟೆಗೆ ೫೦೦ ಕಿಲೋಮೀಟರುಗಳಿಗಿಂತ ಹೆಚ್ಚಿನ ವೇಗವನ್ನು ಸಾಧಿಸಬೇಕೆಂಬುದು ಅವರ ಗುರಿ. ೧೯೭೯ರಲ್ಲಿ ಇಂತಹ ಒಂದು ರೈಲು ವಾಹನವು ಜಪಾನಿನ ಮಿಯಾಸಾಕಿ ನಗರದ ಬಳಿಯಲ್ಲಿರುವ ಒಂದು ಪ್ರಾಯೋಗಿಕವಾದ ರೈಲು ಮಾರ್ಗದ ಮೇಲೆ ಗಂಟೆಗೆ ೫೧೭ ಕಿಲೋಮೀಟರುಗಳು ವೇಗದಲ್ಲಿ ಚಲಿಸಿ ಹೊಸ ದಾಖಲೆಯನ್ನು ಸೃಷ್ಟಿಸಿತು. ೧೯೮೭ರಲ್ಲಿ ಇಂತಹ ಎರಡು ವಾಹನಗಳನ್ನು ಒಳಗೊಂಡ ಒಂದು ರೈಲುಗಾಡಿಯು ಮೂರು ಜನರನ್ನು ಹೊತ್ತು ಪ್ರಯಾಣಿಸಿತು. ಜರ್ಮನಿ ಮತ್ತು ಇತರ ದೇಶಗಳಲ್ಲಿಯೂ ಈ ಕ್ಷೇತ್ರದಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಆದರೆ ಇಂತಹ ರೈಲುಗಾಡಿಗಳು ಇನ್ನೂ ದಿನನಿತ್ಯದ ಬಳಕೆಗೆ ಬಂದಿಲ್ಲ.

ಯಾವುದೇ ವಿದ್ಯುತ್ ಸುರುಳಿಯ ಮೂಲಕ ವಿದ್ಯುತ್ಪ್ರವಾಹವು ಹರಿಯುವಾಗ ಸುರುಳಿಯ ಸುತ್ತಮುತ್ತ ಅಯಸ್ಕಾಂತೀಯ ಕ್ಷೇತ್ರ ಉಂಟಾಗುತ್ತದೆ. ತೇಲಾಡುವ ರೈಲು ವಾಹನಗಳಲ್ಲಿ ಮತ್ತು ರೈಲು ಮಾರ್ಗಗಳಲ್ಲಿ ವಿದ್ಯುತ್

ಸುರುಳಿಗಳಿರುತ್ತವೆ. ರೈಲು ವಾಹನದಲ್ಲಿರುವ ವಿದ್ಯುತ್ ಸುರುಳಿಗಳು ಉಂಟುಮಾಡುವ ಅಯಸ್ಕಾಂತೀಯ ಕ್ಷೇತ್ರ ಮತ್ತು ರೈಲು ಮಾರ್ಗದಲ್ಲಿರುವ ವಿದ್ಯುತ್ ಸುರುಳಿಗಳು ಉಂಟುಮಾಡುವ ಅಯಸ್ಕಾಂತೀಯ ಕ್ಷೇತ್ರಗಳ ಪರಸ್ಪರ ಅಪಕರ್ಷಣೆ(repulsion)ಯಿಂದಾಗಿ ವಾಹನವು ಮೇಲಕ್ಕೆ ಎತ್ತಲ್ಪಡುತ್ತದೆ. ನಂತರ "ಲೀನಿಯರ್ ಮೋಟರ್"ಗಳ ತತ್ವವನ್ನು ಉಪಯೋಗಿಸಿ ರೈಲು ಚಲಿಸುವಂತೆ ಮಾಡಲಾಗುತ್ತದೆ.

ರೈಲುಗಾಡಿಯನ್ನು ಮೇಲಕ್ಕೆ ಎತ್ತಲು ಮತ್ತು ಅದನ್ನು ಸರಿದಾರಿಯಲ್ಲಿ ಚಲಿಸುವಂತೆ ಮಾಡಲು ರೈಲು ಮಾರ್ಗದಲ್ಲಿ ಎರಡು ತರಹದ ವಿದ್ಯುತ್ ಸುರುಳಿಗಳಿರುತ್ತವೆ:

೧) ವಾಹನವು ಚಲಿಸುವಾಗ ಈ ಸುರುಳಿಗಳಲ್ಲಿ ಹರಿದ ವಿದ್ಯುತ್ಪ್ರವಾಹದಿಂದ ಉಂಟಾದ ಕಾಂತೀಯ ಕ್ಷೇತ್ರವು ವಾಹನವನ್ನು ಮೇಲಕ್ಕೆ ಎತ್ತಲು ಕಾರಣವಾಗುವುದು. ರೈಲು ಚಲಿಸುವಾಗ ಮಾತ್ರ ಈ ವಿದ್ಯುತ್ ಸುರುಳಿಗಳಲ್ಲಿ ವಿದ್ಯುತ್ಪ್ರವಾಹವು ಹರಿಯುತ್ತದೆ. ವಾಹನವು ಒಂದು ನಿರ್ದಿಷ್ಟ ವೇಗವನ್ನು ತಲಪಿದ ಮೇಲೆಯೇ ಅದನ್ನು ಮೇಲಕ್ಕೆತ್ತಲು ಬೇಕಾದಷ್ಟು ಅಯಸ್ಕಾಂತೀಯ ವಿಕರ್ಷಣೆಯ ಬಲ ಉತ್ಪನ್ನವಾಗುತ್ತದೆ. ಹೆಚ್ಚು ವೇಗವಾಗಿ ಚಲಿಸುವಾಗ ಹೆಚ್ಚು ಎತ್ತರಕ್ಕೆ ಎತ್ತಲ್ಪಡುವುದು.


೨) ವಾಹನವು ತನ್ನ ನಿರ್ದಿಷ್ಟ ಮಾರ್ಗವನ್ನು ಬಿಟ್ಟು ಚಲಿಸತೊಡಗಿದರೆ ಎರಡನೆಯ ವರ್ಗದ ಸುರುಳಿಗಳಲ್ಲಿ ವಿದ್ಯುತ್ಪ್ರವಾಹವು ಉಂಟಾಗಿ ಅದರಿಂದಾಗಿ ಉಂಟಾದ ಅಯಸ್ಕಾಂತೀಯ ಬಲವು ರೈಲನ್ನು ಸರಿದಾರಿಗೆ ತಳ್ಳುತ್ತದೆ.

ಇನ್ನು, ರೈಲು ಚಲಿಸುವಂತೆ ಮಾಡಲು ಲೀನಿಯರ್ ಮೋಟರುಗಳ ತತ್ವವನ್ನು ಯಾವ ರೀತಿ ಉಪಯೋಗಿಸಲಾಗುವುದೆಂಬುದನ್ನು ನೋಡೋಣ: ಸಾಧಾರಣವಾದ ವಿದ್ಯುತ್ ಮೋಟರುಗಳಲ್ಲಿ ರೋಟರ್ (ಶಾಫ್ಟಿಗೆ ಜೋಡಿಸಲ್ಪಟ್ಟಿರುವ ತಿರುಗುವ ಭಾಗ) ಮತ್ತು ಸ್ಟೇಟರ್ (ತಿರುಗದಿರುವ ಹೊರಮೈ) ಎಂಬ ಎರಡು ಮುಖ್ಯವಾದ ಭಾಗಗಳಿವೆ. (ಶಾಫ್ಟನ್ನು ಗೇರುಗಳ ಮೂಲಕ ಚಕ್ರಕ್ಕೆ ಜೋಡಿಸಲಾಗುತ್ತದೆ.) ಈ ಎರಡೂ ಭಾಗಗಳಲ್ಲಿ ವಿದ್ಯುತ್ ಸುರುಳಿಗಳಿವೆ. ಈ ವಿದ್ಯುತ್ ಸುರುಳಿಗಳು ಉಂಟುಮಾಡುವ ಅಯಸ್ಕಾಂತೀಯ ಕ್ಷೇತ್ರಗಳ ಪರಸ್ಪರ ಪ್ರತಿಕ್ರಿಯೆಯಿಂದಾಗಿ ರೋಟರು ತಿರುಗುತ್ತದೆ. (ರೋಟರು ತಿರುಗುವಾಗ ಅದಕ್ಕೆ ಜೋಡಿಸಿರುವ ವಾಹನದ ಚಕ್ರಗಳೂ ತಿರುಗುತ್ತವೆ.) ಯಾವುದೇ ವಸ್ತುವು ವೃತ್ತಾಕಾರವಾಗಿ ತಿರುಗುವಾಗ ಅದನ್ನು ವೃತ್ತದ ಕೇಂದ್ರದಿಂದ ದೂರಕ್ಕೆ ತಳ್ಳುವ ಕೇಂದ್ರಾಪಗಮನ ಬಲವು ಉಂಟಾಗುತ್ತದೆ. ಈ ಬಲದ ಪ್ರಮಾಣವು ವಸ್ತುವಿನ ದ್ರವ್ಯರಾಶಿ ಮತ್ತು ತಿರುಗುವ ವೇಗವನ್ನು ಅವಲಂಬಿಸಿರುತ್ತದೆ. ರೋಟರು ಅತ್ಯಧಿಕ ವೇಗದಲ್ಲಿ ತಿರುಗಿದರೆ ಈ ಬಲವು ಅತ್ಯಧಿಕ ಪ್ರಮಾಣವನ್ನು ಹೊಂದಿ ರೋಟರಿನ ಸುರುಳಿಗಳು ದೂರಕ್ಕೆ ಎಸೆಯಲ್ಪಡುವ ಸಾಧ್ಯತೆ ಇರುವುದರಿಂದ ಇಂಥ ರೋಟರುಗಳನ್ನು ಅತ್ಯಧಿಕ ವೇಗದ ಈ ರೈಲು ವಾಹನಗಳಲ್ಲಿ ಉಪಯೋಗಿಸಲು ಸಾಧ್ಯವಿಲ್ಲ. ಆದ್ದರಿಂದ ಈ ವಾಹನಗಳಲ್ಲಿ ಲೀನಿಯರ್ ಮೋಟರುಗಳ ತತ್ವವನ್ನು ಉಪಯೋಗಿಸಲಾಗುತ್ತದೆ. ಲೀನಿಯರ್ ಮೋಟರುಗಳಲ್ಲಿ ಸಾಧಾರಣವಾದ ಮೋಟರುಗಳಲ್ಲಿರುವಂತೆ ತಿರುಗುವ ರೋಟರುಗಳಿರುವುದಿಲ್ಲ. ಮೋಟರನ್ನು ಸೀಳಿ ರೈಲು ಮಾರ್ಗದುದ್ದಕ್ಕೆ ಹಾಸಿದಂತಿರುತ್ತವೆ. ಲೀನಿಯರ್ ಮೋಟರಿನ ಒಂದು ಭಾಗವು ವಾಹನದಲ್ಲಿಯೂ ಇನ್ನೊಂದು ಭಾಗವು ರೈಲು ಮಾರ್ಗದಲ್ಲಿಯೂ ಇರುವವು. ಈ ಎರಡು ಭಾಗಗಳು ಉಂಟುಮಾಡುವ ಅಯಸ್ಕಾಂತೀಯ ಕ್ಷೇತ್ರಗಳ ಪ್ರತಿಕ್ರಿಯೆಯಿಂದಾಗಿ, ತಿರುಗುವ ಬಲದ ಬದಲಾಗಿ ಮುಂದಕ್ಕೆ ದೂಡುವ ಬಲ ಉತ್ಪತ್ತಿಯಾಗುತ್ತದೆ. ಈ ಬಲದಿಂದಾಗಿ ವಾಹನವು ಮುಂದಕ್ಕೆ ಚಲಿಸುತ್ತದೆ. ವೃತ್ತಾಕಾರವಾಗಿ ತಿರುಗುವುದರಿಂದ ಕೇಂದ್ರಾಪಗಮನ ಬಲವು ಉಂಟಾಗುವುದಿಲ್ಲ. ಆದ್ದರಿಂದ ಅತ್ಯಧಿಕ ವೇಗದ ರೈಲು ವಾಹನಗಳಿಗೆ ಈ ಮೋಟರುಗಳು ಬಹಳ ಉಪಯುಕ್ತ.

ಇಂಥ ರೈಲುಗಾಡಿಗಳಿಂದ ವೇಗವಾಗಿ ಚಲಿಸುವುದು ಮಾತ್ರವಲ್ಲದೆ ಬೇರೆ ಹಲವಾರು ಲಾಭಗಳೂ ಇವೆ. ಚಕ್ರ ಮತ್ತು ಮಾರ್ಗಗಳ ನಡುವೆ ನೇರ ಸಂಪರ್ಕವಿಲ್ಲದ್ದರಿಂದ ಘರ್ಷಣೆಯು ಬಹಳ ಕಡಿಮೆಯಾಗುತ್ತದೆ. (ವಾಹನದ ಚಲನೆಗೆ ಗಾಳಿಯು ಒಡ್ಡುವ ಘರ್ಷಣೆ ಮಾತ್ರ ಇರುತ್ತದೆ.) ಆದ್ದರಿಂದ ವಾಹನದ ಭಾಗಗಳು ಸವೆಯುವುದಿಲ್ಲ. ವಾಹನವು ಚಲಿಸುವಾಗ ಹೆಚ್ಚು ಶಬ್ದ ಉಂಟಾಗುವುದಿಲ್ಲ ಮತ್ತು ಅಲುಗಾಟವಿಲ್ಲದೆ ಪ್ರಯಾಣವು ಹೆಚ್ಚು ಸುಖಕರವಾಗುವುದು. ಇವೆಲ್ಲಕ್ಕಿಂತ ಮುಖ್ಯವೆಂದರೆ ಆಯಸ್ಕಾಂತೀಯ ಬಲದಿಂದಾಗಿ ಚಲಿಸುವುದರಿಂದ ಇವುಗಳು ಉಗಿಬಂಡಿಯಂತೆ ವಾತಾವರಣವನ್ನು ಮಲಿನಗೊಳಿಸುವುದಿಲ್ಲ.

ತೇಲುವ ರೈಲುಗಾಡಿಗಳು ಇಷ್ಟು ಸರಳವೂ ಲಾಭದಾಯಕವೂ ಆಗಿದ್ದರೆ ಅವು ಏಕೆ ಇನ್ನೂ ಬಳಕೆಗೆ ಬಂದಿಲ್ಲ? ತತ್ವವು ಸರಳವಾಗಿದ್ದರೂ ಅದನ್ನು ಕಾರ್ಯಗತಗೊಳಿಸುವುದು ಸುಲಭವಲ್ಲ. ಟನ್ನುಗಟ್ಟಲೆ ಭಾರವಿರುವ ರೈಲು ವಾಹನವನ್ನು ಮೇಲಕ್ಕೆತ್ತುವಷ್ಟು ಆಯಸ್ಕಾಂತೀಯ ಬಲವು ಉಂಟಾಗಬೇಕಾದರೆ ವಾಹನದ ವಿದ್ಯುತ್ ಸುರುಳಿಗಳಲ್ಲಿ ಅತ್ಯಧಿಕ ವಿದ್ಯುತ್ಪ್ರವಾಹವು ಹರಿಯಬೇಕು. ಇಷ್ಟು ಅಧಿಕ ಪ್ರಮಾಣದ ವಿದ್ಯುತ್ಪ್ರವಾಹವು ಸಾಧಾರಣವಾದ ತಂತಿ (ತಾಮ್ರ ಅಥವಾ ಅಲ್ಯುಮಿನಿಯಂನಿಂದ ಮಾಡಿದ ತಂತಿ)ಯ ಮೂಲಕ ಹರಿಯುವಾಗ ತಂತಿಯೇ ಕರಗಿ ಹೋಗುವಷ್ಟು ಉಷ್ಣವು ಉಂಟಾಗುತ್ತದೆ. (ಉಂಟಾಗುವ ಉಷ್ಣವು "ವಿದ್ಯುತ್ಪ್ರವಾಹ^2 × ತಂತಿಯ ಪ್ರತಿರೋಧದ ಪ್ರಮಾಣವನ್ನು ಅವಲಂಬಿಸಿರುತ್ತದೆ.) ಆದ್ದರಿಂದ ಸಾಧಾರಣವಾದ ತಂತಿಗಳಿಂದ ಮಾಡಿದ ವಿದ್ಯುತ್ ಸುರುಳಿಗಳನ್ನು ಈ ವಾಹನಗಳಲ್ಲಿ ಉಪಯೋಗಿಸಲು ಸಾಧ್ಯವಿಲ್ಲ. ಅತಿವಾಹಕಗಳ ತಂತಿಗಳಿಂದ ಮಾಡಿದ ಸುರುಳಿಗಳನ್ನೇ ಉಪಯೋಗಿಸಬೇಕಾಗುತ್ತದೆ. ಈ ಅತಿವಾಹಕಗಳು ವಿದ್ಯುತ್ಪ್ರವಾಹಕ್ಕೆ ಪ್ರತಿರೋಧವನ್ನು ಒಡ್ಡುವುದಿಲ್ಲ. ಆದುದರಿಂದ ಎಷ್ಟು ವಿದ್ಯುತ್ಪ್ರವಾಹ ಹರಿದರೂ ಉಷ್ಣತೆಯು ಉಂಟಾಗುವುದಿಲ್ಲ. ಈಗ ಗೊತ್ತಿರುವ ಲೋಹಗಳು ಅತಿವಾಹಕವಾಗಿ ಇರಬೇಕಾದರೆ (ಪ್ರತಿರೋಧರಹಿತವಾಗಿ ಇರಬೇಕಾದರೆ) ಅವನ್ನು ೨೬೯ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿ ಇರಿಸಬೇಕಾಗುತ್ತದೆ. ದ್ರವೀಕೃತ ಹೀಲಿಯಂ ಅನಿಲವನ್ನು ಉಪಯೋಗಿಸಿ ಇಷ್ಟು ಕಡಿಮೆ ಉಷ್ಣತೆಯನ್ನು ಉಂಟುಮಾಡಲಾಗುತ್ತದೆ. ಇದಕ್ಕೆ ಅಪಾರವಾದ ವೆಚ್ಚವೂ ತಗಲುತ್ತದೆ. ಆದರೆ ಇತ್ತೀಚೆಗೆ ಬಂದ ವರದಿಗಳ ಪ್ರಕಾರ ಹೆಚ್ಚು ಉಷ್ಣತೆಯಲ್ಲಿ ಅತಿವಾಹಕವಾಗಿ ವರ್ತಿಸುವ ಮಿಶ್ರಲೋಹ ಮತ್ತು ಯೌಗಿಕಗಳನ್ನು ಕಂಡು ಹಿಡಿಯಲಾಗಿದೆ. ನಿಯೋಬಿಯಂ ಮತ್ತು ಜರ್ಮೇನಿಯಂಗಳನ್ನೊಳಗೊಂಡ ಯೌಗಿಕವು ೨೫೦ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿ ಅತಿವಾಹಕವಾಗುವುದೆಂದು ವರದಿಯಾಗಿದೆ. "ಲಾಂತಾನಮ್,ಬೇರಿಯಂ ಕಾಪರ್ ಆಕ್ಸೈಡ್", ೨೩೮ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿ ಮತ್ತು "ಯಿಟ್ರಿಯಂ ಬೇರಿಯಂ ಕಾಪರ್ ಆಕ್ಸೈಡ್" ೧೭೯ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿ ಅತಿವಾಹಕಗಳಾಗುವವೆಂದು ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ತಿಳಿದು ಬಂದಿದೆ. ವಾತಾವರಣದ ಉಷ್ಣತೆಯಲ್ಲಿಯೇ ಅತಿವಾಹಕಗಳಾಗುವ ಮಿಶ್ರಲೋಹಗಳನ್ನು ಕಂಡು ಹಿಡಿದರೆ ಹಾರುವ ರೈಲುಗಾಡಿಗಳು ನಿತ್ಯದ ಬಳಕೆಗೆ ಬರುವುದು ಖಂಡಿತ.*

* ೧೯೭೩ರ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಕೆ. ಸದಾನಂದ ಬರೆದ 'ಮೇಗ್ನೆಪ್ಲೇನ್: ವಾಹನ ಪ್ರಪಂಚದ ಅದ್ಭುತ ಸೃಷ್ಟಿ' ಲೇಖನವನ್ನೂ ನೋಡಿ. —ಸಂ.



೧. ಬಲ-ಕೆಳಭಾಗದ ಸೊಂಟದ ಮೂಳೆ ೨. ಮ್ಯಾಕ್‌ಬರ್ನಿಯ ಬಿಂದು ೩. ಹೊಕ್ಕಳು

ದಿಢೀರ್ ಹೊಟ್ಟೆನೋವು - ಕಾರಣಗಳೇನು ?

ಡಾ. ಎಚ್. ಎಸ್. ಮೋಹನ

ತರುಣಿ ಇಪ್ಪತ್ತು ವರ್ಷದ ಯುವತಿ. ಇದ್ದಕ್ಕಿದ್ದಂತೆ ಒಂದು ದಿನ ಬೆಳಿಗ್ಗೆ ಏಳುವಾಗ ತೀವ್ರತರ ಹೊಟ್ಟೆನೋವು ಬಂತು. ಈ ನೋವಿನ ತೀವ್ರತೆಗೆ ಅವಳು ಕೂಡಲೂ ಆಗದೆ, ಮಲಗಲೂ ಆಗದೆ ವಿಧ ವಿಧ ಭಂಗಿಯಲ್ಲಿ ಒದ್ದಾಡಲಾರಂಭಿಸಿದಳು. ಒಂದೆರಡು ಸಲ ವಾಂತಿಯೂ ಆಯಿತು. ಇವಳ ಒದ್ದಾಟ, ಕೂಗಾಟ ನೋಡಿ ಸಹಿಸಲಾರದೆ ಅವಳ ತಂದೆ ಕೂಡಲೇ ಸಮೀಪದ ವೈದ್ಯರನ್ನು ಕರೆದು ತಂದರು. ಅವಳ ಲಕ್ಷಣಗಳನ್ನು ಪರೀಕ್ಷಿಸಿದ ವೈದ್ಯರು "ಇದು ಅಪೆಂಡಿಸೈಟಿಸ್ ಇರಬಹುದು. ಕೂಡಲೇ ಆಸ್ಪತ್ರೆಗೆ ಸೇರಿಸಿ ಶಸ್ತ್ರಚಿಕಿತ್ಸಕರ ಸಲಹೆ ಪಡೆಯಿರಿ" ಎಂದರು. ಹಾಗೆಯೇ ಆಸ್ಪತ್ರೆಗೆ ಸೇರಿಸಿದ ಅವಳನ್ನು ಕೂಡಲೇ ಶಸ್ತ್ರಚಿಕಿತ್ಸೆಗೆ ಒಯ್ಯಲಾಯಿತು. ಹೊಟ್ಟೆಯ ಒಳಗೆ ನೋಡುವಾಗ ವೈದ್ಯರಿಗೆ ಅಚ್ಚರಿ. ಅಪೆಂಡಿಕ್ಸ್‌ಗೆ ಏನೂ ತೊಂದರೆಯಿಲ್ಲ. ನಂತರ ವಿವರವಾಗಿ ಪರಿಶೀಲಿಸಿದಾಗ ಗೊತ್ತಾದ ಅಂಶ – ಮೇದೋಜೀರಕ ಗ್ರಂಥಿ ತೀವ್ರತರ ಸೋಂಕಿಗೆ ಒಳಗಾದದ್ದು. ತಕ್ಷಣವೇ ವೈದ್ಯರು ಅಲ್ಲಿಗೆ ಶಸ್ತ್ರಕ್ರಿಯೆ ನಿಲ್ಲಿಸಿ, ಹೊಟ್ಟೆಯನ್ನು ಹೊಲಿದು, ಆ ಕಾಯಿಲೆಗೆ ಅಗತ್ಯವಾದ ವೈದ್ಯಕೀಯ ಚಿಕಿತ್ಸೆಯನ್ನು ಕೊಡುವ ಏರ್ಪಾಡು ಮಾಡಿದರು.

ಹೀಗೆ ದಿಢೀರನೆ ಕಾಣಿಸಿಕೊಳ್ಳುವ ಹೊಟ್ಟೆ

ನೋವು, ರೋಗಿ ಮತ್ತು ಸಂಬಂಧಿಕರನ್ನು ಗಾಬರಿಗೆ ಕೆಡುವುದಲ್ಲದೆ, ನುರಿತ ವೈದ್ಯರನ್ನು ಸಹ ಕೆಲ ಸಮಯ ದಾರಿ ತಪ್ಪಿಸಬಲ್ಲದು. ಆದಕ್ಕೇ 'ಹೊಟ್ಟೆಯು ಒಂದು ವಿಸ್ಮಯಗಳ ಪೆಟ್ಟಿಗೆ' ಎಂದು ವರ್ಣಿಸಿದ್ದಾರೆ. ಏಕೆಂದರೆ ಇಲ್ಲಿ ಹಲವು ಹತ್ತು ಅಂಗಗಳು, ರಕ್ತನಾಳಗಳು ಗ್ರಂಥಿಗಳು ಇವೆ. ಯಾವೊಂದರ ತೀವ್ರವಾದ ವ್ಯತ್ಯಾಸವೂ ಈ ದಿಢೀರ್ ಹೊಟ್ಟೆ ನೋವಿಗೆ ಕಾರಣವಾಗಬಹುದು. ಹಾಗಾಗಿ ಹೆಚ್ಚಿನವರು ತಿಳಿದಂತೆ ದಿಢೀರ್ ಹೊಟ್ಟೆ ನೋವು ಎಂದರೆ ಅದು ಅಪೆಂಡಿಸೈಟಿಸ್ಸೇ ಸರಿ ಎಂದು ಭಾವಿಸುವುದು ತಪ್ಪು. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾರಣಗಳಿಂದ ಹಿಡಿದು ನರವ್ಯೂಹಕ್ಕೆ ಸಂಬಂಧಪಟ್ಟ ಕಾರಣಗಳವರೆಗೆ ಯಾವುದೂ ಈ ರೀತಿಯ ತೀವ್ರ ನೋವಿಗೆ ಕಾರಣವಾಗಿ ರೋಗಿಯನ್ನು ಕಂಗೆಡಿಸಬಲ್ಲದು. ಈ ಕೆಳಕಂಡ ಕಾರಣಗಳಿಂದಾಗಿ ದಿಢೀರ್ ಹೊಟ್ಟೆ ನೋವು ಬರಬಹುದು.

ನ್ಯುಮೋನಿಯಾ ಕಾಯಿಲೆ ಮತ್ತು ಶ್ವಾಸಕೋಶದ ಭಾಗದಲ್ಲಿ ನೀರು ಸೇರಿಕೊಳ್ಳುವ ಕಾಯಿಲೆ 'ಪ್ಲೂರಸಿ'ಯೂ ದಿಢೀರ್ ಹೊಟ್ಟೆ ನೋವಿಗೆ ಕಾರಣವಾಗಬಹುದು. ಆದರೆ ಆಗ ಉಸಿರಾಟದ ಗತಿ ಬಹಳ ಹೆಚ್ಚಾಗಿರುತ್ತದೆ. ಇದನ್ನು ಸುಲಭವಾಗಿ ಮೂಗಿನ ಹೊಳ್ಳೆಗಳ ತೀವ್ರ ರೀತಿಯ ಅದುರುವಿಕೆಯಿಂದ ಕಂಡುಕೊಳ್ಳಬಹುದು. ವಿವರವಾಗಿ ಪರೀಕ್ಷಿಸಿದಾಗ ಉಸಿರಾಟದ ಶಬ್ದಗಳಲ್ಲಿ ಆದ ವ್ಯತ್ಯಾಸ ಮತ್ತು ಇತರ ಲಕ್ಷಣಗಳು ಗೋಚರಿಸುತ್ತವೆ.

ಹೊಟ್ಟೆಯ ಭಾಗದ ವಿವಿಧ ಕಾಯಿಲೆಗಳು

ಅಪೆಂಡಿಸೈಟಿಸ್ ಅಥವಾ ಅಪೆಂಡಿಕ್ಸ್‌ನ ತೀವ್ರ ಸೋಂಕು: ಮಕ್ಕಳು ಮತ್ತು ಹದಿಹರೆಯದವರಲ್ಲಿ ಜಾಸ್ತಿ. ೨೦–೩೦ ವರ್ಷದವರಲ್ಲಿ ಹೆಚ್ಚು. ದಿನದ ಯಾವ ಹೊತ್ತಿಗೂ ತೀವ್ರ ನೋವು ಬರಬಹುದು. ಆದರೆ ಹೆಚ್ಚಿನ ಸಂದರ್ಭದಲ್ಲಿ ಬೆಳಗಿನ ಜಾವದ ಸಮಯದಲ್ಲಿ ತೀವ್ರನೋವು ಬಂದು ರೋಗಿಯನ್ನು ಥಟ್ಟನೆ ನಿದ್ರೆಯಿಂದ ಎಚ್ಚರಿಸುತ್ತದೆ. ಹೆಚ್ಚಾಗಿ ಮಲಬದ್ಧತೆ ಇರುತ್ತದೆ.

ಮೊದಲು ಇಡೀ ಹೊಟ್ಟೆಯ ಭಾಗದಲ್ಲಿ ನೋವು ಕಾಣಿಸಿಕೊಂಡು ನಂತರ ಹೊಕ್ಕಳು ಅಥವಾ ಸ್ವಲ್ಪ ಮೇಲ್ಭಾಗದಲ್ಲಿ ಕೇಂದ್ರೀಕೃತವಾಗುತ್ತದೆ. ಕೆಲವೊಮ್ಮೆ ಹೀಗಾಗಿ ೩–೪ ಗಂಟೆಗಳ ನಂತರ ವಾಂತಿಯಾಗುತ್ತದೆ. ವಾಂತಿಯಲ್ಲಿ ಹೊಟ್ಟೆಯಲ್ಲಿರುವ ಆಹಾರ ಪದಾರ್ಥಗಳು ಹೊರಗೆ ಹೋಗುತ್ತವೆ. ಜಠರ ಖಾಲಿಯಾದ ನಂತರ ಅದು ನಿಲ್ಲುತ್ತದೆ. ಕೆಲವೊಮ್ಮೆ ವಾಂತಿ ಇಲ್ಲದಿದ್ದಾಗ ವಾಂತಿ ಬರುವಂತೆ ಬಾಯಿ ಹುಳಿ ಹುಳಿಯಾಗುವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಉಸಿರು ದುರ್ಗಂಧಮಯವಾಗಿದ್ದು, ನಾಲಿಗೆಯ ಮೇಲೆ ಬೆಳ್ಳಗಾದ ವಸ್ತುವು ಲೇಪಿತವಾಗಿರುತ್ತದೆ. ಮೊದಲ ಆರು ಗಂಟೆಗಳಲ್ಲಿ ದೇಹದ ತಾಪಮಾನ ಮತ್ತು ನಾಡಿ ಬಡಿತಗಳಲ್ಲಿ ಬಹಳ ವ್ಯತ್ಯಾಸ ಕಾಣಿಸಿಕೊಳ್ಳದಿದ್ದರೂ ನಂತರ ೯೯°—೧೦೨° F ಗಳವರೆಗೆ ಜ್ವರ ಬರುತ್ತದಲ್ಲದೆ ನಾಡಿ ಬಡಿತ ೯೦—೧೦೦ರ ವರೆಗೂ ಹೆಚ್ಚುತ್ತದೆ. ಸಾಮಾನ್ಯವಾಗಿ ೨೪ ಗಂಟೆಗಳ ನಂತರ ಹೊಟ್ಟೆ ನೋವು ಬಲಭಾಗ ಮತ್ತು ಕೆಳಭಾಗಕ್ಕೆ ಸೀಮಿತವಾಗುತ್ತದೆ.

ಮುಖ್ಯವಾದ ಲಕ್ಷಣ ಎಂದರೆ ಹೊಟ್ಟೆಯನ್ನು ಅದುಮಿದಾಗ ಮ್ಯಾಕ್ ಬರ್ನಿಯ ಬಿಂದು*ವಿನಲ್ಲಿ ತೀವ್ರವಾದ ನೋವು ಇರುತ್ತದೆ. ನಂತರ ಹೊಟ್ಟೆಯಲ್ಲಿ ಒಂದು ರೀತಿಯ ಜಡತ್ವದ ಅನುಭವವಾಗುತ್ತದೆ. ಕೆಲವೊಮ್ಮೆ ಎಡಭಾಗದ ಹೊಟ್ಟೆಯನ್ನು ಗಟ್ಟಿಯಾಗಿ ಅದುಮುವುದರಿಂದ, ಒಳಗಿನ ಕರುಳಿನ ಸುರುಳಿಗಳು ಬಲಭಾಗಕ್ಕೆ ಸ್ಥಳಾಂತರ ಹೊಂದುವುದರಿಂದ ಬಲ ಹೊಟ್ಟೆಯ

* ಹೊಕ್ಕಳು ಮತ್ತು ಬಲ - ಕೆಳಭಾಗದ ಸೊಂಟದ ಮೂಳೆಗೆ ಒಂದು ನೇರ ಕಾಲ್ಪನಿಕ ರೇಖೆಯನ್ನೆಳೆದರೆ, ಮೊದಲಿನ ⅔ ಭಾಗ ಮತ್ತು ನಂತರದ ⅓ ಭಾಗ ಸೇರುವ ಕಾಲ್ಪನಿಕ ಬಿಂದುವೇ ಮ್ಯಾಕ್‌ಬರ್ನಿಯ ಬಿಂದು.

ಭಾಗದಲ್ಲಿ ತೀವ್ರ ರೀತಿಯ ನೋವಾಗುತ್ತದೆ. ಇದು ಈ ರೋಗವನ್ನು ದೃಢೀಕರಿಸುತ್ತದೆ.

ಒಂದು ಕಾಲದಲ್ಲಿ ಬಹಳಷ್ಟು ಜನರ ಸಾವಿಗೆ ಕಾರಣವಾದ ಈ ಅಪೆಂಡಿಸೈಟಿಸ್ ಕಾಯಿಲೆಯ ಅಪಾಯ ಕ್ಲುಪ್ತ ಸಮಯದಲ್ಲಿ ರೋಗ ಪತ್ತೆ ಹಚ್ಚುವಿಕೆ ಮತ್ತು ಶಸ್ತ್ರಕ್ರಿಯೆಗಳಿಂದ ಬಹಳ ಕಡಿಮೆಯಾಗಿದೆ. ಆದರೂ ಈಗಲೂ ೪-೫% ಜನರು ಇದರಿಂದ ಮರಣವನ್ನಪ್ಪುತ್ತಿದ್ದಾರೆ ಎಂಬುದು ದೌರ್ಭಾಗ್ಯದ ಸಂಗತಿ.

ಮಾನವ ಮತ್ತು ಕೆಲವು ಪ್ರಾಣಿಗಳಲ್ಲಿ ಮಾತ್ರ ಇರುವ ಈ ಅಪೆಂಡಿಕ್ಸ್ ಸರಿಯಾಗಿ ಬೆಳವಣಿಗೆ ಹೊಂದದ ಕೆಲವು ಕೆಳವರ್ಗದ ಪ್ರಾಣಿಗಳ ದೊಡ್ಡ ಕರುಳಿನ ಒಂದು ತುದಿಯ ಭಾಗ. ಇದು ಮಾನವನಲ್ಲಿ ಸಣ್ಣ ಕರುಳಿನ ಭಾಗ ಮುಗಿದು, ದೊಡ್ಡ ಕರುಳಿನ ಭಾಗ ಆರಂಭವಾಗುವಲ್ಲಿ, ೩-೪ ಅಂಗುಲಗಳಷ್ಟು ಉದ್ದ ಚಾಚಿಕೊಂಡಿರುತ್ತದೆ. ಮಾನವನಲ್ಲಿ ಇದಕ್ಕೆ ನಿಜವಾದ ಯಾವ ಕೆಲಸವೂ ಇಲ್ಲ. ಆದರೆ ದೇಹ ವಿಕಾಸದ ಒಂದು ಪುರಾವೆಯಾಗಿ ಇನ್ನೂ ಉಳಿದುಕೊಂಡಿರುವುದಲ್ಲದೆ ಬಹಳಷ್ಟು ತೊಂದರೆಗೂ ಕಾರಣವಾಗುತ್ತದೆ.

ಹೊಟ್ಟೆಯ ಹುಣ್ಣಿನಿಂದ ಕರುಳು ಅಥವಾ ಜಠರ ಛಿದ್ರವಾಗುವುದು

ಹೀಗಾಗುವ ಮೊದಲು ವ್ಯಕ್ತಿಗೆ ಹೊಟ್ಟೆಯ ಹುಣ್ಣಿನ ಕಾಯಿಲೆ ಬಹಳ ದಿನಗಳಿಂದ ಇರುವ ಸಂಗತಿ ಗೊತ್ತಿರುತ್ತದೆ. ಅಲ್ಲದೆ ಈ ವ್ಯಕ್ತಿಗೆ 'ಅಲ್ಸರ್' ಕಾಯಿಲೆಯ ಲಕ್ಷಣಗಳಾದ ಆಹಾರ ಸೇರದಿರುವಿಕೆ, ಆಹಾರ ತೆಗೆದುಕೊಳ್ಳುವ ಮೊದಲು ಅಥವಾ ನಂತರ ಯಾವುದೋ ನಿರ್ದಿಷ್ಟ ವೇಳೆಯಲ್ಲಿ ಬರುವ ಹೊಟ್ಟೆನೋವು-ಮೊದಲಾದವು ಇರುತ್ತವೆ. ಅಲ್ಲದೆ ಈ ತೀವ್ರ ರೀತಿಯ ನೋವು ಹೊಕ್ಕುಳ ಭಾಗದಿಂದ ಆರಂಭವಾಗಿ ಹೊಟ್ಟೆಯ ಬಲ-ಕೆಳ ಭಾಗಕ್ಕೆ ಪಸರಿಸುತ್ತದೆ. ಅಪೆಂಡಿಸೈಟಿಸ್‌ನಲ್ಲಾದರೆ ಈ ನೋವು ಹೊಕ್ಕುಳಿನ ಭಾಗದಲ್ಲಿಯೇ ಶುರುವಾಗಿ ಕೆಳ-ಬಲಭಾಗದ ಹೊಟ್ಟೆಗೆ ಪಸರಿಸುತ್ತಿದೆ.

ಪಿತ್ತ ಜನಕಾಂಗದ ತೀವ್ರ ರೀತಿಯ ಸೋಂಕು:

ಯಕೃತ್ತಿನ ಹಿಂಭಾಗದಲ್ಲಿರುವ ಪಿತ್ತಜನಕಾಂಗ ಸಹಿತ ತೀವ್ರ ರೀತಿಯ ಸೋಂಕಿಗೆ ಒಳಗಾಗಬಹುದು. ಹಾಗಾದಾಗ ದಿಢೀರ್ ಹೊಟ್ಟೆನೋವಿಗೂ ಕಾರಣವಾಗಬಹುದು. ಇದು ಹೆಂಗಸರಲ್ಲಿ, ಸ್ಥೂಲಕಾಯದವರಲ್ಲಿ ಕಾಣಿಸಿಕೊಳ್ಳುವುದು ಹೆಚ್ಚು. ಆದರೆ ಈ ಹೊಟ್ಟೆನೋವು ಹೆಚ್ಚಿನ ಸಂದರ್ಭದಲ್ಲಿ ಬೆನ್ನಿನ ಭಾಗಕ್ಕೆ ಪಸರಿಸುತ್ತದೆ. ಅಲ್ಲದೆ ಕೆಲವೊಮ್ಮೆ ಸೋಂಕಿನಿಂದ ದೊಡ್ಡದಾದ ಪಿತ್ತಕೋಶ ಸಹಿತ ಹೊಟ್ಟೆಯನ್ನು ಅದುಮಿದಾಗ ಗೊತ್ತಾಗಬಹುದು. ಬಲಭಾಗದ ಭುಜದ ಭಾಗದಲ್ಲಿ ಮುಟ್ಟಿದಾಗ ಒಂದು ರೀತಿಯ ನೋವಿನ ಅನುಭವ ಇದ್ದರೆ-ಅದು ಈ ಕಾಯಿಲೆಯನ್ನು ದೃಢೀಕರಿಸುತ್ತದೆ. ಕೆಲವೊಮ್ಮೆ ಅಪೆಂಡಿಸೈಟಿಸ್‌ಗೂ ಈ ಕಾಯಿಲೆಗೂ ವ್ಯತ್ಯಾಸ ಗೊತ್ತಾಗದಿದ್ದಾಗ-ಕೋಲಿಸಿಸ್ಟೋಗ್ರಫಿ ಎಂಬ ವಿಶೇಷ ಎಕ್ಸರೇ ಪರೀಕ್ಷೆ ಕಾಯಿಲೆಯನ್ನು ದೃಢೀಕರಿಸುವಲ್ಲಿ ಸಹಾಯ ಮಾಡುತ್ತದೆ.

ಕರುಳಿನ ತೀವ್ರ ರೀತಿಯ ಸೋಂಕು: ತೀವ್ರ ಪ್ರಮಾಣದ ಭೇದಿ ಇರುತ್ತದೆ. ಹೊಟ್ಟೆನೋವು, ಜ್ವರ ಮತ್ತು ಪದೇ ಪದೇ ಆಗುವ ವಾಂತಿ-ಇದರ ಮುಖ್ಯ ಲಕ್ಷಣಗಳು. ಈ ಕಾಯಿಲೆಯಲ್ಲಿ ಸಹಿತ ಒಳಗಿನ ಲಿಂಫ್ ಗ್ರಂಥಿಗಳ ಊದುವಿಕೆಯಿಂದ ಬಲ-ಕೆಳಭಾಗದ ಕಿಬ್ಬೊಟ್ಟೆಯನ್ನು ಒತ್ತಿದಾಗ ವಿಪರೀತ ನೋವಿನ ಅನುಭವವಾಗಬಹುದು. ಆಗ ಇದನ್ನು ಅಪೆಂಡಿಸೈಟಿಸ್‌ನಿಂದ ಬೇರ್ಪಡಿಸುವುದು ಬಹಳ ಕಷ್ಟ. ಅಂಥ ಸಂದರ್ಭಗಳಲ್ಲಿ ಅಪೆಂಡಿಕ್ಸ್ ತೆಗೆಯುವ ಶಸ್ತ್ರಕ್ರಿಯೆ ಮಾಡುವುದೇ ಕ್ಷೇಮ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಹೊಟ್ಟೆಯ ಲಿಂಫ್ ಗ್ರಂಥಿಗಳ ಊದುವಿಕೆ: ಈ ರೀತಿಯ ಹೊಟ್ಟೆನೋವು ಮಕ್ಕಳು ಮತ್ತು ಹದಿಹರೆಯದವರಲ್ಲಿ ಹೆಚ್ಚು. ಮುಖ್ಯವಾದ ಅಂಶವೆಂದರೆ, ನೋವು ಒಮ್ಮೆ ತೀವ್ರವಾಗಿ ಬರುತ್ತದೆ, ಕೆಲವು ಸಮಯ ಏನೂ ನೋವಿರುವುದಿಲ್ಲ. ಮತ್ತೆ ಸ್ವಲ್ಪ ಸಮಯದ ನಂತರ ನೋವು ಮತ್ತೆ ತೀವ್ರವಾಗಿ ಬರುತ್ತದೆ. ವಾಂತಿ ಇರುವುದಿಲ್ಲ. ರೋಗಿ ತನ್ನ ಮಗ್ಗುಲನ್ನು ಬದಲಾಯಿಸಿದ ಹಾಗೆ ಹೆಚ್ಚು ನೋವಿರುವ ಜಾಗ ಸಹಿತ ಬದಲಾಗುತ್ತಾ ಹೋಗುತ್ತದೆ. ಇದು ಈ ಕಾಯಿಲೆ ಇರುವುದನ್ನು ದೃಢೀಕರಿಸುತ್ತದೆ. ಕೆಲವೊಮ್ಮೆ ಈ ಕಾಯಿಲೆಯ ಜೊತೆ ಜೊತೆಗೆ ಶ್ವಾಸಕೋಶಕ್ಕೆ ಸಂಬಂಧಪಟ್ಟಂತೆ ಸೋಂಕೂ ಇರಬಹುದು.

ಕರುಳಿನ ಭಾಗದಲ್ಲಿ ಅಡಚಣೆ

ವಿವಿಧ ಕಾರಣಗಳಿಂದ ಆಹಾರವು ಕರುಳಿನ ಒಳಗಡೆ ಚಲಿಸುವ ತನ್ನ ಸಾಮಾನ್ಯ ಕೆಲಸದಲ್ಲಿ ಅಡಚಣೆಯುಂಟಾಗಿ ಈ ಕಾಯಿಲೆ ಬರುತ್ತದೆ. ಇದರಲ್ಲಿ ವಿಪರೀತ ವಾಂತಿ ಇರುತ್ತದೆ. ಮತ್ತು ನೋವು ಹೊಕ್ಕಳಿನ ಭಾಗಕ್ಕೇ ಸೀಮಿತವಾಗಿರುತ್ತದೆ.

ಮೇದೋಜೀರಕ ಗ್ರಂಥಿಯ ತೀವ್ರ ರೀತಿಯ ಸೋಂಕು: ವಯಸ್ಸಾದವರಲ್ಲಿ ಅಂದರೆ ೫೦–೬೦ ವರ್ಷದವರಲ್ಲಿ ಕಾಣಿಸಿಕೊಳ್ಳುವುದು ಹೆಚ್ಚು. ವಿಶೇಷ ಅಥವಾ ಹೆಚ್ಚು ಊಟ ಮಾಡಿದ ಕೆಲವು ಹೊತ್ತಿನ ನಂತರ ಕಾಣಿಸಿಕೊಳ್ಳುವ ಈ ನೋವು ಹೊಕ್ಕಳಿನ ಮೇಲ್ಭಾಗದಲ್ಲಿ ಶುರುವಾಗಿ, ಬೆನ್ನಿನ ಭಾಗಕ್ಕೆ ಪಸರಿಸುತ್ತದೆ. ನೋವನ್ನು ಕಡಿಮೆ ಮಾಡಿಕೊಳ್ಳಲು ವಿಚಿತ್ರ ಭಂಗಿಯಲ್ಲಿ ರೋಗಿ ಬಗ್ಗುತ್ತಾನೆ, ಕೂಡುತ್ತಾನೆ, ಹೊರಳಾಡುತ್ತಾನೆ, ಏನೆಲ್ಲ ಮಾಡುತ್ತಾನೆ. ಪದೇ ಪದೇ ವಾಂತಿಯಾಗುತ್ತಿರುತ್ತದೆ. ದೇಹದ ತಾಪಮಾನ ೯೯–೧೦೦° F ಗಿಂತ ಮೇಲೇರುವುದಿಲ್ಲ. ಆದರೆ ನಾಡಿಬಡಿತ ಮಾತ್ರ ೧೦೦ಕ್ಕೂ ಹೆಚ್ಚಿರುತ್ತವೆ. ಹೊಟ್ಟೆಯು ಜಡತ್ವ ಇರುವುದಿಲ್ಲ. ಹೊಕ್ಕಳಿನ ಮೇಲ್ಭಾಗದಲ್ಲಿ ಮತ್ತು ಎಡ–ಕೆಳಭಾಗದ ಕಿಬ್ಬೊಟ್ಟೆಯ ಭಾಗದಲ್ಲಿ ಅದುಮಿದಾಗ ತೀವ್ರ ರೀತಿಯ ನೋವಿನ ಅರಿವಾಗುತ್ತದೆ. ರಕ್ತದಲ್ಲಿ ಆಮ್ಲಜನಕದ ಅಂಶ ಕಡಿಮೆಯಾಗಿ ಮೈಯೆಲ್ಲಾ ನೀಲಿಯಾಗುವಿಕೆಯ ಲಕ್ಷಣ ಇರುವುದು ಮತ್ತು ೧೫–೨೦% ಜನರಲ್ಲಿ ಅರಸಿನ ಕಾಮಾಲೆಯ ಲಕ್ಷಣ ಸಹ ಇರುತ್ತದೆ. ಬೇರೆ ಎಲ್ಲಾ ಕಾಯಿಲೆಯಿಂದ ಇದನ್ನು ಪ್ರತ್ಯೇಕಿಸುವ ಪರೀಕ್ಷೆ ಎಂದರೆ ರಕ್ತದಲ್ಲಿ ಸೀರಮ್ ಅಮೈಲೇಸ್‌ನ ಅಂಶ ಇದರಲ್ಲಿ ವಿಪರೀತ ಹೆಚ್ಚಿರುತ್ತದೆ.

ಸ್ತ್ರೀ ಸಂಬಂಧ ಕಾಯಿಲೆಗಳು

ಗರ್ಭನಳಿಕೆಗಳ ಸೋಂಕು : ಇದರಲ್ಲಿ ರೋಗಿಗೆ ಮೊದಲು ಬಿಳಿ ಬಟ್ಟೆ ಹೋಗುವುದು. ಋತುಚಕ್ರದಲ್ಲಿ ವಿವಿಧ ಬದಲಾವಣೆಗಳಾಗುತ್ತವೆ. ಋತುಚಕ್ರದಲ್ಲಿ ಆಗಾಗ ಬರುತ್ತಿದ್ದ ಹೊಟ್ಟೆ ನೋವು, ಮೂತ್ರ ವಿಸರ್ಜಿಸುವಾಗ ಉಂಟಾಗುವ ಉರಿಯುವ ನೋವು ಮೊದಲಾದ ಲಕ್ಷಣಗಳಿರುತ್ತವೆ. ಕಿಬ್ಬೊಟ್ಟೆಯನ್ನು ಅದುಮಿದಾಗ ದೇಹದಲ್ಲಿ ಎರಡು ಗರ್ಭನಳಿಕೆಗಳು ಇರುವುದರಿಂದ ಎರಡೂ ಬದಿಗೆ ತೀವ್ರ ರೀತಿಯ ನೋವಿನ ಅನುಭವ ಆಗುತ್ತದೆ ಎಂಬುದು ಈ ಕಾಯಿಲೆಯ ವಿಶೇಷ. ಗರ್ಭಕೋಶದಿಂದ ತೆಗೆದ ದ್ರವವನ್ನು ಸೂಕ್ಷ್ಮದರ್ಶಕ ಪರೀಕ್ಷೆಗೆ ಒಳಪಡಿಸಿದಾಗ ರೋಗ ಸುಲಭವಾಗಿ ಪತ್ತೆಯಾಗುತ್ತದೆ.

ಗರ್ಭಕೋಶದ ಹೊರಗಿನ ಗರ್ಭ: ಸಾಮಾನ್ಯವಾಗಿ ಆಗುವಂತೆ ಇಲ್ಲಿ ಗರ್ಭಕೋಶದಲ್ಲಿ ಗರ್ಭ ಬೆಳವಣಿಗೆಯಾಗುವುದಿಲ್ಲ. ವಿವಿಧ ಕಾರಣಗಳಿಂದ ಗರ್ಭನಳಿಕೆ ಮತ್ತಿತರ ಜಾಗಗಳಲ್ಲಿ ಗರ್ಭ ಬೆಳೆಯುತ್ತದೆ. ಈ ರೀತಿಯ ಗರ್ಭ ಎಡ ಭಾಗದಲ್ಲಿ ಆದಾಗ ರೋಗ ಪತ್ತೆ ಹಚ್ಚುವಿಕೆ ಕಷ್ಟವಾಗುವುದಿಲ್ಲ. ಆದರೆ ಬಲ ಭಾಗದಲ್ಲಿ ಆದಾಗ ಎಷ್ಟೋ ಸಂದರ್ಭಗಳಲ್ಲಿ ಇದು ಅಪೆಂಡಿಸೈಟಿಸ್ಸಿನ ಲಕ್ಷಣ

ಗಳನ್ನೇ ಹೋಲುತ್ತದೆ. ಇದರಲ್ಲಿ ನೋವು ಬಲ ಭಾಗದ ಕಿಬ್ಬೊಟ್ಟೆಯಲ್ಲೇ ಶುರುವಾಗುತ್ತದೆ- ಮತ್ತು ಋತುಚಕ್ರದಲ್ಲಿ ಆದ ವ್ಯತ್ಯಾಸದ ಬಗ್ಗೆ ರೋಗಿಗೆ ಗೊತ್ತಿರುತ್ತದೆ. ಕೆಲವೊಮ್ಮೆ ಭುಜದ ಭಾಗಕ್ಕೆ ನೋವು ಪಸರಿಸುವುದಲ್ಲದೆ ಆ ಭಾಗ ದಲ್ಲಿರುವ ಸ್ಪರ್ಶಜ್ಞಾನ ಹೆಚ್ಚುತ್ತದೆ. ಇದರಲ್ಲಿ ಒಳಭಾಗದಲ್ಲಿ ವಿಪರೀತ ರಕ್ತಸ್ರಾವ ಆಗುವ ಸಂಭವವೂ ಇದೆ. ಹಾಗಾದಾಗ ಇಂತಹುದೇ ರೋಗ ಎಂಬುದರ ಬಗ್ಗೆ ಅನುಮಾನ ಇರುವುದಿಲ್ಲ. ಇದೇ ರೀತಿ ತೀವ್ರ ನೋವಿಗೆ ಕಾರಣ ವಾಗುವ ಇನ್ನಿತರ ಸಂದರ್ಭಗಳು ಎಂದರೆ ಅಂಡಾ ಶಯದ ಸಿಸ್ಟ್ ಛಿದ್ರವಾದಾಗ ಮತ್ತು ಅದು ತಿರುಚಿಕೊಂಡಾಗ.

ಮೂತ್ರಜನಕಾಂಗಕ್ಕೆ ಸಂಬಂಧಪಟ್ಟ ಕಾಯಿಲೆಗಳು

ಮೂತ್ರನಾಳದ ನೋವು : ಈ ಭಾಗದಲ್ಲಿ ಲವಣಾಂಶಗಳಿಂದ ಉಂಟಾದ ಕಲ್ಲುಗಳು ಹೆಚ್ಚಿನ ಸಂದರ್ಭಗಳಲ್ಲಿ ಈ ರೀತಿಯ ನೋವಿಗೆ ಕಾರಣ ವಾಗುತ್ತವೆ. ಆದರೆ ಈ ನೋವು ಹೆಚ್ಚಾಗಿ ಹಿಂಭಾಗದಲ್ಲಿ ಆರಂಭಗೊಂಡು ಸೊಂಟದ ಭಾಗಕ್ಕೆ ಪಸರಿಸುತ್ತದೆ. ಅಲ್ಲದೆ ಇದರಲ್ಲಿ ಮೂತ್ರಕ್ಕೆ ಸಂಬಂಧಪಟ್ಟ ಲಕ್ಷಣಗಳಾದ ಮೂತ್ರ ವಿಸರ್ಜಿಸುವಾಗ ನೋವು, ಪದೇ ಪದೇ ಮೂತ್ರ ಹೋಗುವುದು ಇತ್ಯಾದಿಗಳು ಇರುತ್ತವೆ. ಆದರೆ ರೋಗಿಯು ಕೆಮ್ಮಿದಾಗ ನೋವು ಕಾಣಿಸುವುದಿಲ್ಲ (ಅಪೆಂಡಿಸೈಟಿಸ್‌ನಲ್ಲಿ ಕಾಣಿಸುತ್ತದೆ) ಎಕ್ಸ್‌ರೇ ಸಿಸ್ಟೋಸ್ಕೋಪಿ ಮೊದಲಾದ ಪರೀಕ್ಷೆಗಳಿಂದ ಈ ಕಾಯಿಲೆಯನ್ನು ನಿಖರವಾಗಿ ಪತ್ತೆ ಹಚ್ಚಬಹುದು.

ಮೂತ್ರಪಿಂಡದ ತೀವ್ರ ರೀತಿಯ ಸೋಂಕು: ಯೌವನದಲ್ಲಿ ಹೆಚ್ಚು ಬರುವ ಈ ಕಾಯಿಲೆಯಲ್ಲಿ ಸಹ ರೋಗಿಗೆ ಪದೇ ಪದೇ ಮೂತ್ರ ಹೋಗುವ ತೊಂದರೆ ಇರುತ್ತದೆ. ಬಲಭಾಗದ ಮೂತ್ರಪಿಂಡಕ್ಕೆ ಸೋಂಕು ತಗಲಿದಾಗ ಹೊಟ್ಟೆಯ ಮೇಲ್ಭಾಗದಲ್ಲಿ ನೋವು ಶುರುವಾದರೂ ಹಿಂಭಾಗದಲ್ಲಿ ಕಾಣಿಸಿಕೊಳ್ಳುತ್ತದೆ ಎಂಬುದು ಬಹಳ ಮುಖ್ಯ. ಜ್ವರ ೧೦೨° ವರೆಗೂ ಇರಬಹುದು. ನಡುಕ ಇರುತ್ತದೆ. ಕೆಲವೊಮ್ಮೆ ಸರಿಯಾಗಿ ಪರೀಕ್ಷಿಸಿ ಹೊಟ್ಟೆಯನ್ನು ಅದುಮಿದಾಗ ಊದಿಕೊಂಡ ಮೂತ್ರಪಿಂಡ ಗೊತ್ತಾಗುತ್ತದೆ. ವಿಶೇಷ ಎಕ್ಸ್‌ರೇ ಪರೀಕ್ಷೆಗಳಿಂದ ರೋಗವನ್ನು ಸುಲಭವಾಗಿ ಪತ್ತೆ ಹಚ್ಚಬಹುದು.

ಕೇಂದ್ರೀಯ ನರಮಂಡಲಕ್ಕೆ ಸಂಬಂಧಪಟ್ಟ ಕಾಯಿಲೆಗಳು

ಈ ಗುಂಪಿನಲ್ಲಿ ಬರುವ ಪ್ರಮುಖ ಕಾಯಿಲೆ ಗಳೆಂದರೆ ಸಿಹಿಮೂತ್ರರೋಗದಿಂದ ಉಂಟಾಗುವ ತೀವ್ರ ರೀತಿಯ ಹೊಟ್ಟೆ ನೋವು, ಸರ್ಪಸುತ್ತು ಕಾಯಿಲೆಯ ಪೂರ್ವದಲ್ಲಿ ಉಂಟಾಗುವ ತೀವ್ರ ರೀತಿಯ ನೋವು, ಸಿಫಿಲಿಸಿನಲ್ಲಿ ಉಂಟಾಗುವ ಹೊಟ್ಟೆನೋವು, ವಿವಿಧ ಕಾರಣಗಳಿಂದ ಬೆನ್ನುಹುರಿಯ ನರಗಳಿಗೆ ಸಂಬಂಧ ಪಟ್ಟಂತೆ ಉಂಟಾಗುವ ನೋವು, ಪಾರ್ಫಿರಿಯಾ ಕಾಯಿಲೆ ಯಲ್ಲಿ ಉಂಟಾಗುವ ತೀವ್ರ ರೀತಿಯ ಹೊಟ್ಟೆ ನೋವು, ಇತ್ಯಾದಿ.

ಹೀಗೆ ಹತ್ತು ಹಲವು ಕಾರಣಗಳು ಈ ರೀತಿಯ ದಿಢೀರ್ ಹೊಟ್ಟೆ ನೋವಿಗೆ ಇರುವುದರಿಂದ ಇಂತಹುದೇ ಕಾಯಿಲೆ, ನಿರ್ದಿಷ್ಟ ವ್ಯಕ್ತಿಯ ನೋವಿಗೆ ಕಾರಣ ಎಂದು ಕಂಡುಹಿಡಿಯುವಲ್ಲಿ ರೋಗಿಯ ವಿವರವಾದ ರೋಗ ಲಕ್ಷಣ, ಮೊದಲು ರೋಗಿಗಿದ್ದ ವಿವಿಧ ಕಾಯಿಲೆಗಳು ರೋಗಿಯ ಆಗಿನ ಪರಿಸ್ಥಿತಿ, ಲಕ್ಷಣಗಳು ಮಾತ್ರವಲ್ಲದೆ ವಿವಿಧ ರೀತಿಯ ಪರೀಕ್ಷೆಗಳು, ವಿಶೇಷ ಪರೀಕ್ಷೆಗಳು ಸಹ ಸಹಾಯಕವಾಗಬಲ್ಲವು. ಹಾಗಿದ್ದರೂ ನಿಜವಾದ ರೋಗ ಮೊದಲು ತಿಳಿಯದ ಉದಾಹರಣೆ ಯಲ್ಲಿಯಂತೆ ಶಸ್ತ್ರಕ್ರಿಯೆ ಮಾಡುವಾಗಲೇ ಗೊತ್ತಾಗುತ್ತದೆಂಬುದು ಎಷ್ಟೋ ಬಾರಿ ನಿಜವಾದ ಸಂಗತಿ.

ಕೋದಂಡಿ ಕೋದನ್ ಸೂಸಲ್ ಆದದ್ದು

ವೇ. ಮು. ಮುಕುಂದ

ನಾನು ಸೂಸಲ್ ಸ್ಟುಡಿಯೋಕ್ಕೆ ರಾಮ-ಚಂದ್ರನ ಜೊತೆ ಹೋದೆ. ಅದು ಅತ್ಯಂತ ಆಧುನಿಕವಾಗಿ ಸಜ್ಜುಗೊಳಿಸಲ್ಪಟ್ಟಿತ್ತು. ಅದರ ವೈಭವ ಕಂಡು ದಂಗಾದೆ. ಅದರ ಯಜಮಾನ ನಮಗೆ ಕಾಫಿ ಬಿಸ್ಕತ್‌ಗಳನ್ನು ಕೊಟ್ಟು ಉಪ-ಚಾರ ಮಾಡಿದ. ನಂತರ, "ಸಾರ್ ಸನ್ನದೊಂದು ರಿಕ್ವೆಸ್ಟು" ಅಂದ.

"ಏನು ಮಿಸ್ಟರ್ ಸೂಸಲ್?" ಎಂದೆ.

"ನೀವು ಒಳಗೆ ಬಂದರೆ ನಿಮ್ಮ ಹೇರ್ ಟ್ರಿಂ ಮಾಡುತ್ತೇನೆ. ಅದನ್ನ ನಮ್ಮ ಅಸಿಸ್ಟೆಂಟ್ ಫೋಟೋ ತೆಗೆದುಕೊಳ್ಳುತ್ತಾರೆ. ನಮ್ಮ ಆಲ್ಬ-ಮ್ಮಿಗೆ ಅದು."

"ನಿಮ್ಮಿಷ್ಟ..." ಅಂದು ಕಾಫಿ ಕುಡಿದಾದ ಮೇಲೆ ಒಳಗೆ ಹೋಗಿ ಅವರು ತೋರಿಸಿದ ಕುರ್ಚಿಯಲ್ಲಿ ಕುಳಿತೆ. ಅವರ ಅಸಿಸ್ಟೆಂಟ್ ರೀಟಾ ಬಂದು ಫೋಟೋ ತೆಗೆದುಕೊಂಡಳು.

"ನಿಮ್ಮ ಸ್ಟುಡಿಯೋದಲ್ಲಿ ಎಲ್ಲರೂ ಇಂಗ್ಲೀಷಿನಲ್ಲಿ ಮಾತಾಡ್ತಾರಲ್ಲ, ನೀವು ಇಷ್ಟು ಚೆನ್ನಾಗಿ ಕನ್ನಡ ಮಾತಾಡಲು ಎಲ್ಲಿ ಕಲಿತಿರಿ?" ಎಂದೆ.

ಅವನು ಹಾರ್ದಿಕವಾಗಿ ನಕ್ಕು, "ನಾನು ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲೆ. ನಮ್ಮ ತಂದೇನೂ ಅಷ್ಟೆ. ನಮ್ಮ ಮನೇಲಿ ನಾವು ಆಡುವ ಮಾತೂ ಕನ್ನಡಾನೆ" ಅಂದ. ನನಗೆ ಆಶ್ಚರ್ಯವಾಯಿತು.

ಆಮೇಲೆ ಅನ್ನಿಸಿತು, ಇವನು ಹೆಸರು ಬದಲಾಯಿಸಿದ್ದಾನೆ ಅಂತ. ದಿನಾ ಬೇರೆ ಬೇರೆ ಜನಗಳೊಡನೆ ಬೆರೆತು ಕೆಲಸ ಮಾಡುತ್ತಾ ಇದ್ದರೆ ಅವರ ಮನಸ್ಸಿನ ಇಂಗಿತ ಅರಿತುಕೊಳ್ಳುವ ಚುರುಕುತನ ತಾನಾಗಿಯೇ ಬೆಳೆಯುತ್ತದೆ ಅಂತ ಕಾಣುತ್ತೆ. ನನ್ನ ಮನಸ್ಸಿನ ಇಂಗಿತ ತಿಳಿದುಕೊಂಡು "ನಾನು, ನನ್ನ ಹೆಸರನ್ನು ನನ್ನ ಗುರು-ಗಳ ಮೇಲಿನ ಭಕ್ತಿಯಿಂದ, ಅವರ ಹೆಸರಿನ ರೀತಿಯಲ್ಲೇ ಕೋದನ್ ಸೂಸಲ್ ಅಂತ ಬದಲಾಯಿಸಿಕೊಂಡೆ... ಆದರೆ ನನ್ನದು ಅಚ್ಚ ಕನ್ನಡದ ಹೆಸರು, ಕೋದಂಡರಾಮಯ್ಯ ಅಂತ. ನಮ್ಮೂರು ಸೋಸಲೆ, ಅದನ್ನು ಕೋದನ್ ಸೂಸಲ್ ಮಾಡಿಕೊಂಡೆ" ಅಂತ ಹೇಳಿದ. ಇವನು ತಾನು ಕಾಣದ ಗುರುವಿನ ನೆನಪಿಗಾಗಿ ಹೆಸರನ್ನು ಬದಲಾಯಿಸಿಕೊಂಡಿದ್ದಾನೆ.

"ನಿಮ್ಮ ತಂದೇನೂ ಇಲ್ಲೇ ಕೆಲಸ ಮಾಡು-

(ಕೃಪೆ : ಕರ್ನಾಟಕ ಸಾಹಿತ್ಯ ಅಕಾದಮಿಯ 'ಚಂದನ' ತ್ರೈಮಾಸಿಕ)

ತ್ತಾರೆಯೋ ಅಥವಾ ಬೇರೆ ಅಂಗಡೀನ ಇಟ್ಟು ಕೊಂಡಿದ್ದಾರಾ...?"

"ಇಲ್ಲ ಸಾರ್, ನಮ್ಮ ತಂದೆ ಕ್ಷೌರಿಕರಲ್ಲ. ಅವರ ವೃತ್ತಿ ಪೌರೋಹಿತ್ಯ" ಅಂದಾಗ ನಾನು ದಂಗಾದೆ.

"ನಮ್ಮ ತಂದೆ ಹೆಸರು ಸೋಸಲೆ ನರಸಿಂಹ ಮೂರ್ತಿ ಅಂತ. ಅಲ್ಲೂರಿನಲ್ಲಿ ನಮ ಮನೆ ಬೆಂಗಳೂರಿನಾಚೆ ಅಗರದ ಹತ್ತಿರ ಒಂದು ಅಮ್ಮನ ಗುಡಿಯಲ್ಲಿ ಅರ್ಚಕರು. ನಮ್ಮ ತಾತನೂ ಅಲ್ಲೇ ಅರ್ಚಕರಾಗಿದ್ದರು. ನಮ್ಮ ಸ್ವಂತ ಊರು ಸೋಸಲೆ. ಈಗಲೂ ಸ್ವಲ್ಪ ಗದ್ದೆ ತೋಟ ಇದೆ ಅಲ್ಲಿ. ನಾನು ಪೌರೋಹಿತ್ಯಕ್ಕೆ ಇಳಿಯದೆ ಕ್ಷೌರಿಕನಾದೆ" ಅಂದ. ಒಂದು ಅಳುಕಾಗಲೀ, ಸಂಕೋಚವಾಗಲಿ ಇಲ್ಲದೆ, ನೈಜ ವಾಗಿ ಅವನು ಹೇಳಿದ ಕತೆ ಕೇಳಿ, ಅವನ ವ್ಯಕ್ತಿತ್ವದ ಬಗ್ಗೆ ಗೌರವ ಮೂಡಿತು.

ಇವನ ತಾತ, ಲಕ್ಷ್ಮೀನಾರಾಯಣಯ್ಯ, ಸೋಸಲೆಯಲ್ಲಿ ಹುಟ್ಟಿ ಅಲ್ಲೇ ಬೆಳೆದು, ವಂಶ-ಪಾರಂಪರ್ಯವಾಗಿ ಬಂದ ಹೊಲ ಗದ್ದೆ ತೋಟಗಳನ್ನು ನೋಡಿಕೊಂಡು ಅನುಕೂಲ-ವಾಗಿಯೇ ಜೀವನ ನಡಸುತ್ತಾ ಇದ್ದರು. ಸುತ್ತ-ಮುತ್ತಲಿನ ಹಳ್ಳಿಗಳಲ್ಲಿ ಪೌರೋಹಿತ್ಯ ನಡೆಸು-ವುದರಿಂದ ಬೇರೆ ಆದಾಯವಿತ್ತು. ಇವರು ಕಟ್ಟುನಿಟ್ಟಾದ ವೈದಿಕರು. ಅಲ್ಲದೆ ಮಂತ್ರ, ತಂತ್ರ, ವೈದ್ಯ, ಜ್ಯೋತಿಶ್ಶಾಸ್ತ್ರಗಳಲ್ಲಿ ಪರಿ-ಣಿತರು. ಇವರು ಪ್ರಸಿದ್ಧಿಯಾಗಿದ್ದು ರಾಜ ರಾಜೇಶ್ವರಿಯ ಆರಾಧನೆಯ ಮೂಲಕ. ಇವರಿಗೆ ದೇವಿ ಪ್ರತ್ಯಕ್ಷಳಾಗಿ ಇವರೊಂದಿಗೆ ಮಾತ-ನಾಡುತ್ತಾ ಇದ್ದಳು ಎಂದು ಒಂದು ಪ್ರತೀತಿ ಇತ್ತು. ಅವರದು ಪುಟ್ಟ ಸಂಸಾರ, ಹೆಂಡ್ತಿ ಭಾಗೀರಥಮ್ಮ, ಮಗ ನರಸಿಂಹಮೂರ್ತಿ, ಅವನ ತಂಗಿ ಸರಸ್ವತಿ. ದೇವಿ ಇವರಿಗೆ ಏನೂ ಕೊರತೆಯಿಲ್ಲದಂತೆ ಇಟ್ಟಿದ್ದಳು.

ಬೆಂಗಳೂರಿನ ಅಗರದ ಬಳಿ ಇರುವ ಜಡೇ-ಹಳ್ಳಿ ಅಲ್ಲಿನ ಪಟೇಲ ರಂಗಯ್ಯನಿಗೆ ಒಂದು ದಿನ ರಾತ್ರಿ ಕನಸಿನಲ್ಲಿ, ಸರ್ವಾಭರಣಗಳನ್ನು ತೊಟ್ಟು ಪೀತಾಂಬರ ಉಟ್ಟ ಅತಿರೂಪ ಸುಂದರಿಯೊಬ್ಬಳು ಕಾಣಿಸಿಕೊಂಡು "ನಾನು ರಾಜರಾಜೇಶ್ವರಿ, ನಿನ್ನ ಹಿತ್ತಲಲ್ಲಿ ಬಿದ್ದಿರುವ ಕಲ್ಲಿನಲ್ಲಿ ನಾನು ಉದ್ಭವವಾಗುತ್ತಾ ಇದ್ದೇನೆ. ನೀನು ನನ್ನನ್ನು ಪ್ರತಿಷ್ಠಿಸಿ ಒಂದು ಗುಡಿಯನ್ನು ಕಟ್ಟು. ನಿನಗೇ ಅಲ್ಲದೆ, ಇಲ್ಲಿ ಸುತ್ತಮುತ್ತಲಿ-ನಲ್ಲಿ ಎಲ್ಲರಿಗೂ ಸುಭಿಕ್ಷೆಯನ್ನು ಕೊಡುವೆ..." ಎಂದು ಹೇಳಿದಳು, ಪಟೇಲನಿಗೆ ತಕ್ಷಣ ಎಚ್ಚರ ವಾಯಿತು. ಹೆಂಡತಿಯನ್ನು ಎಬ್ಬಿಸಿ. ಕನಸನ್ನು ಅವಳಿಗೆ ಹೇಳಿದ. ಬೆಳಗಾಗುವುದನ್ನೇ ಕಾಯುತ್ತಾ ಇದ್ದು ಸೂರ್ಯೋದಯವಾದ ಕೂಡಲೇ ಇಬ್ಬರೂ ಆ ಕಲ್ಲಿಗಾಗಿ ಹಿತ್ತಲಲ್ಲಿ ಹುಡುಕಿದರು. ಆದರೆ, ಅವರಿಗೆ ಅಲ್ಲಿ ಬಿದ್ದಿದ್ದ ಕಲ್ಲುಗಳು ಕಲ್ಲಾಗಿಯೇ ಕಾಣಿಸಿದವೆ ಹೊರತು, ಅಮ್ಮನ ವಿಗ್ರಹ ಕಾಣಿಸಲಿಲ್ಲ. ಎಲ್ಲೋ ಬರೀ ಕನಸು ಎಂದು ತಿಳಿದು ಅವರಿಬ್ಬರೂ ಅದನ್ನು ಮರೆತುಬಿಟ್ಟರು. ಮತ್ತೆ ಕೆಲವು ದಿನಗಳಾದ ಮೇಲೆ ದೇವಿ ಕನಸಿನಲ್ಲಿ ಬಂದು "ಏಕೆ, ನನ್ನನ್ನು ಗುರ್ತಿಸಲಾಗಲಿಲ್ಲವೇ ? ಸೋಸಲೆ ಎಂಬ ಊರೊಂದರಲ್ಲಿ ನನ್ನ ಆರಾಧಕನೊಬ್ಬ ಇದ್ದಾನೆ. ಅವನನ್ನು ಕರಿ, ನನ್ನನ್ನು ತೋರಿಸುತ್ತಾನೆ" ಅಂದು ಅಂತರ್ಧಾನಳಾದಳು. ಮಾರನೆಯ ದಿನ ಹೆಂಡತಿಗೆ ಈ ವಿಷಯ ಹೇಳಿ ತನ್ನ ಇಬ್ಬರು ಜೀತದಾಳುಗಳನ್ನು ಕರೆದುಕೊಂಡು ಗಾಡಿ ಮಾಡಿಕೊಂಡು ಸೋಸಲೆಗೆ ಹೋದ. ಅಲ್ಲಿ ವಿಚಾರಿಸಿ, ಲಕ್ಷ್ಮೀನಾರಾಯಣನ ಮನೆಗೆ ಹೋಗಿ ತನ್ನ ಕನಸುಗಳ ವಿವರವನ್ನು ಅವರಿಗೆ ಹೇಳಿ ತಾವು ಬಂದು ಅಮ್ಮನವರನ್ನು ಗುರ್ತಿಸಬೇಕೆಂದು ಬೇಡಿಕೊಂಡ. ಅವರು "ಅಮ್ಮ ನಿನ್ನ ಆಟ ನನಗೆ ಅರ್ಥವಾಗುತ್ತಾ ಇಲ್ಲ, ಇಲ್ಲೇ ನನ್ನೊಡನೆ ಇದ್ದು, ಈಗ ನನ್ನನ್ನು ಗುರ್ತಿಸಲು ಬೇರೆ ಕಡೆಗೆ ಕರೆಯುತ್ತಾ, ಇದ್ದೀಯಾ? ನಿನ್ನಿಚ್ಛೆಯೋ ನನ್ನಿಚ್ಛೆ" ಎಂದು ಅಮ್ಮನನ್ನು ಪ್ರಾರ್ಥಿಸಿ ಹೆಂಡತಿಗೆ ಸೂಚ್ಯವಾಗಿ ತಿಳಿ-

ನೊಡನೆ ಜಡೇಹಳ್ಳಿಗೆ ಬಂದರು. ಅಲ್ಲಿ ಚಾವಡಿಯಲ್ಲಿಳಿದು, ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ, ಮಡಿಯಲ್ಲಿ ಪಟೇಲನ ಹಿತ್ತಲಿಗೆ ಬಂದು "ಅಮ್ಮ ಬಂದಿದ್ದೇನೆ, ತೋರಿಸಿಕೋ ನಿನ್ನನ್ನು ತಾಯಿ" ಅಂತ ಬೇಡಿಕೊಂಡರು. ಆಗ ಪಟೇಲನಿಗೆ ಅಲ್ಲೇ ಇದ್ದ ಒಂದು ಬಂಡೆಯಲ್ಲಿ ಅಲ್ಪ ಸ್ವಲ್ಪ ಮುಖದ ಛಾಯೆ ಕಾಣಿಸಿತು. "ಸ್ವಾಮಿ, ನೋಡಿ. ಈ ಕಲ್ಲಲ್ಲಿ ಏನೋ ಹೆಣ್ಣಿನ ಮುಖದ ಛಾಯೆ ಕಾಣಿಸ್ತಾ ಇದೆ..." ಅಂದ. ಲಕ್ಷ್ಮೀನಾರಾಯಣಯ್ಯ ಹತ್ತಿರಕ್ಕೆ ಹೋಗಿ ನೋಡಿ "ಹೌದು. ಇದೇ ಕಲ್ಲಿನಲ್ಲೇ ತಾಯಿ ಉದ್ಭವವಾಗಿರೋದು" ಅಂತ ಹೇಳಿ ಪಟೇಲನ ಹೆಂಡತಿ ರಾಮಕ್ಕನನ್ನು ಕರೆದು ವಿಧಿವತ್ತಾಗಿ ಪೂಜೆ ಮಾಡಿಸಿದರು. ಆಮೇಲೆ ಜೀತದಾಳುಗಳ ಕೈಲಿ ಸುತ್ತಲೂ ಅಗೆಸಿ, ಆ ಕಲ್ಲನ್ನು ಆಚೆಗೆ ತೆಗೆಯುವ ಪ್ರಯತ್ನ ಮಾಡಿದರು. ಇವರು ಎಷ್ಟು ಅಗೆದರೂ, ಸುತ್ತಲೂ ಒಂದು ಹಳ್ಳವಾಯಿತೇ ಹೊರತು ಕಲ್ಲಿನ ಬುಡ ಕಾಣಿಸಲಿಲ್ಲ. ಇನ್ನು ಮಾರನೆಯ ದಿನ ಅಗೆಯುವ ಅಂದುಕೊಂಡು ಎಲ್ಲರೂ ತಮ್ಮ ತಮ್ಮ ಗುದ್ದಲಿ ಪಿಕಾಸಿಗಳನ್ನು ಹಳ್ಳದಿಂದ ತೆಗೆಯುತ್ತಿದ್ದರು. ಇನ್ನೇನು ಸೂರ್ಯ ಮುಳುಗುತ್ತಾನೆ ಅನ್ನುವಾಗ, ಆಕಸ್ಮಿಕವಾಗಿ ಗುದ್ದಲಿ ಬಂಡೆಗೆ ತಗುಲಿ ಅದು ಇಬ್ಭಾಗವಾಯಿತು. ದೇವಿಯ ಬಂಡೆಯನ್ನು ಒಡೆದೆವು. ಹಳ್ಳಿಗೆ ಏನು ಕೆಟ್ಟದಾಗುತ್ತದೆಯೋ ಎಂದು ಹೆದರಿಕೊಂಡು ಹಳ್ಳದಲ್ಲಿ ನೋಡಿದಾಗ, ಒಡೆದ ಚೂರುಗಳ ಮಧ್ಯೆ ಸರ್ವಾಲಂಕಾರಭೂಷಿತೆಯಾಗಿ ಕಡೆದ ರಾಜರಾಜೇಶ್ವರಿಯ



ಮೂರಂವರೆ ಅಡಿಯ ವಿಗ್ರಹ ಕಣ್ಣಿಗೆ ಬಿತ್ತು. ಎಲ್ಲರೂ ಆನಂದಬಾಷ್ಪಗಳನ್ನು ಸುರಿಸುತ್ತಾ ಅಮ್ಮನನ್ನು ಹೊತ್ತು ಪಟೇಲರ ಅಂಗಳದಲ್ಲಿಟ್ಟು ಷೋಡಶೋಪಚಾರಗಳಿಂದ ಪೂಜೆ ಮಾಡಿದರು. ಲಕ್ಷ್ಮೀನಾರಾಯಣಯ್ಯನಿಗೆ ಧ್ಯಾನದಲ್ಲಿ ಅಮ್ಮ ಎಲ್ಲಿ ಗುಡಿ ಕಟ್ಟಬೇಕು ಅಂತ ಹೇಳಿದಳೋ ಅಲ್ಲೇ ಒಂದು ಸಣ್ಣ ಗುಡಿ ಕಟ್ಟಿ ಅಮ್ಮನ ವಿಗ್ರಹವನ್ನು ವೇದೋಕ್ತವಾಗಿ ಪ್ರತಿಷ್ಠಾಪನೆ ಮಾಡಿದರು. ಪಟೇಲರ ಬೇಡಿಕೆಯ ಮೇರೆಗೆ ಲಕ್ಷ್ಮೀನಾರಾಯಣಯ್ಯ, ಅಲ್ಲೇ ಅಯ್ಯನವರಾಗಿ, ಅರ್ಚಕರಾಗಿ ನಿಂತರು. ತಮ್ಮ ಹೊಲ ಗದ್ದೆಗಳನ್ನು ನೋಡಿಕೊಳ್ಳುವುದಕ್ಕೆ ಜನಗಳನ್ನು ನೇಮಿಸಿ, ಹೆಂಡತಿ ಭಾಗೀರಥಮ್ಮ, ಮಗ ನರಸಿಂಹಮೂರ್ತಿ, ಮಗಳು ಸರಸ್ವತಿಯೊಡನೆ ಬೆಂಗಳೂರು ಸೇರಿದರು. ಪಟೇಲ ಅವರಿಗೆ ಹತ್ತಿರದಲ್ಲೇ ಅಲಸೂರಿನಲ್ಲಿ ಸ್ವಲ್ಪ ಜಾಗ ಕೊಂಡು ಒಂದು ಸಣ್ಣ ಮನೆ ಕಟ್ಟಿಸಿಕೊಟ್ಟ. ಅಯ್ಯನವರು ಪ್ರತಿದಿನ ಬೆಳಗ್ಗೆ ಸಾಯಂಕಾಲ ನಡೆದು ಗುಡಿಗೆ ಹೋಗಿ ಅನನ್ಯ ಭಕ್ತಿಯಿಂದ ದೇವಿಗೆ ಪೂಜೆ ಮಾಡುತ್ತಾ ಇದ್ದರು. ಪಟೇಲರಿಂದ ಅವರಿಗೆ ಬರುತ್ತಿದ್ದ ವರಮಾನ ಚೆನ್ನಾಗಿತ್ತು; ಅಲ್ಲದೆ ಸೋಸಲೆಯಿಂದ ಬರುತ್ತಿದ್ದ ಧಾನ್ಯ, ಹುಣಸೇಹಣ್ಣು, ತೆಂಗಿನಕಾಯಿ ಇತ್ಯಾದಿ, ಪೌರೋಹಿತ್ಯದಿಂದ ಬರುತ್ತಿದ್ದ ಆದಾಯದೊಡನೆ ಅವರ ಜೀವನ ಸಮೃದ್ಧಿಯಾಗಿ ತುಂಬಿ ಹರಿಯಿತು. ಮಂತ್ರ, ತಂತ್ರ, ಜ್ಯೋತಿಷ್ಯ, ಆಯುರ್ವೇದದಲ್ಲಿ ಅಯ್ಯನವರಿಗೆ ಇದ್ದ ಪಾಂಡಿತ್ಯದಿಂದ ಅವರ ಹೆಸರು ಬಹಳ ಪ್ರಸಿದ್ಧಿಯಾಯಿತು.

ನರಸಿಂಹಮೂರ್ತಿಗೆ ತಂದೆಯಂತೆ ಶಾಸ್ತ್ರಗಳಲ್ಲಿ ಬಹಳ ಆಸಕ್ತಿ. ಅಲ್ಲದೆ ಅಮ್ಮನವರ ಮೇಲೆ ಅನನ್ಯ ಭಕ್ತಿ. ತಂದೆಯೊಡನೆ ಸಾಯಂಕಾಲದ ಪೂಜೆಗೆ ಗುಡಿಗೆ ಹೋಗುವುದು ಅವನ ದಿನಚರಿಯಾಗಿತ್ತು. ಆಗಿನ ಪರಿಸ್ಥಿತಿಯನ್ನು ನೋಡಿ, ಅಯ್ಯನವರು ತಮ್ಮ ಮಗ ಕ್ರಿಸ್ತಪೂರ್ವ ಗ್ರಂಥಗಳನ್ನೇ ಅಲ್ಲದೆ, ಇಂಗ್ಲಿಷ್‌ನಲ್ಲಿದ್ದ ಇತರ ಪುಸ್ತಕಗಳನ್ನು ಓದುವುದರಿಂದ ಅವನಿಗೆ ಒಳ್ಳೆಯದು ಅಂದುಕೊಂಡು. ನರಸಿಂಹಮೂರ್ತಿಯನ್ನು, ಕಂಟೋನ್ಮೆಂಟ್‌ನ ಒಂದು ಇಂಗ್ಲಿಷ್ ಶಾಲೆಗೆ ಹಾಕಿದರು. ತಂದೆಯಿಂದ ಕಲಿತ ವೇದಾಧ್ಯಯನ ಶಾಸ್ತ್ರಗಳ ಪರಿಚಯದೊಡನೆ, ಇಂಗ್ಲಿಷ್ ಶಾಸ್ತ್ರಗಳ ಪರಿಚಯವಾಗಿ ಇಂಗ್ಲಿಷ್ ಶಾಲೆಯ ವಿದ್ಯಾಭ್ಯಾಸ ಇವನ ವ್ಯಕ್ತಿತ್ವಕ್ಕೆ ಒಂದು ಮೆರುಗು ಕೊಟ್ಟಿತು.

ಸರಸ್ವತಿಗೆ, ಹನ್ನೊಂದನೇ ವಯಸ್ಸಿನಲ್ಲಿ ನಂಜನಗೂಡಿಗೆ ಕೊಟ್ಟು ವಿಜೃಂಭಣೆಯಿಂದ ಮದುವೆ ಮಾಡಿದರು. ಅದೇ ಸಮಯದಲ್ಲಿ ಬಂದಿದ್ದ ಬಳಗದವರ ಮಗಳು ಲಕ್ಷ್ಮಿಯನ್ನು ಹದಿನಾರು ವರುಷದ ನರಸಿಂಹಮೂರ್ತಿಗೆ ತಂದುಕೊಂಡರು. ಕೆಲವು ವರ್ಷಗಳಾದ ಮೇಲೆ ಭಾಗೀರಥಮ್ಮ ತೀರಿಕೊಂಡಾಗ ಅಯ್ಯನವರು ಜಡೇಹಳ್ಳೀಲಿ ಒಂದು ಗುಡಿಸಿಲು ಹಾಕಿಕೊಂಡು ಗುಡಿಯಲ್ಲೇ ತಮ್ಮ ಕಾಲ ಕಳೆದು ಅದೇ ವರ್ಷ ತಾಯಿಯ ಪಾದ ಸೇರಿದರು.

ನರಸಿಂಹಮೂರ್ತಿ ಅರ್ಚಕನ ಸ್ಥಾನಕ್ಕೆ ಬಂದ. ತಂದೆಯಂತೆ ಇವರಿಗೂ ದೇವಿಯಲ್ಲಿ ಭಕ್ತಿ ಬಹಳ. ಶಾಸ್ತ್ರಗಳನ್ನು, ಪುರಾಣಗಳನ್ನು, ಕಾಲಕ್ಕೆ ತಕ್ಕಂತೆ ವ್ಯಾಖ್ಯಾನ ಮಾಡುವ ಶಕ್ತಿ ಎರಡು ವಿದ್ಯಾಭ್ಯಾಸಗಳ ಸಂಮಿಳನದಿಂದ ಬಂದಿತ್ತು. ಇದರಿಂದ ಪೌರೋಹಿತ್ಯಕ್ಕೆ, ಉಪನ್ಯಾಸಗಳಿಗೆ ಎಲ್ಲೆಲ್ಲಿಂದಲೋ ಕರೆಗಳು ಬಂದು ಇವರ ಹೆಸರು ಹರಡಿತು.

ಪ್ರಪಂಚದ ಮಹಾಯುದ್ಧದಲ್ಲಿ ಬೆಂಗಳೂರು ನಗರ ಕೊಟ್ಟ ಸೇವೆ, ಇಲ್ಲಿದ್ದ ದೇಶವಿದೇಶಗಳ ಸೈನ್ಯಗಳು, ಆಗರದಲ್ಲಿ ಪ್ರಾರಂಭಿಸಿದ ಏರೋಪ್ಲೇನ್ ಕಂಪನಿ, ಇದೇ ರೀತಿ, ಯುದ್ಧಕ್ಕಾಗಿ ಪ್ರಾರಂಭಿಸಿದ ಅನೇಕ ಕೈಗಾರಿಕೆಗಳು ನರಸಿಂಹಮೂರ್ತಿಯ ಮೇಲೆ ಅಲ್ಲದೆ, ಇಡೀ ಬೆಂಗಳೂರಿನ ಜನತೆ ಮೇಲೆ ಪರಿಣಾಮವನ್ನುಂಟುಮಾಡಿತ್ತು. ಮಹಾತ್ಮಾ ಗಾಂಧಿ

ಯವರ ಅಹಿಂಸಾತತ್ವ, ಅವರ ಸರ್ವಧರ್ಮ ಸಂಸ್ಕೃತಿಗಳು, ಸ್ವಾತಂತ್ರ್ಯಕ್ಕಾಗಿ ಹೋರಾಟ, ಇವರಿಗೆ ಬಹಳ ಹಿಡಿಸಿ, ಇವರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಭಾರತಕ್ಕೆ ಸ್ವಾತಂತ್ರ್ಯ ಬರುವ ವೇಳೆಗೆ ನರಸಿಂಹ ಮೂರ್ತಿಯ ವ್ಯಕ್ತಿತ್ವ ಒಂದು ಪಕ್ವಕ್ಕೆ ಬಂದಿತ್ತು. ಗುಡಿಯಲ್ಲಿನ ಕೆಲಸ, ಬೆಂಗಳೂರಿನ ಎಲ್ಲಾ ಕಡೆಯಿಂದಲೂ ಬರುತ್ತಿದ್ದ ಪೌರೋಹಿತ್ಯದ ಕರೆಗಳನ್ನು ಒಪ್ಪಿಕೊಂಡು ತಿರುಗಲು ಆಗಿನ ಕಾಲದ ಬಸ್ಸುಗಳ ಸೌಕರ್ಯ ಸಾಕಾಗದೆ, ಇವರು ಒಂದು ಮೋಟಾರ್ ಸೈಕಲ್ ಕೊಂಡು, ಅದರ ಸೀಟಿಗೆ ಜಿಂಕೆ ಚರ್ಮ ಹೊದ್ದಿಸಿ, ಬೆಂಗಳೂರಿನ ಮೊದಲನೆ ಮೋಟಾರ್ ಸೈಕಲ್ ಪುರೋಹಿತರಾದರು. ಜೀವನದ ರಥ ಅತಿ ವಿಜೃಂಭಣೆಯಿಂದ ಉರಳಿದರೂ ಅವರಿಗೂ ಲಕ್ಷ್ಮಮ್ಮನವರಿಗೂ ಒಂದು ದೊಡ್ಡ ಕೊರತೆ ಯಿತ್ತು. ಮದುವೆಯಾಗಿ ಬಹಳ ವರ್ಷಗಳಾ-ಗಿದ್ದರೂ ಮಕ್ಕಳಾಗಲಿಲ್ಲವೆಂಬ ಕೊರತೆ ಇವರಿ ಗಿಂತಲೂ ಹೆಚ್ಚು ಲಕ್ಷ್ಮಮ್ಮನವರನ್ನು ಕಾಡಿಸ ಲಾರಂಭಿಸಿತು. ಒಂದು ದಿನ ಹೆಂಡತಿಯ ಕೊರಗನ್ನು ನೋಡಲಾರದೆ, ದೇವಿಯನ್ನು "ಪುತ್ರ ಸಂತಾನ ನೀಡು ತಾಯಿ" ಅಂತ ಬಹಳ ದುಃಖ ದಿಂದ ಪ್ರಾರ್ಥಿಸಿಕೊಂಡು ನರಸಿಂಹಮೂರ್ತಿ, ಆ ದಿನ ಪೂಜೆ ಮಾಡಿ, ಗುಡಿಗೆ ಬೀಗ ಹಾಕುತ್ತಿ ದ್ದಾಗ, ಬಾಗಿಲ ಬಳಿ ಪೇಪರ್‌ನಲ್ಲಿ ಸುತ್ತಿ ಇಟ್ಟಿದ್ದ ಒಂದು ವಸ್ತು ಕಾಣಿಸಿತು. ಅದನ್ನು ಬಿಚ್ಚಿ ನೋಡಿದಾಗ ಒಳಗೆ ಕಟ್ಟು ಹಾಕಿದ ಕೊದಂಡ ರಾಮನ ಪಟ, ಹಳೆಯ ಕಾಲದ್ದು. ಚಿನ್ನ, ಬೆಳ್ಳಿ ಮುಲಾಮಿನಲ್ಲಿ ಬಿಡಿಸಿದ ಚಿತ್ರ. ಇದನ್ನು ನೋಡಿ ಆಶ್ಚರ್ಯಪಡುತ್ತಾ, ಬಹಳ ಭಕ್ತಿಯಿಂದ ಮನೆಗೆ ತಂದು ಪೂಜೆಗೆ ಇಟ್ಟರು. ಇದಾದ ಒಂದು ತಿಂಗಳಲ್ಲೇ ಲಕ್ಷ್ಮಮ್ಮ ಗರ್ಭವತಿ ಯಾದಾಗ, ಇವರಿಬ್ಬರಿಗೆ ಆದ ಆನಂದ ವರ್ಣನಾ-ತೀತ. ಕೊದಂಡರಾಮನೇ ಅಮ್ಮನ ಅನುಗ್ರಹ



ದಿಂದ ಜನಿಸಲಿದ್ದಾನೆಂದು ಬಹಳ ಸಂತೋಷ ಪಟ್ಟರು. ಲಕ್ಷ್ಮಮ್ಮ ಗಂಡು ಮಗುವನ್ನು ಪ್ರಸವಿಸಿದಾಗ ಅದಕ್ಕೆ ಅವರ ಅಭಿಲಾಷೆಯಂತೆಯೇ ಅಲ್ಲದೆ, ನಾಮ ನಕ್ಷತ್ರ ಪುನರ್ವಸು ಎರಡನೇ ಪಾದವಾದುದರಿಂದ ಕೊದಂಡ ರಾಮಯ್ಯ ಎಂದು ಹೆಸರಿಟ್ಟರು. ದೇವಿಯ ಪ್ರಸಾದವೆಂದು ಬಹಳ ಅಕ್ಕರೆಯಿಂದ ಬೆಳೆಸಿದರು. ಕೋದಂಡಿಗೆ ತಂದೆಯ ವೃತ್ತಿಯ ಕಡೆ ಏನೇ ಮಾಡಿದರೂ ಗಮನ ಹೋಗಲಿಲ್ಲ. ಇವನಿಗೆ ವೇದ ಪಾಠ ಹೇಳುತ್ತಾ ಇರುವಾಗ, ಯಾವಾಗಲೋ ಯಾವುದೋ ಒಂದು ನೆಪದಿಂದ ಅಲ್ಲಿಂದ ನುಸುಳಿ ಕೊಂಡು ಸುತ್ತಮುತ್ತಲಿನ ಹುಡುಗರ ತಂಡ ಕಟ್ಟಿಕೊಂಡು ಓಡಿಹೋಗುತ್ತಿದ್ದ. ಯಾವಾಗಲೂ, ಅಲ್ಲಿನ ಕ್ರಿಶ್ಚಿಯನ್ ಮಕ್ಕಳೊಡನೆ ಅವನ ಸ್ನೇಹ. ಅಲ್ಲಿ ಆಂಗ್ಲೋ–ಇಂಡಿಯನ್ ಮಕ್ಕಳ ಸ್ನೇಹ ಮಾಡಿ ಇವನಿಗೆ ಗಿಟಾರ್, ಪಾಪ್ ಸಂಗೀತದಲ್ಲಿ ಅಭಿರುಚಿ ಬೆಳೆಯಿತೇ ಹೊರತು ಶಾಸ್ತ್ರ ಪುರಾಣಗಳು ದೂರವಾದುವು. ಆಚೆ ಹೇಗೇ ಇದ್ದರೂ, ಮನೆಯಲ್ಲಿ ತಾಯಿಯ ಮನ ನೋಯಿಸದೆ, ಅವರ ಮಡಿಯನ್ನು ಇವನು ಗೌರವಿಸಿ, ಅವರಿಗೆ ಹೊಂದುವಂತೆ ವರ್ತಿಸಿ, ಮನೆಯಲ್ಲಿ ತಂದೆತಾಯಿಗಳಿಗೆ ಬಹಳ ಆನಂದ ಕೊಡುತ್ತಿದ್ದ. ದೇವಿಯ ಮೇಲೆ ಹೇಗೋ ಇವನಿಗೆ ಭಕ್ತಿ ತಗಲಿಕೊಂಡಿತ್ತು. ಅದನ್ನು ಅವನು ಜನಪ್ರೇಮದ ಮೂಲಕ ತೋರಿಸುತ್ತಿದ್ದ. ಯಾರ ಮನವನ್ನೂ ನೋಯಿಸದೆ ಅದರಲ್ಲೂ ತನ್ನದೇ ಆದ ರೀತಿಯಲ್ಲಿ ಹೋಗುತ್ತಿದ್ದ. ಕೊದಂಡಿಯನ್ನು ಕಂಡರೆ ಎಲ್ಲರಿಗೂ ಮೆಚ್ಚುಗೆಯೇ. ನರಸಿಂಹಮೂರ್ತಿ ಅವನಿಗೆ ಪೌರೋಹಿತ್ಯದಲ್ಲಿ ತರಬೇತಿಯನ್ನು ಕೊಡಲು ಎಷ್ಟು ಪ್ರಯತ್ನಪಟ್ಟರೂ ಆಗಲಿಲ್ಲ. ತಾಯಿ ಕೊಟ್ಟ ಪ್ರಸಾದ, ಅವಳೇ ನೋಡಿಕೊಳ್ಳಲಿ ಅಂತ ತಾವೂ ಸುಮ್ಮನಾದರು. ಲಕ್ಷ್ಮಮ್ಮನಿಗೆ ಇವನ ರೀತಿ ಮನಸ್ಸಿಗೆ ಹಿಡಿಸದಿದ್ದರೂ ಮುದ್ದಿನ ಮಗನಾಗಿಯೇ ಬೆಳೆಸಿದರು. ಇಷ್ಟು ಕಟ್ಟುನಿಟ್ಟಾದ ವೈದಿಕರ ಮನೆಯಲ್ಲಿ ಹುಟ್ಟಿ ಬೆಳೆದ ಹುಡುಗನ ಮಾನವ ಪ್ರೇಮ ಜಾತಿಮತಗಳ ಎಲ್ಲೆ ಮೀರಿತ್ತು. ಇವನು ಕಾನ್ವೆಂಟಿನಲ್ಲಿ ಓದಿ ಸೈಂಟ್ ಜೋಸೆಫ್ಸ್‌ಗೆ ಸೇರಿ ಬಿ. ಎ. ಪಾಸು ಮಾಡಿದ. ಕಾಲೇಜಿನಲ್ಲಿರಬೇಕಾದರೆ ಬ್ರಿಟಿಷ್ ಕೌನ್ಸಿಲ್ ಲೈಬ್ರರಿಗಳಲ್ಲಿ ನೋಡಿ ಓದಿ, ಹೇಗೋ ಇವನ ಮನಸ್ಸು ಹೇರ್ ಸ್ಟೈಲ್ ಕಡೆ ತಿರುಗಿತ್ತು. ವಿದಾಲ್ ಸಸೂನ್ ವಿಷಯ ಓದಿದ್ದಾದ ಮೇಲೆ ಅವನ ಹಾಗೇ ತಾನೂ ಆಗಬೇಕೆಂಬ ಹಂಬಲ ಬೆಳೆಯಿತು. ಇವನ ಹಂಬಲವನ್ನು ತಂದೆತಾಯಿ ಬಹಳ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಆದರೆ ಬಿ. ಎ. ಆದ ಮೇಲೆ ತಾನೊಂದು ಹೇರ್ ಡ್ರೆಸ್ಸಿಂಗ್ ಸಲೂನ್ ತೆಗೀತೀನಿ ಅಂದಾಗ ಇಬ್ಬರ ಎದೆ ಧಸಕ್ಕೆಂದಿತು. ಲಕ್ಷಮ್ಮ ಅತ್ತು ಕರೆದು, "ಅದು ನಮಗೆ ಹೊಂದೋ ಕೆಲ್ಸವಲ್ಲ ಮಗು" ಅಂತ ಎಷ್ಟು ಗೋಳಿಟ್ಟರೂ ಅವನನ್ನು ಬಗ್ಗಿಸಲಾಗಲಿಲ್ಲ. ತಂದೆ ಮೊದಲನೆಯ ಸಾರಿ ಅವನ ಮೇಲೆ ಕೋಪಮಾಡಿಕೊಂಡು ಗದರಿ ಹೇಳಿದರು. ಅದೂ ನಡೆಯಲಿಲ್ಲ. ಕೊನೆಗೆ ಕೋದಂಡಿಗೆ ದೇವಿಯ ಮೇಲಿದ್ದ ಭಕ್ತಿಯನ್ನು ಉಪಯೋಗಿಸಬೇಕಾಯಿತು. ದೇವಿ ಒಪ್ಪಿದರೆ ನಿನ್ನಿಷ್ಟದಂತೆಯೇ ಆಗಲಿ ಎಂದು ಅವನನ್ನೂ ಗುಡಿಗೆ ಕರೆದುಕೊಂಡು ಹೋದರು. ಅಲ್ಲಿ "ತಾಯಿ ಅವನು ಮಾಡಬೇಕೂಂತ ಇರುವ ಕೆಲಸ ನಿನಗೆ ಒಪ್ಪಿಗೆಯಾದರೆ, ಬಲಗಡೆಯಲ್ಲಿ ಹೂ ಕೊಡು. ಆಗ ಅವನಿಚ್ಛೆಯಂತೆಯೇ ಹೋಗಲಿ..." ಅಂತ ಪ್ರಾರ್ಥನೆ ಮಾಡಿಕೊಂಡು ಆರತಿ ಮಾಡಿದರು. ಕೋದಂಡಿಯೂ ಬಹಳ ಕಾತರದಿಂದ ಬೇಡಿಕೊಂಡ. "ಪ್ರಸಾದ ಕೊಟ್ಟು ನಾನು ಮಾಡೋ ನೆಮ್ಮದಿಯನ್ನು ಉಳಿಸು ತಾಯೀ" ಅಂತ. ಬಲಗಡೆ ಹೂವಿನ ಪ್ರಸಾದ ಬಿದ್ದಾಗ ನರಸಿಂಹಮೂರ್ತಿ ಒಪ್ಪಿಕೊಳ್ಳಲೇಬೇಕಾಯಿತು. ಕೊದಂಡಿ ಬೊಂಬಾಯಿಗೆ ಹೋಗಿ ವೀಣಾ ಪರೇರಾ ಬಳಿ ಎರಡು ವರ್ಷ ಟ್ರೈನಿಂಗ್ ಪಡೆದು

ವರ್ಷ ಕೆಲಸಮಾಡಿ ಬೆಂಗಳೂರಿಗೆ ಬಂದು ಒಂದು ಸಣ್ಣ ಸಲೂನ್ ತೆರೆದ. ಇವನ ಕರ್ತವ್ಯನಿಷ್ಠೆ, ಕಲೆ, ಮಾನವ ಪ್ರೇಮ ನೋಡಿ ಒಬ್ಬ ಸಾಹುಕಾರ ಬಬೂತ್‌ಮಲ್ ಸೇಟ್ ಇವನಿಗೆ ಹಣ ಸಹಾಯ ಮಾಡಿದಾಗ ಇವನು 'ಕೋದನ್ ಸೂಸಲ್' ತೆಗೆದ. ದಿನೇ ದಿನೇ ಅಭಿವೃದ್ಧಿ ಹೊಂದಿ ಇವನು ಸೇಟ್ ಕೊಟ್ಟ ಹಣ ತ್ವರಿತದಲ್ಲೇ ವಾಪಸ್ಸು ಕೊಟ್ಟು, ಸಾಲ ತೀರಿಸಿದ. ಒಳಗಡೆ ಹಾಕಿದ ಬಬೂತ್‌ಮಲ್ ಅವರ ಫೋಟೋ ತೋರಿಸಿ "ಇವರೇ ನನ್ನ ಅನ್ನ-ದಾತರು" ಅಂದ.

ಪುರೋಹಿತನಾಗಬೇಕಾಗಿದ್ದವನು ಕ್ಷೌರಿಕನಾಗಿ, ಮನೆಯಲ್ಲಿಯೂ ಮತ್ತೆ ಆಚೆಯೂ ಒಂದು ರೀತಿಯ ಸಾಮರಸ್ಯವನ್ನು ಬೆಳೆಸಿ ನಡೆಸಿಕೊಂಡು ಹೋಗುತ್ತಿರುವ, ಇವನ ಚಾಕಚಕ್ಯವನ್ನು ನೋಡಿ ಸಂತೋಷಪಟ್ಟೆ.

"ನಿಮ್ಮ ತಂದೆ ನಿಮ್ಮ ಸ್ಟುಡಿಯೋ ನೋಡಿ-ದ್ದಾರಾ?" ಅಂದೆ.

"ಒಂದು ದಿನ ಇಲ್ಲಿಗೆ ಕರೆದುಕೊಂಡು ಬಂದೆ. ನೋಡಿ ಆಶ್ಚರ್ಯಪಟ್ಟರು. ಅಲ್ಸೂರಿನ ರಂಗ-ಪ್ಪನ ಅಂಗಡಿ ಇದ್ದ ಹಾಗೆ ಇರುತ್ತೆ ಅಂದುಕೊಂಡಿದ್ದೆ. ಬಹಳ ಚೆನ್ನಾಗಿದೆ ಕೋದಂಡ ಅಂತ ಮೆಚ್ಚಿಕೊಂಡರು. ನಮ್ಮಲ್ಲಿರುವ ಉಪಕರಣ-ಗಳನ್ನು ನೋಡಿ ಅವರಿಗೆ ಬಹಳ ಆಶ್ಚರ್ಯವಾಯಿತು. ನಮ್ಮ ಅಮ್ಮನ್ನ ಒಂದು ದಿನ ಕರೆದೆ. "ಮುತ್ತೈದೆಯರು ಕ್ಷೌರಿಕನ ಅಂಗಡಿಗೆ ಕಾಲಿಡ್ತಾರೇನೋ ಮಗು. ನೀನು ಹಾಗೆಲ್ಲ ನನ್ನ ಕರೀಬೇಡ' ಅಂತ ಬೈದರು" ಅಂದ ನಗುತ್ತಾ.

"ನಿಮ್ಮ ಹೆಂಡತಿ ಏನಂತಾರೆ?" ಅಂತ ಕೇಳಿದೆ.

"ನನಗಿನ್ನೂ ಮದುವೆಯಾಗಿಲ್ಲ. ನನಗೆ ಜಾತಿ-ಯಲ್ಲಿ ನಂಬಿಕೆಯಿಲ್ಲ. ನನಗೆ ಹೆಂಡತಿಯಾಗುವವಳು, ಮನೆಯಲ್ಲಿ ಅಪ್ಪನಿಗೆ ಹೊಂದಿಕೊಂಡಿರಬೇಕು, ಅಲ್ಲದೆ ನನ್ನ ಕೆಲಸಕ್ಕೆ ಅನುಕೂಲವಾಗಿರಬೇಕು. ನನ್ನ ಮದುವೆ ಒಂದು ದೊಡ್ಡ ಸಮಸ್ಯೆಯಾಗಿದೆ. ಇಲ್ಲಿಯವರೆವಿಗೂ ಸಹಾಯ ಮಾಡಿದ ದೇವಿ, ಎಲ್ಲರಿಗೂ ಅನುಕೂಲವಾಗುವಂತೆ ಪರಿಹರಿಸುತ್ತಾಳೆಂತ ನನಗೆ ನಂಬಿಕೆಯಿದೆ" ಅಂದ.

ನಾನು ಚಿಕ್ಕವನಾಗಿದ್ದಾಗ ಕ್ಷೌರ ಮಾಡಿಸಿಕೊಂಡು ಬಂದರೆ, ಹಿಂದಿನ ಬಾಗಿಲಿನಿಂದ ಹೋಗಿ ಹಸುವಿನ ಕೊಟ್ಟಿಗೆಯ ಬಳಿ ನಿಲ್ಲಬೇಕಾಗಿತ್ತು. ಆಗ ಕೆಂಪಾನೋ, ಚೆನ್ನಾನೋ, ಒಂದು ಬಕೆಟ್ ಬಿಸಿ ನೀರನ್ನು ತಂದು ತಲೆ ಮೇಲೆ ಸುರಿದ ಮೇಲೆ ನೀರಿನ ಮನೆಗೆ ಹೋಗುವುದಕ್ಕೆ ಅಮ್ಮ ಅನುಮತಿ ಕೊಡುತ್ತಾ ಇದ್ದದ್ದು. ನಾನು ಕಾಲೇಜ್‌ಗೆ ಬಂದ ಮೇಲೆ ಆ ಅಭ್ಯಾಸವನ್ನು ಬಲಾತ್ಕಾರವಾಗಿ ತಪ್ಪಿಸಿದೆ. ಇವನು ಪ್ರತಿ ದಿನ ರಾತ್ರಿ ಮನೆಗೆ ಹೋದಾಗ ತಂದೆ ತಾಯಿಗಳ ಮಡಿ ಕೆಡಿಸುವುದಿಲ್ಲವೇ ಅಂತ ಅನುಮಾನ ಬಂತು, ಕೇಳಿದೆ. "ದಯವಿಟ್ಟು, ನನ್ನೊಡನೆ ಮನೆಗೆ ಬನ್ನಿ. ನಿಮಗೇ ಗೊತ್ತಾಗುತ್ತದೆ. ನೀವು ಇಲ್ಲಿ ಬರುವ ವಿಷಯ ನಮ್ಮ ತಂದೆಗೆ ತಿಳಿಸಿದೆ. ಮನೆಗೆ ಕರೆದುಕೊಂಡು ಬಾ ಅಂದರು. ಅವರು ನಿಮ್ಮ ವಿಷಯ ಪತ್ರಿಕೆಗಳಲ್ಲಿ ಓದಿದ್ದಾರೆ. ಬರ್ತೀರಾ ಮನೆಗೆ, ನಿಮಗೆ ಸಮಯವಿದ್ದರೆ ಈಗಲೇ ಹೋಗೋಣ. ನಮ್ಮ ತಂದೇನೂ ಬಹಳ ಓದಿದವರು. ನಿಮಗೆ ಬಹಳ ಇಷ್ಟವಾಗುತ್ತಾರೆ" ಅಂದ.

ರಾಮಚಂದ್ರೂನ ಕೇಳಿ ಸರಿ ಅಂದೆ. "ಹೇಗೂ ಕೆಲವು ನಿಮಿಷಗಳಲ್ಲಿ ಸ್ಟುಡಿಯೋ ಮುಚ್ಚಬೇಕು. ಇನ್ನೇನು ಹೋಗೋಣ" ಅಂದು ಎಲ್ಲ ಕೆಲಸದವರೂ ಹೊರಟು ಹೋದ ಮೇಲೆ ಕೋದನ್ ಒಂದು ಸಣ್ಣ ಕೊಟಡಿಗೆ ಹೋಗಿ ಬಟ್ಟೆ ಬದಲಾಯಿಸಿ ಆಚೆ ಬಂದಾಗ, ಬಿಳಿ ಜುಬ್ಬ ಪೈಜಾಮ ಹಾಕಿಕೊಂಡು, ಚಪ್ಪಲಿ ಮೆಟ್ಟಿದ್ದ. ಅವನ ಹೊಸ ವೇಷವನ್ನು ನಾನು ಪ್ರಶ್ನಾರ್ಥಕವಾಗಿ ನೋಡಿದೆ... "ಮನೆಗೆ ಬನ್ನಿ ಅರ್ಥವಾಗುತ್ತದೆ" ಅಂದ. ಅವನ ಮೋಟಾರ್ ಸೈಕಲ್ ಹಿಂಬಾಲಿಸಿ ಅಲ್ಸೂರಿಗೆ ಹೋದೆವು. ದೊಡ್ಡ ಕಾಂಪೌಂಡಿನಲ್ಲಿ ಸಂಪಿಗೆ, ಜಾಜಿ, ಸೀಬೆ, ತೆಂಗಿನ ಮರಗಳು ಇದ್ದು, ಹಿಂಭಾಗದಲ್ಲಿ

ಒಂದು ಸಣ್ಣ ಮನೆ ಇತ್ತು. ಕೋದನ್ ಗೇಟ್ ತೆಗೆದು ಒಳಕ್ಕೆ ಹೋಗುವಷ್ಟರಲ್ಲಿ, ಇವನ ತಾಯಿ ಅಂತ ಕಾಣುತ್ತೆ. ಒಂದು ಬಕೆಟ್ ಮತ್ತು ಚೆಂಬು ತೆಗೆದುಕೊಂಡು ಬಟ್ಟೆ ಒಗೆಯುವ ಬಂಡೆ ಬಳಿ ಬಂದರು. ಕೋದನ್ ಮೋಟಾರ್ ಸೈಕಲ್ ಪಾರ್ಕ್ ಮಾಡಿ ಚಪ್ಪಲಿ ಬಿಟ್ಟು ಬಚ್ಚಲಿನಲ್ಲಿ ಬಟ್ಟೆ ಸಹಿತ ಕುಳಿತುಕೊಂಡ. ತಾಯಿ ಅವನ ಮೇಲೆ ಬಕೆಟಿನ ನೀರು ಸುರಿದರು. ಅವನು ಮನೆಯ ಹಿಂಭಾಗಕ್ಕೆ ಹೋದ. ಅಷ್ಟರಲ್ಲಿ ಅವನ ತಂದೆ ಆಚೆ ಬಂದರು. ಇವರಲ್ಲಿದ್ದ ವರ್ಚಸ್ಸನ್ನು ನೋಡಿದ ಕೂಡಲೇ ನನ್ನ ಮನಸ್ಸು ಅವರಿಗೆ ಗೌರವ ಸಲ್ಲಿಸಿತು. ಆಚೆಗೆ ಕುರ್ಚಿ ತರಿಸಿ ಕೂರಿಸಿ ನಮ್ಮನ್ನು ಮಾತನಾಡಿಸಿದರು. ಅವರ ಮಾತಿನಲ್ಲಿ ಅವರ ಪಾಂಡಿತ್ಯದ ಆಳ ಅರಿವಾಯಿತು.

"ನಿಮ್ಮ ಮಗ ಈಗ ಮಾಡುತ್ತಾ ಇರುವ ಕೆಲಸ ನಿಮಗೆ ಒಪ್ಪಿಗೆಯಾಗಿದೆಯೇ?"

"ಮಹಾತಾಯಿ ಒಪ್ಪಿದ ಮೇಲೆ ಅವಳ ಇಚ್ಛೆಗೆ ವಿರುದ್ಧವಾಗಿ ಹೋಗುವುದಕ್ಕೆ ನಾವು ಯಾರು!" ಅಂತ ಹೇಳಿ, "ಈಗ ನನಗೆ ಮಾನವ ಜಾತಿ ಒಂದಾಗಿ ಕಾಣಿಸುತ್ತಿದೆ. ಮೊದಲು ಕಾಣಿಸುತ್ತಿದ್ದ ಜಾತಿ ಮತ ಭೇದಗಳು ಈಗ ನನಗೆ ಗೋಚರಿಸುತ್ತಿಲ್ಲ... ಈ ಮನೋಧರ್ಮವನ್ನು. ನನ್ನ ಮಗನ ಮೂಲಕ ನನಗೆ ಮಹಾತಾಯಿ ಕೊಟ್ಟಿದ್ದಾಳೆ. ಇದಕ್ಕಿಂತಲೂ ನನಗೆ ಇನ್ನೇನು ಬೇಕು? ಈಗ ನಿಮ್ಮನ್ನು ಒಳಗೆ ಕರೆದುಕೊಂಡು ಹೋಗಿ ಆದರಿಸಬೇಕು ಅಂತ ನನ್ನ ಅಭಿಲಾಷೆ. ಆದರೆ ನೀವು ನನ್ನ ಮಗನ ಅಂಗಡಿಯಿಂದ ಬಂದಿದ್ದೀರಿ. ಒಳಗೆ ಬಂದರೆ ನನ್ನ ಹೆಂಡತಿಯ ಮನ ನೋಯುತ್ತೆ. ಅವಳಿಗೂ ಮಾನವ ಜಾತಿ ಒಂದು ಅಂತ ಮಹಾತಾಯಿ ತೋರಿಸಿದರೆ ನನ್ನ ಮಗನಿಗೆ ಬೇಕಾದ ಹೆಣ್ಣನ್ನು ತಂದು ಮದುವೆ ಮಾಡಿ ನಾವು ಜಡೇಹಳ್ಳಿಗೆ ಸೇರಿಕೊಳ್ಳೋಣಾಂತ. ಆದರೆ ಇವೆಲ್ಲ ಮಹಾತಾಯಿಯ ಇಚ್ಛೆ. ಅವಳ ಸಂಕಲ್ಪದಂತೆ ನಡೆಬೇಕಲ್ಲವೇ..." ಅವರ ಮಾತು ಕೇಳಿ, ಇಂತಹ ಮಹಾನುಭಾವರೂ ಇದ್ದಾರಲ್ಲಾ ಅಂತ ನನಗೆ ಬಹಳ ಹರ್ಷವಾಯಿತು.

"ನಾನು ನನ್ನ ಜೀವನದಲ್ಲಿ ನೋಡಿರುವ ಬ್ರಾಹ್ಮಣರ ಸಂಖ್ಯೆಯನ್ನು ಕೈಯಲ್ಲಿ ಎಣಿಸಬಹುದು. ನಿಮ್ಮನ್ನು..." ಅಷ್ಟರಲ್ಲಿ ರಾಮಚಂದ್ರು ಬಾಯಿ ತೆರೆದು "ಏನು ಸಾರ್ ಹೀಗೆ ಅನ್‌ತೀರಾ!" ಅಂದ. ನರಸಿಂಹಮೂರ್ತಿಗಳು "ನಿಜ, ನಿಮ್ಮ ಮಾತು ನಿಜ. ಬ್ರಹ್ಮಕಾರ್ಯ ಮಾಡುವವರು ಬ್ರಾಹ್ಮಣರು. ನೀವಂದಂತೆ ನಾನೂ ಬಹಳ ಕೆಲವೇ ಜನ ಬ್ರಾಹ್ಮಣರನ್ನು ನೋಡಿರುವುದು. ಆದರೂ ನಮಗೆ ಬೇಕಾಗಿರುವುದು ನನ್ನ ಮಗನ ರೀತಿ, ಜನಗಳು ತಮ್ಮ ತಮ್ಮ ವೃತ್ತಿಯಲ್ಲಿ ದೇವರನ್ನು ಕಂಡುಕೊಂಡರೆ ನಮಗೆ ಈ ವರ್ಣಾಶ್ರಮಗಳು ಏಕೆ ಬೇಕು..." ಅಂದರು. ಅಷ್ಟರಲ್ಲಿ ಕೋದನ್, ಒಳಗೆ ಸ್ನಾನ ಮಾಡಿ, ಪಪ್ಪ ಪಂಚೆಯನ್ನುಟ್ಟು, ಬಿಳಿ ಷರಟು ತೊಟ್ಟು, ಹಣೆಗೆ ವಿಭೂತಿ ಹಚ್ಚಿ, ಮಧ್ಯೆ ಕುಂಕುಮ ಇಟ್ಟುಕೊಂಡು ಬಂದು ನಮ್ಮನ್ನು ಸೇರಿದ. ತಂದೆ ಬಹಳ ಮೆಚ್ಚುಗೆಯಿಂದ ಮಗನ ಕಡೆ ನೋಡಿದರು.

ಈ ಕೋದಂಡಿಯೇ ಒಂದು ಗಂಟೆಯ ಹಿಂದೆ ಕೋದನ್ ಸೂಸಲ್ ಆಗಿದ್ದವನು ಅನ್ನಿಸಿತು. ಆ ಒಸ್ಸೆಲಿಯಲ್ಲಿ ಕೋದನ್ ಸೂಸಲ್ ಆಗಿ ಹೊಂದಿಕೊಂಡಿದ್ದವನು ಈಗ ಕೋದಂಡಿಯಾಗಿ ಈ ಒಸ್ಸೆಲಿಯಲ್ಲಿ ಹಿತವಾಗಿ ಹೊಂದಿಕೊಂಡಿದ್ದ. ಇವರಿಬ್ಬರನ್ನೂ ನೋಡಿ ನನ್ನ ಹೃದಯ ತುಂಬಿಬಂದಿತು. ಅವರಿಗೆ ನಮಸ್ಕಾರಗಳನ್ನು ತಿಳಿಸಿ, ಬಹಳ ಉಲ್ಲಾಸದಿಂದ ಕಾರಿನಲ್ಲಿ ಕುಳಿತು, "ರಾಮಚಂದ್ರು, ಬಹಳ ಥ್ಯಾಂಕ್ಸ್, ಇಬ್ಬರು ನಿಜವಾದ ಮನುಷ್ಯರನ್ನು ಪರಿಚಯ ಮಾಡಿಕೊಟ್ಟದ್ದಕ್ಕೆ" ಅಂದೆ. ಅರ್ಥವಾಗದೆ, ಅವನು ದಂಗಾಗಿ ಬಾಯಿ ತೆರೆದುಬಿಟ್ಟುಕೊಂಡು ನನ್ನನ್ನು ನೋಡುತ್ತಾ ಇದ್ದಾಗಲೇ ಕಾರು ಕಬ್ಬನ್ ಪೇಟೆ ಕಡೆ ಹೊರಳಿತು...

ಬೀದಿಯ ಮಾತು-ಹಾದಿಯ ಮಾತು

ವಿಠ್ಠಲ ಕುಲಕರ್ಣಿ

ಹಾಯ್ದಾಡದೆ ಹಾದಿಯಿಲ್ಲ' ಎಂಬ ಮಾತೊಂದಿದೆ. 'ಬಿದ್ದೇಳದ ಬೀದಿಯಿಲ್ಲ' ಎಂಬ ಮಾತು ರೂಢಿಯಾಗಿಲ್ಲ. ಆದರೂ ಬೀದಿಗೆ ಬಿದ್ದ ಸಂಗತಿಗಳು–ವಿಷಯಗಳು. ವ್ಯಕ್ತಿಗಳು–ಬೆಳಕಿಗೆ ಬಂದವುಗಳು ಎಂದೆನಿಸಿಕೊಂಡಿವೆ. ಬೆಳಕಿಗೆ ಬರುವದೆಂದರೆ ಯಾವಾಗಲೂ ಕೀರ್ತಿದಾಯಕ ವಿಷಯವಾಗಿರಲಿಕ್ಕಿಲ್ಲ; ಒಮ್ಮೊಮ್ಮೆ ಅಪಕೀರ್ತಿ ತರುವ ಸಂಗತಿಗಳೂ ಬೀದಿಗೆ ಬರಬಹುದಾಗಿದೆ. ಹಾದಿಗೆ ಬರುವುದರಲ್ಲಿ ಮಾತ್ರ ಯಾವಾಗಲೂ ಸದ್ಭಾವನೆಯೇ ಕೂಡಿದೆ. 'ಹಾದಿಯನ್ನು ಬಿಟ್ಟಿಲ್ಲ' ಎಂಬುದು ಸನ್ಮಾರ್ಗದಲ್ಲಿದ್ದಾನೆಂದೇ ಸೂಚಿಸುತ್ತದೆ. ಸದಾಚಾರ-ಸದ್ಭಾವನೆಗಳು 'ಹಾದಿ'ಯನ್ನು ಬಿಟ್ಟಿಲ್ಲವಾದರೂ ಗೌರವ ಸೂಚಕ ಹೆಸರುಗಳಲ್ಲಿ ಹಾದಿಯನ್ನು ಸೇರಿಸುವ ರೂಢಿ ನಮ್ಮಲ್ಲಿಲ್ಲ. 'ವಿಧಾನ ಬೀದಿ ' ಎನ್ನುತ್ತೇವೆ. 'ಅಂಬೇಡಕರ ಬೀದಿ, ಎನ್ನುತ್ತೇವೆ. 'ಅಂಬೇಡಕರ ಹಾದಿ' ಎನ್ನುವದಿಲ್ಲ. ಆದರೂ ಹಿರಿಯರು ಹಾಕಿಕೊಟ್ಟ ಹಾದಿ ಗೌರವವನ್ನೇ ಸೂಚಿಸುತ್ತದೆ. ಬೀದಿಗೆ ಬಂದದ್ದು–ಬಂದವರು ಹಾದಿಗೂ ಬಂದೀತು–ಬಂದಾರು ಎಂಬ ನಂಬಿಕೆಯಲ್ಲಿಯೇ ನಮ್ಮ ಸಾಮಾಜಿಕ ಪ್ರಜ್ಞೆ ಬೆಳೆಯುತ್ತಿದೆ.

ಬೀದಿಗೆ ಬಂದ–ಬರುತ್ತಿರುವ ವಿಷಯಗಳು ಅನೇಕ. ಬೀದಿ ನಮ್ಮ ಸುಸಂಸ್ಕೃತಿಯ-ನಾಗರಿಕತೆಯ ಲಕ್ಷಣವಾಗಿದೆ. ನಗರದ ಬೀದಿಗಳು-ನಾಗರಿಕತೆಯ ಮಟ್ಟವನ್ನು ತೋರಿಸುತ್ತವಂತೆ. ಬೀದಿಗಳಲ್ಲಿ ಕಾಣುವ ಕೊಳಚೆ–ನಮ್ಮ ನೈರ್ಮಲ್ಯಕ್ಕೆ ಹಿಡಿದ ಕನ್ನಡಿಯಾಗುತ್ತದೆ. ಸುಂದರ-ಬಹು ಅಂತಸ್ತಿನ ಮನೆಗಳಿರಬಹುದು; ಅಚ್ಚುಕಟ್ಟಾದ ನಿವೇಶನಗಳು ಇರಬಹುದು; ಆದರೆ ಅಲ್ಲಿಯ ಬೀದಿಗಳಲ್ಲಿರುವ ಹೊಲಸು-ಅಲ್ಲಿಯ ಜನರ ಅಂತಸ್ತನ್ನೂ-ಅಚ್ಚುಕಟ್ಟುತನವನ್ನೂ ಎತ್ತಿ ತೋರಿಸೀತು! ಅದೆಷ್ಟೋ ಜನರ ಸ್ವಚ್ಛತೆಯ ಕಲ್ಪನೆಯೂ ವಿಚಿತ್ರ. ಮನೆಯಲ್ಲಿಯ ಕಸ–ಬೇಡವಾದ ವಸ್ತುಗಳನ್ನೆಲ್ಲ ಬೀದಿಗೆ ಎಸೆದು ಬಿಟ್ಟರೆ ಆಯಿತು-ಎನ್ನುತ್ತಾರೆ. ಬೀದಿಯ ಸ್ವಚ್ಛತೆಯ ಹೊಣೆ ತಮ್ಮದಲ್ಲವೆನ್ನುತ್ತಾರೇನೋ! ಬೀದಿಯಲ್ಲಿ ಬಿದ್ದ ವಸ್ತುಗಳನ್ನು ನೋಡಿಯೇ ಹೇಳಬಹುದು—ಯಾರ ಮನೆಯಲ್ಲಿ ಎಂತಹ ದಂತ ಮಂಜನ (Tooth paste) ಉಪಯೋಗವಾಗುತ್ತಿದೆ ಎಂದು. ಯಾರ ಮನೆ ಸರ್ವ ವಿದ್ಯುತ್ ಗೃಹವೆನಿಸಿದೆಯೆಂಬುದನ್ನೂ ಅಲ್ಲಲ್ಲಿ ಬಿದ್ದಿರುವ ತೆಂಗಿನ ಚಿಪ್ಪುಗಳಿಂದ ಕಾಗದ ಚೂರು

ಗಳಿಂದಲೂ ಗುರುತಿಸಬಹುದು. ಇವುಗಳೆಲ್ಲ ಮೊದಲು ನೀರೊಲೆಗೆ ಆಹುತಿಯಾಗುತ್ತಿದ್ದ ವಲ್ಲವೇ ? ಬೆಂಗಳೂರಿನ 'ಮ್ಯೆನು' (ಮುಖ್ಯ ಬೀದಿ) ಗಳಲ್ಲಿ 'ಕ್ರಾಸು'ಗಳ (ಅಡ್ಡಬೀದಿ) ಮಧ್ಯ ದಲ್ಲಿ ಅವರೆ ಕಾಳಿನ ಸಿಪ್ಪೆಯ ಗುಪ್ಪೆಗೂ ಸಮಾಜದ ಮೂಢನಂಬಿಕೆ ಅಂಟಿದೆಯಂತೆ! ಅಥವಾ ಇದು ಹಸು ಪ್ರೇಮದ ಮಾದರಿಯೋ! ಆದರೂ ಮನೆಗಳಲ್ಲಿಯ ಮಾಲಿನ್ಯ ಬೀದಿಗೆ ಬರದೆ ಜೀವನ ಸುಧಾರಿಸುವದೆಂತು? ಬೀದಿಗೆ ಬಂದಾ- ಗಲೇ ಸಾಮಾಜಿಕ ಸಮಸ್ಯೆ ಉಂಟಾಗುತ್ತ ದಲ್ಲವೇ? ಸಮಸ್ಯೆ ಉಂಟಾದಾಗಲೇ ಪರಿಹಾರದ ಹಾದಿಯನ್ನು ಹುಡುಕಬೇಕಲ್ಲವೆ? ನಗರದ ಬೀದಿ ಗಳನ್ನು ಸ್ವಚ್ಛಗೊಳಿಸುವ ಹೊಸಮಾದರಿಗಳೂ ಬಂದಿವೆ. ತಿಪ್ಪೆ ಎತ್ತುವ ಪರಿಯೇ ಅಗಾಧ ವಾಗಿದೆ. ಅದರಲ್ಲಿಯೂ ಒಂದು ಶಿಸ್ತು ಇದೆ. ನಸುಕಿನಲ್ಲಿಯೇ ಸಾವಿರಾರು ಲಾರಿಗಳು ಬೀದಿ ಬೀದಿಗಳಲ್ಲಿ ಓಡಾಡಿ ನಗರದಲ್ಲಿಯ ಕಸವನ್ನು ಸದ್ದಿಲ್ಲದಂತೆ ಸಂಗ್ರಹಿಸುವ ಪದ್ಧತಿ ಟೋಕಿಯೋ ದಂತಹ ನಗರಗಳಲ್ಲಿದೆಯಂತೆ! ಆ ಎಲ್ಲ ಕಸವನ್ನು ಎತ್ತರದ ಹೊಗೆ ಕೊಳವೆಯಿರುವ ಗೂಡುಗಳಲ್ಲಿ ಸುಡಲಾಗುವದಂತೆ!! ಆ ಶಾಖದಿಂದ ಈಜು- ಗೊಳಕ್ಕೂ ಬಿಸಿನೀರಂತೆ!!!

ಹಿಂದಿನ ಕಾಲದ ಬೀದಿಗಳು ಬಹಳ ಕಿರಿದಾಗಿರು ತ್ತಿದ್ದವು. ಬೀದಿಗಳ ಪ್ರಗತಿಯೇ ನಮ್ಮ ನಾಗರಿ- ಕತೆಯ ಇತಿಹಾಸವನ್ನು ಹೇಳಬಹುದು. ಯಂತ್ರ ವಾಹನಗಳು ಬಂದಂತೆ ಬೀದಿಗಳು ವಿಶಾಲತೆ ಯನ್ನು ಪಡೆಯಲಾರಂಭಿಸಿದವು. ಇಂದು ಬೀದಿ ಗಳು ವಾಹನಗಳಿಗೇ ಹೆಚ್ಚು ಮೀಸಲಾಗಿವೆ. ಜನರ ಸಾಗಾಟಕ್ಕೆ ಕಾಲು ಬೀದಿಗಳು—ಕಾಲಪಥ ಗಳೆನ್ನಬೇಕೇನೋ—ಪ್ರತ್ಯೇಕಗೊಂಡವು. ನಮ್ಮ ಬೀದಿಗಳು ಈಗ ಪಥಗಳೆನಿಸುತ್ತಿವೆ. 'ರಾಜಪಥ' 'ಜನಪಥ'ಗಳೂ ಬಂದಿವೆ. ಆದ್ದರಿಂದ ಕಾಲು ಪಥಗಳು Foot Pathಮಾದರಿಯಲ್ಲಿ ಬೆಳೆಯು ತ್ತಿವೆ. ಈ ಪಥಗಳಾಗಲಿ-ಬೀದಿಗಳಾಗಲಿ ಇಂದು ಪೇಟೆಯ ಅವಸ್ಥೆಯನ್ನು ತಲುಪಿವೆ. ಬೀದಿಗೆ ಬಂದು ಮಾರುವವರು ಈಗ ಕಡಿಮೆ ಇಲ್ಲ. ಬೀದಿಗೆ ಬಂದ ಪೇಟೆಯಲ್ಲಿ ಕೊಳ್ಳುವವರಿರುವಾಗ ಮಾರುವವರೂ ಇರುತ್ತಾರೆ. ವಿಜಯನಗರದ ಕಾಲದಲ್ಲಿ ಮುತ್ತುರತ್ನಗಳೇ ಬೀದಿಯಲ್ಲಿ ಮಾರಾಟವಾಗುತ್ತಿರಲಿಲ್ಲವೇ? ವಿಶೇಷ ಸಂದರ್ಭ ಗಳಲ್ಲಂತೂ ಬೀದಿಯ ಮಾರಾಟವೇ ಪ್ರಸಿದ್ಧಿ ಪಡೆಯುತ್ತಿದೆ. ಹೆಚ್ಚು ಜನರನ್ನು ಆಕರ್ಷಿಸು ತ್ತದೆ. ವಾಹನಗಳಿಗೆಂದು ವಿಶಾಲವಾದ ಬೀದಿಗಳು ಪಥಗಳು ಮತ್ತೆ ನೂಕುನುಗ್ಗಲಿಗೆ ಸಿಕ್ಕುತ್ತಿವೆ. ಬೀದಿ ಇನ್ನೂ ವಿಶಾಲವಾಗಬೇಕೆ ? ಅಥವಾ ಬೇರೆ ಹಾದಿ ಹುಡುಕಬೇಕೇ? ಎಂಬ ಸಮಸ್ಯೆ ಉಂಟಾಗುತ್ತಿದೆ.

ಬೀದಿಗಳನ್ನು ಬೆಳೆಸಿದವರು ನಾವು ಬೀದಿ ದೀಪ ಗಳನ್ನೂ ಬೆಳಗಿಸಿದೆವು. ಆದರೆ ಆ ದೀಪಗಳು ಜನಜೀವನಕ್ಕೆ ಮಾರ್ಗದರ್ಶಿಯಾಗಿ ನಿಂತವೇ? ದೀಪಗಳು—ಅದರಲ್ಲೂ ದಾರಿದೀಪಗಳು- ಅವಶ್ಯ ವಿದ್ದಾಗ ಬೆಳಗುವ ಗುಣಗಳನ್ನು ಅಥವಾ ಶಕ್ತಿ ಯನ್ನು ಪಡೆದಿಲ್ಲವೇನೋ! ದಾರಿದೀಪಗಳೆನಿಸಿ ದವರೂ ಆಯಾ ಕಾಲಕ್ಕೆ ಬೆಳಕನ್ನು ಕೊಟ್ಟಿರ ಬಹುದು. ಸದಾಕಾಲ ಕೊಟ್ಟಾರೆಂದರೆ, ಕಾಲ ಬದಲಾಗುತ್ತಿರುವದು ಬಹಳ ವೇಗದಿಂದ! ದೀಪದ ಬೆಳಕು ಸಾಲದಾಗಬಹುದೇನೋ! ದಾರಿ ದೀಪಗಳು ನಮ್ಮ ಸಮಾಜದ-ದೇಶದ ಪ್ರಗತಿಗೆ ಸಾಧನವಾದದ್ದಂತೂ ನಿಜ. ಆದರೆ ಆ ಬೆಳಕಿ ನಿಂದಲ್ಲ; ಆಗಾಗ ಆಗುವ ಮತ ಪ್ರದರ್ಶನಗಳಿಗೆ ಆಹುತಿಯಾಗಿ(!) ಇಂದು ಬೀದಿ ದೀಪಗಳು ಉರಿ ಯುತ್ತಿವೆಯೆಂದರೆ ವಿಶೇಷ ಸಮಾಚಾರವೆನಿಸು ತ್ತದೆ! ಬೀದಿ ದೀಪಗಳ ಕತೆಯಲ್ಲಿ ನಮ್ಮ ನಾಗ- ರಿಕತೆ ಅಡಗಿದೆಯಲ್ಲವೇ ? ನಗರಾಡಳಿತದವರು ಬೀದಿಗಳಿಗಾಗಿ-ಬೀದಿ ದೀಪಗಳಿಗಾಗಿ ದೊಡ್ಡ ಸಿಬ್ಬಂದಿಗಳನ್ನು ಬೆಳೆಸಿಕೊಂಡರು. ಆದರೂ ಇವುಗಳ ಅವ್ಯವಸ್ಥೆ ತಪ್ಪಿಲ್ಲ. ಸಮಾಜದ ಸ್ವಾಸ್ಥ್ಯ- ಹಾಗೆ ದೊಡ್ಡ ಸಮಸ್ಯೆಯೇ ಆಗಿದೆ. ಆದರೆ ಮತ್ತೆ ಸೂಕ್ತ 'ಹಾದಿ'ಯ ಅವಶ್ಯಕತೆ!

ಬೀದಿ ಮೆರವಣಿಗೆ ಬರಿಯ ಪ್ರಚಾರಕ್ಕಲ್ಲ.

ಪ್ರಾಯಶಃ ಹಿಂದೆ ಅದು ಪ್ರಸಾರ ಮಾಧ್ಯಮವಾಗಿರಬಹುದು. ಇಂದು ಪ್ರಜಾಪ್ರಭುತ್ವದ ಮಾಧ್ಯಮವಾಗಿದೆ. ಬೀದಿ ಕೂಗು-ಬೀದಿ ಕಪಳೆ, ಬೀದಿ ಮೋರ್ಚಾ ಇಂದು ಕ್ರಾಂತಿಯನ್ನು ಸೂಚಿಸುತ್ತಿವೆ. ಬೀದಿಗಿಳಿದ ಸಮಸ್ಯೆಗೆ ರಾಜಕೀಯದಲ್ಲಿ ಅತಿ ಮಹತ್ವದ ಸ್ಥಾನವಿದೆ. ಬೀದಿಕಲಹ-ಬೀದಿ ಸ್ಫೋಟ, ವಾಹನಗಳನ್ನು ತಡೆಯುವದು ಮೊದಲಾದವುಗಳು ದಿನ ದಿನದ ಸಂಗತಿಗಳಾಗಿವೆ. ಪ್ರಸಾರ ಮಾಧ್ಯಮಗಳಲ್ಲಿಯೂ ಮಹತ್ವದ ಸ್ಥಾನಗಳನ್ನು ಪಡೆಯುತ್ತಿವೆ. ಎಲ್ಲ ಸಂಘಟನೆಗಳಿಗೂ ಪ್ರಾಧಾನ್ಯ ಸಿಕ್ಕುವದು ಬೀದಿಗೆ ಬಂದ ಮೇಲೆಯೇ! ಬೀದಿಗೆ ಬಂದಾಗಲೇ ಮನ್ನಣೆ!! ಅನೇಕ ಮಹತ್ವದ ನಿರ್ಣಯಗಳು-ವಿಶ್ವವಿದ್ಯಾಲಯದ ವಿಸ್ತರಣೆ-ವರದಿಯ ಸ್ವೀಕಾರ, ಧಿಕ್ಕಾರ-ಇತ್ಯಾದಿಗಳೆಲ್ಲ ಬೀದಿಗೆ ಬಂದಾಗಲೇ ರೂಪ ಪಡೆದಿವೆ. ಬೀದಿಯ ಪ್ರಕರಣದಲ್ಲಿಯೇ ಪರಿಹಾರ ಪಡೆದಿವೆ. ಬೀದಿಯ ಶಾಂತತೆಯನ್ನು ಸುಗಮ ಸಂಚಾರವನ್ನು ಕಾಪಾಡುವದೇ ಇಂದಿನ ಪೋಲೀಸರ ಕರ್ತವ್ಯದ ಮುಖ್ಯ ಅಂಗವಾಗಿದೆ. ಬೀದಿ ಬುದ್ಧಿ-ವಿವೇಕ ಬೆಳೆದಂಥ ಸಮಾಜದಲ್ಲಿ ಈ ಪೋಲೀಸರ ಕೆಲಸ ಬಹಳ ಸುಲಭವಾದೀತು. ನಾಗರಿಕತೆ ಒಂದು ಹಾದಿ ಹಿಡಿದೀತು. ಮೇಲ್ಮಟ್ಟಕ್ಕೆ ತಲುಪಿತು!

ಬೀದಿಯ 'ಆರೋಗ್ಯ' ಬಹಳ ಮಹತ್ವದ್ದು. ನೈರ್ಮಲ್ಯವಷ್ಟೇ ಅಲ್ಲ. ಬೀದಿಯ ತಿಂಡಿಗಳನ್ನು ತಿನ್ನಬಾರದು—ಅದು ರೋಗಗಳನ್ನು ಪಸರಿಸುತ್ತದೆ ಎಂಬ ಬುದ್ಧಿವಾದವಿದೆ. ಆದರೆ ಬೀದಿ ತಿಂಡಿಗಳ ಅಂಗಡಿಗಳೇ ಈಗ ಹೆಚ್ಚುತ್ತಿವೆ. ಬೀದಿ ಪಾನೀಯಗಳು ಹೆಚ್ಚುತ್ತಿವೆ. ಚಹದ ಅಂಗಡಿ, ಕಬ್ಬಿನ ಹಾಲು ಪೂರೈಕೆ ಸಣ್ಣ ಉದ್ಯೋಗಗಳೆನಿಸಿವೆ. ಸಾರ್ವಜನಿಕ ಆರೋಗ್ಯದ ನಿಯಮಕ್ಕೆ ಸಿಕ್ಕದ ರೀತಿಯಲ್ಲಿಯ ವ್ಯವಹಾರ ಮಿತವ್ಯಯದಿಂದು ಬೆಳೆಯುತ್ತಿದೆಯೇ? ಆಮ್ಲೆಟ್ ರುಚಿ ತೋರಿಸುವ, ಬೀದಿಯಲ್ಲೇ ಚಪಾತಿ ಬೇಯಿಸುವ, ದೋಸೆ ಹುಯ್ಯುವ, ಬೋಂಡ ಕರಿಯುವ ಉದ್ಯೋಗಗಳೂ ಬೆಳೆಯುತ್ತಿವೆ. ಸಾಯಂಕಾಲ ದಿನಾಲು ಬೀದಿಯಲ್ಲಿ ವಡೆಗಳನ್ನು ತಯಾರಿಸಿ-ಮಾರಿ ಬೀದಿಯಂಗಡಿಯಿಂದ ಭವ್ಯ-ಭವನದ ಕೀರ್ತಿಯನ್ನು ಸಾಧಿಸಿದವರೂ ಇಲ್ಲವೇ? ಅವ್ರುಗಳೇ 'ಪಂಚತಾರಾ' ಮಾದರಿಗೆ ತಲುಪಿಲ್ಲವೇ? ಈ ಸಾಧನೆಗೆ 'ಪಂಚ ಮೆಟ್ಟಲುಗಳು' ಎಂದು ತೋರುತ್ತದೆ. ಕ್ಷೌರದವರು ಬೀದಿಯಲ್ಲೇ ತಮ್ಮ ಕಾಯಕವನ್ನು ನಡೆಸುತ್ತಿದ್ದರು. ಉತ್ತರ ಭಾರತದ ಅನೇಕ ಕಡೆಗೆ ಈಗಲೂ ಹಾಗೆಯೇ ನಡೆದಿದೆ. ಅವರೇ 'ಸಲೂನು'ಗಳನ್ನು ಬೆಳೆಸಿ ಇಂದು ನಾಗರಿಕತೆಯನ್ನು ಬೆಳೆಸುತ್ತಿದ್ದಾರೆನ್ನಬೇಕು.

ಬೀದಿಗೆ ಬಂದ ಈ ಅಂಗಡಿಗಳಲ್ಲಿ ಉಪಾಹಾರ ಸೇವನೆಯಲ್ಲಿ ಹೆಚ್ಚಿನ ಆರೋಗ್ಯವಿದೆಯೇ? ಆಕರ್ಷಣೆಯಿದೆಯೇ? ಹೋಟಲುಗಳ ಅಡಿಗೆ ಮನೆಯ ಕೊಳಚೆ ನಮಗೆ ಕಾಣದೆ-ನಸುಬೆಳಕಿನ ಭವನಗಳ ಆಹಾರ ಸೇವಿಸುವಲ್ಲಿ ಆರೋಗ್ಯವಿದೆಯೇ? ಉಷ್ಣ ಪ್ರದೇಶಗಳಲ್ಲಿಯಂತೂ ಹೋಟಲುಗಳ ತಿಂಡಿ ತಯಾರಿಸುವ ಒಲೆಗಳು ಕೂಡ ಬೀದಿಯಲ್ಲೇ ಇರುತ್ತವೆ. ಇಂಥ ಒಲೆಗಳು ಸುಧಾರಿಸಿದರೆ-ಹೊಗೆ ಕಡಿಮೆಯಾದರೆ ನಮ್ಮ ಬೀದಿಗಳೂ ಸುಧಾರಿಸಿಯಾವು. ಒಲೆಗಳು ಬೀರುವ ವಾಸನೆಗಳು ನಮ್ಮ ಬೀದಿಗಳಿಗೆ ವಿಶೇಷ ಗುಣಗಳನ್ನು ಒದಗಿಸಿಯಾವು. ಬ್ರೆಡ್ ಅಂಗಡಿಯ ವಾಸನೆ ನಮಗೆ ಆಕರ್ಷಣೆ ಎನಿಸೀತು. ಕಾಫಿ ಪುಡಿಯ ವಾಸನೆ ಬೀದಿಗೆ ಒಂದು ಕಂಪನ್ನು ಒದಗಿಸೀತು. ಮೀನು ಬೇಯಿಸುವ ವಾಸನೆ ಕೆಲವರನ್ನು ಅಂಥ ಬೀದಿಯಿಂದ ದೂರವಿರಿಸೀತು. ಬೀದಿಯಲ್ಲಿ ಯಾವ ವಾಸನೆ ಎಷ್ಟು ಪ್ರಮಾಣ ಮೀರಬಾರದು ಎಂಬ ನೀತಿಯ ಹಾದಿಯನ್ನು ನಮ್ಮ ನಾಗರಿಕತೆ ಹುಡಕಬೇಕಾದೀತು. ಇದೂ ಪರಿಸರ ಮಾಲೀನ್ಯದ ಸಮಸ್ಯೆಯಲ್ಲವೇ?

ಹಿಂದೆ ಬೀದಿಗೊಂದು ಕಾಮದಹನವಾಗುತ್ತಿತ್ತಂತೆ. ಆಗ ಅದು ಬೀದಿಯ ಗೌರವದ ಪ್ರಶ್ನೆಯೆನಿಸಿತ್ತು; ಬೀದಿ ಹಾಡುಗಳಿಗೆ ಅಂದು ವಿಶೇಷ

ಅನುಮತಿಯಂತೆ. ಈಗ ಬೀದಿ ಅಂದಿನಂತೆ ಕಿರಿದಾಗಿ ಉಳಿದಿಲ್ಲ. ವಿಶಾಲವಾಗಿದೆ. ಭಾವನೆಗಳಷ್ಟೂ ಬೆಳೆದಿದೆ. ಇಂದು ಕಣ್ಣಿಗೆ ಕಾಣುವ ಬೀದಿ ಕಾಮಣ್ಣಗಳೇ ಬೇರೆ. ಅವರಿಗೆ ತೋರಿಸಬೇಕಾದ ಹಾದಿಯೇ ಬೇರೆ!

ಬೀದಿಗಳು ಕಲೆಗಳನ್ನೂ ಬೆಳೆಸಿವೆ. ಬೀದಿ ನಾಟಕಗಳು-ಜಾತ್ರೆಗಳು ಇಂಥ ಅವಕಾಶವನ್ನು ಒದಗಿಸಿಲ್ಲವೆ? ಆಟ ಪಾಟಗಳನ್ನೂ ಬೆಳೆಸಿವೆ. ಕ್ರಿಕೆಟ್, ಹಾಕಿ, ಬ್ಯಾಡ್‌ಮಿಂಟನ್ ಮೊದಲಾದ ಪಾಶ್ಚಾತ್ಯ ಆಟಗಳಿಗೂ ಬೀದಿಗಳೇ ಪ್ರಥಮ ರಂಗ. ಬೀದಿಗಳಲ್ಲಿ ಇತರ ಆಟಗಳಿಗೂ ಅವಕಾಶ ದೊರಕಿರುವವನ್ನು ಅನೇಕ ನಗರಗಳಲ್ಲಿ ನೋಡಬಹುದು. ಬೀದಿ ಅಲೆಯುವದು, ಬೀದಿ ಅಂದೋಲನ, ಬೀದಿ ಮಾತಿನ ಕೂಟಗಳು ಇವುಗಳೆಲ್ಲ ಒಂದೊಂದು ಊರಿನ ವೈಶಿಷ್ಟ್ಯವನ್ನೆತ್ತಿ ತೋರಬಹುದು. ಊರಿನ ವೈಶಿಷ್ಟ್ಯಗಳನ್ನು ಅಭ್ಯಾಸಿಸಲು ಕೆಲ ಬೀದಿಗಳು ಎಲ್ಲ ಅವಕಾಶಗಳನ್ನು ಒದಗಿಸುತ್ತವೆ. ಬೀದಿಯು ಸಂಸಾರ ನಿರ್ಗತಿಕ ಜೀವನವನ್ನು ತೋರಿಸಿದರೆ, ಬೀದಿಯಲ್ಲಿಯೇ ವಾಹನ ದುರಸ್ತಿಯ ಚಟುವಟಿಕೆ, ಯಾಂತ್ರಿಕ ಜೀವನದ ಪರಿಚಯವನ್ನೂ ಕೊಟ್ಟೀತು. ಬಹು ಅಂತಸ್ತಿನ ಮನೆಗಳು ಎತ್ತರವನ್ನು ತೋರಿಸುವಂತೆ, ಬೀದಿಗೇ ತೂಗುಬಿದ್ದಿರುವ ಬಣ್ಣ ಬಣ್ಣದ ಸೀರೆಗಳು ನಮ್ಮ ಸ್ವಚ್ಛತೆಯ ಪ್ರಜ್ಞೆಯನ್ನು ತೋರಿಸಿಯಾವು, ಬೀದಿ ರಾಡಿ ಎರಚುವ ಬಸ್ಸುಗಳು ನಮ್ಮ ಓಡುವ ಚಟುವಟಿಕೆಯನ್ನು ತೋರಿಸಬಹುದು. ಬೀದಿಯ ಜ್ಯೋತಿಷಿಗಳು ನಮ್ಮ ಭಾವುಕತೆಯನ್ನೋ ಮೂಢನಂಬಿಕೆಗಳನ್ನೋ ತೋರಿಸಬಲ್ಲರು. ಬೀದಿ ಬದಿಯ ಚಿಲ್ಲರೆ ವ್ಯಾಪಾರಸ್ಥರೂ ಈಗ ಹೆಚ್ಚಿದ್ದಾರೆ. ಹೊಸ ಉದ್ಯೋಗಗಳನ್ನು ಬೆಳೆಸುವ ಹಾದಿ ಇದು ಎನ್ನಬೇಕೆ?

ದೊಡ್ಡ ನಗರಗಳಲ್ಲಿ ಬೀದಿಗಳು ಇನ್ನೂ ಅನೇಕ ವಿಧಗಳಲ್ಲಿ ಸುಧಾರಣೆಯ ಭಾರವನ್ನು ಹೊತ್ತಿವೆ. ಟೆಲಿಫೋನು ಬೇಕಾದರೆ, ನೀರಿನ ಕೊಳವೆಗಳನ್ನು ಹಾಕಿದರೆ ಇನ್ನೆಲ್ಲ ಸುಧಾರಣೆಗಳಿಗೂ ಬೀದಿಗಳೇ ಬೇಕು. ಬೀದಿ ನಲ್ಲಿಗಳು ತಂದ-ತರುವ ರಗಳೆಗಳು ಕಡಿಮೆಯೇ? ಮಕ್ಕಳು ಬೈಸಿಕಲ್ ಕಲಿಯುವದಾಗಲಿ, ದ್ವಿಚಕ್ರವಾಹನಗಳ-ಕಾರುಗಳ ಚಾಲಕರಿಗಾಗಲಿ ಬೀದಿಗಳೇ ಪ್ರಥಮ ಪಾಠ ಕೊಟ್ಟಿವೆ. ಭಾಷಣಗಳು-ಚುನಾವಣಾ ಪ್ರಚಾರಗಳು ಬೀದಿಗಳಲ್ಲೇ ಪ್ರಾರಂಭವಾಗಬೇಕು. ಅನೇಕರ ಪ್ರತಿಷ್ಠೆ ಬೆಳೆಯುವದೂ 'ಬೀದಿಪಾಲು' ಆಗುವದೂ ಇಲ್ಲಿಯೇ! ಅನೇಕ ಪ್ರತಿಷ್ಠಿತರ ಗೌರವ ಸೂಚಕ ಹೆಸರುಗಳು ಎಂತಲೇ ಬೀದಿಗಳಿಗೆ ಬಂದಿವೆಯೆನ್ನಬೇಕೆ?

ಬೀದಿಗಳ ರಚನೆಯೂ ಬಗೆಬಗೆಯ ಬದಲಾವಣೆಯನ್ನು ಕಂಡಿದೆ. ಹಾಸುಗಲ್ಲುಗಳು ಒಂದು ಕಾಲಕ್ಕೆ ರೂಢಿಯಲ್ಲಿದ್ದರೆ ಸಿಮೆಂಟು ಗಚ್ಚಿನ ಬೀದಿಗಳೂ—ಡಾಮರು ಬೀದಿಗಳೂ ಈಗ ಬೆಳೆದಿವೆ. ಮಾನವನ ಪ್ರಗತಿ ಬೀದಿ ರಚನೆಯಲ್ಲಿಯೂ ಬಿಂಬಿತವಾಗಿದೆ. ನಿರಾಶ್ರಿತರು, ಬರಗಾಲ ಪೀಡಿತರು ವಲಸೆಹೋದಾಗಲೂ ಬೀದಿಗಳೇ ಅವರಿಗೆ ಆಶ್ರಯ ನೀಡುತ್ತಿವೆ. ಬೀದಿಗಳಲ್ಲಿ ಓಡಾಡುವ ಕಾರುಗಳು ಊರಿನ ಪ್ರತಿಷ್ಠೆಯನ್ನು ತೋರಿಯಾವು. ಅವುಗಳು ಹೆಚ್ಚಿದಂತೆ ಸಂಪತ್ತನ್ನೂ ತೋರಿಸಿಯಾವು. ಆದರೂ ಬೀದಿಗಳಲ್ಲಿ-ನಮ್ಮಲ್ಲಿ ದನಗಳಿಗೂ ಸ್ವಾತಂತ್ರ್ಯವಿದೆ. ಓಡುವ ಕಾರುಗಳ ವೇಗವನ್ನು ತಡೆಯುವ ಹೊಣೆ ಹೊತ್ತಿವೆಯೇನೋ! ಬೀದಿಗಳಲ್ಲಿ ದನಗಳ ಸಹಜೀವನ-ಪಶುಪ್ರೇಮವನ್ನು ತೋರಿಸುತ್ತಿವೆಯೆನ್ನಬೇಕೊ? ಇಲ್ಲವೆ ಸಗಣಿ ಮೂತ್ರಗಳು ನಮ್ಮ ಬೀದಿಗಳ ಪಾವಿತ್ರ್ಯವನ್ನು ಕಾಪಾಡುತ್ತಿವೆಯೆನ್ನಬೇಕೋ? ಹೆಚ್ಚು ಜನನಿಬಿಡ ಪ್ರದೇಶದ ಬೀದಿಗಳಲ್ಲಿ ವಿಕೃತ ಕಾಮಿಗಳ ಸಂಪರ್ಕವೂ ಕಂಡು ಬರುತ್ತದೆ. ಇನ್ನೆಲ್ಲ ವ್ಯಾಪಾರದ ಜೊತೆಗೆ ದೇಹದ ವ್ಯಾಪಾರವೂ ಇಲ್ಲಿಯೇ ಆಗಬೇಕೇ? ಮಾನವರು ಸಾಮೂಹಿಕವಾದ ವಿಹಾರಕ್ಕೆ ಕ್ಲಬ್ಬುಗಳನ್ನು ಮಾಡಿಕೊಂಡಂತೆ, ಬೀದಿಯ ಚೌಕಗಳಲ್ಲಿ ಸೇರುವ ದನಗಳೂ ಇವೆ. ಬೀದಿ ನಲ್ಲಿ (ನಳ)

ತಿರುಗಿಸಿ ನೀರು ಕುಡಿಯುವ ಪ್ರಾಣಿಗಳು ಇವೆ! ನಲ್ಲಿಗಳನ್ನು ನಿಲ್ಲಿಸುವ ಅವಶ್ಯಕತೆ ಪ್ರಾಣಿಗಳಿಗೇನು?—ಮನುಷ್ಯನಿಗೇ ಇದ್ದಂತೆ ತೋರುವದಿಲ್ಲ.

ಸಾಮೂಹಿಕ ಪೂಜೆಗಳು – ಮದುವೆ ಸಮಾರಂಭಗಳು ಇಂದು ಜರಗುವದು ಹೆಚ್ಚಾಗಿ ಬೀದಿಗಳಲ್ಲೇ. ಮಾನವನ ಸಂಸ್ಕೃತಿಕ ಕಾರ್ಯಗಳಲ್ಲೆಲ್ಲ ಬೀದಿಯದು ಬಹುಮುಖ್ಯ ಪಾಲು. ಎಂತಲೇ ಮಾತಿನಲ್ಲಿಯೂ ಭಾವದಲ್ಲಿಯೂ ಬೀದಿ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಬಗೆಬಗೆಯ ಪಡೆನುಡಿಗಳನ್ನು ಎಲ್ಲ ಭಾಷೆಗಳಲ್ಲೂ ಒದಗಿಸಿದೆ. ಬೀದಿಯ ಪಾತ್ರವೇ ಬೇರೆ, ಹಾದಿಯ ಪಾತ್ರವೇ ಬೇರೆ. ಬೀದಿ – ಹಾದಿಗಳೊಂದಿಗೆ ಬೆಳೆದದ್ದು ರಹದಾರಿ. ನಗರ – ನಗರಗಳ ಜೋಡಣೆಗೆ ಪ್ರದೇಶಗಳ ಭಾವೈಕ್ಯಕ್ಕೆ-ವ್ಯಾಪಾರೋದ್ಯಮಗಳ ಬೆಳವಣಿಗೆಗೆ ಸಾಮಾಜಿಕ ಉನ್ನತಿಗೆ ರಸ್ತೆಯೆನಿಸಿಕೊಂಡಿದೆ. ನದಿಗಳನ್ನು ದಾಟಿ, ಗುಡ್ಡಗಳನ್ನು ಸುತ್ತಿ, ಸಂಸ್ಕೃತಿಗಳನ್ನು ಜೋಡಿಸಿ, ಸಂಬಂಧಗಳನ್ನು ಬೆಳೆಸುವ ರಸ್ತೆ ವಿಶ್ವಬಾಂಧವ್ಯದ ಸಾಧನೆಯಾಗಿದೆ.

ಬೀದಿಗಳಲ್ಲಿ ನಮ್ಮ ಸಂಸ್ಕೃತಿ ಇದೆ ಗೌರವವಿದೆ. ಕಲೆಯಿದೆ. ಸಾಹಿತ್ಯವಿದೆ. ರಾಜಕೀಯವಿದೆ. ಅವುಗಳನ್ನು ನಾವು ಕಾಯ್ದುಕೊಂಡು ಪೋಷಿಸಿಕೊಂಡು ಬೆಳೆಸಿಕೊಳ್ಳಬೇಕಾಗಿದೆ. ಮಾನವ ಜೀವನದ ಚರಿತ್ರೆ ಬೀದಿಗಳಲ್ಲಿ ಕಂಡು ಬರುತ್ತಿದೆ. ಬೀದಿಗಳಲ್ಲಿ ಕಾಲುಚಾಚಿ ಮೆರೆಯುತ್ತಿದ್ದ ಕೈಮಗ್ಗಗಳು ಇಂದು ಯಂತ್ರ ಮಗ್ಗಗಳಿಗೆ ಹಾದಿ ಮಾಡಿಕೊಟ್ಟು ನಮ್ಮ ಮಟ್ಟವನ್ನು ಸುಧಾರಿಸಿವೆಯೆನ್ನೋಣವೇ ? ಧರ್ಮಗಳು ತೋರಿದ ಹಾದಿ ಏನು ಇರಲಿ. ಬೀದಿಗಳು ಇಂದಿನ – ಸದ್ಯದ ಪ್ರಚಲಿತ ರೀತಿ ನೀತಿಗಳನ್ನು ಸಾಮಾಜಿಕ ಬೆಳವಣಿಗಾಗಿ ತೋರುತ್ತಿವೆ. ಬೀದಿ ಮತವೇ ಇಂದಿನ ನಾಗರಿಕ ಮತವೆನಿಸೀತು. ಬೀದಿಗಳು ಮಾನವ ನಿರ್ಮಿತ. ಅವುಗಳ ನೀತಿಯೂ ಮಾನವನಿಗೆ ಸಂಬಂಧಿಸಿದ್ದೇ. ಇಂದು ಬೀದಿ ಅಪಘಾತಗಳಲ್ಲೇ ಹೆಚ್ಚುತ್ತಿರುವ ಸಾವುಗಳು ನಮ್ಮ ಪ್ರಗತಿಯನ್ನು ತೋರಿಸುತ್ತಿವೆಯೆ ?

ಬೀದಿಯ ನಿಯಮಗಳು ಇಂದು ಸಜ್ಜನಿಕೆಯ ನೀತಿಯೆನಿಸಿವೆ ಇಂಗ್ಲಿಷಿನಲ್ಲಿ ಇದಕ್ಕೆ ಅತಿ ಮಹತ್ವ ದೊರಕಿದೆ. ಬೀದಿಯ ನೀತಿಯೇ ಮಾನವ ಧರ್ಮವನ್ನು ಎತ್ತಿ ಹಿಡಿಯಬೇಕು. ಮಾನವತೆಯನ್ನು ಬೆಳೆಸಬೇಕು. ಮನೆಯೊಳಗಿನ ನೀತಿ - ಮಾತುಗಳು ಮನೆ ಮಟ್ಟಿಗೆ ಇರಲಿ. ಬೀದಿಗೆ ಬಂದ ಮೇಲೆ ಸಕಲರಿಗೆ ಮಾನ್ಯವಾಗುವಂತೆ ಇರಲಿ. ಇದು ನವೀನ ಯುಗಧರ್ಮ. ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳಬಲ್ಲವನೇ ದೊಡ್ಡ ಸಾಹಿತಿಯಂತೆ. ಅದರಂತೆ ಬೀದಿಯನ್ನು ಅತ್ಯಂತ ಸಮರ್ಪಕವಾಗಿ ಉಪಯೋಗಿಸಿಕೊಳ್ಳಬಲ್ಲವನೇ ನಾಗರಿಕ ! ಬೀದಿಯ ಕಲ್ಲುಗಳನ್ನು ಬಳಸಬಲ್ಲವನು ಜಾಗೃತ ನಾಗರಿಕ!! ಅಲ್ಲವೇ ?

ಭಾರತದಲ್ಲಿ ಮೊಟ್ಟಮೊದಲ ಮೋಟರ್ ಕಾರಿನ ಒಡೆಯರೆಂದು ಪ್ರಸಿದ್ಧರಾದವರು ಜಮಶೇಟಜೀ ಟಾಟಾ ಮತ್ತು ಸರ್ ನೆಸ್ ಎಂಬವರು. ವಿದೇಶದಿಂದ ಅದನ್ನವರು ೧೯೦೧ ರಲ್ಲಿ ತರಿಸಿಕೊಂಡರು.

*

ಭಾರತದಲ್ಲಿ ಮೊಟ್ಟ ಮೊದಲ ವಿದ್ಯುತ್ ಬಲ್ಬ ಮುಂಬಯಿಯ ಕ್ರಾಫರ್ಡ್ ಮಾರ್ಕೆಟ್ಟಿನಲ್ಲಿ ೧೮೮೨ ರಲ್ಲಿ ಹತ್ತಿಕೊಂಡು ಬೆಳಕು ನೀಡಿತು.

ತಾಯಕ್ಕಜ್ಜಿಯ ವೈದ್ಯ

ಸಿ. ಎಸ್. ಮೂರ್ತಿ

ಶತಮಾನಗಳು ಉರುಳಿವೆ. ಆದರೆ ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿರುವ ಸರ್ವಜ್ಞವಚನಗಳ ಕೆಲವು ಭಾಗಗಳು ಇಂದಿಗೂ ಅದೆಷ್ಟು ಅರ್ಥಪೂರ್ಣವಾಗಿವೆ ಎಂಬುದಕ್ಕೆ ನಾನು ಪ್ರತ್ಯಕ್ಷವಾಗಿ ಕಂಡ ಈ ಕೆಳಗಿನ ನಿದರ್ಶನವೇ ಸಾಕ್ಷಿ.

ಅದೊಂದು ಪುಟ್ಟ ಸಂಸಾರ. ಆ ದಂಪತಿಗಳಿಗೆ ಒಂದು ಗಂಡು ಮಗು. ಅದರ ಆಟ, ನಗೆ, ಕಣ್ಣುಗಳಲ್ಲಿನ ಕಾಂತಿ ತುಂಬಾ ಮುದ್ದು ತರಿಸುವಂತಿತ್ತು. ಅದಕ್ಕೆ 'ರಾಜೀವ' ಎಂದು ಹೆಸರಿಟ್ಟಿದ್ದರು. ನಾವೆಲ್ಲಾ ಪರಿವಾರದವರು ಅದಕ್ಕೆ ರಾಜು, ರಾಜು ಎಂದೇ ಸಂಬೋಧಿಸುತ್ತಿದ್ದೆವು. ಎಲ್ಲರ ಜೊತೆಯಲ್ಲಿಯೂ ಸಂಕೋಚವಿಲ್ಲದೆ ನಗುನಗುತ್ತಾ ಹೊಂದಿಕೊಳ್ಳುತ್ತಿತ್ತು ಆ ಮಗು.

ಅದರ ಅಜ್ಜಿ ತಾಯಕ್ಕ. ತಾಯಕ್ಕಜ್ಜಿ ಎಂದೇ ಪ್ರಸಿದ್ಧಿ. ಆಕೆಗೆ ಒಬ್ಬನೇ ಮಗ ಶ್ರೀನಿವಾಸ ಎಂದು. ತನ್ನ ತಂದೆಯ ಮರಣಾನಂತರ ತನ್ನ ವ್ಯಾಸಂಗವನ್ನು ನಿಲ್ಲಿಸಿ, ಜವಳಿ ವ್ಯಾಪಾರವನ್ನು ಮುಂದುವರಿಸುತ್ತಿದ್ದನು. ಅತನಿಗೆ ಮದುವೆಯಾಗಿ ಬಹಳ ವರ್ಷಗಳ ನಂತರ ಅಪರೂಪಕ್ಕೆ ಈ ಮಗು ಹುಟ್ಟಿತ್ತು.

ಆ ಬೀದಿಯಲ್ಲಿ ತಾಯಕ್ಕಜ್ಜಿಯೇ 'ಮಕ್ಕಳ ವೈದ್ಯೆ'. ತಾಯಂದಿರು ತಮ್ಮ ಮತ್ತು ಮಕ್ಕಳ ಸಣ್ಣ ಪುಟ್ಟ ಕಾಯಿಲೆ ಇತ್ಯಾದಿ ಸಮಸ್ಯೆಗಳಿಗೆ ಅಜ್ಜಿಯಿಂದ ಪುಕ್ಕಟೆಯಾಗಿ ಸಲಹೆ, ಔಷಧೋಪಚಾರ ಪಡೆಯುತ್ತಿದ್ದರು. ಅಲ್ಲದೆ ರಾತ್ರಿಯ ಹೊತ್ತು ಮಕ್ಕಳಿಗೆ ಅಜ್ಜಿಯಿಂದ ಮನೋರಂಜನೆ. ಆಕೆ ತನ್ನ ಹಿರಿಯರಿಂದ ಕಲಿತ, ದಂತಕಥೆಗಳನ್ನು ಬಣ್ಣ ಹಚ್ಚಿ ಹೇಳುತ್ತಿದ್ದಳು. ಒಮ್ಮೊಮ್ಮೆ ನಾನೂ ಪಾಲ್ಗೊಂಡು ಅಜ್ಜಿಯ ಕಥೆಗಳಲ್ಲಿನ ಲೋಪದೋಷಗಳನ್ನು ಎತ್ತಿ ಹಿಡಿದಾಗ ಆಕೆಯ ಉತ್ತರ ಸಮರ್ಪಕವಲ್ಲದಿದ್ದರೂ ಆಕೆಯೊಂದಿಗೆ ವಾದಿಸದೆ ಸುಮ್ಮನಾಗುತ್ತಿದ್ದೆ.

ಆಕೆ ತನ್ನ ಜೀವಿತದಲ್ಲಿನ ಕಹಿ - ಸಿಹಿ ಪ್ರಸಂಗಗಳನ್ನು ವಿವರಿಸುವಾಗ ಒಮ್ಮೊಮ್ಮೆ ತಲ್ಲೀನಳಾಗುವಂತಾಗುತ್ತಿತ್ತು. ಬಹುಶಃ ಇದಕ್ಕೇ ಗಾದೆ: 'ಮನೆಗೊಬ್ಬ ಅಜ್ಜಿ ಇರ ಲೇಸಾದ ಸರ್ವಜ್ಞ'.

ಅಜ್ಜಿ ಮಾಡುತ್ತಿದ್ದ ಗೃಹ ವೈದ್ಯದಲ್ಲಿ 'ಬರೆ' ಯನ್ನು (ಹೆಚ್ಚು ಕಾಯಿಸಿದ ಗಾಜಿನ ಬಳೆ ಚೂರಿನಿಂದ ಮಾಡುತ್ತಿದ್ದರು) ಮಕ್ಕಳಿಗೆ ಇಡುವುದೂ ಒಂದಾಗಿತ್ತು. ಈ ಚಿಕಿತ್ಸ

ವಿಧಾನವು ಕರ್ನಾಟಕದ ಪಲವೆಡೆಗಳಲ್ಲಿ ರೂಢಿಯಲ್ಲಿರಬಹುದೆಂದು ನನ್ನ ಭಾವನೆ.

ನಮ್ಮ ತಾಯಿ ನಾನು ಸಣ್ಣವನಿದ್ದಾಗ ಆಗಾಗ ನನಗೆ 'ಚುಟುಕೆ' ಇಡುತ್ತಿದ್ದರು. ಅವರ ಭಾವನೆಯಲ್ಲಿ ಈ ಕಾಯಿಲೆಯ ಮುಖ್ಯ ಲಕ್ಷಣಗಳೆಂದರೆ ಆರೋಗ್ಯದಿಂದ ಕಾಂತಿಯುತವಾದ ಕಣ್ಣುಗಳು ಇದ್ದಕ್ಕಿದ್ದಂತೆ ಆಳಕ್ಕೆ ಇಳಿದಿರುವುದು, ಕಿವಿಗಳು ತಣ್ಣಗೆ ಕೊರೆಯುತ್ತಿರುವುದು, ಆಟ, ಪಾಠಗಳಲ್ಲಿ ಮೊದಲಿನಂತೆ ಲವಲವಿಕೆ ಇಲ್ಲದಿರುವುದು, ಯಾವಾಗಲೂ ನಿದ್ರೆ ಬಂದಂತೆ ತೂಕಡಿಸುವುದು, ಸುಮಾರು ಮೈ ಬೆಚ್ಚಗಿರುವುದು ಇತ್ಯಾದಿ. ಈ ಲಕ್ಷಣಗಳು ಕಂಡಾಗ ನಮ್ಮ ತಾಯಿ "ಇವನಿಗೆ 'ಸಂದಾಗಿ' (ರೋಗ ಎಂದು ನನ್ನ ಹಿಡಿದು ಒಂದು 'ಚುಟುಕೆ' ಇಡುತ್ತಿದ್ದರು. ಈ ರೀತಿ ಚುಟುಕೆ ಇಟ್ಟನಂತರ ನನಗೆ ಚೇತರಿಕೆ ಬಂದಂತೆ ಆಗುತ್ತಿತ್ತು. ನಾನು ಬೆಳೆದು ಬುದ್ಧಿ ಬಲಿತು, ಯೋಚಿಸುವಂತಾದಾಗ ಈ ಪ್ರವೃತ್ತಿಯನ್ನು ಪ್ರತಿಭಟಿಸುತ್ತಿದ್ದೆ. ನನಗೆ ೧೬ ವರ್ಷಗಳು ತುಂಬಿದಾಗ, ನಮ್ಮ ತಾಯಿ ಈ ವಯಸ್ಸಿನಲ್ಲಿ ಬರುವ 'ಸಂದೇ' ಕೊನೆಯದು (ಆಗ ನಾನು ಅನಾರೋಗ್ಯದ ಕಾರಣ ಮಲಗಿದ್ದೆ) ಎಂದು ನನಗೆ



ಚುಟುಕೆ ಇಡಲು ಬಂದರು ನಾನು ಇವರ ಮೊಂಡತನಕ್ಕೆ ತುಂಬಾ ಪ್ರತಿಭಟಿಸಿದ್ದರಿಂದ ಸುಮ್ಮನಾದರು. ಆ ದಿನ ನಾನು ಡಾಕ್ಟರರ ಬಳಿಗೆ ಧಾವಿಸಿ ಔಷಧೋಪಚಾರವನ್ನು ಪಡೆದು ಬಂದು ಮಲಗಿದೆ. ಆದರೆ ನನಗೆ ಗುಣ ಕಾಣಲಿಲ್ಲ, ಮರ ದಿನ ಡಾಕ್ಟರರಲ್ಲಿ ಇದನ್ನು ಹೇಳುವ ಎಂದು ಹಾಗೆಯೇ ಮಲಗಿ ವಿಶ್ರಾಂತಿ ಪಡೆದೆ. ಆದರೆ ಆ ದಿನ ರಾತ್ರಿಯೆ ನಮ್ಮ ತಾಯಿ ಅರೆ ಎಚ್ಚರಗೊಳಿಸಿ (ಆಗಿರುವ 'ಸಂದು' ನಿದ್ರೆಯಲ್ಲಿ ಹರಿಯುವುದಿಲ್ಲ ಎಂದು) ನನ್ನ ಕೈ ಕಾಲುಗಳನ್ನು ಭದ್ರವಾಗಿರಿಸಿ ನನಗೆ ಚುಟುಕೆ ಇಟ್ಟೇಬಿಟ್ಟರು. ನಾನು ತುಂಬಾ ಕೂಗಾಡಿ, ಹಾರಾಡಿದೆ. ಆದರೆ ಚುಟುಕೆ ಇಟ್ಟಾಗಿತ್ತು. ಕೂಗಾಡಲಿ ಎಂದು ಸುಮ್ಮನಾದರು ನಮ್ಮ ತಾಯಿ. ಈ ಘಟನೆಯ ನಂತರ ನನಗೆ ಚುಟುಕೆ ಇಡುವುದು ನಿಂತಿತು. ಎರಡು ವರ್ಷಗಳು ಉರುಳಿದ್ದವು.

ನಾನು ಎಸ್. ಎಸ್. ಎಲ್. ಸಿ ಪರೀಕ್ಷೆಯನ್ನು ಮುಗಿಸಿದ್ದೆ. ಬೇಸಿಗೆಯ ರಜೆಯಲ್ಲಿ ಗೆಳೆಯರೊಂದಿಗೆ ಆಟ, ಮುಂದಿನ ತರಗತಿಯ ಪಠ್ಯ ಪುಸ್ತಕಗಳ ಬೇಟೆ, ಚರ್ಚೆಗಳಲ್ಲೇ ಹಗಲು ಕಳೆಯುತ್ತಿತ್ತು. ರಾತ್ರಿಯ ಹೊತ್ತು ವಾರಪತ್ರಿಕೆಗಳನ್ನು ತಿರುವುತ್ತಿದ್ದೆ. ತುಂಬಾ ಸೆಕೆಯಾದ್ದರಿಂದ ವರಾಂಡದಲ್ಲಿಯೆ ನನ್ನ ಶಯನೋತ್ಸವ. ಅಜ್ಜಿಯೂ ಅಲ್ಲಿಯೇ ಮಲಗುತ್ತಿದ್ದುದರಿಂದ ಪತ್ರಿಕೆಗಳಲ್ಲಿನ ವಿಶೇಷವಾದ ಘಟನೆಗಳನ್ನು ಓದಿ ಹೇಳುತ್ತಿದ್ದೆ. ಮಕ್ಕಳ ನೀತಿಕಥೆಗಳಲ್ಲಿ ಅಜ್ಜಿಗೆ ಹೆಚ್ಚಿನ ಆಸಕ್ತಿ ಇರುತ್ತಿತ್ತು. ಆಗಾಗ ಆಕೆ ಮಾಡುತ್ತಿದ್ದ ವೈದ್ಯದ ಬಗ್ಗೆ ವಿವರಣೆ ಸಂಗ್ರಹಿಸಿಡುತ್ತಿದ್ದೆ. ಅದರ ಪರಿಣಾಮವನ್ನು ಎಚ್ಚರಿಕೆಯಿಂದ ಗಮನಿಸಿದಾಗ, ಶೇಕಡಾ ೬೦ರಷ್ಟು ಗುಣ ಕಂಡುಬರುತ್ತಿತ್ತು.

ಈ ಮಧ್ಯೆ ರಾಜನಿಗೆ ಮೂರು ವರ್ಷಗಳು ತುಂಬಿತ್ತು. ಪ್ರತಿ ದಿನ ನಮ್ಮ ಜೊತೆಯಲ್ಲಿ ರಾತ್ರಿ ೯—೧೦ರ ತನಕ ಆಟವಾಡುತ್ತಾ ತೀಟೆ ಮಾಡುತ್ತಾ ಇರುತ್ತಿದ್ದ. ಕಡೆಗೆ ಅಜ್ಜಿ ಗದರಿಸಿ ಮಲಗಿಸಿದಾಗ ನಿದ್ದೆ ಹೋಗುತ್ತಿದ್ದ. ಆ ನಂತರ ಸೊಸೆ ಗೀತಳನ್ನು ಕರೆದು ಮಗುವನ್ನು ಒಪ್ಪಿಸುತ್ತಿದ್ದಳು ಅಜ್ಜಿ.

ನನ್ನಲ್ಲಿ ಅವನಿಗೆ ಹೆಚ್ಚು ಸಲಿಗೆ ಇದ್ದುದರಿಂದ, ನನ್ನ ಮುಖ ಕಂಡಾಕ್ಷಣ ಅಪ್ಪ ಅಪ್ಪ ಎಂದು ತೊದಲುತ್ತಾ ಬಂದು ವಾಲುತ್ತಿದ್ದ. ಅಂದು ಸೋಮವಾರ. ಗೆಳೆಯರು ಯಾರೂ ಸಿಗದೇ ಇದ್ದ ಕಾರಣ, ಮಧ್ಯಾಹ್ನ ಮೂರರ ಸಮಯ ಆಚೆಯಿಂದ ವರಾಂಡದೊಳಕ್ಕೆ ಬಂದಾಗ, ವರಾಂಡದಲ್ಲಿ ಅಜ್ಜಿಯು ರಾಜನನ್ನು ತೊಡೆಯ ಮೇಲೆ ಕೂಡಿಸಿಕೊಂಡು ದೇವರ ದೀಪಕ್ಕೆ ಬತ್ತಿಗಳನ್ನು ಹೊಸೆಯುತ್ತಿದ್ದಳು. ಅವನ ಮುಖವನ್ನು ಕಂಡು ಹತ್ತಿರ ಬರುವಂತೆ ಕೈ ಚಾಚಿದೆ. ಅವನಿಂದ ಯಾವ ವಿಧವಾದ ಪ್ರತಿಕ್ರಿಯೆ ಬಾರದೆ, ಸುಮ್ಮನೆ ಪಿಳಿ, ಪಿಳಿ ಕಣ್ಣು ಬಿಡುತ್ತಾ ನೋಡುತ್ತಿದ್ದ. ಅವನಲ್ಲಿ ಏನೋ ದೈಹಿಕ ಸ್ಥಿತಿ ಮಾರ್ಪಾಟಾಗಿರುವುದನ್ನು ಗಮನಿಸಿ ಅಜ್ಜಿಯ ಬಳಿ ವಿಚಾರಿಸಿದೆ. ಅವನಿಗೆ 'ಸಂದಾಗಿದೆ' ಕಣೊ, ಈ ದಿನ ಚೆನ್ನಾಗಿಲ್ಲ, ನಾಳೆ ಮಂಗಳವಾರ ತುಂಬಾ ಶ್ರೇಷ್ಠವಾಗಿದೆ, ಚುಟುಕೆ ಇಟ್ಟರೆ ಬೇಗ 'ಸಂದು' ಹರಿಯುತ್ತೆ ಎಂದಳು. ಇದನ್ನು ಕೇಳಿ ನಾನು ತುಂಬಾ ಹಾಸ್ಯಮಾಡಿ, ಮಗುವನ್ನು ಡಾಕ್ಟರ ಬಳಿ ಕರೆದೊಯ್ಯಲು ಹೇಳಿದೆ. ಜ್ವರವೇನೂ ಇಲ್ಲದಿದ್ದರಿಂದ ಆಕೆ ಅಷ್ಟು ಗಮನ ಕೊಡಲಿಲ್ಲ. ಅಜ್ಜಿ ಮಕ್ಕಳಿಗೆ ಬರುವ ವಿವಿಧ ಸಂದಿನ ಬಗ್ಗೆ ವ್ಯಾಖ್ಯಾನ ಕೊಟ್ಟಳು. ಹೂಂಗುಟ್ಟಿದೆ.

ಅದೇ ದಿನ ರಾತ್ರಿ ಸುಮಾರು ಎರಡು ಗಂಟೆಯಾಗಿತ್ತು. ಎಲ್ಲಿಂದಲೋ ಶಬ್ದ ಬಂದಂತಾಯಿತು. ಕಿವಿಗಳನ್ನು ನಿದೆಯ ಮಂಪರಿನಲ್ಲೆ ಚುರುಕುಗೊಳಿಸಿದೆ. ಹೆಣ್ಣು ಧ್ವನಿ, "ರಿ... ರೀ ಮಗು...ಮಗು ನೋಡಿ ಹೇಗೆ ಕಟ್ಟಿಗೆಯಂತೆ ಸೆಳೆದಿದೆ" ಎಂದಿತು. "ಏನ್ ಗೀತಾ... ಸಂಗ್... ನಿದ್ದೆ...ಮಾಡೋಕೆ ಕೂಡಾ ನೀನ್ ಬಿಡೋಲ್ಲಾ...?' ಎಂದು ಮಂಚದಿಂದಿಳಿದ ಶಬ್ದ. ಅಷ್ಟರಲ್ಲಿ ಗೀತಾ ಧಡಾರನೆ ಬಾಗಿಲು

ತೆರೆದು ವರಾಂಡದ ದೀಪ ಹಾಕಿದಳು. ನಾನು ಎದ್ದು ಕುಳಿತೆ. ಆಕೆ ತುಂಬಾ ಗಾಬರಿಯಾದಂತಿತ್ತು. ಗೀತ ಅಜ್ಜಿಯ ಬಳಿ ಬಂದು ಅಮ್ಮಾ...ಅಮ್ಮಾ ಎಂದು ಅಲುಗಾಡಿಸಿ ಆಕೆಯನ್ನು ಎಬ್ಬಿಸಿದಳು. ಶ್ರೀನಿವಾಸ ಒಳಗಡೆಯಿಂದ ಮಗುವನ್ನು ಹೊತ್ತು ತಂದ. ಏನಾಗಿದೆಯೆಂದು ಹತ್ತಿರ ಸರಿದು ನೋಡುತ್ತೇನೆ. ಆ ಮಗುವಿನ ಕಣ್ಣುಗುಡ್ಡೆಗಳು ಹೊರಚಾಚಿವೆ. ಅದರಲ್ಲಿ ಚಲನೆಯೇ ಇಲ್ಲ; ಕಟ್ಟಿಗೆಯಂತೆ ಮಗುವಿನ ದೇಹ ಸೆಟೆದಿದೆ. ಆ ದೃಶ್ಯವನ್ನು ಕಂಡ ನನ್ನ ಮೈಯ ರೋಮಗಳು ನನಗರಿವಿಲ್ಲದಂತೆಯೇ ನಿಮಿರಿ ನಿಂತವು. ಗೀತ ಅಳುತ್ತಾ ಗಂಡನ ಕೈಯಲ್ಲಿದ್ದ ಮಗುವನ್ನು ತೆಗೆದು ಅಜ್ಜಿಯ ತೊಡೆಯ ಮೇಲೆ ಮಲಗಿಸಿ ಡಾಕ್ಟರರನ್ನು ಕರೆತರುವಂತೆ ಹೇಳಿದಳು. ಆತನ ಜೊತೆ ನಾನೂ ಓಡಿದೆ. ದಾರಿಯಲ್ಲಿ ನಾನು ಕಂಡ ದೃಶ್ಯದಿಂದ ಮಗು ಸತ್ತು ಹೋಗಿದೆ, ಇವರು ಡಾಕ್ಟರನ್ನು ಕರೆದೊಯ್ಯುವುದು ವ್ಯರ್ಥ ಪ್ರಯತ್ನವೆಂದು ಯೋಚಿಸಿದೆ. ಡಾಕ್ಟರರ ಮನೆ ತಲುಪಿದಾಗ ಅಲ್ಲಿದ್ದ ಕಾವಲುಗಾರ, "ಡಾಕ್ಟರರು ಊರಲ್ಲಿಲ್ಲ. ಸಂಸಾರ ಸಮೇತ ಸಂಬಧಿಗಳ ಮದುವೆಗೆ ಹೋಗಿದ್ದಾರೆ," ಎಂದ. ವಿಧಿಯನ್ನು ಶಪಿಸುತ್ತ ಮನೆಗೆ ಮರಳಿದೆವು.

ಮನೆ ತಲುಪಿದಾಗ ಯಥಾಪ್ರಕಾರ ಅಜ್ಜಿಯು ಮಗುವನ್ನು ತೊಡೆಯ ಮಲಗಿಸಿಕೊಂಡಿದ್ದಾಳೆ. ಆಕೆಯ ಮುಂದೆ ಒಂದು ತಟ್ಟೆಯಲ್ಲಿ ಕೆಂಪು ನೀರು (ಅರಿಶಿನ ಕುಂಕುಮ ಮಿಶ್ರಿತ ನೀರು) ಮತ್ತು ಹಣತೆಯ ದೀಪ ಇಟ್ಟುಕೊಂಡಿದ್ದಾಳೆ. ಹಣತೆಯ ದೀಪದಲ್ಲಿ ಕಪ್ಪು ಬಳೆಯ ಚೂರು ಹಿಡಿದು ಕಾಯಿಸುತ್ತಿದ್ದಾಳೆ. ಇದನ್ನು ನೋಡುತ್ತಿದ್ದಂತೆ ಬಾಲ್ಯದಲ್ಲಿ ನನಗೆ ನಮ್ಮ ತಾಯಿ ಮಾಡುತ್ತಿದ್ದ (ಚುಟುಕೆ ಇಡುತ್ತಿದ್ದುದು) ಕೆಲಸ ಜ್ಞಾಪಕಕ್ಕೆ ಬಂತು. ನನ್ನಲ್ಲಿ ಕುತೂಹಲ ಹೆಚ್ಚಿ, ಅಜ್ಜಿ ಮಾಡುತ್ತಿದ್ದ ಕೆಲಸವನ್ನು ಗಮನಿಸುತ್ತ ನಿಂತೆ. ಆಗಲೇ ವಠಾರದ ಮಂದಿ ನೆರೆದಿದ್ದರು. ಗೀತ ಒಂದು ಮೂಲೆಯಲ್ಲಿ ಕುಳಿತು ಕಣ್ಣೀರಿಡುತ್ತಿದ್ದಳು. ನಮಗೇ ಇಷ್ಟು ಸಂಕಟವಾಗುತ್ತಿರಬೇಕಾದರೆ, ಇನ್ನು ಹೆತ್ತಾಕೆಯ ಒಡಲು ಸುಮ್ಮನಿದ್ದೀತೆ ?

ನಾನು ನೋಡುತ್ತಿದ್ದಂತೆ ಕೆಂಪಗೆ ಕಾದ ಬಳೆ ಚೂರಿನಿಂದ ಮಗುವಿನ ನೆತ್ತಿ ಸುಳಿಗೆ ತಾಗಿಸಿದಳು ಅಜ್ಜಿ. ಚಿಟ್ಟೆಂಬ ಶಬ್ದ ಹೊರಟಿತು. ನೋಡ ನೋಡುತ್ತಿದ್ದಂತೆ ಮಗುವಿನ ಕಣ್ಣುಗುಡ್ಡೆಗಳಲ್ಲಿ ಚಲನೆ ಹುಟ್ಟಿತು. ಪಕ್ಕದಲ್ಲಿದ್ದ ಕೆಂಪು ನೀರನ್ನು ಅಜ್ಜಿಯು ಕೈಯಲ್ಲಿ ತೆಗೆದುಕೊಂಡು ಮಗುವಿನ ಮುಖದ ಮೇಲೆ ಎರಚಿದಳು. ಆ ಮಗು ಚಿಟ್ಟನೆ ಚೀರುತ್ತಾ ಕೈ, ಕಾಲು ಬಡಿಯತೊಡಗಿತು. ಆ ಶಬ್ದ ಕೇಳುತ್ತಲೇ ಗೀತ ಓಡಿ ಬಂದು ಅಜ್ಜಿಯ ತೊಡೆಯ ಮೇಲಿದ್ದ ಮಗುವನ್ನು ಬಾಚಿ ತಬ್ಬಿ, ಒಂದೇ ಸಮನೆ ಮುದ್ದಿನ ಮಳೆಯನ್ನೇ ಸುರಿಸಿದಳು. ಆ ವಾತ್ಸಲ್ಯವನ್ನು ಕಂಡು, ನನ್ನ ಕಣ್ಣುಗಳಲ್ಲಿಯೂ ಅರಿವಿಲ್ಲದೆ ಕಣ್ಣೀರು ಸುರಿಯಿತು. ನೆರೆದ ಮಂದಿ ನೆಮ್ಮದಿಯ ನಿಟ್ಟುಸಿರು ಬಿಟ್ಟು ಅಜ್ಜಿಯ ಸಮಯ ಪ್ರಜ್ಞೆಯನ್ನು ಕೊಂಡಾಡಿದರು. ✡

ವ್ಯಾಪಾರ

ಕನಸುಗಳು
ಮಾರಾಟವಾಗುತ್ತವೆ
ರಾತ್ರಿಯ ಬಜಾರದಲ್ಲಿ
ಸುಖನಿದ್ರೆಯ ತೆತ್ತು
ಕೊಳ್ಳಬಹುದು


ಬೇರು-ಬಿಳಲು

ಬೆಳೆಯತೊಡಗುವ ಬೇರು
ಬಿಳಿಲಿಗಡಿಪಾಯ
ಬಿಳಲು ಬೆಳೆದಂತೆಲ್ಲ
ಬೇರಿಗೆ ಅಪಾಯ

— ಎಚ್. ಆನಂದರಾಮ ಶಾಸ್ತ್ರಿ

ನಾರಾಯಣ ದತ್ತ

ಒಂದು ವರ್ಷದ ಕಂದ – ರಾಜೀವ ಗಾಂಧಿ-ಕೂತ ಪೆರ್ಯಾಂಬ್ಯುಲೇಟರನ್ನು ಅಲಹಾಬಾದಿನ ಆನಂದ ಭವನದ ಹಸಿರು ಲಾನಿನಲ್ಲಿ ದೂಡಿಕೊಂಡು ಹೋಗುತ್ತಿದ್ದ ದಿನಗಳಲ್ಲಿ (೧೯೪೫) ನಾರಾಯಣ ದತ್ತ ತಿವಾರಿಯವರಿಗೆ ಮುಂದೊಂದು ದಿನ ಆ ಮಗುವೇ ತನ್ನ ನಾಯಕನಾಗುತ್ತಾನೆಂದು ಕನಸು — ಮನಸ್ಸಿನಲ್ಲಿಯೂ ಅನಿಸಿರಲಿಲ್ಲ. ಮುಂದೆ ರಾಜೀವ ಗಾಂಧಿಯ ಸಚಿವ ಸಂಪುಟದಲ್ಲಿ ಮಹತ್ವದ ಮಂತ್ರಿಯಾಗುತ್ತೇನೆಂದೂ ಅವರಿಗೆ ಗೊತ್ತಿರಲಿಲ್ಲ. ಎರಡು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದ ಇಪ್ಪತ್ತೊಂದರ ಹರೆಯದ ತಿವಾರಿ ಆಗ ಸಚಿವ ಸ್ಥಾನದ ಕನಸು ಕಾಣುವುದಂತೂ ಅಶಕ್ಯದ ಮಾತೇ ಆಗಿತ್ತು. ಜವಾಹರಲಾಲ ನೆಹರೂ ಮತ್ತು ಫಿರೋಜ್ ಗಾಂಧಿ ಆಗ ತಿವಾರಿಯ ನಾಯಕರು. ಇಂದಿರಾ ಗಾಂಧಿ ಇನ್ನೂ ರಾಜಕೀಯದಲ್ಲಿ ಪ್ರವೇಶ ಮಾಡಿರಲಿಲ್ಲ. ಸಂಜಯ ಗಾಂಧಿ ಇನ್ನೂ ಹುಟ್ಟಿರಲಿಲ್ಲ.



ಆ ದಿನಗಳಲ್ಲಿ ತಿವಾರಿ ಆನಂದ ಭವನದ ಸೇವಕ ವರ್ಗದವರಿಗಾಗಿದ್ದ ವಸತಿಯೊಂದರಲ್ಲಿ ವಾಸಿಸುತ್ತಿದ್ದರು. ಅವರ ಕೋಣೆ 'ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿ'ನ ಕಚೇರಿಯೂ ಆಗಿತ್ತು. ಆಗ ಅತ್ಯಂತ ಬಲಿಷ್ಠವೆನಿಸಿದ್ದ 'ಅಖಿಲ ಭಾರತ ವಿದ್ಯಾರ್ಥಿ ಮಹಾಮಂಡಳ'ದಿಂದ ಬಂಡೆದ್ದು ಹೊರಬಂದವರ ಗುಂಪೇ ಈ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸು. ತಿವಾರಿ ಪಡುತ್ತಿದ್ದ ಕಷ್ಟಗಳನ್ನರಿತ ಫಿರೋಜ್ ಗಾಂಧಿ, ಸಹಾನುಭೂತಿಯಿಂದ, ಆ ಕೋಣೆಯಲ್ಲಿ ವಾಸಿಸಲು ಅವಕಾಶ ಮಾಡಿಕೊಟ್ಟಿದ್ದರಲ್ಲದೇ ಆ ಉದಿಯಮಾನ ಸಂಘಟನೆಯ ಕಚೇರಿಯ ಕಾರ್ಯದರ್ಶಿಯ ಕೆಲಸವನ್ನೂ ನಾರಾಯಣ ದತ್ತರಿಗೆ ಕೊಟ್ಟಿದ್ದರು. ಉದರ ಪೋಷಣೆಗಾಗಿ ಅವರು ವಿದ್ಯಾರ್ಥಿಗಳಿಗೆ ಟ್ಯೂಷನ್

ಕುಲದೀಪ ಕುಮಾರ

ತಿವಾರಿ

ಹೇಳುತ್ತಿದ್ದರು. ಜವಾಹರಲಾಲ ನೆಹರೂರ ಅಡಿಗೆಯಾಳು ತುಳಸಿಯ ಮಗ ಬನ್ಸಿಯೇ, ತಿವಾರಿಯವರ ಮೊದಲ ಶಿಷ್ಯ. ಅವನು ತಿವಾರಿಯವರಿಗೆ ತಿಂಗಳಿಗೆ ಏಳು ರೂಪಾಯಿ ಫೀ ಕೊಡುತ್ತಿದ್ದ.

ಬಡತನದಲ್ಲಿ ಕಳೆದ ಆ ದಿನಗಳನ್ನು ತಿವಾರಿಯವರು ಇನ್ನೂ ಮರೆತಿಲ್ಲ. ಅವರ ವ್ಯಕ್ತಿತ್ವ, ಅವರ ಕಾರ್ಯಭಾರದ ರೀತಿಗಳಲ್ಲಿ ಇನ್ನೂ ಅದರ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ೧೯೫೨ರಲ್ಲಿ ಉತ್ತರ ಪ್ರದೇಶ ವಿಧಾನಸಭೆಯ ಅತ್ಯಂತ ಕಿರಿಯ ವಯಸ್ಸಿನ ಶಾಸಕನಾದುದು, ಎಂಟು ವರ್ಷಗಳ ವರೆಗೆ ರಾಜ್ಯದ ಹಣಕಾಸು ಸಚಿವನಾದುದು, ಮೂರು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ನಂತರ ಕೇಂದ್ರ ಸಂಪುಟದಲ್ಲಿ ಯೋಜನೆ, ಉದ್ಯಮ, ಉಕ್ಕು ಮತ್ತು ಗಣಿ ಶಾಖೆ, ವಿದೇಶ ವ್ಯವಹಾರ ಮತ್ತು ಹಣಕಾಸು ಮಂತ್ರಿಯಾಗಿ ಜವಾಬ್ದಾರಿ ಹೊತ್ತುಕೊಂಡ ತಿವಾರಿಯವರಿಗೆ ಅಧಿಕಾರ ತಲೆ ತಿರುಗಿಸಿಲ್ಲ. ಇಂದಿಗೂ ಅವರು ಮೃದು ಭಾಷಿ, ಸಂತೋಷಚಿತ್ತ ಮತ್ತು ಕಾರ್ಯಶೀಲ ವ್ಯಕ್ತಿಯಾಗಿದ್ದಾರೆ.

ಹಳೆಯ ಕಾಂಗ್ರೆಸ್ಸಿಗನಾಗಿರುವ ತಿವಾರಿ ಇಂದಿಗೂ ಪ್ರತಿ ದಿನ ಬೆಳಿಗ್ಗೆ ತಮ್ಮ ನಿವಾಸದಲ್ಲಿ ನೂರಾರು ಜನರಿಗೆ ಭೆಟ್ಟಿ ಕೊಡುತ್ತಾರೆ. ಪ್ರತಿಯೊಬ್ಬನ ಕುಂದುಕೊರತೆಗಳನ್ನು ಮನಗೊಟ್ಟು ಆಲಿಸುತ್ತಾರೆ. ದೂರು – ದುಮ್ಮಾನಗಳಿಗೆ ತಕ್ಕ ಪರಿಹಾರ ಸೂಚಿಸುತ್ತಾರೆ; ಅಪರಿಹಾರ್ಯವೆಂದೆನಿಸಿದಲ್ಲಿ ಸಮಾಧಾನದಿಂದ ತಿಳಿ ಹೇಳುತ್ತಾರೆ. “ಇದು ಅವರ ಧೈರ್ಯಗೇಡಿತನದ ಲಕ್ಷಣ” ಎಂದು ತಿವಾರಿಯವರ ಕೆಲ 'ವಿರೋಧಿಗಳು ಟೀಕಿಸುತ್ತಾರಾದರೂ ರಾಷ್ಟ್ರದ ರಾಜಕೀಯ ಸ್ಥಿತ್ಯಂತರಗಳ ಈ ಸಮಯದಲ್ಲೂ ತಿವಾರಿಯವರ ಜನಪ್ರಿಯತೆ ಕುಗ್ಗಿಲ್ಲವಷ್ಟೇ ಅಲ್ಲ, ಅವರ ಬಗ್ಗೆ ಕಟುನುಡಿಯಾಡುವವರ ಸಂಖ್ಯೆ ನಗಣ್ಯವೆನಿಸುವಷ್ಟು ಕಡಿಮೆ. “ತಿವಾರಿ ಎಂದೂ ಸಿಟ್ಟಿಗೇಳುವುದಿಲ್ಲ. ಜಗಳಕ್ಕಿಳಿಯುವುದಿಲ್ಲ. ಯಾವಾಗಲೂ ಸ್ನೇಹಭಾವದಿಂದಲೇ ಮಾತನಾಡುತ್ತಾರೆ. ತಿವಾರಿಯವರ ವಿರೋಧ ಕಟ್ಟಿಕೊಳ್ಳುವುದು ಬಹಳ ಕಷ್ಟದ ಕೆಲಸ” ಎಂದು ವಿರೋಧಿ ಧುರೀಣ ಮಧು ಲಿಮಯೇ ಹೇಳುತ್ತಾರೆ.

೧೯೨೫ ರ ಅಕ್ಟೋಬರ್ ೧೮ ರಂದು ನೈನಿತಾಲ್ ಜಿಲ್ಲೆಯ ಬಾತುಲಿ ಗ್ರಾಮದಲ್ಲಿ ಜನಿಸಿದ ತಿವಾರಿ ಬಾಲ್ಯವನ್ನು ಬಡತನದೊಂದಿಗೆ ಹೋರಾಡುತ್ತಲೇ ಕಳೆದರು. ಅವರ ತಂದೆ ಪೂರ್ಣಾನಂದ ತಿವಾರಿ ಅರಣ್ಯ ಇಲಾಖೆಯ ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತು ೧೯೨೧ರ ಅಸಹಕಾರ ಚಳುವಳಿಯಲ್ಲಿ ಧುಮುಕಿದ್ದರು. ಎಂಟು ವರ್ಷದವರಿದ್ದಾಗಲೇ ನಾರಾಯಣ ದತ್ತರು ತಾಯಿಯನ್ನು ಕಳೆದುಕೊಂಡರು. ಅತ್ತ ಅವರ ತಂದೆ ಚಳುವಳಿಯಲ್ಲಿ ಪಾಲ್ಗೊಂಡಿದ್ದಾಗ ಇತ್ತ ನಾರಾಯಣ ದತ್ತರು ಒಣ ಎಲೆ ಸಂಗ್ರಹಿಸುವುದು, ಕಟ್ಟಿಗೆ ಒಡೆಯುವುದು, ದನ ಕಾಯುವುದು ಮುಂತಾದ ಕೆಲಸಗಳನ್ನು ಮಾಡಿ ಹೊಟ್ಟೆ ಹೊರೆದುಕೊಳ್ಳಬೇಕಾಗಿತ್ತು. ಅವರು ಇಂಟರ್‌ಮೀಡಿಯೇಟ್ ಪರೀಕ್ಷೆ ಪಾಸಾಗುವವರೆಗೆ ಪರಿಸ್ಥಿತಿ ಹೀಗೇ ಇತ್ತು. ೧೯೩೪ ರ ವರೆಗೆ ಅವರು ಸ್ವಗ್ರಾಮದಲ್ಲೇ ವಿದ್ಯಾಭ್ಯಾಸ ಮಾಡಿದರು. ನಂತರ ಬರೇಲಿಯ ಎಡ್ವರ್ಡ್ ಮೆಮೋರಿಯಲ್ ಹೈಸ್ಕೂಲಿನಲ್ಲಿ ಏಳನೇ ತರಗತಿ ಸೇರಿದರು. ಮಾಧ್ಯಮಿಕ ಅಭ್ಯಾಸ ಮುಗಿದ ನಂತರ ಅವರನ್ನು ಕಾಲೇಜಿಗೆ ಕಳಿಸುವ

(ಚಿತ್ರ ಹಾಗೂ ಲೇಖನ Sunday ಸಾಪ್ತಾಹಿಕದ ಕೃಪೆಯಿಂದ)

ಯೋಚನೆಯನ್ನೇನೂ ಅವರ ತಂದೆ ಮಾಡಿರಲಿಲ್ಲ. ಆದರೆ ಮಗನ ಪಟ್ಟು, ಸಂಬಂಧಿಕರ ಒತ್ತಾಯಗಳಿಂದಾಗಿ ಪೂರ್ಣಾನಂದರು ತಮ್ಮ ನಿರ್ಧಾರವನ್ನು ಬದಲಿಸಬೇಕಾಯಿತು.

ತಿವಾರಿಯವರು ಬ್ರಿಟಿಶ್ ವಿರೋಧಿಯಾಗಿ ರಾಜಕೀಯ ಪ್ರವೇಶಿಸಿದ್ದು ೧೯೩೯ರಲ್ಲಿ – ಬ್ರಿಟಿಶ್ ಸರಕಾರ ಯುದ್ಧ ಯತ್ನದ ವಿಷಯದಲ್ಲಿ ತಳೆದ ನಿಲುವೆಯನ್ನು ಖಂಡಿಸಿ ಕಾಂಗ್ರೆಸ್ ಸರಕಾರಗಳೆಲ್ಲ ರಾಜಿನಾಮೆಯಿತ್ತುದರ ಬೆಂಬಲಾರ್ಥವಾಗಿ ತಮ್ಮ ಗ್ರಾಮ ಪದ್ಮಪುರಿಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮೊಟ್ಟಮೊದಲ ಬಾರಿ ಮಾತನಾಡುವುದರ ಮೂಲಕ. ಜೊತೆ ಜೊತೆಗೆ ಪುಸ್ತಕಗಳನ್ನು ಕೊಳ್ಳಲು ಹಣವಿಲ್ಲದ್ದರಿಂದ ಗೆಳೆಯರಿಂದ ಪುಸ್ತಕಗಳನ್ನು ಎರವಲು ಪಡೆದುಕೊಂಡು ಒಳ್ಳೆಯ ಗುಣ ಪಡೆದು ಇಂಟರ್‌ಮೀಡಿಯೇಟ್ ಪರೀಕ್ಷೆಯನ್ನು ಪಾಸಾದರು. ೧೯೪೨ರ ಆಗಸ್ಟ್ ಒಂಬತ್ತರ 'ಕ್ವಿಟ್ ಇಂಡಿಯಾ' ಚಳುವಳಿಯ ಕರೆಗೆ ಓಗೊಟ್ಟು, ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ತಮ್ಮನ್ನು ಸಂಪೂರ್ಣವಾಗಿ ರಾಷ್ಟ್ರಸೇವೆಗೆ ಸಮರ್ಪಿಸಿಕೊಳ್ಳಲು ನಿರ್ಧರಿಸಿ ಬ್ರಿಟಿಶ್ ಸರಕಾರದ ವಿರುದ್ಧ ಪ್ರದರ್ಶನ, ಸಭೆಗಳನ್ನು ಸಂಘಟಿಸತೊಡಗಿದರು. "ಅಂಗ್ರೇಜೋ, ಭಾರತ ಛೋಡೋ" (ಬ್ರಿಟಿಶರೇ ಭಾರತ ಬಿಟ್ಟು ತೊಲಗಿರಿ) ಎಂಬ ಬರಹದ ಭಿತ್ತಿ ಪತ್ರಗಳನ್ನು ಬರೆಯುವುದರಲ್ಲೂ ಗೋಡೆಗಳ ಮೇಲೆ ಘೋಷಣೆ ಬರೆಯುವುದರಲ್ಲೂ ಅವರು ನಿರತರಾದರು.

ಜಿಲ್ಲಾ ಮ್ಯಾಜಿಸ್ಟ್ರೇಟ್ ಗ್ಯಾಲನ್ನನ ಕಚೇರಿಯ ಹೊರಗೋಡೆಯ ಮೇಲೆ ಇಂಥ ಭಿತ್ತಿಪತ್ರಗಳನ್ನು ಅಂಟಿಸಿದ್ದಕ್ಕಾಗಿ ೧೯೪೨ರ ಸಪ್ಟಂಬರಿನಲ್ಲಿ ತಿವಾರಿ ಬಂಧಿಸಲ್ಪಟ್ಟರು. ೧೭ರ ಹರೆಯದ, ಗಾಂಧಿ ಟೊಪ್ಪಿಗೆ ಧರಿಸಿದ ತಿವಾರಿಯವರನ್ನು ಬ್ರಿಟಿಶ್ ಅಧಿಕಾರಿಯ ಎದುರು ತಂದು ನಿಲ್ಲಿಸಿದಾಗ, ಟೊಪ್ಪಿಗೆಯನ್ನು ಕಿತ್ತೊಗೆಯುವಂತೆ ಹೇಳಲಾಯಿತು. ಕೂಡಲೆ ತಿವಾರಿಯವರು ನಗುತ್ತ "ನನ್ನ ಟೊಪ್ಪಿಗೆಯನ್ನು ಕಿತ್ತೊಗೆಯಬಹುದು. ಆದರೆ ನನ್ನ [illegible]?" ಎಂದರಂತೆ. ಈ 'ಅಪರಾಧ'ಕ್ಕಾಗಿ ಅವರನ್ನು ಕೆಲ ದಿನ ಗೃಹಬಂಧನದಲ್ಲಿಡಲಾಯಿತು.

ತಿವಾರಿಯವರ ರಾಜಕೀಯ ಚಟುವಟಿಕೆಗಳು ಹೆಚ್ಚತೊಡಗಿದಾಗ ಅವರ ಗ್ರಾಮದ ಪಟವಾರಿಯು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ನಾರಾಯಣ ದತ್ತ ಮತ್ತು ಅವರ ತಂದೆಯನ್ನು ಬಂಧಿಸುವಂತೆ ಸೂಚಿಸಿದ. ಅದರಂತೆ ೧೯೪೨ರ ಡಿಸೆಂಬರ್ ೧೯ರ ಮಧ್ಯರಾತ್ರಿ ಪೊಲೀಸರು ತಿವಾರಿಯವರ ಗ್ರಾಮವನ್ನು ಮುತ್ತಿದರು. ಸತ್ಯನಾರಾಯಣ ಪೂಜೆಗಾಗಿ ಪಕ್ಕದ ಹಳ್ಳಿಗೆ ಹೋಗಿದ್ದ ಪೂರ್ಣಾನಂದರನ್ನು ಅಲ್ಲಿಂದ ಕರೆತರಲಾಯಿತು. ಮಧ್ಯರಾತ್ರಿ ಒಂದೂವರೆಗೆ ಮೈ ಕೊರೆಯುವ ಚಳಿಯಲ್ಲಿ ತಂದೆ-ಮಗ ಇಬ್ಬರನ್ನೂ ಬೇಡಿ ತೊಡಿಸಿ ೧೮ ಕಿಲೋಮೀಟರ್ ದೂರದ ಭುವಾಲಿ ಕಾರಾಗೃಹದವರೆಗೆ ನಡೆಸಿಕೊಂಡೇ ಕರೆದೊಯ್ಯಲಾಯಿತು. ಅಲ್ಲಿ ಒಂದು ದಿನ ಅವರನ್ನಿಟ್ಟು ಮರುದಿನ ಮತ್ತೆ ನೈನಿತಾಲ್ ಜಿಲ್ಲಾ ಕಾರಾಗೃಹದವರೆಗೆ ಪೊಲೀಸು ಪಹರೆಯಲ್ಲಿ ಅವರಿಬ್ಬರೂ ನಡೆಯಬೇಕಾಯಿತು. ನೈನಿತಾಲ್‌ನಲ್ಲಿ ನಾರಾಯಣ ದತ್ತರಿಗೆ ಹದಿನೈದು ತಿಂಗಳುಗಳ ಕಠಿಣ ಶಿಕ್ಷೆ ವಿಧಿಸಿ ಬರೇಲಿ ಸೆಂಟ್ರಲ್ ಜೈಲಿಗೆ ತಳ್ಳಲಾಯಿತು.

ಜೈಲಿನಲ್ಲಿದ್ದಾಗ, ರಾಜಕೀಯ ಕೈದಿಗಳನ್ನು ಸರಿಯಾಗಿ ನಡೆಸಿಕೊಳ್ಳಬೇಕೆಂದು ಒತ್ತಾಯಿಸಿ ತಿವಾರಿಯವರು ಉಪವಾಸ ಸತ್ಯಾಗ್ರಹ ಕೈಕೊಂಡರು. ಆಗ ರಫಿ ಅಹ್ಮದ್ ಕಿಡ್ವಾಯಿ, ಸಂಪೂರ್ಣಾನಂದ, ಪುರುಷೋತ್ತಮದಾಸ ಟಂಡನ್ ಮತ್ತು ಗೋವಿಂದ ಮಾಲವೀಯರು ಅದೇ ಜೈಲಿನಲ್ಲಿದ್ದರು. ತಿವಾರಿಯವರ ಅನ್ನ ಸತ್ಯಾಗ್ರಹದ ವಿಷಯ ತಿಳಿದಾಗ ತಮ್ಮನ್ನು ಅವರ ಕೋಣೆಗೆ ಕರೆದೊಯ್ಯುವಂತೆ ಜೈಲ್ ಸುಪರಿಂಟೆಂಡೆಂಟ್‌ರನ್ನು ಕಿಡ್ವಾಯಿ ಕೇಳಿಕೊಂಡರು. ಆಗ ಮೊದಲ ಬಾರಿಗೆ ತಿವಾರಿಯವರಿಗೆ ಕಿಡ್ವಾಯಿಯವರ ಮೂಲಕ ಅನೇಕ ರಾಷ್ಟ್ರೀಯ ನಾಯಕರೊಂದಿಗೆ ಸಂಪರ್ಕ ಬಂತು.

೧೯೪೪ರಲ್ಲಿ ತಿವಾರಿಯವರ ಬಿಡುಗಡೆಯಾಯಿತು. ಆದರೆ ಮುಂದೇನು ಮಾಡಬೇಕೆಂಬುದು ತಿವಾರಿಯವರಿಗೆ ಗೊತ್ತಿರಲಿಲ್ಲ. ಹಣವಿಲ್ಲದ್ದಕ್ಕಾಗಿ, ಉನ್ನತ ವಿದ್ಯಾಭ್ಯಾಸಕ್ಕೆ [illegible] ಮಗನ ವಿಚಾರವನ್ನು ಅವರ ತಂದೆ [illegible]

ದರು. ಆದರೆ ತಿವಾರಿಯವರು ವಿದ್ಯಾಭ್ಯಾಸ ಮುಂದುವರಿಸುವ ಛಲವನ್ನು ಬಿಡಲಿಲ್ಲ. ಹಣ ಗಳಿಸುವುದಕ್ಕಾಗಿ ಹತ್ತಿರದ ಕಾಡಿನಿಂದ ಗಿಡ ಮೂಲಿಕೆಗಳನ್ನು ತಂದು 'ಗುಲ್ ಬನಾಫ್ಶಾ' ಎಂಬ ಔಷಧಿ ತಯಾರಿಸಿ ಸಣ್ಣ ಪಾಕೀಟುಗಳಲ್ಲಿಟ್ಟು ಪಕ್ಕದ ಊರುಗಳಿಗೆ ಹೊತ್ತೊಯ್ದು ಮಾರಿ ಹನ್ನೊಂದು ರೂಪಾಯಿಗಳನ್ನು ಉಳಿಸಿದರು.

ಇದೇ ವೇಳೆಗೆ, ಫಿರೋಜ್ ಗಾಂಧಿ ಅಲಹಾಬಾದಿನಲ್ಲಿ ರಾಜಕೀಯ ಸಂತ್ರಸ್ತರ ಪರಿಹಾರ ಸಮಿತಿಯನ್ನು ರಚಿಸಿದ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ ತಿವಾರಿ, ವಿದ್ಯಾಭ್ಯಾಸವನ್ನು ಮುಂದುವರಿಸುವ ತಮ್ಮಿಚ್ಛೆ ತಮ್ಮ ಆರ್ಥಿಕ ಪರಿಸ್ಥಿತಿ, ರಾಜಕೀಯ ಚಟುವಟಿಕೆಗಳನ್ನೆಲ್ಲ ತಿಳಿಸಿ, ಫಿರೋಜ್ ಗಾಂಧಿಯವರಿಗೆ ಪತ್ರ ಬರೆದು ತಮ್ಮ ಕನಸು ನನಸಾಗಿಸಲು ಸಹಾಯವನ್ನು ಕೋರಿದರು. ಕೆಲ ದಿನಗಳಲ್ಲೇ ಅಲಹಾಬಾದಿನ ಆನಂದ ಭವನಕ್ಕೆ ಬಂದು ತಮ್ಮನ್ನು ಭೆಟ್ಟಿಯಾಗುವಂತೆ ಫಿರೋಜ್ ಗಾಂಧಿ ಬರೆದ ಪತ್ರ ತಿವಾರಿಯವರ ಕೈಸೇರಿತು.

ನಾರಾಯಣ ದತ್ತರು ತಮ್ಮ ಗೆಳೆಯನೊಬ್ಬನಿಂದ ಐದು ರೂಪಾಯಿ ಹಾಗೂ ಚಿಕ್ಕಪ್ಪನೊಬ್ಬನಿಂದ ಇಪ್ಪತ್ತು ರೂಪಾಯಿ ಕೈಗಡ ಪಡೆದು, ತಂದೆಯವರಿಗೇನೂ ಹೇಳದೇ, ಫಿರೋಜ್ ಗಾಂಧಿಯವರ ಪತ್ರದೊಂದಿಗೆ ಅಲಹಾಬಾದಿಗೆ ಹೊರಟರು. ಅಲಹಾಬಾದ ರೈಲು ನಿಲ್ದಾಣದಿಂದ ನೇರವಾಗಿ ಆನಂದ ಭವನದೆಡೆ ಹೆಜ್ಜೆ ಹಾಕಿದರು. "ಆಗಲೇ ಕತ್ತಲಾಗುತ್ತಿತ್ತು. ನಾನು ಆನಂದ ಭವನಕ್ಕೆ ಹೋದಾಗ ಫಿರೋಜ್ ಸಾಹೇಬರು ಲಖನೌಗೆ ಹೋಗಿದ್ದಾರೆಂದು ತಿಳಿಯಿತು" ಎಂದು ತಿವಾರಿ ಸ್ಮರಿಸಿಕೊಳ್ಳುತ್ತಾರೆ.

ಮರುದಿನ ತಮ್ಮನ್ನು ಭೆಟ್ಟಿಯಾದ ತಿವಾರಿಯವರಿಗೆ ಕೂಡಲೇ ವಿಶ್ವವಿದ್ಯಾಲಯಕ್ಕೆ ಹೋಗಿ ಪ್ರವೇಶ ಶುಲ್ಕವನ್ನು ತುಂಬುವಂತೆ ಫಿರೋಜ್ ಗಾಂಧಿ ಸೂಚಿಸಿದರು. ಹಾಗೆ ಮಾಡಿದ ಮೇಲೆ ತಿವಾರಿಯವರ ಕಿಸೆಯಲ್ಲಿ ಉಳಿದಿದ್ದು ಏಳು ರೂಪಾಯಿ ಮಾತ್ರ.

ಕೆಲ ದಿನಗಳಲ್ಲೇ ಅವರು ಅತ್ಯಂತ ಪ್ರಭಾವಿ ವಿದ್ಯಾರ್ಥಿ ನಾಯಕನಾಗಿ ಬೆಳೆದರು. ೧೯೪೫ರ ಸಪ್ಟಂಬರಿನಲ್ಲಿ ತಿವಾರಿಯವರನ್ನು ಮೊದಲ ಸಲ ಭೆಟ್ಟಿಯಾದ ಎಚ್. ಎನ್. ಬಹುಗುಣ "ಆಗ ಅವರಲ್ಲಿ ಉತ್ಸಾಹ ತುಂಬಿ ತುಳುಕುತ್ತಿತ್ತು" ಎಂದು ನೆನಪಿಸಿಕೊಳ್ಳುತ್ತಾರೆ.

ಇದೇ ವೇಳೆಗೆ ನಾರಾಯಣ ದತ್ತರು ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ ನಾರಾಯಣರಂಥ ಸಮಾಜವಾದಿ ಧುರೀಣರ ಪ್ರಭಾವಕ್ಕೊಳಗಾದರು. ೧೯೪೬ರಲ್ಲಿ ಕಾಂಗ್ರೆಸ್ ಸೋಶಿಯಾಲಿಸ್ಟ್ ಪಾರ್ಟಿ ಸೇರಿದ ಅವರು ಮರುವರ್ಷ ಅಲಹಾಬಾದ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ನಾಯಕರಾಗಿ ಆಯ್ಕೆಯಾದರು. ೧೯೪೮ರಲ್ಲಿ ಆಚಾರ್ಯ ನರೇಂದ್ರ ದೇವ, ರಾಮ ಮನೋಹರ ಲೋಹಿಯಾ ಮುಂತಾದವರು ಕಾಂಗ್ರೆಸ್ಸನ್ನು ತ್ಯಜಿಸಿದಾಗ ತಿವಾರಿ ಅವರನ್ನನುಸರಿಸಿದರು. ನಂತರ ೧೯೫೨ರಲ್ಲಿ ನೈನಿತಾಲಿನಿಂದ ಆಯ್ಕೆಯಾದ ಅವರು ಉತ್ತರ ಪ್ರದೇಶ ವಿಧಾನಸಭೆಯ ಅತ್ಯಂತ ಕಿರಿಯ ಸದಸ್ಯನೆನಿಸಿದರು.

೧೯೫೯ ರಲ್ಲಿ ಅವರು ಸ್ವೀಡನ್ನಿನ ಸಮಾಜವಾದಿ ಚಳವಳಿಯ ಅಧ್ಯಯನಕ್ಕಾಗಿ ಆ ರಾಷ್ಟ್ರದ ಖ್ಯಾತ ಅರ್ಥಶಾಸ್ತ್ರಜ್ಞ, ಗುನ್ನಾರ್ ಮಿರ್ಡಲ್‌ರಿಂದ ಆಹ್ವಾನಿಸಲ್ಪಟ್ಟರು. ಸ್ವೀಡನ್ ಮತ್ತು ಇತರ ಯುರೋಪಿಯನ್ ರಾಷ್ಟ್ರಗಳಲ್ಲಿನ ತಮ್ಮ ಅನುಭವಗಳ ಆಧಾರದ ಮೇಲೆ 'ಯುರೋಪಿಯನ್ ಮಿಸಲೆನಿ' ಎಂಬ ಪುಸ್ತಕವನ್ನು ತಿವಾರಿ ಬರೆದರು.

ಮುಂದೆ ಕೆಲ ವರ್ಷಗಳ ವರೆಗೆ ಸಮಾಜವಾದಿ ಚಳುವಳಿಯಲ್ಲಿ ಬಹಳ ಭಿನ್ನಾಭಿಪ್ರಾಯಗಳು ತಲೆದೋರಿ ಬಿಕ್ಕಟ್ಟು ಉಂಟಾಯಿತು. ೧೯೬೨ ರಲ್ಲಿ ತಿವಾರಿಯವರ ಸೋಲಿಗೂ ಇದೇ ಮುಖ್ಯ ಕಾರಣ. ನೈನಿತಾಲ್ ಮತಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ತಿವಾರಿ ಕಾಂಗ್ರೆಸ್ ಅಭ್ಯರ್ಥಿ ದೇವೇಂದ್ರಸಿಂಗ್ ಮೆಹ್ರಾರಿಂದ ಪರಾಜಿತರಾದರು. ಅದೇ ವರ್ಷ ಅವರು ರಾಜ್ಯ ಸಹಕಾರಿ ಡೇರಿ ಸಂಸ್ಥೆಯ ಉಪಾಧ್ಯಕ್ಷರಾದರಲ್ಲದೆ, ಭೂ-ಅಭಿವೃದ್ಧಿ ಬ್ಯಾಂಕಿಗೆ ನಿರ್ದೇಶಕರಾಗಿಯೂ ಆಯ್ಕೆಯಾದರು. ಅಮೆರಿಕದ ಪಾರ್ಲಿಮೆಂಟರಿ

ಜರ್ನಲಿಸಂ ಪದ್ಧತಿಯನ್ನು ಅಭ್ಯಸಿಸಲು ೧೯೬೩ ರಲ್ಲಿ ಫೆಲೋಶಿಪ್ ಪಡೆದು ಅಲ್ಲಿಗೆ ಹೋದರು. ಆಗ ಅವರು 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯ ವಿಶೇಷ ವರದಿಗಾರರಾಗಿಯೂ ಕೆಲಸ ಮಾಡಿದರು. ಏತನ್ಮಧ್ಯೆ ಭಾರತದಲ್ಲಿ ಸಮಾಜವಾದಿ ಪಕ್ಷ ಒಡೆದು ಅಶೋಕ ಮೆಹ್ತಾ ಗುಂಪಿನವರೆಲ್ಲ ಕಾಂಗ್ರೆಸ್ ಪಕ್ಷವನ್ನು ಸೇರಿದರು. ತಿವಾರಿ ಅವರ ಬೆಂಬಲಿಗರಾಗಿದ್ದರಿಂದ ಅವರೂ (೧೯೬೫ರಲ್ಲಿ) ಕಾಂಗ್ರೆಸ್ಸಿಗರಾದರು. ಅದೇ ವರ್ಷ ಸ್ವದೇಶಕ್ಕೆ ಮರಳಿದ ನಂತರ ನಾಲ್ಕೂವರೆ ವರ್ಷಗಳ ಕಾಲ ಭಾರತೀಯ ಯುವ ಕಾಂಗ್ರೆಸ್ಸಿನ ಸಂಚಾಲಕರಾಗಿ ಕೆಲಸ ಮಾಡಿದರು ತಿವಾರಿ.

೧೯೬೯ ರಲ್ಲಿ ಕಾಂಗ್ರೆಸ್ ವಿಭಜನೆಯಾಗಿ, ತಿವಾರಿ ಇಂದಿರಾರ ಪಕ್ಷ ಸೇರಿದಾಗ ರಾಜ್ಯದಲ್ಲಿ ಸಿ.ಬಿ. ಗುಪ್ತಾ ಮಂತ್ರಿಮಂಡಳಿಕ್ಕೆ ರಾಜೀನಾಮೆ ಇತ್ತು ಹೊರಬಂದರು. ನಂತರ ಚರಣಸಿಂಗರು ಕಾಂಗ್ರೆಸ್ (ಆರ್) ಬೆಂಬಲದೊಂದಿಗೆ ರಾಜ್ಯದ ಮುಖ್ಯಮಂತ್ರಿಯಾದಾಗ ತಿವಾರಿ ಹಣಕಾಸು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದರು. ೧೯೭೧ ರಲ್ಲಿ ಕಮಲಾಪತಿ ತ್ರಿಪಾಠಿ ಮುಖ್ಯಮಂತ್ರಿಯಾದಾಗ ತಿವಾರಿಯವರ ಅಧಿಕಾರ ವ್ಯಾಪ್ತಿ ಇನ್ನೂ ಹೆಚ್ಚಾಯಿತು. ಅವರದು ಮಂತ್ರಿಮಂಡಲದಲ್ಲಿ ಎರಡನೆ ಸ್ಥಾನವಾಯಿತು. ಹಣಕಾಸು, ಉದ್ದಿಮೆ, ನೀರಾವರಿ, ವಿದ್ಯುಚ್ಛಕ್ತಿ, ಕಬ್ಬು ಉತ್ಪಾದನೆ, ಅಬಕಾರಿ, ಸಂಸದೀಯ ವ್ಯವಹಾರಗಳು ಮತ್ತು ಕಾರ್ಮಿಕ ಖಾತೆಯ ಜವಾಬ್ದಾರಿ ಅವರ ಮೇಲಿತ್ತು.

೧೯೭೩ ರಲ್ಲಿ ಬಹುಗುಣ ಅಧಿಕಾರಕ್ಕೆ ಬಂದರು. ವಿದ್ಯುಚ್ಛಕ್ತಿ ಖಾತೆಯನ್ನು ಬಿಟ್ಟರೆ, ಉಳಿದ ಎಲ್ಲಾ ಖಾತೆಗಳ ಜವಾಬ್ದಾರಿಯನ್ನು ತಿವಾರಿಯವರಿಗೇ ವಹಿಸಿಬಿಟ್ಟರು ಬಹುಗುಣರು.

೧೯೭೫ ರ ಅಕ್ಟೋಬರಿನಲ್ಲಿ ತಿವಾರಿಯವರು ಸಂಜಯ ಗಾಂಧಿಯ ಪ್ರಭಾವಕ್ಕೊಳಗಾದಾಗ ಪರಿಸ್ಥಿತಿ ಬದಲಾಗಲಾರಂಭಿಸಿತೆಂದು ಬಹುಗುಣ ಹೇಳುತ್ತಾರೆ. ಆಗ ಬಹುಗುಣ ಮತ್ತು ತಿವಾರಿಯವರ ನಡುವೆ ಭಿನ್ನಾಭಿಪ್ರಾಯಗಳು ತಲೆದೋರಲಾರಂಭಿಸಿದವು. ರೈತರಿಗೆ ಪರಿಹಾರ ಒದಗಿಸಲು ಕಬ್ಬಿನ ಬೆಲೆಯೇರಿಸಬೇಕೆಂದು ಬಹುಗುಣ ಬಯಸಿದರೆ ತಿವಾರಿ ವಿಳಂಬ ನೀತಿಯನ್ನನುಸರಿಸಿದರು. ಆಗ ಸಂಜಯ ಗಾಂಧಿ ಬಹುಗುಣರ ಸ್ಥಾನಕ್ಕೆ ತಿವಾರಿಯವರನ್ನು ತರಲು ನಿರ್ಧರಿಸಿದ್ದರು. ಇದು ಗೊತ್ತಾದ ತಕ್ಷಣ ಬಹುಗುಣ ರಾಜೀನಾಮೆ ಸಲ್ಲಿಸಿದರು.

ಇನ್ನುಳಿದಂತೆ 'ಕ್ಲೀನ್' ಎನಿಸಿಕೊಳ್ಳುವ ನಾರಾಯಣ ದತ್ತರ ವ್ಯಕ್ತಿತ್ವಕ್ಕಂಟಿಕೊಂಡ ಕಳಂಕವೆಂದರೆ ತುರ್ತು ಪರಿಸ್ಥಿತಿ ಸಂದರ್ಭದ ಅವರ ವರ್ತನೆ ಮಾತ್ರ. ಆಗ ಸಂಜಯ ಗಾಂಧಿಯನ್ನು ಮೆಚ್ಚಿಸಲು ಈ 'ಪುಕ್ಕಲು ಮನುಷ್ಯ' ಮಾಡಿದ ಯತ್ನಗಳಿಂದಾಗಿ ಅವರಿಗೆ 'ನ್ಯೂ ದಿಲ್ಲಿ ತಿವಾರಿ' ಎಂಬ ಅಡ್ಡ ಹೆಸರು ಬಂತು.

೧೯೮೫ ರಲ್ಲಿ ತಿವಾರಿ ಮತ್ತೆ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಕಳಿಸಲ್ಪಟ್ಟು ೧೯೮೫ ರ ಮಾರ್ಚಿನಲ್ಲಿ ಕಾಶಿಪುರ ಕ್ಷೇತ್ರದಿಂದ ಚುನಾಯಿತರಾದರು. ತಿವಾರಿ ಮೂರನೆಯ ಬಾರಿ ತನ್ನ ರಾಜ್ಯದ ಮುಖ್ಯಮಂತ್ರಿಯಾಗಿ ೧೯೮೫ ರ ಮಾರ್ಚ್ ಏಳರಂದು ಪ್ರಮಾಣ ವಚನ ಸ್ವೀಕರಿಸಿದರು. ಆದರೆ ಭಾರತದ ಹೊಸ ಪ್ರಧಾನಿ ರಾಜೀವ ಗಾಂಧಿ ತಮ್ಮನ್ನು 'ಎತ್ತಿ ಆಡಿಸಿದ' ತಿವಾರಿಯವರನ್ನು ಕೇಂದ್ರ ಸಚಿವರನ್ನಾಗಿ ಮಾಡಿ ಕೈಗಾರಿಕಾ ಇಲಾಖೆಯನ್ನು ನೀಡಿದರು. ಮುಂದೆ ಅವರು ವಿದೇಶ ವ್ಯವಹಾರಗಳ ಇಲಾಖೆಯ ಮೂಲಕ ಹಣಕಾಸು ಮಂತ್ರಿಯಾದದ್ದಂತೂ ಎಲ್ಲರಿಗೂ ಗೊತ್ತಿದ್ದದ್ದೇ. ❁



ಅತಿ ದೊಡ್ಡ ವ್ಯಂಗ್ಯಚಿತ್ರವೊಂದು ೧೯೫೬ರಲ್ಲಿ 'ಅಪ್ಪ ಅಮ್ಮನ ದಿನ' ನಿಮಿತ್ತ ಅರಿಜೋನ ವಿಶ್ವವಿದ್ಯಾಲಯದ ಕಟ್ಟಡದ ಹೊರಗೆ ಪ್ರದರ್ಶಿಸಲ್ಪಟ್ಟಿತು. ಜಗತ್ತಿನ ಅತ್ಯಂತ ದೊಡ್ಡ ಕಾರ್ಟೂನು! ಕಲಾವಿದ ಪೀಟರ್ ಎ. ಕೆಪ್ಲಿಂಗ್

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. **ದಫಾ**
(ಅ) ಕಾನೂನು (ಆ) ಸಲ (ಇ) ಹಣ ಮುಗಿಯುವುದು (ಈ) ಗಡುತರ

೨. **ಕಿಂವದಂತಿ**
(ಅ) ಸ್ವಲ್ಪ ಸ್ವಲ್ಪ (ಆ) ಚಿಲ್ಲರೆ ಮಾತು (ಇ) ಹಾರಿಕೆಯ ಸುದ್ದಿ (ಈ) ದೇವತೆಗಳ ಒಂದು ವರ್ಗ

೩. **ಕಾಸೆ**
(ಅ) ಕಾವಿ ಬಟ್ಟೆ (ಆ) ದುಡ್ಡಿನ ಚೀಲ (ಇ) ಕಾನೂನು (ಈ) ಬೆಸಿಗೆ

೪. **ಒಬ್ಬಳಿ**
(ಅ) ಗುಳ್ಳೆ (ಆ) ದೊಡ್ಡ ಹುಳ ಮಣಸೆ ಹಣ್ಣು (ಈ) ಗುಂಪು

೫. **ಜವ**
(ಅ) ಮೌನ (ಆ) ನಿದ್ದೆಗೇಡು (ಇ) ಸ್ವದೇಶಿ (ಈ) ವೇಗ

೬. **ಹಾಡಿ**
(ಅ) ಒಂದು ರಾಗ (ಆ) ಗಿಡಗಳ ಗುಂಪು (ಇ) ಬಂಗಾರದ ಒಡವೆ (ಈ) ಅಳತೆಯ ಪಾತ್ರೆ

೭. **ಶೋಚನೀಯ**
(ಅ) ಪಶ್ಚಾತ್ತಾಪ ಪಡಬೇಕಾದ (ಆ) ಸ್ವಚ್ಛ ಮಾಡತಕ್ಕ (ಇ) ಆಲೋಚಿಸುವ (ಈ) ರುಚಿಕಟ್ಟಾದ

೮. **ಸುಕರ**
(ಅ) ಹಂದಿ (ಆ) ಬೆಳ್ಳಿ (ಇ) ಸುಲಭವಾಗಿ ಮಾಡಬಹುದಾದ (ಈ) ತೆರಿಗೆ ರಿಯಾಯತಿ

೯. **ದರಕಾರ**
(ಅ) ಲಕ್ಷ್ಯ (ಆ) ಅರ್ಜಿ (ಇ) ದೊಡ್ಡ ಬಡಿಗೆ (ಈ) ಹೊಳಪು

೧೦. **ವ್ಯೂಹ**
(ಅ) ತರ್ಕ (ಆ) ಸೈನ್ಯದ ರಚನೆ (ಇ) ಮದುವೆ (ಈ) ನೆಯ್ಗೆ

೧೧. **ಅಜಗಜಾಂತರ**
(ಅ) ಆಡುಗಳ ಕಾಳಗ (ಆ) ಆನೆಗಳ ಸೈನ್ಯ (ಇ) ಬಹಳ ದೊಡ್ಡ ಭೇದ (ಈ) ಬ್ರಹ್ಮನ ಸ್ವರೂಪ

೧೨. **ಇರಿಕುಳಿ**
(ಅ) ಚಮ್ಮಟಿ (ಆ) ಚಮ್ಮಟಿಗೆ (ಇ) ದೊಡ್ಡ ಹೊಂಡ (ಈ) ಮೈಮೇಲೇರಿ ಬರುವ ಸ್ವಭಾವದ

ಶಬ್ದಭಾಂಡಾರದ ಸರಿಯಾದ ಅರ್ಥಗಳು

೧. **ದಫಾ** (ಅ) ಸಲ. ಆವರ್ತಿ; ಕಾನೂನಿನ ಕಲಮು. ಉದಾ:- ನಾಲ್ಕು ದಫಾ ವಸೂಲಿಗೆ ಬಂದ. [ಅರಬ್ಬಿ-ಉರ್ದು-ದಫಅ]

೨. **ಕಿಂವದಂತಿ** (ಇ) ಹಾರಿಕೆಯ ಸುದ್ದಿ, ಗಾಳಿ ಸುದ್ದಿ ಉದಾ:- ಸರಕಾರ ಉರುಳುವ ಕಿಂವದಂತಿ ಹಬ್ಬಿತ್ತು. [ಸಂ. ಕಿಂ = ಏನು + ವದಂತಿ = ಹೇಳುತ್ತಾರೆ.]

೩. **ಕಾಸೆ** (ಅ) ಕಾವಿ ಬಟ್ಟೆ, ಕಾವಿಬಣ್ಣ ಉದಾ:- ಕಾಸೆಯುಟ್ಟವರೆಲ್ಲ ಸಾಧುಗಳಲ್ಲ. [ಸಂ. ಕಾಷಾಯ = ಕಾವಿ]

೪. **ಒಬ್ಬುಳಿ** (ಈ) ಗುಂಪು, ಒಟ್ಟಿಲು, ಸಮೂಹ. ಉದಾ:- ಒಬ್ಬುಳಿ ಗೂಡಿ ಬಂದ ವಿದ್ಯಾರ್ಥಿಗಳು. [ದೇಶ್ಯ: ಒರ್ = ಒಂದು + ಪುಳಿ (ತಮಿಳು) = ಗುಂಪಾಗು]

೫. **ಜವ** (ಈ) ವೇಗ, ರಭಸ, ಶಕ್ತಿ, ತ್ವರೆ. ಉದಾ:- ಸೈನ್ಯದ ಜವವನ್ನು ಎದುರಿಸಲಾಗಲಿಲ್ಲ. [ಸಂ.]

೬. **ಹಾಡಿ** (ಅ) ಮರಗಳ ಗುಂಪು; ಚಿಕ್ಕ ಕಾಡು-ಹೆಚ್ಚಾಗಿ ಉರುವಲು ಕಟ್ಟಿಗೆಗಾಗಿ ಬಿಟ್ಟ ಮನೆ ಬಳಿಯ ಕಾಡು. ಉದಾ:- ಹಾಡಿಯಲ್ಲಿ ಅವರ ಪ್ರೇಮ ವ್ಯವಹಾರ ನಡೆದಿತ್ತು. [ತುಳು-ಪಾಡಿ-ಸಂ. ವಾಟ]

೭. **ಶೋಚನೀಯ** ([illegible]) ಪಶ್ಚಾತ್ತಾಪ ಪಡಬೇಕಾದ, ದುಃಖಿಸಬೇಕಾದ, ದುಃಖಕ್ಕೆ ಕಾರಣವಾದ. ಉದಾ:- ಶೋಚನೀಯ ನಿಧನ. [ಸಂ. ಶುಚ್ ವ್ಯಥೆಪಡು-ಎಂಬುದರಿಂದ]

೮. **ಸುಕರ** (ಈ) ಸುಲಭವಾಗಿ ಮಾಡಬಹುದಾದ, ಸರಾಗವಾದ. ಉದಾ:- ಪ್ರಯಾಣವನ್ನು ಸುಕರವಾಗಿ ಮಾಡಲು ಯತ್ನಿಸಿದರು. [ಸಂ. ಸು = ಒಳ್ಳೆಯದಾಗಿ + ಕರ = [illegible]]

೯. **ದರಕಾರು** (ಅ) ಲಕ್ಷ್ಯ, ಗಮನ; ಚಿಂತೆ, ಕಾಳಜಿ. ಉದಾ:- ಸರಕಾರ ಎಂದರೆ ದರಕಾರು ಇಲ್ಲದಾಗಿದೆ. [ಫಾರಸಿ - ದರಕಾರ್ = ಆವಶ್ಯಕತೆ]

೧೦. **ವ್ಯೂಹ** (ಅ) ಸೈನ್ಯದ ರಚನೆ ಶತ್ರುಗಳನ್ನು ಎದುರಿಸಲು ವಿಶಿಷ್ಟವಾಗಿ ಸೈನ್ಯಗಳನ್ನು ನಿಲ್ಲಿಸುವ ರೀತಿ; ತಂತ್ರ, ಕೈವಾಡ. ಉದಾ:- ರಾಜಕೀಯ ವ್ಯೂಹ ರಚನೆ [ಸಂ.]

೧೧. **ಅಜಗಜಾಂತರ** (ಇ) ಆನೆಗೂ ಆಡಿಗೂ ಇರುವಷ್ಟು ವ್ಯತ್ಯಾಸ, ದೊಡ್ಡ ಅಂತರ. ಉದಾ:- ಅವನಿಗೂ ಅವಳಿಗೂ ಸ್ವಭಾವದಲ್ಲಿ ಅಜಗಜಾಂತರ. [ಸಂ. ಅಜ = ಆಡು + ಗಜ = ಆನೆ + ಅಂತರ = ಹೆಚ್ಚು ಕಡಿಮೆ]

೧೨. **ಇರಿಕುಳಿ** (ಈ) ಮೈಮೇಲೆರಿ ಬರುವ ಸ್ವಭಾವದ, ಆಕ್ರಮಣ ಸ್ವಭಾವದ; ಕೋಡುಳ್ಳ ಜಾತಿಗೆ ಸೇರಿದ. ಉದಾ:- ಅವಳೊಂದು ಇರಿಕುಳಿ ಹೆಣ್ಣು. [ದೇಶ್ಯ- ಇರಿ = ಚುಚ್ಚು -ಯುದ್ಧ ಮಾಡು, ಕುಳಿ = ಸ್ವಭಾವವುಳ್ಳ]

●

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆಗಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬-೮	ಸರಿಯಿದ್ದರೆ	...	ಸಾಧಾರಣ
೯-೧೦	,,	...	ಉತ್ತಮ
೧೧-೧೨	,,	...	ಅತ್ಯುತ್ತಮ

●

'ಅದ್ಭುತ' ಸಂಶೋಧನೆ?!

ಇಂಡಿಯುದ ವೃತ್ತಾಂತ

ಜಿ. ನಾರಾಯಣ

ಭಾರತಕ್ಕೆ 'ಇಂಡಿಯು' ಎನ್ನುವ ಹೆಸರು ಹೇಗೆ ಬಂತು ಎಂಬುದನ್ನು ಬಹುಶಃ ನಾವೆಲ್ಲ ಇತಿಹಾಸ ಪುಸ್ತಕದಲ್ಲಿ ಓದಿದ್ದೇವೆ. ಈ ಶಬ್ದ 'ಸಿಂಧು' ಎನ್ನುವ ಸಂಸ್ಕೃತ ಶಬ್ದದಿಂದ ಹುಟ್ಟಿ ಪ್ರಾಚೀನ ಪರ್ಶಿಯನ್ ಭಾಷೆಯಲ್ಲಿ 'ಹಿಂಡು', 'ಹಿಂಡ್' ಇತ್ಯಾದಿಯಾಗಿ, ಗ್ರೀಕ್ ಲ್ಯಾಟಿನ್ನಿನಲ್ಲಿ 'ಇಂಡಿಯ' 'ಇಂಡಸ್' 'ಇಂಡೋಸ್' ಆಗಿರಬಹುದೆಂದು ಹಿಂದಿನ ಚರಿತ್ರಕಾರರ ಊಹೆ. ಆದರೆ ಇದು ಶುದ್ಧ ತಪ್ಪೆಂದೂ, ತಮ್ಮ ಆರ್ಯ ಸಂಸ್ಕೃತಿಯನ್ನು ಇಡೀ ಭಾರತದ ಮೇಲೆ, ಅದರಲ್ಲಿಯೂ ೯೫% ಭಾರತೀಯರಾದ ದ್ರಾವಿಡರ ಮೇಲೆ, ಹೇರಲು ಉತ್ತರದವರು ಮಾಡಿರುವ ಸಂಚೆಂದೂ ನನ್ನ ಸಂಶೋಧನೆಗಳಿಂದ ದೃಢಪಟ್ಟಿದೆ. ಈ 'ಹಿಂಡ್' ಎನ್ನುವ ಪರ್ಶಿಯನ್ ಶಬ್ದ, 'ಸಿಂಧು' ಎನ್ನುವ ಶಬ್ದದಿಂದ ಹುಟ್ಟಿದ್ದೇ ಅಲ್ಲ. ಅದರ ಬದಲು ಇದು ಅಪ್ಪಟ ದ್ರಾವಿಡ ಶಬ್ದ. ಅದರಲ್ಲಿಯೂ ಕನ್ನಡ ಶಬ್ದ ಎಂದು ನಾನು ಬರೆದರೆ ನೀವು ಹುಬ್ಬೇರಿಸುತ್ತೀರೆಂದು ನನಗೆ ಗೊತ್ತು. ಆದರೆ ಇದನ್ನು ಸಾಬೀತು ಮಾಡಲು ನನ್ನಲ್ಲಿ ಸಾಕಷ್ಟು ಆಧಾರಗಳಿವೆ. ಈ 'ಹಿಂಡ್', 'ಇಂಡಸ್' ಇತ್ಯಾದಿ ಶಬ್ದಗಳೆಲ್ಲ ಕನ್ನಡದ 'ಹಿಂಡು' ಎನ್ನುವ ಕ್ರಿಯಾಪದದಿಂದಲೇ ಹುಟ್ಟಿವೆಯೆಂಬುದು ನನ್ನ ವಾದ.

ಈ ಹಿಂಡುವ ಕಲೆ ಭಾರತೀಯರಿಗೆ ಬಹಳ ಪ್ರಾಚೀನ ಕಾಲದಿಂದಲೂ ಗೊತ್ತಿತ್ತೆಂಬುದಕ್ಕೆ ದಾಖಲೆಗಳಿವೆ. ನಮ್ಮ ಅತ್ಯಂತ ಪ್ರಾಚೀನ ಸೃಷ್ಟಿಗಳಾದ ವೇದಗಳಲ್ಲಿಯೇ ಈ ಹಿಂಡುವ ಕಲೆಯ ಬಗ್ಗೆ ಇಂಡೈರೆಕ್ಟ್ ರೆಫರೆನ್ಸ್ ಇದೆ. ಬುದ್ಧನ ಕಾಲದಲ್ಲಾಗಲೇ ಈ ಕಲೆ ರಾಜರಿಗೆ, ಅಧಿಕಾರಿಗಳಿಗೆ ಸಾಕಷ್ಟು ಸಿದ್ಧಿಸಿತ್ತು. ತೆರಿಗೆಗಳ ಭಾರದಿಂದ ತಪ್ಪಿಸಿಕೊಳ್ಳಲು ಪ್ರಜೆಗಳು ಹಗಲು ಅರಣ್ಯದಲ್ಲಿಯೂ ರಾತ್ರಿ ಮನೆಗಳಲ್ಲಿಯೂ ಬಚ್ಚಿಟ್ಟುಕೊಳ್ಳುತ್ತಿದ್ದರಂತೆ. ರಾಜನ ಅಧಿಕಾರಿಗಳು ಕಳ್ಳರೊಡನೆ ಸಂಧಾನ ಮಾಡಿಕೊಂಡು ದುಡ್ಡು ಸುಲಿಯುತ್ತಿದ್ದರು. ಬೇರೆ ಬೇರೆ ರೀತಿಯಲ್ಲಿ ದುಡ್ಡು ಸುಲಿಯುವ ಕೆಲಸವನ್ನು ರಾಜನು ಸದಾ ಕಾಲ ಮಾಡುತ್ತಿದ್ದನು ಎಂಬುದಾಗಿ ಇತಿಹಾಸಜ್ಞ ಪಿಕ್ ನುಡಿಯುತ್ತಾನೆ.

ಇನ್ನು ನಮ್ಮ ಪುರಾಣ ಕಾಲದಲ್ಲಿಯಂತೂ ಈ ಹಿಂಡುವ ಕಲೆ ವ್ಯಾಪಕವಾಗಿ ಹರಡಿತ್ತೆಂಬುದಕ್ಕೆ ಪುರಾಣಗಳಲ್ಲಿ ಸಾಕಷ್ಟು ರೆಫರೆನ್ಸ್‌ಗಳಿವೆ. ಇತಿಹಾಸ ಎಂದು ಕರೆಸಿಕೊಂಡ ಮಹಾಭಾರತ ಇದರ ಬಗ್ಗೆ ಸಾಕಷ್ಟು ವಿವರಗಳನ್ನು ಕೊಡುತ್ತದೆ.

ಅಲೆಕ್ಸಾಂಡರನು ಈ ದೇಶಕ್ಕೆ ದಂಡಯಾತ್ರೆ ಬಂದಾಗ ಇಲ್ಲಿ ಆಳ್ವಿಕೆ ನಡೆಸುತ್ತಿದ್ದ ಕೊನೆಯ ನಂದನು ಈ ಕಲೆಯಲ್ಲಿ ಸಾಕಷ್ಟು ಪರಿಣಿತನಾಗಿದ್ದನೆಂದೂ, ಅವನ ತೆರಿಗೆಗಳ ಭಾರದಿಂದ ಜನ ತತ್ತರಿಸಿದ್ದರೆಂದೂ ಬೌದ್ಧ ಗ್ರಂಥಗಳಲ್ಲಿ ಹೇಳಿದೆ. ಬಹಳ ಆರಂಭದ ಪ್ರವಾಸಿ ಹುಯನ್ ತ್ಸಾಂಗ್‌ನಿಂದ ಆರಂಭಿಸಿ ಇತ್ತೀಚಿನ ಪ್ರವಾಸಿಗರ ವರೆಗೆ, ನಮ್ಮ ದೇಶಕ್ಕೆ ಬಂದ ವಿದೇಶಿ ಪ್ರವಾಸಿಗರೆಲ್ಲ ನಮ್ಮ ಈ ಅದ್ಭುತ ಕಲೆಯನ್ನು ಹಾಡಿ ಹೊಗಳಿದ್ದಾರೆ. ಸರ್ ಥಾಮಸ್ ರೋನಂತಹ ರಾಯಭಾರಿಗಳು ಮೊಗಲರ ಕಾಲದಲ್ಲಿ ಈ ಕಲೆ ಬೆಳೆದು ಬಂದುದನ್ನು ವರ್ಣಿಸಿದರೆ, ಪೆತ್ರೋ ದೆಲ್ಲಾವಿಲ್ಲೆಯಂಥವರು ಸಣ್ಣಪುಟ್ಟ ಮಾಂಡಲಿಕರು, ಹಾಗೂ ಅಧಿಕಾರಿಗಳು

ಜನರನ್ನು ಹೇಗೆ ಹಿಂಡುತ್ತಿದ್ದರೆಂಬುದನ್ನು ಬಣ್ಣಿಸಿದ್ದಾರೆ. ವಿಜಯನಗರದ ಉಚ್ಛ್ರಾಯ ಕಾಲದಲ್ಲಿ ಅಲ್ಲಿಗೆ ಬಂದ ವಿದೇಶಿ ಪ್ರವಾಸಿಯೊಬ್ಬ ಹೇಗೆ ತಾನು ವಿರೂಪಾಕ್ಷ ದೇವಾಲಯದ ಒಳಗೆ ಹೋಗಲು ದುಡ್ಡು ಕೊಟ್ಟೆ, ಮೊದಲು ಅಸ್ಪೃಶ್ಯನಾದ ತಾನು ಹೇಗೆ ಆಮೇಲೆ ಗರ್ಭಗುಡಿಗೆ ಹೋಗಲೂ ಯೋಗ್ಯನಾದೆ ಎಂದು ಬರೆದುದನ್ನು ಎಲ್ಲೋ ಓದಿದ ನೆನಪು. ಹೀಗಿರುವಾಗ ಇಂದು ತಾಲೂಕಿನ ಧಣಿಯನ್ನೋ, ಜಿಲ್ಲೆಯ ದೊರೆಗಳನ್ನೋ ರಾಜ್ಯದ ರಾಜರುಗಳನ್ನೋ, ನೋಡಲು ಹೋಗುವಾಗ ನಜರು-ಮುಜರೆಗಳನ್ನು ಒಪ್ಪಿಸುವುದು ಹೆಚ್ಚಲ್ಲ. ಬೇರೆಯ ಕಡೆ ಇನ್ನೂ ನಾಗರಿಕತೆ ಕಣ್ತೆರೆಯುತ್ತಿದ್ದಾಗಲೇ ನಾಗರಿಕತೆಯ ಅದ್ಭುತ ಆವಿಷ್ಕಾರವಾದ ಹಿಂಡುವ ಕಲೆಯನ್ನು ನಾವು ಹೊಂದಿದ್ದೆವೆಂದು ಹೆಮ್ಮೆಪಡಬೇಕು.

ಬ್ರಿಟಿಶರ ಕಾಲದಲ್ಲಿ ಉಳಿದ ನಮ್ಮ ಎಷ್ಟೋ ದೇಶೀಯ ಕಲೆಗಳಾದ ಹೆಂಡತಿಯನ್ನು ಸುಡುವುದು (ಸಹಗಮನ), ಬಾಲ್ಯ ವಿವಾಹ, ಪಂಡಾರಿಗಳ ಹಾವಳಿ, ಇತ್ಯಾದಿಗಳು, ಕೆಲವು ತಿಲೆತಿರುಕ ಬ್ರಿಟಿಶ್ ಅಧಿಕಾರಿಗಳಿಂದಾಗಿ, ಆಶ್ರಯದಾತರಿಲ್ಲದೆ, ಪ್ರೋತ್ಸಾಹಗಳಿಲ್ಲದೆ ಕ್ಷೀಣ ಹೊಂದಿದ ಹಾಗೆ, ನಮ್ಮ ದೇಶೀಯರ 'ಹಿಂಡೋ' ಕಲೆಯೂ ಸ್ವಲ್ಪ ಕ್ಷೀಣ ಹೊಂದಿತು. ಮಹಾತ್ಮಾ ಗಾಂಧಿಯವರು ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕೆಂದು ಹೋರಾಡಿದರೂ, ಅವರ ೪೨ರ ಹಿಂಬಾಲಕರು ಎಂದು ಕರೆಸಿಕೊಳ್ಳುವ ಬಹಳ ಜನ ಈ ಹಿಂಡುವ ವಿದ್ಯೆಯಲ್ಲಿ ಭಾರತೀಯರಿಗೆ ಆಗುತ್ತಿದ್ದ ಅನ್ಯಾಯವನ್ನು ಸಹಿಸಲಾರದೆ, ಈ ದೇಶೀ ಕಲೆಯನ್ನು ಪುನರುತ್ಥಾನಗೊಳಿಸುವುದಕ್ಕೋ ಹೋರಾಟದಲ್ಲಿ ಭಾಗವಹಿಸಿರಬೇಕೆಂದು ನನಗೆ ಗುಮಾನಿಯಿದೆ.

ಆದರೆ ಸ್ವಾತಂತ್ರ್ಯ ಬಂದೊಡನೆ, ನಮ್ಮವರ ಕೈಗೇ ಅಧಿಕಾರ ಬಂದುದರಿಂದ, ತೀರ ಅಲಕ್ಷಕ್ಕೊಳಗಾದ ಈ ಕಲೆಯನ್ನು ಸಾಕಷ್ಟು ಅಭಿವೃದ್ಧಿಗೊಳಿಸಲು ಎಲ್ಲ ಅನುಕೂಲಗಳನ್ನು ಒದಗಿಸಲಾಯಿತು. ಆರಂಭದಲ್ಲಿ ಇದೊಂದು ಅವಮಾನಕಾರಿಯಾದ ಕೆಲಸ ಎಂದು ನಾಚಿಕೆಪಟ್ಟುಕೊಳ್ಳುತ್ತಿದ್ದ ಜನರಲ್ಲಿ ಇದು ಹೆಮ್ಮೆಯಿಂದ ಮಾಡಬೇಕಾದ ಕೆಲಸ ಎನ್ನುವ ಭಾವನೆ ಬರುವ ವಾತಾವರಣವನ್ನು ಸ್ವಾತಂತ್ರ್ಯಾನಂತರದ ೨೫ ವರ್ಷಗಳಲ್ಲೇ ಮೂಡಿಸಲಾಯಿತು. ಇಂದು ನಮ್ಮ ಸಾಧನೆಯ ಫಲವಾಗಿ ಈ ಕಲೆ ಪ್ರತಿಯೊಬ್ಬರಿಗೆ (ಕೆಲವು ತೀರ ಹಡ್ಡರನ್ನು ಬಿಟ್ಟು) ಕರತಲಾಮಲಕವಾಗಿದೆ. ಇದರ ಬಗ್ಗೆ ಒಂದೆರಡು ದೃಷ್ಟಾಂತಗಳನ್ನು ಹೇಳಿ, ಹೇಗೆ ನಾವು 'ಹಿಂಡೋ' ಜನ ಎಂಬುದನ್ನು ಮನದಟ್ಟು ಮಾಡಿಕೊಡುತ್ತೇನೆ. ನನ್ನ ಸ್ನೇಹಿತನ ಸ್ನೇಹಿತ ಡಾಕ್ಟರರೊಬ್ಬರು ಸ್ಟೆತೋಸ್ಕೋಪ್ ಇರುವುದೇ ಜೇಬಿನ ಮೇಲಂತೆ! ಅವರ ಇಂಜಕ್ಷನ್ನಿನ ತೀವ್ರತೆಯೂ ದುಡ್ಡಿಗೆ 'ಡೈರೆಕ್ಟ್ ಪ್ರಪೋರ್ಶನಲ್' ಆಗಿರುತ್ತಂತೆ! "ನಿನಗೆ ಒಂದು ರೂಪಾಯಿ ಇಂಜಕ್ಷನ್ ಕೊಡಲೋ ಅಥವಾ ಎರಡು ರೂಪಾಯಿದು ಕೊಡಲೋ? ಐದು ರೂಪಾಯಿದು ಕೊಡಲಾ?" ಎಂದು ಕೇಳುತ್ತಾರಂತೆ. ಇನ್ನೊಬ್ಬ ಅಧಿಕಾರಿಯೊಬ್ಬನ ಆಫೀಸಿಗೆ ಬಡ ಬೋರೇಗೌಡ ಬಂದನಂತೆ. ಇಷ್ಟರೊಳಗೇ ಆತ ಬೇರೆ ಬೇರೆ ಆಫೀಸಿಗೆ ಹೋಗಿ ಬಂದಿದ್ದರಿಂದ ಆಗಲೇ ಸೋತು ಹೋಗಿದ್ದ. ನಮ್ಮ ಅಧಿಕಾರಿಯೋ ಪಕ್ಕಾ 'ಹಿಂಡು', ಕೊನೆಗೆ ಬೋರೇಗೌಡ "ಸ್ವಾಮಿ ನಾನು ಉಟ್ಟ ಲಂಗೋಟಿ ಬಿಟ್ಟು ನನ್ನಲ್ಲಿ ಏನೂ ಇಲ್ಲ" ಎಂದನಂತೆ. ಅದಕ್ಕೆ ಈ ಅಧಿಕಾರಿ ಮಹಾಶಯ "ಅಯ್ಯಾ, ನನಗೆ ಬೂಟು ಒರೆಸಲು ಒಂದು ಬಟ್ಟೆ ಅರ್ಜೆಂಟ್ ಬೇಕಿತ್ತು, ನಿನ್ನ ಲಂಗೋಟಿಯನ್ನೇ ಕೊಟ್ಟುಬಿಡು" ಎಂದನಂತೆ!

ಇನ್ನೊಂದು ರೀತಿಯಲ್ಲಿ ಹಿಂಡುವುದು ನಮ್ಮ ವಿದ್ಯಾ ಇಲಾಖೆಯ ಸ್ವತ್ತಾಗಿತ್ತು. ಅದರಲ್ಲೂ ಭಾರತೀಯ ಗುರುಕುಲ ಪದ್ಧತಿಯಲ್ಲಿ ಈ ಹಿಂಡುವ ಕಲೆಯಲ್ಲಿ ಬಗೆಗೇ (ಮೋಡ್ಸ್) ಒಂದು ವಿಶೇಷ ಕೋರ್ಸ್ ಇಡಬೇಕೆಂದು ನನ್ನ ಊಹೆ. ಅದಿಲ್ಲವಾಗಿದ್ದರೆ ನಮ್ಮ ಮೇಷ್ಟ್ರುಗಳು ಅಷ್ಟೊಂದು ವೈವಿಧ್ಯಮಯವಾಗಿ ಹಿಂಡಲು ಸಾಧ್ಯವಾಗುತ್ತಿರಲಿಲ್ಲ. ತೊಡೆ, ಕಿವಿ ಇತ್ಯಾದಿ ಸುಲಭಲಭ್ಯವಾದ ಭಾಗಗಳನ್ನು ಮಾತ್ರವಲ್ಲದೆ, ಮುಂಜಿ ಹಾಕಿಯಂದ ಬಿಗಿಯುಟ್ಟ ಚಡ್ಡಿಯಿಂದ

ಆವೃತವಾದ ಅಂಡು, ಅಂಗಿಯಿಂದ ಮುಚ್ಚಿದಂತೆ ತೋರುವ ಹೊಟ್ಟೆ, ಇತ್ಯಾದಿ ಭಾಗಗಳನ್ನೂ ಬಿಡದೆ ಹಿಂಡುವ ಕಲೆಗಾರಿಕೆ ಅವರಿಗೆ ಪರಂಪರಾಗತವಾಗಿ ಬಂದಿರಲೂಬಹುದು. ಸರಳಗನ್ನಡವನ್ನು ಅಭ್ಯಾಸ ಮಾಡಬೇಕಾದರೆ ಈ ರೀತಿ ನಾವು ಹಿಂಡಿಸಿಕೊಂಡಿದ್ದರೆ ಹಿಂದಿನವರು ಕಡು ಕಷ್ಟದ ಭಾಷೆ ಸಂಸ್ಕೃತವನ್ನು ಕಲಿಯು ಬೇಕಾದರೆ ಎಂತೆಂತಹ 'ಹಿಂಡುವಿಕೆ'ಯನ್ನು ಅನುಭವಿಸಿರಬಹುದು!

ಈ ಹಿಂಡುವಿಕೆಯ ಮೇಲೆ ಸಂಶೋಧನೆ ಮಾಡುವಾಗ ನನಗೆ ಇನ್ನೊಂದು ಅದ್ಭುತ ಐತಿಹಾಸಿಕ ಸತ್ಯವೂ ಗೋಚರವಾಗಿದೆ. ನೀವು ಈಗ ತಿಳಿದಂತೆ ರೇಡಿಯೋವನ್ನು ಕಂಡುಹಿಡಿದದ್ದು 'ಮಾರ್ಕೋನಿ'ಯೇ ಇರಬಹುದು. ಆದರೆ ಇದಕ್ಕೆ ಸ್ಫೂರ್ತಿ ಮಾತ್ರ ಖಂಡಿತವಾಗಿ ನಮ್ಮ ದೇಶದಿಂದಲೇ ದೊರಕಿದೆ. ಬಿರಡೆ ತಿರುಗಿಸಿದಂತೆಲ್ಲ ರೇಡಿಯೋದ ಧ್ವನಿ ಹೆಚ್ಚಾಗುತ್ತದೆ. ಆದರೆ ಆತನೋ ಅಥವಾ ಆತನ ಪೂರ್ವಿಕರೋ, ನಮ್ಮ ದೇಶದ ಯಾವುದೋ ಐಗಳ ಶಾಲೆಯಲ್ಲಿ ಕಿವಿ ಹಿಂಡಿದಂತೆಲ್ಲ ವಿವಿಧ ಧ್ವನಿಗಳನ್ನು ಹೊರ ಹೊಮ್ಮಿಸುವ ಶಿಷ್ಯ ಸಮೂಹವನ್ನು ನೋಡಿಯೇ ರೇಡಿಯೋದ ಬಗ್ಗೆ ಯೋಚಿಸಿರಬೇಕು. ಹೀಗೆ ಯೋಚಿಸುತ್ತಾ ಹೋದರೆ, ನಮ್ಮಲ್ಲಿ ಶಿಷ್ಯ ಸಹೋದರರು ಕಂಡುಹಿಡಿಯು ವುದಕ್ಕಿಂತ ಮುಂಚೆ ವಿಮಾನವಿತ್ತು, ಟಿ. ವಿ. ಯ ಕಲ್ಪನೆಯಿತ್ತು ಎಂಬ ಸತ್ಯಗಳು ಮನನವಾಗುತ್ತವೆ.

ಈ 'ಹಿಂಡು' ಶಬ್ದಕ್ಕೂ ಧಾರ್ಮಿಕ ಕ್ಷೇತ್ರಗಳಿಗೂ ಅದು ಹೇಗೋ ಅವಿನಾಭಾವ ಸಂಬಂಧ ಗಂಟು ಬಿದ್ದಿದೆ. ಉತ್ತರ ಭಾರತಕ್ಕೆ ನೀವು ಹೋದಾಗ ಮರೆಯದೆ ನೋಡಬೇಕಾದ ಜನ ಪಂಡರು. (ಪಂಡಾ ಜನರು = ಹಿಂಡಾ ಜನರು ಉದಾ: ಪಳ್ಳಿ = ಹಳ್ಳಿ, ಪಾಡು = ಹಾಡು) ಕಾಶಿ, ಗಯಾ, ಪ್ರಯಾಗಗಳಲ್ಲಿ ಕಲ್ಲು ಕಲ್ಲುಗಳಲ್ಲಿ ದೇವರ ದರ್ಶನ ಮಾಡಿಸಿ, ನಿಮ್ಮ ಜೀವನ ಭಾರವನ್ನಿಳಿಸುವವರು. ನೀವು ಬದುಕಿದ್ದಾಗ ನೀವು ಹಣವೊಂದನ್ನು ಕೊಟ್ಟರೆ ಸಾಕು, ಇವರು ನಿಮ್ಮ ಶ್ರಾದ್ಧವನ್ನು ಬೇಕಾದರೂ ಮಾಡಿಸಿ ಆ ಆ ಪುಣ್ಯವನ್ನು ನಿಮ್ಮ ಮೇಲೆಯೇ ಹೊರಿಸಿ ಕಳುಹಿಸುತ್ತಾರೆ. ಇವರು ತಮ್ಮ ಬಟ್ಟೆಯನ್ನು ಬಿಟ್ಟು ಉಳಿದದ್ದೆಲ್ಲವನ್ನೂ ಹಿಂಡುತ್ತಾರೆ. ಇವರ ಹಿಂಡುವ ಕಲೆಯನ್ನು ೧೦–೧೨ ನೇ ಶತಮಾನದಲ್ಲಿ ಭಾರತಕ್ಕೆ ಬಂದ ವಿದೇಶಿ ಪ್ರವಾಸಿಗರೂ ಹಾಡಿ ಹೊಗಳಿದ್ದಾರೆ. ಇದಕ್ಕಿಂತ ಮುಂಚಿನ, ಎಂದರೆ ಕ್ರಿಸ್ತಪೂರ್ವದ ಪ್ರವಾಸಿಗರನ್ನು ಇವರು ಹೀಗೆಯೇ ಹಿಂಡಿರಬಹುದೆಂದು ಊಹಿಸಲು ಸಾಧ್ಯವಿದೆ. ಅದರಿಂದಾಗಿಯೇ ಇವರಿಗೆ ಹಿಂಡೋ ಜನ ಎಂದು ಹೆಸರು ಬಂದಿರಲೂ ಸಾಕು.

ಇನ್ನು ಬಟ್ಟೆಯನ್ನು ಹಿಂಡಿ ಹಸಿಯಾಗಿ ಉಟ್ಟುಕೊಳ್ಳುವುದಂತೂ ನಮ್ಮ ಅಪರ ಕರ್ಮಗಳಲ್ಲಿ ಬಹಳ ಮುಖ್ಯ. ನಿಮ್ಮ ಪಿತೃಗಳು ಸ್ವರ್ಗ ಸೇರುವುದಕ್ಕಾಗಿ ನೀವು ಕರ್ಮಗಳನ್ನು ಮಾಡಬೇಕಾದರೆ 'ಹಿಂಡಿ' ಉಟ್ಟ ಬಟ್ಟೆಯ ಒದ್ದೆಯಿಂದ ಮಾತ್ರ ಸಾಧ್ಯ! ನೀವು ಹಲವು ದೇವಸ್ಥಾನಗಳಲ್ಲಿ, ಪೂಜೆ ಮಾಡುವುದು ಹಿಂಡಿದ ಬಟ್ಟೆಯುಟ್ಟು, ಈಗ ಕುಡಿಯುವ ನೀರಿಗೂ ಅಭಾವವಿರುವ ದಿನಗಳಲ್ಲೇ ಇಷ್ಟೊಂದು ಹಿಂಡುವವರಿರಬೇಕಿದ್ದರೆ, ಅಂದಿನ ಕಾಲದಲ್ಲಿ 'ತಲೆ ಹಿಂಡುವವರು' 'ಬಟ್ಟೆ ಹಿಂಡುವವರು' ಎಷ್ಟಿರಬೇಡ? ಹಾಗಾಗಿ ಅಂದಿನ ವಿದೇಶಿ ಪ್ರವಾಸಿಗರು, ವ್ಯಾಪಾರಿಗಳು, ಸೈನಿಕರು ಹೀಗೆ ವಿವಿಧ ರಂಗಗಳಲ್ಲಿ ಹಿಂಡುವ ನಮ್ಮ ಕಲೆಗಾರಿಕೆಯನ್ನು ಕಂಡೇ 'ಹಿಂಡೋ ಜನ' ಎಂದು ಕರೆದಿದ್ದಾರೆ. ಅದೇ ಮುಂದೆ 'ಹಿಂಡೂ' 'ಹಿಂದೂ' 'ಇಂಡಸ್' ಎಂದಾಗಿದೆ, ಆದ್ದರಿಂದ ಹಿಂದೂ ಎನ್ನುವುದು ಒಂದು ಜನಾಂಗವಲ್ಲ. ಅವರು ಮುಸ್ಲಿಮರಿರಬಹುದು, ಕ್ರಿಶ್ಚಿಯನ್ನರಿರಬಹು, ಬೌದ್ಧರು, ಜೈನರಿರಬಹುದು, ಆದರೆ ಅವರೆಲ್ಲ 'ಹಿಂಡೂ'ಗಳೇ. ಒಟ್ಟಿನಲ್ಲಿ ಈ ಶಬ್ದ ದ್ರಾವಿಡರದು. ✲

ನಾಟಕವೆಂದರೆ ಗದ್ಯ ಪ್ರಧಾನವಲ್ಲ

- ೧೦೬ -

ನಾಟಕ ಎಂದೊಡನೆ ನಮಗೆ ಆಧುನಿಕರಿಗೆ ಹೊಳೆಯುವುದೆಂದರೆ ಬಹುತರವಾಗಿ ಗದ್ಯದಲ್ಲಿ, ಕೆಲ ಸಲ ಹಾಡುಗಳಿಂದೊಡಗೂಡಿದ, ಸ್ವಲ್ಪ ಅತಿಶಯವಾಗಿ ಮನುಷ್ಯ ವರ್ತನೆಗಳನ್ನು ರಂಗದ ಮೇಲೆ ಬೇರೆ ಬೇರೆ ಪಾತ್ರಗಳು ಆಡಿ ತೋರಿಸುವ ಒಂದು ಸಾಹಿತ್ಯ ಪ್ರಕಾರ. ಮಧ್ಯದಲ್ಲಿ ಹಾಡುಗಳಿಂದ ಕೂಡಿದ್ದರೆ ಅದಕ್ಕೆ ಸಂಗೀತ ನಾಟಕ, ತುಂಬಾ ಹಾಡುಗಳಿದ್ದರೆ ಸಾಗ್ರ ಅಥವಾ ಸಮಗ್ರ ಸಂಗೀತ ನಾಟಕ ಎಂದು ಹೆಸರುಗಳನ್ನು ಕೊಟ್ಟಿದ್ದೇವೆ. ನೃತ್ಯಗಳ ಮೂಲಕ ಪಾತ್ರಗಳು ಭಾವವನ್ನು ಪ್ರಕಟಿಸುತ್ತಿದ್ದರೆ ಅದಕ್ಕೆ ನೃತ್ಯ ನಾಟಕ ಎಂದೂ ಕರೆಯುತ್ತೇವೆ. ನಾಟಕಕ್ಕೆ ಇಂಗ್ಲೀಷ್ ಪದವಾದ ಡ್ರಾಮಾ ಶಬ್ದ ಕೂಡ ನಮ್ಮ ಶಬ್ದ ಭಂಡಾರದಲ್ಲಿ ಸೇರಿ ಹೋಗಿದೆ. ಹಿಂದೆ ನಾಟಕ ಮಂಡಳಿಗಳಾಗಿದ್ದವುಗಳು ಈಗ ಡ್ರಾಮಾ ಕಂಪನಿಗಳಾಗಿವೆ.

ಆದರೆ ನಾಟಕ ಶಬ್ದದ ಮೂಲವನ್ನು ಶೋಧಿಸಿದರೆ ಅದು ನಮ್ಮನ್ನು ನತ್, ನರ್ತ್ ಧಾತುಗಳ ಕಡೆಗೆ ಕರೆದೊಯ್ಯುತ್ತದೆ. ರ ಕಾರದ ಹತ್ತಿರ ಬರುವ ತ ಕಾರ ಮತ್ತು ಡ ಕಾರ, ಟ ಕಾರ ಮತ್ತು ಡ ಕಾರವಾಗಿ ಮಾರ್ಪಡುವುದೂ ಮೂಲ ಶಬ್ದದಿಂದ ಸ್ವಲ್ಪ ಅರ್ಥ ವ್ಯತ್ಯಾಸವನ್ನು ತೋರಿಸಲು ಈ ಮಾರ್ಪಾಟನ್ನು ಉಪಯೋಗಿಸುವುದೂ ವೈದಿಕ ಸಂಸ್ಕೃತದ ಕಡೆಗಾಲದಲ್ಲೇ ಕಾಣಿಸುವ ಒಂದು ಒಲವು. ಪುರಾತನ ಕಾಲದಲ್ಲಿ ರಂಗ ಕಲೆಗಳು ಪ್ರಧಾನವಾಗಿ ನರ್ತನ ಕಲೆಗಳಾಗಿದ್ದುವೆಂಬ ಅಂಶವನ್ನು ನಟ, ನಟನಾ, ನಾಟಕ ಶಬ್ದಗಳು ತೋರಿಸುತ್ತವೆ. (ನೃತ್ = ನಟ್) ವಾಸ್ತವಿಕವಾಗಿ ಸಂಗೀತ, ನೃತ್ಯ, ಅಭಿನಯ ಸಹಿತವಾದದ್ದೇ ನಾಟ್ಯ. ನೃತ್ತ, ನೃತು, ನೃತಿ, ನೃತ್ಯ ಎಲ್ಲದರಲ್ಲಿ ಕುಣಿಯುವುದು, ಅಭಿನಯಿಸುವುದು ಸೇರುತ್ತದೆ. ಗದ್ಯದ ಪ್ರವೇಶ ಮತ್ತು ಸಂಭಾಷಣೆಗಳಲ್ಲಿ ವಾಸ್ತವಿಕತೆಯ ಹಿರಿಮೆ ಆ ಮೇಲಿನ ಬದಲಾವಣೆಗಳು. ಈಗ ನಾವು ನಾಟಕಗಳೆಂದು ಕರೆಯುವ ನಾನಾ ವಿಧಗಳಿಗೆಲ್ಲ ಒಟ್ಟಾಗಿ ರೂಪಕ ಎಂಬ ಹೆಸರನ್ನು ಸಂಸ್ಕೃತ ಲಾಕ್ಷಣಿಕರು ಕೊಟ್ಟರು. ಎಲ್ಲದರಲ್ಲಿಯೂ ಭವ್ಯವಾದ ವೇಷ, ಬಣ್ಣ ಮುಖ್ಯವಾಗಿದ್ದಂತೆ ಕಾಣುತ್ತದೆ.

ಅಂತೂ "ನಾಟಕ"ವೆಂದರೇನೇ ನೃತ್ಯ ನಾಟಕವೆಂಬುದು ಪುರಾತನ ಕಲ್ಪನೆ. ಆ ಶಬ್ದದಲ್ಲೇ ಅದರ ಕಥೆ ಅಡಕವಾಗಿದೆ. ಆದ್ದರಿಂದ ನಿಜವಾಗಿ ನೃತ್ಯ ನಾಟಕ ಎಂಬ ಶಬ್ದವೇ ಅನಾವಶ್ಯಕ ಎಂದು ವಾದಿಸಬಹುದು. ಗ್ರೀಕ್ ನಾಟಕಗಳಲ್ಲಿಯೂ ಈ ಲಕ್ಷಣವಿತ್ತು.

ಈ ನೃತ್, ನಟ್ ಮುಂತಾದ ಮೂಲದಿಂದಲೇ ದ್ರಾವಿಡದಲ್ಲಿ ನಟ್ಟುವನ್ (ನಟ) ಮೊದಲಾದವುಗಳು ಬಂದಿವೆ. ನೃತ್, ನರ್ತ್ ಇತ್ಯಾದಿಗಳ ಹಿಂದಿರುವ ಮೂಲ ಕಲ್ಪನೆ ಬಿರುಸಾಗಿ ಚಲಿಸು ಎಂಬುದಿದ್ದಂತೆ ಗೋಚರವಾಗುತ್ತದೆ. ಸಂಸ್ಕೃತದ "ಋ" ಧಾತು ಚಲನಾರ್ಥವಾದದ್ದು "ನೃತ್" ಅದರಿಂದಲೇ ಕವಲೊಡೆದಿರಬಹುದು.

ಪ್ರಸಂಗತ್ವೇನ ಹೇಳುವುದಾದರೆ, ತುಳುವಿನಲ್ಲಿ ಭೂತ ವೇಷ ಹಾಕಿಕೊಂಡು ಕುಣಿಯುವ ಧಂಧೆ ಮಾಡುವ ವರ್ಗಕ್ಕೆ ನಲಿಕೆಯವರು, ನಲ್ಕೆಯವರು ಎಂದೇ ಹೆಸರಿದೆ. ನಲಿ (= ತುಳು ನಲಿಪ್ಪು) ಎಂದರೆ (ಸಂತೋಷ ಅಥವಾ ಉತ್ಸಾಹದಿಂದ) ಕುಣಿಯೆಂದೇ ಎರಡೂ ಭಾಷೆಗಳಲ್ಲಿ ಅರ್ಥ.

"ನಾಟಕ"ದ ಶಾಬ್ದಿಕ ಅರ್ಥವನ್ನು ಕನ್ನಡದ ಯಕ್ಷಗಾನ, ಸಣ್ಣಾಟ, ದೊಡ್ಡಾಟ ಮೊದಲಾದವುಗಳೇ ಇಂದಿನ ಸಂಗೀತ ಅಥವಾ ಶುದ್ಧ ಗದ್ಯ ನಾಟಕಗಳಿಗಿಂತ ಹೆಚ್ಚು ಪ್ರತಿನಿಧಿಸುತ್ತವೆ.

ಯಕ್ಷಗಾನಕ್ಕೂ ದಕ್ಷಿಣ ಕನ್ನಡದಲ್ಲಿ ಬಯಲಾಟ ಅಥವಾ ಬರೇ ಆಟ ಎಂದು ಹೆಸರಿದೆ. ಆಟ ಶಬ್ದ ಕೂಡ ಸಂಸ್ಕೃತದ "ನೃತ್", "ನರ್ತ್"ಗಳಂತೆ ಮೂಲತಃ ಚಲಿಸು, ಅತ್ತಿಂದಿತ್ತ ಓಡು ಸ್ಪಂದಿಸು ಎಂಬೆಲ್ಲ ಅರ್ಥಗಳುಳ್ಳ ಆಡು ಧಾತುವಿನಿಂದ ಹುಟ್ಟಿದೆ. ಒಂದು ರೀತಿಯಲ್ಲಿ ಹಳೇ ಅರ್ಥದಲ್ಲಿನ ನಾಟ್ಯ, ನಾಟಕ ಶಬ್ದಗಳಿಗಿಂತ ಹೆಚ್ಚಾಗಿ ಆಟ ಶಬ್ದ ಈ ರಂಗ ಕಲೆಯ ಎಲ್ಲ ಅಂಗಗಳನ್ನೂ ತನ್ನಲ್ಲಿ ಒಳಗೊಂಡಿದೆ. "ಆಡು" ಶಬ್ದ ಕುಣಿಯುವುದರಲ್ಲಿ ಅಡಕವಾದ ದೈಹಿಕ ಚಲನೆಯನ್ನು ಮತ್ತು ಮಾತನ್ನು (ಉದಾ– "ಆಡದೆ ಮಾಡುವವನು ರೂಢಿಯೊಳಗುತ್ತಮನು") ಇವು ಎರಡನ್ನೂ ಅಲ್ಲದೆ ವಾದ್ಯಗಳ ಧ್ವನಿಯೆಂಬ ಅರ್ಥವನ್ನೂ ಕೂಡ ಪ್ರತಿಪಾದಿಸುವುದರಿಂದ ಅದೊಂದು ಪರಿಪೂರ್ಣ ಶಬ್ದವೇ ಸೈ. ವಿಶೇಷವೆಂದರೆ ನಮ್ಮ ಆಟಕ್ಕೆ ಹೇಗೋ ಹಾಗೆ ಇಂಗ್ಲೀಷಿನ ಪ್ಲೇ (Play)ಗೆ ಕೂಡ ಕ್ರೀಡೆಯೆಂಬರ್ಥದೊಡನೆ ಅಭಿನಯಾತ್ಮಕ ನಾಟಕ ಎಂಬರ್ಥವೂ ಇದೆ. ಉದಾಹರಣೆಗೆ Shakespear's plays. ಗ್ರೀಕ್ ಮೂಲದಿಂದ ಲ್ಯಾಟಿನ್ ಭಾಷೆಯ ಮೂಲಕ ಬಂದ drama ಎಂಬುದೂ ಮೂಲತಃ ಮಾಡು ಎಂಬರ್ಥದ ಧಾತುವಿನ ಕವಲು. ಹೀಗೆ dramaವನ್ನು ಕ್ರಿಯಾ (action) ಪ್ರಧಾನವೆಂದು ಬೇಕಾದರೆ ತೆಗೆದುಕೊಳ್ಳಬಹುದು. ಒಟ್ಟಿನಲ್ಲಿ ಮಾನವ ಮನಸ್ಸು ಎಲ್ಲಿದ್ದರೂ ಶಬ್ದಗಳನ್ನು ಸೃಷ್ಟಿಸುವಾಗ ಒಂದು ಸಾಮಾನ್ಯ ಪಥವನ್ನೇ ಅನುಸರಿಸುತ್ತದೆಂಬುದಲ್ಲವೇ ಈ ಪದಾರ್ಥ ಚಿಂತನೆ ತೋರಿಸಿ ಕೊಡುವುದು?

ನಾಟಕವೆಂಬುದು ಗಾನ, ನರ್ತನ ಮತ್ತು ವಚನ ಎಂಬ ಮೂರಂಗಗಳ ಸಂಯೋಜನೆಯೆಂದು ಹೇಳಿದೆವು. ಸಂಗೀತದ ರಾಗಗಳಲ್ಲಿ ನಾಟ, ನಾಟಿ ಎಂಬವುಗಳು ಕಾಣಿಸುತ್ತವಲ್ಲ, ಈ ನಾಟಕ್ಕೆ ನಾಟ್ಯದ ಸಂಬಂಧವುಂಟೆ? ಮೊದಲ ನೋಟಕ್ಕೆ ಹಾಗೆ ತೋರಬಹುದು; ಹೆಚ್ಚಾಗಿ ನಾಟ ರಾಗದಲ್ಲಿ ಬಯಲಾಟದ ಮಂಗಲಾಚರಣೆ ಅಥವಾ ನಾಂದಿಯನ್ನು ಅನುಷ್ಠಿಸುತ್ತಾರೆ. ಆದರೆ ಅದು ನಾಟಕದಲ್ಲಿರುವ ನಾಟಕ್ಕೆ ಸಂಬಂಧಿಯಲ್ಲ. ನಮ್ಮ ರಾಗಗಳಿಗೆ ಬಹುತರವಾಗಿ ಭಾರತದ "ದೇಶ"ಗಳ ಹೆಸರುಗಳನ್ನಿಡಲಾಗಿದೆ. ಕನ್ನಡ, ಬಂಗಾಳ, ಗೌಡ, ಮಾಳವ ಇತ್ಯಾದಿ. ಈ ನಾಟ, ನಾಟಿ ರಾಗ ಲಾಟ ದೇಶವನ್ನು ಕುರಿತದ್ದಾಗಿದೆ.

ಬ್ರಿಟಿಶ್ ಪ್ರಜಾಪ್ರಭುತ್ವ ಪದ್ಧತಿಯನ್ನು ಸ್ವೀಕರಿಸಿದ ನಾವು ಅವರ ಪಾರ್ಲಿಮೆಂಟ್ ಪದಕ್ಕೆ ನಮ್ಮದೆ ಸಂಸತ್ತು ಎಂಬ ಶಬ್ದವನ್ನು ಮಾಡಿಕೊಂಡಿದ್ದೇವೆ. ಆದರೆ ಈ ಎರಡು ಶಬ್ದಗಳ ಅರ್ಥ ಯಥಾವತ್ತಾಗಿ ಒಂದೇ ಅಲ್ಲ. ಪಾರ್ಲಿಮೆಂಟ್ ಅಂದರೆ ಮಾತಾಡುವ ಸಭೆ. ಇದು ಇಂಗ್ಲೀಷ್ ಶಬ್ದವೂ ಅಲ್ಲ, ಇಂಗ್ಲೀಷಿಗೆ ಅಸಂಖ್ಯ ಶಬ್ದಗಳನ್ನು ಕೊಟ್ಟ ಪ್ರಾಚೀನ ಲ್ಯಾಟಿನ್ ಅಥವಾ ಗ್ರೀಕಿನ ಪದವೂ ಅಲ್ಲ. ಅದು ಫ್ರೆಂಚ್ ಭಾಷೆಯಿಂದ ತೆಗೆದುಕೊಂಡದ್ದು. ಫ್ರೆಂಚಿನಲ್ಲಿ parler ಎಂದರೆ ಮಾತಾಡುವುದು. ಇದರಿಂದಲೇ ಹುಟ್ಟಿದ ಪಾರ್ಲೆ (parley) ಎಂಬ ಶಬ್ದಗಳನ್ನು ಯಾವುದಾದರೂ ಒಪ್ಪಂದಕ್ಕಾಗಿ ಮಾಡುವ ಮಾತುಕತೆ ಎಂಬರ್ಥದಲ್ಲಿ ಇಂಗ್ಲೀಷಿನಲ್ಲಿ ಬಳಸುತ್ತಾರೆ. ನಮ್ಮ ಸಂಸತ್ತು ವಾಸ್ತವಿಕವಾಗಿ ಮಾತಾಡುವ (ಕೆಲವು ಸಲ ತಲೆಬುಡವಿಲ್ಲದೆ) ಸ್ಥಳವೇ ಆಗಿದೆ. ಆದರೆ ಸಂಸತ್ ಶಬ್ದಕ್ಕೆ ಒಟ್ಟಾಗಿ ಕುಳಿತುಕೊಳ್ಳುವ ಸ್ಥಳ ಅಥವಾ ಹಾಗೆ ಕೂಡ್ರುವುದು ಎಂದು ಅರ್ಥ. (ಸಂ = ಒಟ್ಟು + ಸದ್ = ಕೂತುಕೊಳ್ಳು) ಕೂತ ಮೇಲೆ ಮಾತಾಡುವುದುಂಟೇ ಉಂಟಲ್ಲ. ಮನೆಗಳಲ್ಲಿ ಹೀಗೆ ವಿರಾಮವಾಗಿ ಕೂತು ಮಾತಾಡುವ ಕೋಣೆಗೆ ಇಂಗ್ಲೀಷಿನಲ್ಲಿ ಪಾರ್ಲರ್ (parlour) ಎಂದಿದ್ದರೆ ನಮ್ಮಲ್ಲಿ ಬೈಠಕ್ ಖಾನೆ ಎಂಬ ಶಬ್ದ ಇದೆ. ಬೈಠಕ್ ಎಂದರೆ ಕೂತುಕೊಳ್ಳುವುದು (ಬೈಠ್ = ಕೂತುಕೊ). ಈ ಪ್ರಾಕೃತ ಮೂಲದ ಶಬ್ದ ಇಂಗ್ಲೀಷಿನ ಸಿಟಿಂಗ್(sitting)ಗೆ ಸಮ. ಹಿಂದಿನ ಕಾಲದಲ್ಲಿ ಕನ್ನಡ ವರ್ತಕ ಸಂಘಗಳು ತಮ್ಮ ಸಭೆಗಳಿಗೆ ಬೈಸಿಗೆಗಳು ಎಂದು ಕರೆಯುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಬೈಸ್ = ಕೂತುಕೊ.

—ಹಾವೆಂ

ಸಿಖ್ಖರ ಧರ್ಮಗ್ರಂಥ ಗುರು ಗ್ರಂಥ ಸಾಹೇಬ್

ಎಂ. ಶಿವರಾಮ ಆಚಾರ್

ದೇವರು ಒಬ್ಬನೇ. ಅವನ ಬಗ್ಗೆ ನಿಮ್ಮಲ್ಲಿ ಪ್ರೀತಿ, ಗೌರವಗಳಿದ್ದರೆ ಸಾಕು. ಅವನನ್ನು ಪೂಜಿಸಬೇಕಾದ ಅಗತ್ಯವಿಲ್ಲ." ದಿನಕ್ಕೊಬ್ಬ ದೇವರನ್ನು ಪೂಜಿಸಿ ಆರಾಧಿಸುವ ಹಿಂದುಗಳಿಗೆ ಈ ಹೇಳಿಕೆ ಹಾಸ್ಯಾಸ್ಪದವೆನಿಸಬಹುದು. ಆದರೆ ಸಿಖ್ಖರ ಧರ್ಮಗ್ರಂಥ 'ಗ್ರಂಥ ಸಾಹೇಬ್' ಇದನ್ನೇ ಬೋಧಿಸುತ್ತದೆ. ಅದು ಮೂರ್ತಿಪೂಜೆಯನ್ನು ವಿರೋಧಿಸುತ್ತದೆ. ೧೫ನೇ ಶತಮಾನದಲ್ಲಿ ಸಿಖ್ಖ ಧರ್ಮಸ್ಥಾಪಕ ನಾನಕರ ಈ ವಿಚಾರ ಸರಣಿಗೆ ಮನಸೋತ ಪಂಜಾಬಿನ ಜನ ಜಾತಿಭೇದ, ಮತಭೇದಗಳನ್ನು ತೊರೆದು ಸಿಖ್ಖ ಧರ್ಮವನ್ನು ಅಂಗೀಕರಿಸಿ ಒಂದಾದರು. ಅದರಲ್ಲಿ ಹಿಂದುಗಳೂ ಮುಸಲ್ಮಾನರೂ ಇದ್ದರು. ಹಿಂದುಗಳು ಸಿಖ್ಖರನ್ನು ದಬ್ಬಾಳಿಕೆಗೊಳಪಡಿಸಿದ್ದಾರೆ ಎಂಬ ಅಪಪ್ರಚಾರ ಮಾಡುತ್ತ ಸಿಖ್ಖ ಉಗ್ರವಾದಿಗಳು ಹತ್ಯಾಕಾಂಡದಲ್ಲಿ ತೊಡಗಿರುವ ಇಂದಿನ ದಿನಗಳಲ್ಲಿ ಇದು ಎಂಥ ವಿಪರ್ಯಾಸವೆನಿಸುತ್ತದೆಯಲ್ಲವೆ?

'ಗ್ರಂಥ ಸಾಹೇಬ್' ಸಿಖ್ಖರ ಪವಿತ್ರ ಗ್ರಂಥವಷ್ಟೇ ಅಲ್ಲ, ಗುರುವೂ ಹೌದು. ಗುರು ನಾನಕರ ಹಾಗೂ ಇತರ ಧರ್ಮಗಳ ಮಹಾತ್ಮರ ವಚನಗಳನ್ನು ಶ್ಲೋಕ ರೂಪದಲ್ಲಿ ಇದರಲ್ಲಿ ಸೇರಿಸಿರುವುದೇ ಇದರ ವೈಶಿಷ್ಟ್ಯ. ಸಿಖ್ಖರು ಇದನ್ನು 'ಆದಿ ಗ್ರಂಥ'ವೆಂದೇ ಕರೆಯುತ್ತಾರೆ. ಸಿಖ್ಖ ಧರ್ಮದ ಪಂಚಮ ಗುರುವಾದ ಗುರು ಅರ್ಜುನದೇವ ಈ ಶ್ಲೋಕಗಳನ್ನೆಲ್ಲ ಶೋಧಿಸಿ ಕ್ರೋಢೀಕರಿಸಿದರೆಂದು ಹೇಳುತ್ತಾರೆ. ೧೬೦೪ರಲ್ಲಿ ಅಮೃತಸರದಲ್ಲಿರುವ ಸುವರ್ಣ ದೇವಾಲಯದಲ್ಲಿ ಈ ಗ್ರಂಥದ ಸ್ಥಾಪನೆ ಮಾಡಲಾಯಿತು. ಗುರು ಗೋವಿಂದಸಿಂಹರು ಒಂಭತ್ತನೆಯ ಗುರುವಾದ ತೇಜಬಹಾದ್ದೂರರ ಕೆಲವು ಶ್ಲೋಕಗಳನ್ನು ಗ್ರಂಥಕ್ಕೆ ಸೇರಿಸಿದುದಲ್ಲದೆ ತಮ್ಮದೇ ಆದ ಕೆಲವು ಶ್ಲೋಕಗಳನ್ನು ಕೂಡಿಸಿದರೆಂದು ಹೇಳುತ್ತಾರೆ. ಈಗ ಸಿಖ್ಖರಿಗೆ ಯಾವ ಪ್ರಮುಖ ಗುರುವೂ ಇಲ್ಲ. ಆದ್ದರಿಂದ ಅವರು ಈ ಧರ್ಮಗ್ರಂಥವನ್ನೇ ತಮ್ಮ ಗುರುವೆಂದು ಭಾವಿಸುತ್ತಾರೆ. ಗುರುಗಳಿಲ್ಲದ ಕಾಲದಲ್ಲಿ ಈ ಗ್ರಂಥವನ್ನೇ ಗುರುವೆಂದು ಭಾವಿಸಿ ಗೌರವಿಸಬೇಕೆಂದು ಗುರು ಗೋವಿಂದಸಿಂಹರು ತಮ್ಮ ಅನುಯಾಯಿಗಳಿಗೆ ಆಜ್ಞಾಪಿಸಿದ್ದರಂತೆ.

ಈ 'ಗ್ರಂಥ ಸಾಹೇಬ್'ನಲ್ಲಿರುವ ಶ್ಲೋಕ

ಗಳನ್ನು ಅವುಗಳ ವಿಷಯಕ್ಕನುಗುಣವಾಗಿ ವಿಂಗಡಿಸಿ ಬರೆಯಲಾಗಿದೆ. ಎಲ್ಲ ಶ್ಲೋಕಗಳನ್ನೂ ಹಾಡಲು ಅನುಕೂಲವಾಗುವಂತೆ ಸಂಗೀತಕ್ಕೆ (ರಾಗಕ್ಕೆ) ಅಳವಡಿಸಲಾಗಿದೆ. ಅದರಲ್ಲಿ ಇಂತಹ ೩೧ ರಾಗಗಳಿವೆಯೆಂದು ಹೇಳುತ್ತಾರೆ. ಆದರೆ ಶ್ಲೋಕಗಳೆಲ್ಲ ಸಿಖ್ಖ ಧರ್ಮಗುರುಗಳಿಂದಲೇ ರಚಿತವಾದವುಗಳಲ್ಲ ಎಂಬ ಅಂಶದಲ್ಲೇ ಈ ಗ್ರಂಥದ ಮಹತ್ವ ಅಡಕವಾಗಿದೆ. ಅದರಲ್ಲಿ ಹಿಂದೂ ಸಂತರ ೧೨ ಶ್ಲೋಕಗಳಿವೆ. ಮುಸ್ಲಿಂ ಫಕೀರರ, ಸಾಧುಗಳ ಶ್ಲೋಕಗಳೂ ಇವೆ. ಒಂದು ಶ್ಲೋಕ ಮಾತ್ರ ಯಾವ ಜಾತಿಗೆ ಸೇರಿದುದೆಂದು ತಿಳಿಯುವುದಿಲ್ಲ. ಸಿಖ್ಖರ ಪ್ರಥಮ ಗುರು ನಾನಕ, ಗುರು ಅಂಗದ, ಗುರು ಅಮರ ದಾಸ, ಗುರು ರಾಮದಾಸ, ಗುರು ಅರ್ಜುನ ದೇವ, ಗುರು ತೇಜಬಹಾದೂರ ಮತ್ತು ಗುರು ಗೋವಿಂದಸಿಂಹ ಹೀಗೆ ಏಳು ಗುರುಗಳಿಂದ ರಚಿತವಾದ ಶ್ಲೋಕಗಳು ಅದರಲ್ಲಿವೆ. ಅಲ್ಲದೆ ಬಾಬಾ ಫರೀದ್, ಭಿಕ್ಕನ್, ಸತ್ತಾ, ಬಲನಂದ, ಮರ್ದನ ಮೊದಲಾದವರ ಶ್ಲೋಕಗಳೂ ಇವೆ. ಬ್ರಾಹ್ಮಣ ಸಂತರಾದ ವೇಣಿ, ಸೂರದಾಸರ ಶ್ಲೋಕಗಳು, ನೇಕಾರರ ಬಳಗದ ನಾಮದೇವ, ವೈಶ್ಯರವನಾದ ತ್ರಿಲೋಚನ, ಕ್ಷೌರಿಕನಾದ ಸೇನ, ಗೋಪಾಲಕರ ಧನ್ನ, ಕಟುಕರವನಾದ ಸಾಧನ, ಸಮಗಾರನಾದ ರಬಿದಾಸ ಹಾಗೂ ಇತರ ಸಂತರಾದ ರಮಾನಂದ, ಜಯದೇವ, ಪರಮಾನಂದ ಮೊದಲಾದವರ ಶ್ಲೋಕಗಳನ್ನೂ ಅದು ಒಳಗೊಂಡಿದೆ. ಇದು ಸಿಖ್ಖ ಧರ್ಮವು ಜಾತಿಗೆ ಮಹತ್ವವನ್ನೀಯದೆ ನೀತಿಯನ್ನು ಗೌರವಿಸುತ್ತದೆ ಎಂಬ ಅಂಶವನ್ನು ಬಿಂಬಿಸುತ್ತದೆ. ಮುಸ್ಲಿಂ ನೇಕಾರರ ಬಳಗದಲ್ಲಿ ಬೆಳೆದ ಕಬೀರನ ಶ್ಲೋಕಗಳನ್ನೂ ಇದು ಒಳಗೊಂಡಿದೆ.

ಈ ಗ್ರಂಥವು ಹೇಗೆ ವಿವಿಧ ಜಾತಿ ಮತಗಳ ಸಂತರ ಮಾತುಗಳಿಗೆ ಗೌರವವಿತ್ತಿದೆಯೋ ಹಾಗೆಯೇ ಪಂಜಾಬ ಮಾತ್ರವಲ್ಲ, ಇತರ ಪ್ರದೇಶಗಳ ಸಂತರಿಗೂ ಪ್ರಾತಿನಿಧ್ಯವಿತ್ತಿದೆ. ಕಬೀರ, ರಮಾನಂದ, ರಬಿದಾಸ, ಸೂರದಾಸ, ಪಿಪಾ ಮತ್ತು ಭಿಕ್ಕನ್‌ರು ಉತ್ತರ ಪ್ರದೇಶದವರಾದರೆ ಜಯದೇವನು ಬಂಗಾಳದವನು. ನಾಮದೇವ, ತ್ರಿಲೋಚನ ಮತ್ತು ಪರಮಾನಂದರು ಮಹಾರಾಷ್ಟ್ರದವರು. ಧನ್ನನು ರಾಜಸ್ಥಾನದವನು. ಸಾಧನನು ಸಿಂಧು ದೇಶದವನು. ಆದ್ದರಿಂದ ಗುರು ಗ್ರಂಥ ಸಾಹೇಬ್ ಪಂಜಾಬಿಗೆ ಮಾತ್ರ ಸೀಮಿತವಾಗಿಲ್ಲವೆಂದು ಹೇಳಬಹುದು.

ಈ ಗ್ರಂಥವನ್ನು ಮಾತ್ರ ಪಂಜಾಬಿ ಲಿಪಿಯಲ್ಲಿ ಬರೆಯಲಾಗಿದೆ. ಆದರೆ ಅನೇಕ ಹಿಂದಿ ಶ್ಲೋಕಗಳು ಇದರಲ್ಲಿವೆ. ಪರ್ಶಿಯಾ ಭಾಷೆಯ ಶ್ಲೋಕಗಳೂ ಇವೆಯೆನ್ನುತ್ತಾರೆ. ಪಂಜಾಬಿ ಭಾಷಾ ಶ್ಲೋಕಗಳು ಅಲ್ಲಿನ ಜನಸಾಮಾನ್ಯರ ಆಡು ಭಾಷೆಯಲ್ಲಿದ್ದು ಎಲ್ಲರಿಗೂ ಅರ್ಥವಾಗುವಂತಿವೆ. ಸಿಖ್ಖ ಗುರುಗಳೇ ಈ ಶ್ಲೋಕಗಳ ಆಯ್ಕೆ ಮಾಡಿರುವಾಗ ಯಾವ ವಿಧದ ಅಪಾರ್ಥಕ್ಕೂ ಇಲ್ಲಿ ಅವಕಾಶವಿಲ್ಲ.

ಕ್ರಿಸ್ತಶಕ ೧೨ರಿಂದ ೧೭ನೇ ಶತಮಾನಗಳಲ್ಲಿ ಭಾರತದಲ್ಲಿ ರಾಜಕೀಯ, ಸಾಮಾಜಿಕ, ಬದಲಾವಣೆಗಳೊಂದಿಗೆ ಧಾರ್ಮಿಕ ಬದಲಾವಣೆಗಳೂ ಉಂಟಾದವು. ಈ ಕಾಲದಲ್ಲಿ ಉದ್ಭವಿಸಿದ ಸಂತರು, ಮಹಾತ್ಮರು, ಎಲ್ಲ ಧರ್ಮಗಳೂ ದೇವರನ್ನು ಕಂಡುಕೊಳ್ಳಲಿರುವ ವಿವಿಧ ಮಾರ್ಗಗಳಾಗಿದ್ದು, ದೇವರನ್ನು ಸೇರುವ ಮುಕ್ತಿ ಮಾರ್ಗವು ಭಕ್ತಿ ಮಾತ್ರವೆಂದು ಬೋಧಿಸಿದರು. ಇಂಥ ಧಾರ್ಮಿಕ ಭಾವನೆಗಳ ಸಂಗ್ರಹವೇ ಗ್ರಂಥ ಸಾಹೇಬ್‌ದಲ್ಲಿದೆ.

ದೇವನು ಒಬ್ಬನೆ. ಆತನೇ ಸೃಷ್ಟಿಕರ್ತ, ಪ್ರೇಮಸ್ವರೂಪ, ಭಯಹರ, ನಿರಾಕಾರನಲ್ಲದೆ ಸರ್ವವ್ಯಾಪಿಯೂ ಆಗಿ ಜನನಮರಣಗಳ ಬಂಧನದಿಂದ ಬಿಡುಗಡೆಗೊಳಿಸುತ್ತಾನೆ ಎಂಬುದು ಗ್ರಂಥ ಸಾಹೇಬ್‌ನ ಸಾರ. ಮೂಲ ಮಂತ್ರದ ಮೊದಲನೆ ಶಬ್ದವೇ ಗುರುಪ್ರಸಾದವೆಂದಿದೆ. ದೇವರ ಸ್ಮರಣೆಗೆ ಉಪಯೋಗಿಸುವ 'ರಾಮ' ಶಬ್ದಕ್ಕೆ ಅಲ್ಲಲ್ಲಿ 'ಅಲ್ಲಾ', 'ಪರವರದಿಗಾರ'

ಎಂಬ ತತ್ಸಮಾನ ಪದಗಳನ್ನು ಬಳಸಲಾಗಿದೆ! ನಾರಾಯಣ, ಮಧುಸೂದನ, ಗೋವಿಂದ, ಗೋಪಾಲ ಮೊದಲಾದ ಶಬ್ದಗಳನ್ನೂ ಉಪಯೋಗಿಸಲಾಗಿದೆ. ಇಲ್ಲಿ ದೇವರ ಹೆಸರನ್ನು ಉಚ್ಚರಿಸುವುದಕ್ಕಿಂತ ಅದರಲ್ಲಡಗಿರುವ ಏಕತೆಯನ್ನು ಪ್ರತಿಬಿಂಬಿಸುವುದೇ ಮುಖ್ಯ.

ಪ್ರತಿಯೊಬ್ಬ ಸಿಖ್ಖನೂ ಗುರುಗ್ರಂಥ ಸಾಹೇಬನ್ನು ಗೌರವಿಸಲೇಬೇಕೆಂದು ಗುರು ಅರ್ಜುನದೇವ್ ಹೇಳಿದ್ದಾರೆ. ಅದು ಸಿಖ್ಖರ ಏಕೈಕ-ಮಾರ್ಗದರ್ಶಕ ಪವಿತ್ರ ಗ್ರಂಥ. ಮಾನವನು ಹೇಗೆ ಆಧ್ಯಾತ್ಮಿಕವಾಗಿ ಸಾರ್ವತ್ರಿಕ ಜೀವನವನ್ನು ನಡೆಸಬಹುದೆಂಬುದನ್ನು ಅದು ತಿಳಿಸುತ್ತದೆ. ಯಾವ ಜಾತಿಯೇ ಆಗಲಿ, ಸ್ತ್ರೀ-ಪುರುಷ ಭೇದವಿಲ್ಲದೆ ಗ್ರಂಥ ಸಾಹೇಬನ್ನು ಗೌರವಿಸಬಹುದು, ಪ್ರೀತಿಸಬಹುದು. ಆದರೆ ಅದನ್ನು ಗೌರವಿಸುವುದೂ ಪ್ರೀತಿಸುವುದೂ ಸಿಖ್ಖನ ಆದ್ಯ ಕರ್ತವ್ಯ. ಅದನ್ನು ಪೂಜಿಸುವುದಕ್ಕೆ ಮಾತ್ರ ವಿರೋಧವಿದೆ. ಯಾವ ಸತ್ಪಾತ್ರನಾದ ಗೌರವಯುತ ವ್ಯಕ್ತಿಯನ್ನು ಬೇಕಾದರೂ ಸಿಖ್ಖರು ಮನ್ನಣೆಯಿತ್ತು ಗೌರವಿಸಬಹುದು. ಆದರೆ ಗ್ರಂಥಸಾಹೇಬನ್ನು ಮಾತ್ರ ಗುರುವೆಂದೇ ತಿಳಿದು ಪ್ರೀತಿ, ಗೌರವ ತೋರಿಸಬೇಕು. ದೇವರನ್ನು ಭಕ್ತಿಯಿಂದ ಕಾಣಬೇಕು ಎಂಬುದು ಗ್ರಂಥದ ಸಾರ. ಇದರಲ್ಲಿ ಎಲ್ಲಿಯೂ ಇತರ ಮತದ ಕುರಿತಾದ ದೂಷಣೆ ಅಥವಾ ದೂಷಣೆಗೆ ಎಡೆಗೊಡುವ ವಿಚಾರಗಳಿಲ್ಲ. ಆದ್ದರಿಂದ ಇದೊಂದು ಶ್ರೇಷ್ಠ ಮತೇತರ ಗ್ರಂಥವೆಂದರೆ ತಪ್ಪಾಗಲಾರದು.




ಮುತ್ತಿನ ಕಥೆ

ಇಂದು ಆಭರಣಕ್ಕೆಂದು ಬಳಸುವ ಮುತ್ತನ್ನು ಮೊದಲು ಕಂಡುಹಿಡಿದವರು ಚೀನೀಯರು. ಕ್ರಿಸ್ತಪೂರ್ವ ಆರು ಏಳನೆಯ ಶತಮಾನಗಳ ಸುಮಾರಿಗೆ ಭಾರತ, ಪರ್ಶಿಯಾ ಹಾಗೂ ಸಿಂಹಳಗಳ ಸಮುದ್ರ ತೀರದಲ್ಲಿ ಮುತ್ತನ್ನು ತೆಗೆಯಲಾಗುತ್ತಿತ್ತು.

ಕೃತಕವಾಗಿ ಮುತ್ತನ್ನು ಸಿದ್ಧಪಡಿಸುವಾಗ ಮರಳಿನ ಒಂದು ಕಣವನ್ನೋ ಇಲ್ಲವೆ ಕಪ್ಪೆಚಿಪ್ಪಿನ ಚೂರುಗಳನ್ನೋ ಶುಕ್ತಿಯ ಕವಚದೊಳಗೆ ಸೇರಿಸುತ್ತಾರೆ. ಅವನ್ನು ಶುಕ್ತಿಯು ಮುತ್ತನ್ನಾಗಿ ಪರಿವರ್ತಿಸುತ್ತದೆ.

ಸಾಕಿ ಬೆಳೆಸಿದ ಈ ಕೃತಕ ಮುತ್ತು ನಿಜವಾದ ಮುತ್ತಿನಂತೆಯೇ ಇರುತ್ತದೆ. ಅತಿ ದೊಡ್ಡ ಮುತ್ತೆಂದರೆ ಎರಡು ಅಂಗುಲ ಉದ್ದ, ನಾಲ್ಕು ಅಂಗುಲ ಸುತ್ತಳತೆ ಇರುವುದು. ಇದಕ್ಕಿಂತ ದೊಡ್ಡದಾದ ಮುತ್ತು ಇದುವರೆಗೆ ದೊರೆತ ದಾಖಲೆಯಿಲ್ಲ. ಇದರ ತೂಕ ೧,೮೦೦ ದೊಡ್ಡದಾದ ಕಣಗಳಷ್ಟು. ಮುತ್ತಿನ 'ಕಣ'ವೆಂದರೆ ಐವತ್ತು ಮಿಲಿಗ್ರಾಮುಗಳು. ಮುತ್ತನ್ನು ಪರೀಕ್ಷಿಸುವಾಗ ಅದರ ಗಾತ್ರ, ತೂಕಗಳಷ್ಟೇ ಅಲ್ಲದೆ ಅದರ ಪದರಗಳೂ ಪರಿಗಣಿಸಲ್ಪಡುತ್ತದೆ.

—ಕಿ. ಎಸ್. ಎ.



ರೋಗಿಯನ್ನು ಪರೀಕ್ಷಿಸುತ್ತಿರುವ ಡಾ. ಗಣಪತಿಯವರು

ಕುಷ್ಠರೋಗ ಪ್ರಪಂಚದ ವೈದ್ಯ ತಪಸ್ವಿ

ಡಾ. ಆರ್. ಗಣಪತಿ

ಡಾ. ವಸಂತ ಅ. ಕುಲಕರ್ಣಿ

ಮುಂಬಯಿ ಕುಷ್ಠರೋಗ ಯೋಜನೆಯ ನಿರ್ದೇಶಕ ಹಾಗೂ ಅಂತರಾಷ್ಟ್ರೀಯ ಖ್ಯಾತಿಯ ಕುಷ್ಠರೋಗ ತಜ್ಞ ಡಾ. ಆರ್. ಗಣಪತಿಯವರು ಕಳೆದ ವರುಷ ಅಥಣಿ ತಾಲೂಕಿನ ಐನಾಪುರ ಗ್ರಾಮಕ್ಕೆ ಬಂದಿದ್ದರು. ಐನಾಪುರ ಜೇಸೀಜ್ ಹಾಗೂ ಉಗಾರ ಇಂಡಿಯನ್ ಮೆಡಿಕಲ್ ಅಸೋಶಿಯೇಶನ್ ಶಾಖೆಯು ಸಂಘಟಿಸಿದ್ದ ಚರ್ಮ ರೋಗ ಹಾಗು ಕುಷ್ಠ ರೋಗ ಶಿಬಿರವನ್ನು ತುಂಬ ಯಶಸ್ವಿಯಾಗಿ ನಡೆಸಿಕೊಟ್ಟರು. ಶಹರವೇ ಇರಲಿ, ಕೊಳಚೆ ಪ್ರದೇಶವೇ ಇರಲಿ ಸಂಘ – ಸಂಸ್ಥೆಗಳೇ ಇರಲಿ ಕುಷ್ಠದ ಸೇವೆಗಾಗಿ ಡಾ. ಆರ್. ಗಣಪತಿ ಹಾಜರಿರುತ್ತಾರೆ: ಯಾವ ಪ್ರತಿಫಲಾಪೇಕ್ಷೆಯಿಲ್ಲದ ಅವರಿಗೆ ಪೂರ್ವಯೋಜಿತ ದಿನಾಂಕ ಕೊಟ್ಟು

ಆಮಂತ್ರಣಪತ್ರರೆ ಸಾಕು.

ಮನದ ತುಂಬ ಕುಷ್ಠರೋಗ ಕುರಿತು ಚಿಂತನೆಗಳು, ಹೃದಯದ ತುಂಬ ಮಾನವೀಯ ಅನುಕಂಪ ಹೊತ್ತುಕೊಂಡು ದೇಶವ್ಯಾದ್ಯಂತ ಸಂಚಾರ ಕೈಕೊಳ್ಳುವ ಶ್ರೀಯುತರು ಕುಷ್ಠರೋಗ ಪ್ರಪಂಚದ ವೈದ್ಯ ತಪಸ್ವಿಯೇ ಸರಿ. ಕುಷ್ಠರೋಗದ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲರು. ಸಮಾಜ ನಿರ್ಮಿಸಿದ ಕಲಂಕವೆಂಬ ಕಾರ್ಗತ್ತಲೆಯಲ್ಲಿ ಹಣತೆಯನ್ನು ಹಚ್ಚಿಡುವ ಹೃದಯಸಂಪನ್ನರು. ದೇಶದುದ್ದಕ್ಕೂ ಸಾವಿರಾರು ಶಿಬಿರಗಳಲ್ಲಿ ಪಾಲ್ಗೊಂಡ ಡಾ. ಗಣಪತಿ ಲಕ್ಷಾವಧಿ ಕುಷ್ಠರೋಗಿಗಳಿಗೆ ಆಶಾಕಿರಣವಾಗಿ ಅವರಿಗೆ ಹೊಸ ಜೀವನ ಕಲ್ಪಿಸಿದ್ದಾರೆ.



ಬಹುರೋಗಾಣುಳ್ಳ ಕುಷ್ಠರೋಗ. ಇದರಿಂದ ರೋಗಾಣು ಹರಡುವುದರಿಂದ ಇದು ಬಹಳ ಅಪಾಯಕಾರಿ.

ಕ್ರಿಸ್ತಶಕ ೨೦೦೦ದ ಒಳಗಾಗಿ ದೇಶದಿಂದ ಕುಷ್ಠರೋಗ ನಿರ್ಮೂಲನಗೊಳ್ಳಬೇಕೆಂದು ಸರಕಾರ ತೊಟ್ಟ ದೀಕ್ಷೆಗೆ ಇವರು ಸಂಪೂರ್ಣ ಸಮರ್ಪಿಸಿಕೊಂಡಿದ್ದಾರೆ. ಮುಂಬಯಿಯೆಂದರೆ ಡಾಕ್ಟರರಿಗೆ ಹಣ ಸಂಪಾದನೆಯ ಆಗರ. ಆದರೆ ಡಾ. ಗಣಪತಿಯವರು ಕುಷ್ಠರೋಗಿಯ ಸೇವೆಯೇ ತಮ್ಮ ಕೈಂಕರ್ಯವೆಂದು ಭಾವಿಸಿ ಹಣ ಗಳಿಕೆಯತ್ತ ಗಮನ ಹರಿಸಿಲ್ಲ.

೧೯೫೫ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಎಂ. ಬಿ. ಬಿ. ಎಸ್. ಪದವಿಯ ನಂತರ ಚರ್ಮರೋಗದಲ್ಲಿ ಡಿಪ್ಲೊಮಾ ಪದವಿ ಗಳಿಸಿದರು. ಎಳೆಂಟು ವಿವಿಧ ವೈದ್ಯಸಂಸ್ಥೆಗಳ ಸೇವೆಯ ನಂತರ ೧೯೭೭ರಲ್ಲಿ ಮುಂಬಯಿ ಕುಷ್ಠರೋಗ ಯೋಜನೆಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡರು. ಇದು ಜರ್ಮನಿಯ ಕುಷ್ಠ ನಿವಾರಣಾ ಸಂಸ್ಥೆಯ ಸಹಯೋಗದೊಡನೆ ಕಾರ್ಯ ನಿರ್ವಹಿಸುತ್ತಿದೆ. ಸುಮಾರು ೧೭–೧೮ ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆಸಲ್ಲಿಸಿದ ಅಪಾರ ಅನುಭವವುಳ್ಳ ಇವರು ಕುಷ್ಠರೋಗ ಕುರಿತು ೧೧೬ ಸಂಶೋಧನ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಕೆಲ ಪ್ರಬಂಧಗಳಂತೂ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ವಿದೇಶಿ ತಜ್ಞರ ಮೆಚ್ಚುಗೆ ಗಳಿಸಿವೆ. ಭಾರತೀಯ ವೈದ್ಯಕೀಯ ಅನುಸಂಧಾನ ಪರಿಷತ್ತಿನ ಕೆಲ ಯೋಜನೆಗಳಲ್ಲಿಯೂ ಸಂಶೋಧನೆ ಕೈಕೊಂಡಿದ್ದಾರೆ. ಇವರ ಸಂಶೋಧನೆಗಳಲ್ಲಿ ಕಾಣುವ ಪ್ರಮುಖ ಅಂಶಗಳು- ಇವರ ಸ್ಫುಟವಾದ ಮೂಲ ವಿಚಾರಗಳು – ಅನುಭವದಿಂದ ಎರಕ ಹೊಯ್ದ ದಿಕ್ಸೂಚಿ ಮಾರ್ಗಗಳು. ಅನೇಕ ವರುಷಗಳ ಅನುಭವದ ನಂತರ ಶಹರ ಕುಷ್ಠರೋಗ ಸಮಸ್ಯೆ ಕುರಿತು ಸಂಶೋಧನ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದವರು ಬಹು ದೊಡ್ಡ ಶ್ರೇಯಸ್ಸು. ಮುಂಬಯಿಯ ಕೆಲ ಕ್ಷೇತ್ರಗಳಲ್ಲಿ ನಡೆದ ಈ ಯತ್ನ ಅನೇಕ ಸಂಸ್ಥೆಗಳ ಮೇಲೆ ಬೆಳಕು ಚೆಲ್ಲಿದೆ. ರೋಗದ ಕಾರಣ

ಗಳನ್ನು ಕಂಡುಹಿಡಿಯುವಲ್ಲಿ ಸಹಾಯಕವಾದು-ವಲ್ಲದೆ ಕೊಳಚೆ ಪ್ರದೇಶದಲ್ಲಿಯ ಸೊಂಕು ಅಳತೆ ಮಾಡಲು ನೆರವಾದವು. ಮುಖ್ಯವಾಗಿ ಡಾ. ಆರ್. ಗಣಪತಿಯವರ ಉದ್ದೇಶವೆಂದರೆ ಕುಷ್ಠ ರೋಗದ ಬಗ್ಗೆ ಜನರಲ್ಲಿರುವ ಇಲ್ಲ-ಸಲ್ಲದ ತಪ್ಪು ಕಲ್ಪನೆಗಳನ್ನು ದೂರ ಮಾಡುವದು.

ಕುಷ್ಠರೋಗದ ಬಗ್ಗೆ ಕಲಂಕ ಭಾವನೆ ಇರುವ ಜನರನ್ನು ಕಂಡರೆ ಕಿಡಿಕಿಡಿಯಾಗುತ್ತಾರವರು. ಆದರೆ ಕುಷ್ಠರೋಗಿಯನ್ನು ಕಂಡರೆ ಅವರ ಹೃದಯ ಕರಗುತ್ತದೆ.

೧೯೮೭ರಲ್ಲಿ ಅಥಣಿ ತಾಲೂಕ ಮೆಡಿಕಲ್ ಅಸೋಸಿಯಶನ್ನಿನ ಆಮಂತ್ರಣದ ಮೇರೆಗೆ ಬಂದು ಒಂದೇ ದಿನ ಸುಮಾರು ೩೦೦ ರೋಗಿ ಗಳನ್ನು ಪರೀಕ್ಷಿಸಿ ಕುಷ್ಠರೋಗಿಗಳ ಗಣನೀಯ ಸಂಖ್ಯೆ ಕಂಡು ಕರ್ನಾಟಕ ಸರಕಾರಕ್ಕೆ ತಮ್ಮ ವರದಿ ಸಲ್ಲಿಸಿದರು. ಅಂಕಿ ಸಂಖ್ಯೆಗಳ ಗಾಢತೆಯ ಅರಿವು ಮಾಡಿಕೊಟ್ಟರು. ಇದರಿಂದ ಅಥಣಿಗೆ ಪ್ರತ್ಯೇಕ ಕುಷ್ಠರೋಗ ಘಟಕವನ್ನು ಸರಕಾರ ಮಂಜೂರು ಮಾಡಿತು. ಶಿಬಿರ ಮುಗಿದ ನಂತರ ಸಾಯಂಕಾಲ ಸ್ಥಳೀಯ ಡಾಕ್ಟರರನ್ನು ಕಲೆ ಹಾಕಿ ಅಲ್ಲಿಯ ಸಮಸ್ಯೆಯ ಬಗ್ಗೆ ಮತ್ತು ನಿವಾರಣೋ ಪಾಯದ ಬಗ್ಗೆ ಚರ್ಚಿಸುತ್ತಾರೆ. ಸೇವಾ ಸಂಸ್ಥೆಗಳ ಮೂಲಕ ಜನರಿಗೆ ತಿಳಿ ಹೇಳುವ ಯತ್ನ ಮಾಡು-ತ್ತಾರೆ. ತಮ್ಮ ಅನುಭವವನ್ನು ಇತರರೊಡನೆ ಹಂಚಿಕೊಳ್ಳುತ್ತಾರೆ. ಮುಂಬಯಿಗೆ ತೆರಳಿದ ನಂತರ ಔಷಧೋಪಚಾರ ಪ್ರಗತಿ-ಪರಿಣಾಮಗಳ ಬಗ್ಗೆ ಪತ್ರ ಬರೆದು ಕೇಳುತ್ತಾರೆ. ಇದಕ್ಕಾಗಿ ಅವರು ಒಂದು ಪೈಸೆಯನ್ನು ಕೂಡ ತೆಗೆದು ಕೊಳ್ಳುವುದಿಲ್ಲ. ಇಂಥ ಮಹೋನ್ನತ ಸೇವೆಯನ್ನು ಗುರುತಿಸಿ ಕೇಂದ್ರ ಸರಕಾರ ಅವರಿಗೆ ೧೯೮೩ರಲ್ಲಿ 'ಪದ್ಮಶ್ರೀ' ನೀಡಿ ಗೌರವಿಸಿತು. ಯೋಧ ಮೆಮೋರಿಯಲ್ ಸುವರ್ಣ ಪದಕ ಬೆನ್ನತ್ತಿ ಬಂದಿತು.

ಇಂಥ ಅಪರೂಪದ ವ್ಯಕ್ತಿಯನ್ನು ಸಮೀಪ-ದಿಂದ ಕಾಣುವ ಭಾಗ್ಯ ಐನಾಪುರದಲ್ಲಿ ನನಗೆ ದೊರಕಿತು. ಅಥಣಿಯಲ್ಲಿ ಕಂಡ ನೆನಪನ್ನು ಅವರೇ ಮಾಡಿಕೊಟ್ಟರು. ಜೇಸಿ ಭೀಮುಕಟ್ಟಿ ಡಾ. ಪ್ರಮೋದ ಮುತಾಲಿಕ ನನ್ನ ಪರಿಚಯ ಮಾಡಿಕೊಟ್ಟ ನಂತರ ಶಿಬಿರದ ಬಿಡುವಿನ ವೇಳೆ ಯಲ್ಲಿ ಕುಷ್ಠರೋಗದ ಬಗ್ಗೆ ಹಲವಾರು ವಿಷಯ ಗಳನ್ನು ಅವರೊಡನೆ ಚರ್ಚಿಸಿದೆ. ಯಾವುದೇ ಭಾವಾವೇಶಕ್ಕೆ ಅವರು ಒಳಗಾಗದೆ ಶಾಂತಚಿತ್ತ ದಿಂದ ಸಂದರ್ಶನದಲ್ಲಿ ಕುಷ್ಠರೋಗದ ಬಗ್ಗೆ ಅವರು ಹೇಳಿದರು.

ಪ್ರಶ್ನೆ : ಕುಷ್ಠರೋಗದ ಕ್ಷೇತ್ರ ತಮ್ಮನ್ನು ಆಕರ್ಷಿಸಿದ್ದು ಹೇಗೆ ? ಸೇವೆಗೈದ ಬಗ್ಗೆ ತೃಪ್ತಿ ಇದೆಯೆ? ನಿಮ್ಮ ಸ್ಪಷ್ಟ ಅಭಿಪ್ರಾಯ ಗಳೇನು?

ಉತ್ತರ : ನಾನು ವೈದ್ಯಕೀಯ ಪದವಿ ಪಡೆದ



ಕುಷ್ಠ ರೋಗದ ವಿವಿಧ ಆಕಾರದ ಮಚ್ಚೆಗಳು. ಆದರೆ ಇವುಗಳಿಂದ ಸೋಂಕು ಹರಡುವುದಿಲ್ಲ.

ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯಕ್ಕಾಗಿ ದುಡಿಯಬೇಕೆಂಬ ಬಲವಾದ ಅಭಿಲಾಷೆ ಉಂಟಾಯಿತು. ವೈದ್ಯ ವೃತ್ತಿಯನ್ನು ವ್ಯವಹಾರಿಕವಾಗಿ ಬಳಸಿ ದುಡ್ಡು ಸಂಪಾದನೆ ಮಾಡುವ ರೀತಿಯನ್ನು ಕಂಡು ಜುಗುಪ್ಸೆಗೊಂಡೆ. ಅದ್ದರಿಂದ ಕುಷ್ಠರೋಗಿಗಳ ಸೇವೆಗಾಗಿ ಜೀವನ ಮುಡಿಪಿಡಬೇಕೆಂದು ಸಂಕಲ್ಪ ತೊಟ್ಟೆ. ಕ್ಷಯರೋಗ, ಆಹಾರಾಂಶಗಳ ಕ್ಷೇತ್ರಗಳಲ್ಲಿ ದುಡಿದ ಅನುಭವವಿತ್ತು. ನನ್ನ ವೃತ್ತಿಯ ಆರಂಭದ ದಿನಗಳಲ್ಲಿ ಡಾ. ಕೆ. ರಾಮಾನುಜಂರಂಥ ಮಹಾಮೇಧಾವಿ ಕುಷ್ಠರೋಗ ತಜ್ಞರ ನಿಕಟ ಸಂಪರ್ಕ ಬಂದು ಆ ರೋಗದ ಪರಿಚಯ ಪಡೆಯಲು ತುಂಬ ಸಹಾಯಕವಾಯಿತು. ಅದು ಅಭಿಮಾನದ ಸಂಗತಿ. ಮುಂಬಯಿಯ ಆಸ್ಪತ್ರೆಗಳಲ್ಲಿ ಕುಷ್ಠರೋಗಿಗಳ ಸಂಖ್ಯೆ ವಿಪರೀತ. ಅವು ನಾನಾ ವಿಧವಾದವುಗಳು. ಅದ್ದರಿಂದ ಕುಷ್ಠರೋಗ ಕುರಿತು ಆಳವಾದ ಅಧ್ಯಯನ ನಡೆಸಲು ತುಂಬ ಸಹಾಯಕವಾಯಿತು. ಮೊದಲು ನಾನು ಹತ್ತು ವರುಷಗಳ ವರೆಗೆ

ನನ್ನ ವೈದ್ಯವೃತ್ತಿಯಲ್ಲಿ ಎದುರಾದ ಮೂರು ಪ್ರಸಂಗಗಳು...

ಕುಷ್ಠರೋಗದ ಬಗ್ಗೆ ಸಮಾಜ ಇರಿಸಿಕೊಂಡ ಭಾವನೆ ಕೆಲ ಬಾರಿ ರೋಗಿಗಳನ್ನು, ಡಾಕ್ಟರರನ್ನು ತುಂಬ ಪೇಚಿಗೆ ಸಿಲುಕಿಸುವವು. ಒಮ್ಮೆ ಮಹಿಳೆಯೊಬ್ಬಳು ತನ್ನ ಅಣ್ಣನೊಡನೆ ಮುಖದ ಮೇಲೆ ಉಂಟಾದ ಕಲೆಯನ್ನು ಪರೀಕ್ಷಿಸಿಕೊಳ್ಳಲು ಬಂದಳು. ಬಹುಶಃ ಅದು ಅವಳಿಗೆ ಸಂಶಯ ಬಂದಿದ್ದರಿಂದ ಗಂಡನನ್ನು ಕರೆತಂದಿರಲಿಲ್ಲ. ಪರೀಕ್ಷಿಸಿದ ನಂತರ ಅದು ಕುಷ್ಠ ಕಲೆ ಎಂದು ಸಂಶಯ ಬಂದು ಮಿರಜ ಆಸ್ಪತ್ರೆಯಲ್ಲಿ ಸಂಪೂರ್ಣ ತಪಾಸಣೆಗೆ ಒಳಪಡಬೇಕೆಂದು ಸೂಚಿಸಿದೆ. ಮಿರಜದಲ್ಲಿಯೂ ಅದು ಕುಷ್ಠವೆಂದು ರೋಗ ತಪಾಸಣೆಗಳು ಹೇಳಿದ ನಂತರ ಅಣ್ಣ ನನ್ನ ಬಳಿ ಧಾವಿಸಿ ಬಂದ. ಗಂಡ ಬಲು ವಿಚಿತ್ರ ಸ್ವಭಾವದವ. ತಂಗಿ ಕುಷ್ಠರೋಗಿ ಎಂದು ಅವನಿಗೆ ಗೊತ್ತಾದರೆ ಅವಳನ್ನು ತ್ಯಜಿಸಬಹುದೆ? ತುಂಬ ಉದ್ವೇಗದಿಂದ ಪದೇ ಪದೇ ವಿಚಾರಿಸುತ್ತಿದ್ದ. ಗಂಡನಿಗೆ ಗೊತ್ತಾಗದಂತೆ ರೋಗದ ಉಪಚಾರ ಅತ್ಯಂತ ಗುಪ್ತವಾಗಿ ಸಾಗಬೇಕೆಂದು ಅತನ ಪ್ರಾರ್ಥನೆಯಾಗಿತ್ತು. ಇದು ಎಷ್ಟರ ಮಟ್ಟಿಗೆ ಸಾಧ್ಯ ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತು. ಆದರೂ ಯತ್ನಿಸುವೆ ಎಂದು ಭರವಸೆ ನೀಡಿ ಆ ಮಹಿಳೆಗೆ ನನ್ನ ಸಹಧರ್ಮಿಣಿಯ ಪರಿಚಯ ಮಾಡಿಕೊಟ್ಟು, ನೇರವಾಗಿ ಆಕೆಗೆ ಮನೆಗೆ ಬಂದು ವಿಚಾರಿಸಲು ಹೇಳಿದೆ. ಅದರಂತೆ ಆಗಾಗ ಬಂದು ಪರೀಕ್ಷಿಸಿಕೊಂಡು ಸಲಹೆ ಪಡೆಯುತ್ತಿದ್ದಳು. ಇದು ಸುಮಾರು ಒಂದೂವರೆ ವರುಷ ಸಾಗಿತು. ಈಗ ಅವಳು ಸಂಪೂರ್ಣ ಗುಣಮುಖಿಯಾಗಿದ್ದಾಳೆ. ಇನ್ನೂ ಗಂಡನಿಗೆ ಗೊತ್ತಾಗಿಲ್ಲ. ಇದರಿಂದ ಕೆಲ ಬಾರಿ ಕುಟುಂಬದಲ್ಲಿ ಸಮಸ್ಯೆಗಳು ಉದ್ಭವಿಸಿ ಗಂಡ-ಹೆಂಡಿರು ವಿಚ್ಛೇದನಗೊಂಡ ಪ್ರಕರಣಗಳೂ ಉಂಟು. ಮಹಿಳೆಯ ಅಣ್ಣ ತುಂಬ ಹರ್ಷಗೊಂಡು ಧನ್ಯವಾದ ಹೇಳಿದ.

*

ಇನ್ನೊಮ್ಮೆ ನಾನು ಖಾಸಗಿ ವೈದ್ಯ ವೃತ್ತಿಯಲ್ಲಿದ್ದಾಗ ಗ್ರಾಮೀಣ ಪ್ರದೇಶದವನು ಬಂದು ತನ್ನ ಮಗಳಿಗೆ ಉಂಟಾದ ಕುಷ್ಠರೋಗ ಕುರಿತು ಸರ್ಟಿಫಿಕೇಟ್ ಬೇಡಿ ಬಿನ್ನವಿಸಿದ

ಕೇವಲ ಕುಷ್ಠರೋಗ ವಿಚಾರದ ವಿವಿಧ ಮುಖಗಳ ಬಗ್ಗೆ ತಿಳಿದುಕೊಂಡ ನಂತರ ಅದರ ಸಾರ್ವಜನಿಕ ಸಮಸ್ಯೆಗಳನ್ನು ಓದಿದೆ. ೧೯೭೬ರಲ್ಲಿ ಮುಂಬಯಿಯ ಕುಷ್ಠರೋಗ ಯೋಜನೆ ಪ್ರಾರಂಭವಾದ ಮೇಲೆ ಅದರ ನಿರ್ದೇಶಕನಾಗಿ ಸೇವಾವಕಾಶ ದೊರೆತದ್ದು ಒಂದು ಸುವರ್ಣಾವಕಾಶವೇ ಸರಿ. ರೋಗದ ಮೂಲ, ನಿಯಂತ್ರಣ ಹಾಗೂ ನಿರ್ಮೂಲನದ ಬಗ್ಗೆ ತೀರ ಹತ್ತಿರದಿಂದ ತಿಳಿದುಕೊಂಡೆ. ರೋಗವನ್ನು ಹತೋಟಿಗೆ ತರಲು ಸಾಧಿಸಬೇಕಾದ ರೀತಿ-ನೀತಿಗಳ ಬಗ್ಗೆ ತುಂಬ ಪ್ರಾಯೋಗಿಕವಾಗಿ ವಿಚಾರ ಮಾಡಲು ಒಂದು ದೊಡ್ಡ 'ಅಧ್ಯಯನದ ಪೀಠ'ವು ನನಗೆ ದೊರಕಿತು. ಇದು ಒಂದು ತೃಪ್ತಿತಂದ ಸಂಗತಿ.

ಪ್ರಶ್ನೆ : ಕುಷ್ಠರೋಗದ ಬಗ್ಗೆ ಸಮಾಜ ಕೆಲ ಅಂಧಃಶ್ರದ್ಧೆ ಕಲಂಕ ಭಾವನೆಯನ್ನು ಸೃಷ್ಟಿಸಿದೆ. ಇದರ ಸಲುವಾಗಿ ತಾವು ಹೋರಾಟ ಮಾಡುತ್ತಿರುವಿರಿ. ಅದಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಅದಕ್ಕೆ ಕಾರಣಗಳೇನು ಉದಾಹರಣೆ ಹೇಳಬಲ್ಲಿರಾ?

ಪಡುತ್ತಿದ್ದ. ಗ್ರಾಮಸ್ಥರು ನಿರ್ಣಯಿಸಿದಂತೆ ತಮ್ಮನು ಊರಿಗೆ ಮಾರಕನಾಗಿದ್ದಾ ಅವನನ್ನು ಊರು ಬಿಟ್ಟು ಹೊರಹಾಕಬೇಕೆಂಬ ಆತನ ವಿಚಾರಕ್ಕೆ ಮರುಗಿದೆ. ಆದರೆ ತಮ್ಮ ಸಂಭಾವಿತ ನಿತ್ಯ ದವಾಖಾನೆಗೆ ಬಂದು ಉಪಚಾರ ಪಡೆಯುತ್ತಿದ್ದ. ಅವನು ಊರು ಬಿಟ್ಟು ಹೊರ ಹೋಗಬೇಕೆಂಬ ಗ್ರಾಮಸ್ಥರ ನಿರ್ಣಯಕ್ಕೆ ಸಮ್ಮತಿಸಿದ್ದ. ಕಾರಣ ಹೆದರಿಕೆ. ನಂತರ ಹಳ್ಳಿಯಲ್ಲಿ ಅನೇಕರನ್ನು ಕರೆದು ವಿಚಾರಿಸಿದಾಗ ಅಣ್ಣ ನಿರ್ಮಿಸಿದ ಜಾಲ ಗೊತ್ತಾಯಿತು. ಗ್ರಾಮಸ್ಥರನ್ನು ಕಲೆ ಹಾಕಿ ತಮ್ಮ ಕುಷ್ಠರೋಗಿ ಎಂದು ಹೊರ ಹಾಕಿದರೆ ಆತನ ಆಸ್ತಿಯು ಸಲೀಸಾಗಿಯೇ ತನಗೆ ದಕ್ಕುವದೆಂಬ ಯೋಜನೆ ಆತನದಾಗಿತ್ತು. ಗ್ರಾಮಸ್ಥರು ಡಾಕ್ಟರರಿಂದ ಸರ್ಟಿಫಿಕೇಟ್ ತಂದರೆ ಮಾತ್ರ ಹೊರಹಾಕಲು ಒಪ್ಪಿದ್ದರು. ನಾನು ಸರ್ಟಿಫಿಕೇಟ್ ನೀಡಲಿಲ್ಲ. ಅಣ್ಣನ ಯೋಜನೆ ಹುಸಿಯಾಯಿತು. ಕಲಂಕ ಭಾವನೆಯ ದುರ್ಲಾಭ ಪಡೆಯುವ ದೃಷ್ಟಾಂತವಿದು.

■

ಶಾಲೆಯ ಆರೋಗ್ಯ ಪರೀಕ್ಷಕನಾಗಿದ್ದ ಸಂದರ್ಭದಲ್ಲಿ ಒಮ್ಮೆ ಸುಮಾರು ಐವರು ವಿದ್ಯಾರ್ಥಿಗಳು ಕುಷ್ಠರೋಗ ಪೀಡಿತರೆಂದು ಗುರುತಿಸಿದ್ದರಿಂದ ಯೋಗ್ಯ ಉಪಾಯಕ್ಕಾಗಿ ನನ್ನನ್ನು ಕಾಣಲು ಪ್ರಾಚಾರ್ಯರ ಮುಖೇನ ಎಲ್ಲ ಪಾಲಕರಿಗೂ ಪತ್ರ ಬರೆಯಲಾಯಿತು. ಆದರೂ ಒಬ್ಬರೂ ತಿಂಗಳು ಕಳೆದರೂ ಬಂದು ಭೇಟಿಯಾಗಲಿಲ್ಲ. ಕೊನೆಗೆ ಪಾಲಕರೊಬ್ಬರ ಮನೆಯನ್ನು ಅರಸುತ್ತ ಹೋಗಿ ಈ ವಿಷಯ ಚರ್ಚಿಸಿದೆ. ಪತ್ರ ತಲುಪಿ ತಮ್ಮ ಮಗನ ಪೀಡನೆಯ ಬಗ್ಗೆ ತಿಳಿದ ಅವರು ಹೇಳಿದರು. "ಡಾಕ್ಟರರೆ, ದಯವಿಟ್ಟು ಸರಕಾರಿ ದಾಖಲೆಗಳಲ್ಲಿ ನಮ್ಮ ಮಗ ಕುಷ್ಠರೋಗಿ ಎಂದು ನೋಂದಾಯಿಸುವದು ಬೇಡ. ನಿಮ್ಮ ಪತ್ರ ನಂತರ ಆತನ ಔಷಧ ಉಪಚಾರಕ್ಕೆ ಖಾಸಗಿಯಾಗಿ ವ್ಯವಸ್ಥೆ ಮಾಡಿದ್ದೇವೆ. ಮನ ತುಂಬ ನೊಂದಿದೆ. ಕಾರಣ ಅವನಿಗೆ ಇಬ್ಬರು ಅಕ್ಕಂದಿರಿದ್ದು ಅವರ ಮದುವೆಗಾಗಿ ವರ ಶೋಧನೆ ನಡೆದಿದೆ. ಇವನ ತೊಂದರೆ ಅವರಿಗೆ ಅಡ್ಡಗಲ್ಲಾಗಬಾರದೆಂದು ನನ್ನ ಪ್ರಾರ್ಥನೆ ಎಂದು ಕಣ್ಣೀರು ತಂದರು. ಅವರ ತಪ್ಪು ಭಾವನೆ ತಿದ್ದುವದರಲ್ಲಿ ಸಾಕಾಗಿ ಹೋಯಿತು.

ಉತ್ತರ : ಸಮಾಜದ ಕೆಲ ಸ್ತರಗಳಲ್ಲಿ ಇನ್ನೂ ಕುಷ್ಠರೋಗದ ಬಗ್ಗೆ ಅಲ್ಲ-ಸಲ್ಲದ ಭಾವನೆಗಳು ಬೇರೂರಿದ್ದು ವಿಷಾದನೀಯ. ಅದರಲ್ಲಿ ಕೆಲವಂತೂ ರೂಢಿಗತವಾದ ಪರಂಪರೆಯಿಂದ ಬಂದಿವೆ. ಅಂಧಃಶ್ರದ್ಧೆಯ ಭಾವನೆಯು ಸಾಮಾಜಿಕ ಕಲಂಕ ಎಂಬ ಅಭೇದ್ಯ ಕೋಟೆಯನ್ನು ನಿರ್ಮಿಸಿ ಕುಷ್ಠರೋಗಿಯನ್ನು ತುಂಬ ಮಾನಸಿಕ ಯಾತನೆಗೆ ಒಳಪಡಿಸಿದೆ. ನಾನೊಬ್ಬನೇ ಆ ಕೋಟೆಯನ್ನು ಭೇದಿಸಿದ್ದೇನೆಂದು ಹೇಳಲಾರೆ. ಕುಷ್ಠರೋಗವನ್ನು ಪ್ರಾರಂಭಾವಸ್ಥೆಯಲ್ಲಿ ನಿರ್ಲಕ್ಷಿಸುವದರಿಂದ ಉಲ್ಬಣಗೊಂಡು ಅಂಗಾಂಗಗಳನ್ನು ವಿರೂಪಗೊಳಿಸಿ ಊನತೆಯನ್ನು ತರುವದು. ನಮ್ಮ



ಮುಖದ ಮೇಲೆ ಉಂಟಾದ ಕುಷ್ಠ ರೋಗದ ಮಚ್ಚೆ ರೆಪ್ಪೆಗೆ ಹೋಗುವ ನರವನ್ನು ಗಾಯಗೊಳಿಸಿದ್ದರಿಂದ ರೆಪ್ಪೆ ನಿಷ್ಕ್ರಿಯವಾಗಿದೆ.

ಸಮಾಜವು ಈ ಅಂಗಾಂಗ ಊನತೆಗೆ 'ದೈವೀ ವಿಕೋಪ'ವೆಂಬ ಅತಿಯಾದ ನಂಬುಗೆಯಿಂದ ಭಯವನ್ನು ಕಲ್ಪಿಸಿದೆ. ಅಲ್ಲದೆ ಅದನ್ನು ತುಚ್ಛೀಕರಿಸುವ ಮನೋಭಾವನೆಯನ್ನು ಬೆಳೆಸುತ್ತದೆ. ಈ ವಿಷವರ್ತುಲದಲ್ಲಿ ರೋಗಿಯು ಸಿಲುಕಿ ತೊಳಲಾಡುವನು. ಅವೈಜ್ಞಾನಿಕ ಭಾವನೆಗಳು ಬಲವಾಗಿ ಬೇರೂರಿವೆ. ಈ ವಿಚಾರ ಕೇವಲ ಕುಷ್ಠರೋಗಕ್ಕೆ ಮಾತ್ರವಲ್ಲ ಜೀವನದ ಇತರ ಯಾವುದೇ ರಂಗಕ್ಕೂ ಉಂಟಾಗುತ್ತದೆ. ಮನನೋಯಿಸುವ ಸಂಗತಿಯೆಂದರೆ ಬುದ್ಧಿಜೀವಿಗಳೆಂದು ಎನಿಸಿಕೊಂಡ ಸುಶಿಕ್ಷಿತರಲ್ಲಿಯೂ ಈ ರೀತಿಯ ಅಂಧಃಶ್ರದ್ಧೆಯ ವಿಚಾರಗಳು ಇನ್ನೂ ಮನೆ ಮಾಡಿವೆ. ಅಷ್ಟೇ ಏಕೆ ನೀವು ನಂಬಲಿಕ್ಕಿಲ್ಲ, ವೈದ್ಯಕ್ಷೇತ್ರದಲ್ಲಿ ದುಡಿಯುವ ಕಾರ್ಯಕರ್ತರಲ್ಲಿಯೂ ಅಂಧಶ್ರದ್ಧೆಯ ವಿಚಾರಗಳು ಇನ್ನೂ ಇವೆ.

ವೈದ್ಯರು, ವೈದ್ಯಕ್ಷೇತ್ರದ ಕಾರ್ಯಕರ್ತರು ಸ್ವಯಂ ಸೇವಾಸಂಸ್ಥೆಗಳು, ಕುಷ್ಠರೋಗ ಕುರಿತು ಅನವಶ್ಯಕ ಭೀತಿ ಹಾಗೂ ಮೂಢನಂಬಿಕೆ ಹೋಗಲಾಡಿಸಲು ಯತ್ನಿಸಬೇಕು. ಅವರು ಸಮಾಜದ ಮೇಲೆ ತುಂಬ ಪ್ರಭಾವ ಬೀರಬಲ್ಲರು ವೈದ್ಯರು. ಕ್ರಮವಹಿಸಿ ಈ ಕಾರ್ಯ ಕೈಕೊಂಡಲ್ಲಿ ಅದು ಸುಲಭಸಾಧ್ಯ ಈ ಕಾರ್ಯದಲ್ಲಿ ನಾನು ಅವರಿಗೆ ಆದ್ಯತೆ ನೀಡುತ್ತೇನೆ. ವೈದ್ಯಕೀಯ ಕ್ಷೇತ್ರದಲ್ಲಿ ದುಡಿಯುವವರಲ್ಲಿ ಇದ್ದ ಮೂಢ ನಂಬಿಕೆಯು ತುಂಬಾ ಗಂಡಾಂತರಕಾರಿ.

ನಾನು ಉಪದೇಶ ನೀಡುವಷ್ಟು ದೊಡ್ಡವನಲ್ಲ. ಆದರೆ ಕುಷ್ಠರೋಗದ ಬಗ್ಗೆ ಯಥಾರ್ಥ ಕಲ್ಪನೆ ನೀಡಿ ಅದರ ವೈಜ್ಞಾನಿಕ ಹಿನ್ನೆಲೆಯನ್ನು ವಿವರಿಸುವಲ್ಲಿ ಹೆಚ್ಚು ಆಸಕ್ತನಾಗಿದ್ದೇನೆ. ಆಧುನಿಕ ಮಾಧ್ಯಮಗಳನ್ನು ಬಳಸಿ ಜನರಲ್ಲಿ ಕುಷ್ಠದ ಬಗ್ಗೆ ಸ್ವಸ್ಥ ವಿಚಾರಗಳನ್ನು ಬಿಂಬಿಸಲು ಪ್ರಯತ್ನ ನಡೆಸಿ

ದ್ದೇನೆ. ದೃಕ್-ಚಾಕ್ಷುಷ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯ ಕೈಕೊಳ್ಳಲಾಗಿದೆ. ಚಲನಚಿತ್ರಪಟಗಳ ಮೂಲಕ ವಿವರಿಸಿ ತಿಳಿಹೇಳುವ ಕೆಲಸ ಭರದಿಂದ ಸಾಗಬೇಕಾಗಿದೆ. ವೈಜ್ಞಾನಿಕ ವಿಚಾರಗಳು ಮನದಲ್ಲಿ ನಾಟಿ ಸಾಮಾಜಿಕ ಭಯ ತೊಲಗಿದಲ್ಲಿ ಅಂಧ ಶ್ರದ್ಧೆಯು ಪಲಾಯನ ಹೇಳುವದು, ಕುಷ್ಠರೋಗದ ಬಗ್ಗೆ ಹೊಸ ನಿಲುವುಗಳು ಹೊಸ ರೂಪಗಳನ್ನು ಉಪಚಾರ (ದೃಷ್ಟಿಯಲ್ಲಿ) ಹೊರತರಲು ಪ್ರಾಯೋಗಿಕವಾಗಿ ಯತ್ನಿಸುತ್ತಿದ್ದೇನೆ. ಅವು ತುಂಬ ಉತ್ತೇಜನಕಾರಿಯಾಗಿವೆ. ಈ ಎಲ್ಲ ವಿಚಾರಗಳ ಅನುಷ್ಠಾನಕ್ಕೆ ಸಾಕಷ್ಟು ಕಾಲಾವಧಿ ಬೇಕಲ್ಲದೆ ತುಂಬ ವೆಚ್ಚದಾಯಕವೂ ಹೌದು. ಕುಷ್ಠರೋಗಿಯು ಇತರರಂತೆ ಬಾಳಬಲ್ಲ. ಸಮಾಜದ ಪ್ರವಾಹದಲ್ಲಿ ಆತನು ಒಂದಾಗಬಲ್ಲನೆಂಬ ಭಾವನೆ ಮೂಡಿಸುವುದು ಕೆಲ ಬಾರಿ ಶ್ರಮದಾಯಕವೆನಿಸಿದರೂ ಅದು ಬಹು ದೊಡ್ಡ ಕೊಡುಗೆಯಾಗಬಲ್ಲದು. ಆದರೆ ಈ ಯತ್ನ ಕೇವಲ ಪ್ರಯೋಗವಾಗಿ ನಿಲ್ಲದೆ ಸಾಮೂಹಿಕವಾಗಿ ಕಾರ್ಯಗತವಾಗಬೇಕು. ವೈಜ್ಞಾನಿಕವಾಗಿ ನಿಜವಾದ ತಿಳಿವಳಿಕೆ ಮನದಟ್ಟಾದರೆ ಮೂಢ ನಂಬಿಕೆಯು ತಾನಾಗಿಯೇ ದೂರ ಹೋಗುವದು ಎಂದು ದೃಢವಾಗಿ ಹೇಳಬಲ್ಲೆ.

ಆದರೆ ಈ ಪ್ರಯೋಗಶೀಲತೆಯು ಇನ್ನೂ ಎಲ್ಲೆಡೆಗಳಲ್ಲಿ ಅನುಷ್ಠಾನಕ್ಕೆ ಬಂದಿಲ್ಲ. ಉದಾಹರಣೆಗಾಗಿ ಕೇಳಿದ್ದೀರಿ. ತುಂಬ ಮೋಜಿನದೆಂದರೆ ಕೆಲ ಪ್ರತಿಷ್ಠಿತ ತಜ್ಞ ಡಾಕ್ಟರರೆ ಕುಷ್ಠರೋಗದ ಬಗ್ಗೆ ಸಲ್ಲದ ಭಾವನೆ ಇರಿಸಿಕೊಂಡವರಿದ್ದಾರೆ. ಇಂಥ ಕಲಂಕಿತ ಭಾವನೆಯು ಸಾಮಾಜಿಕ ಅನ್ಯಾಯವನ್ನು ಮತ್ತು ತುಚ್ಛೀಕರಿಸುವ ಮನೋವೃತ್ತಿಯನ್ನು ಬೆಳೆಸುತ್ತದೆ. ಅದು ಖಂಡನೀಯವಲ್ಲವೆ?

ಪ್ರಶ್ನೆ: ಕುಷ್ಠರೋಗ ಉಪಚಾರ ಕುರಿತು ಇತ್ತೀಚಿನ ಒಲವು ನಿಲುವುಗಳೇನು? ಅವು ಎಷ್ಟರಮಟ್ಟಿಗೆ ಪರಿಣಾಮಕಾರಿ? ಹೊಸವು ಎಷ್ಟು ಪ್ರಭಾವಿ? 'ವ್ಯಾಕ್ಸಿನ್' ಸಂಶೋಧನೆ ಬಗ್ಗೆ ವಿಚಾರಗಳೇನು?

ಉತ್ತರ: ಹಲವಾರು ವರುಷಗಳಿಂದ 'ಡ್ಯಾಪ್ಸೋನ್' (ಡಿ. ಡಿ. ಎಸ್.) ಎಂಬ ಏಕ ಮಾತ್ರ ತುಂಬ ಪ್ರಭಾವಿಯಾದ ಔಷಧ ಬಳಕೆಯಲ್ಲಿದೆ.

ಕ್ಷಯರೋಗದಂಥ ರೋಗಾಣುಗಳಿಂದ ಉದ್ಭವವಾಗುವ ಈ ರೋಗದಲ್ಲಿ ಅನೇಕ ಗಂಡಾಂತರಕಾರಿ ರೋಗಾಣುಗಳು ಒಳಸೇರಿ ಪರಿಣಾಮವುಂಟು ಮಾಡುವ ಸಂಭವವಿರುವದರಿಂದ ಏಕಮಾತ್ರ ಔಷಧಿ ಕೆಲ ಬಾರಿ ಉಪಯೋಗಕ್ಕೆ ಬಾರದು. ಬಹು ಔಷಧಿ



ಕುಷ್ಠರೋಗದಿಂದ ಉಂಟಾದ ಊನ

ಕುಷ್ಠರೋಗ ಕುರಿತು ಸ್ವಲ್ಪದರಲ್ಲಿ...

ಕ್ರಿಸ್ತಶಕಪೂರ್ವ ೧೩೫೦ರಲ್ಲಿ ಈಜಿಪ್ತಿನ ಎರಡನೆಯ ರಾಮೀಸಿಸ್‌ನ ಕಾಲದಲ್ಲಿ ಕುಷ್ಠ ರೋಗ ದಾಖಲೆಗಳಿದ್ದುದು ಕಂಡುಬಂದಿದೆ. ೧೯೪೫ರಲ್ಲಿ ಡ್ಯಾಪ್ಸೋನ್ ಬಳಕೆಯು ಜಾರಿಯಲ್ಲಿ ಬಂದನಂತರ ಸಾಕಷ್ಟು ಪರಿಣಾಮಕಾರಿ ಫಲಿತಾಂಶಗಳು ಕಂಡುಬಂದಿವೆ. ಆದರೂ ಭಾರತದಲ್ಲಿ ಈಗ ರೋಗ ವ್ಯಾಪಕವಾಗಿದ್ದು ನಲವತ್ತು ಲಕ್ಷ ಜನಕ್ಕೆ ತಗುಲಿದೆ. ಶೇಕಡಾ ೨೦ರಷ್ಟು ಜನರು ತೀವ್ರವಾದ ಸೋಂಕಿಗೆ ಒಳಗಾಗಿದ್ದಾರೆ.

ಕುಷ್ಠವು ದೀರ್ಘಕಾಲ ಬಾಧಿಸುವ ಒಂದು ಅಂಟು ಜಾಡ್ಯ. ಮೈಕೋಬೆಕ್ಟೀರಿಯಂ ಲೆಪ್ರೆ ಎಂಬ ಸೂಕ್ಷ್ಮಾಣು ಜೀವಿಗಳಿಂದ ಈ ರೋಗ ಉಂಟಾಗುತ್ತದೆ. ಈ ರೋಗಾಣುಗಳು ನರಗಳಿಗೆ ತೀವ್ರಬಾಧೆ ಉಂಟುಮಾಡುವದಲ್ಲದೆ ಊತವನ್ನೂ ಉಂಟುಮಾಡುತ್ತವೆ. ಇದರಿಂದ ನರಗಳು ದಪ್ಪಗಾಗುವದಲ್ಲದೆ ಅಂಗೈ ಬೆರಳುಗಳು, ಪಾದದ ಬೆರಳುಗಳು ವಿಕೃತಗೊಂಡು ಉಲ್ಬಣಾವಸ್ಥೆಯಲ್ಲಿ ಶಾಶ್ವತ ಊನತೆಯುಂಟುಮಾಡುವವು.

ನಿಮ್ಮ ಬಳಿ ಇದ್ದ ಗುಂಡುಸೂಜಿ ಇಲ್ಲವೆ ಸೂಜಿಯಿಂದ ಚರ್ಮದ ಕಲೆಯುಳ್ಳ ಭಾಗವನ್ನು ಸ್ಪರ್ಶಿಸಿ. ಭಾಗವು ಸ್ಪರ್ಶಹೀನವಾಗಿದ್ದರೆ ಅಥವಾ ಸಂಜ್ಞೆ ಕಳೆದುಗೊಂಡಿದ್ದರೆ ಆ ಕಲೆಯು ಕುಷ್ಠ ಕಲೆಯೆಂದು ಪರಿಗಣಿಸಬಹುದು. ಕೆಲ ಬಾರಿ ವಿಟಮಿನ್‌ಗಳ ಅಭಾವದಿಂದ ಅಥವಾ ಗಜಕರ್ಣದಂಥ ಬೂರಸು ರೋಗಗಳು ಚರ್ಮದ ಮೇಲೆ ಕಲೆ ಉಂಟು ಮಾಡುವವು. ಆದರೆ ಅವು ಸಂಜ್ಞೆ ಕಳೆದುಕೊಳ್ಳುವದಿಲ್ಲ. ಆದರೆ ಕುಷ್ಠರೋಗದ ಕಲೆಗೂ ಈ ಕಲೆಗೂ ವ್ಯತ್ಯಾಸವಿರುತ್ತದೆ. ವೈದ್ಯಪರೀಕ್ಷೆ, ಅಂಗಾಂಗಳಲ್ಲಿಯ ರೋಗಸೂಚನೆಗಳು, ರೋಗಚರಿತ್ರೆ, ಚರ್ಮದ ಮೇಲ್ಮೈಯ ಪರಿಶೀಲನೆಯ ಆಧಾರದ ಮೇಲೆ ಕುಷ್ಠರೋಗವನ್ನು ವರ್ಗೀಕರಿಸಬಹುದು. ಲೆಪ್ರೋಮೇಟಸ್ ಟ್ಯುಬರ್‌ಕ್ಯುಲಾಯಿಡ್ ಎಂಬುದಾಗಿ ಕುಷ್ಠರೋಗವನ್ನು ಮುಖ್ಯವಾಗಿ ವಿಂಗಡಿಸಲಾಗುವದು. ಈ ಎರಡು ವಿಧಗಳು ಇದ್ದರೆ ಅದಕ್ಕೆ (ಬಾರ್ಡರ್ ಲೈನ್) ಸೀಮಾಂತರರೋಗ ಎಂದು ಕರೆಯಲಾಗುವದು. ಅಲ್ಲದೆ ಈ ಮೂರರಲ್ಲಿ ಯಾವದಾದರೊಂದು ಬಗೆಯ ಕುಷ್ಠರೋಗ ಕಾಣಿಸಿಕೊಳ್ಳುವ ಮುನ್ನವೇ ಅಸ್ಪಷ್ಟ ರೋಗ ಚಿನ್ಹೆಗಳು ಗೋಚರಿಸುವದುಂಟು. ಆದರೆ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮಕ್ಕೆ ಅನುಕೂಲವಾಗುವಂತೆ ರೋಗವನ್ನು ಬಹು ಬ್ಯಾಸಿಲರಿ (ಸೋಂಕುಳ್ಳ) ಹಾಗೂ ಏಕ ಬ್ಯಾಸಿಲರಿ (ಸೋಂಕಿಲ್ಲದ) ಎಂದೂ ವಿಂಗಡಿಸಲಾಗುವದು.

ಭಾರತದ ಸುಮಾರು ೫೭ ಜಿಲ್ಲೆಗಳಲ್ಲಿ ಕುಷ್ಠರೋಗದ ತೀವ್ರತೆ ಹೆಚ್ಚಾಗಿದೆ. ಒಟ್ಟು ಕುಷ್ಠರೋಗಿಗಳ ಸಂಖ್ಯೆಯಲ್ಲಿ ಸುಮಾರು ೧/೫ ರಷ್ಟು ಮಕ್ಕಳಿದ್ದಾರೆ. ಪ್ರತಿ ನಾಲ್ಕನೆಯ ಮಗು ಅಂಗವಿಕಲವಾಗಿದೆ.


ಈ ರೋಗಕ್ಕೆ ಗುರಿಯಾದವರನ್ನು ಸಾಮಾಜಿಕವಾಗಿ ದೂರವಿಡುವ ಕಾರಣದಿಂದಾಗಿ ಕುಟುಂಬಗಳು ಒಡೆಯುತ್ತವೆ. ಹೊಲಗದ್ದೆ ಕಾರಖಾನೆ ಮುಂತಾದವುಗಳಲ್ಲಿ ದುಡಿಮೆಯಿಂದ ವಂಚಿತರಾಗುವದರಿಂದ ಆರ್ಥಿಕ ನಷ್ಟ ಎಷ್ಟೆಂದು ನಿಖರವಾಗಿ ಅಂದಾಜು ಮಾಡಲು ಸಾಧ್ಯವಾಗುವದಿಲ್ಲ.

ಡಾ. ವಸಂತ ಕುಲಕರ್ಣಿ

ಗಳನ್ನು ಬಳಸುವದರಿಂದ ದೇಹದಲ್ಲಿ ಉಂಟಾಗ ತಕ್ಕ ರೋಗಾಣುಗಳ ಬೀಡು ಬಿಡುವಿಕೆಯನ್ನು ತಪ್ಪಿಸಬಹುದು. ಅದು ವೈಜ್ಞಾನಿಕವೂ ಹೌದು. ಆದರೆ ದುರದೃಷ್ಟದ ಸಂಗತಿಯೆಂದರೆ ಕೇವಲ ರೋಗ ಉಪಚಾರದತ್ತ ಗಮನ ಹರಿಸಲಾಗಿದ್ದು ಸಾರ್ವಜನಿಕ ಆರೋಗ್ಯದತ್ತ ಲಕ್ಷ್ಯ ಹರಿಸಲಾಗಿಲ್ಲ. ಈಗ ಡ್ಯಾಪ್ಸೊನಿನೊಡನೆ ರಿಫಾಂಮೈಸಿನ್ ಕ್ಲೊಫಮೇಜಿನ್ ತುಂಬ ಪರಿಣಾಮಕಾರಿಯಾಗಿವೆ. ಕ್ಷೇತ್ರಗಳಲ್ಲಿ ನಿಯಂತ್ರಿಸುವ ಯತ್ನದಲ್ಲಿ ಬರುವ ಸಮಸ್ಯೆಗಳನ್ನು ಕಂಡು ರೋಗಾಣುಗಳ ಹತೋಟಿಯ ವಿವಿಧ ವಿಧಾನಗಳನ್ನು ಅನುಸರಿಸಬಹುದು. ಕಾರಣವಿಷ್ಟೇ. ವೈಜ್ಞಾನಿಕವಾಗಿ ಈ ಹೊಸ ಔಷಧಗಳನ್ನು ಉಪಯೋಗಿಸುವದು ಹೆಚ್ಚಾಗಿ ಇನ್ನೂ ಗೊತ್ತಿಲ್ಲ. ಹೆಚ್ಚು ಕಡಿಮೆ ಈ ಹೊಸ ಔಷಧಿಗಳ ತಂತ್ರಜ್ಞಾನ ಕುಷ್ಠ ರೋಗದ ಮೇಲೆ ಉಪಯೋಗಿಸುವ ಏಕಮಾತ್ರ ಪದ್ಧತಿ. ಹಳೆಯದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ. ಹಳೆಯದರಲ್ಲಿ ಕೇವಲ ಒಂದು ಔಷಧಿ ಬಳಸುತ್ತಿದ್ದರು. ತಾವು 'ವ್ಯಾಕ್ಸಿನ್' ಸಂಶೋಧನೆ ಬಗ್ಗೆ ಉಲ್ಲೇಖಿಸಿದ್ದಿರಿ. ಸದ್ಯದ ಮಟ್ಟಿಗಂತೂ ಅದರ ಬಳಕೆ ಸಾಧ್ಯವಾಗದಿದ್ದರೂ 'ವ್ಯಾಕ್ಸಿನ್,' ಸಂಶೋಧನೆಯು ತುಂಬಾ ಉತ್ಸಾಹದಿಂದ ಪ್ರಗತಿಯ ದಿಕ್ಕಿನೆಡೆಗೆ ಸಾಗಿದೆ. ಸಂಶೋಧನೆಯು ತುಂಬಾ ಆಶಾದಾಯಕವಾಗಿದೆ. ಕೆಲ ವರುಷಗಳನ್ನು ಅದು ತೆಗೆದುಕೊಂಡರೂ ಬಲಯುತವಾದ 'ವ್ಯಾಕ್ಸಿನ್' ಕುಷ್ಠರೋಗ ನಿಯಂತ್ರಿಸುವಲ್ಲಿ ಸಹಾಯವಾಗುವ ಅಸ್ತ್ರವಾಗುವದು. ಆದ್ದರಿಂದ ಅಲ್ಲಿಯವರೆಗೆ ವೈಜ್ಞಾನಿಕ ರೀತಿಗೆ ಅನುಗುಣವಾಗಿ ಶಾಸ್ತ್ರೋಕ್ತ ಔಷಧಿ ಉಪಯೋಗವೇ ಬಲವಾದ ಭರವಸೆ ನೀಡುವ ಮಾರ್ಗ. ನೂರಕ್ಕೆ ೭೦ರಷ್ಟು ಸೋಂಕು ಪಸರಿಸಬಲ್ಲ ಕುಷ್ಠರು; ನಿತ್ಯ ಬಹು ಔಷಧಿ ಸೇವನೆಯಿಂದ ಸುಮಾರು ಮೂರು ವರುಷದ ಕೊನೆಗೆ ರೋಗಾಣು ರಹಿತರಾಗುತ್ತಾರೆ. ಅವಧಿಯನ್ನು ಇನ್ನೂ ಮೊಟಕುಗೊಳಿಸಬಹುದು. ಆದರೆ ಪುನಃ ಮರಕಳಿಸುವ ಸಾಧ್ಯತೆಯ ಬಗ್ಗೆ ಜಾಗರೂಕತೆಯಿಂದ ಇರಬೇಕಾಗುತ್ತದೆ. ಇವು ಸಂಶೋಧನೆಗಳಿಂದ ಕಂಡು ಬಂದ ಅಂಶಗಳು.

ಪ್ರಶ್ನೆ: ನಿಮ್ಮ ದೃಷ್ಟಿಯಲ್ಲಿ ಕುಷ್ಠರೋಗಿಗಳ ಪುನರ್ವಸತಿಯ ಬಗ್ಗ ಯಾವ ವಿಚಾರಗಳಿವೆ? ಗ್ರಾಮೀಣ ಭಾಗದಲ್ಲಿ ಅದನ್ನು ಹೇಗೆ ಅಳವಡಿಸಬಹುದು?

ಉತ್ತರ: ಕೆಲ ಆರೋಗ್ಯ ಅಥವಾ ಸಮಾಜ ಕಾರ್ಯಕರ್ತರಲ್ಲಿ ಬೇರೂರಿದ ನಂಬಿಕೆಯೆಂತೆ ಕುಷ್ಠರೋಗಿಯನ್ನು ಮನೆಯಿಂದ ಅಥವಾ ಸಮಾಜದಿಂದ ಪ್ರತ್ಯೇಕಿಸಿ ಅವರಿಗೊಂದು ವಿಶೇಷ ವಾಸಸ್ಥಾನ ಕಲ್ಪಿಸಿ ಉದ್ಯೋಗ ಅವಕಾಶಗಳನ್ನು ನೀಡುವುದೆಂದು ತಿಳಿದುಕೊಂಡಿದ್ದಾರೆ. ಇದು ತಪ್ಪು. ಇದು



ಬಹುರೋಗಾಣುವುಳ್ಳ ಕುಷ್ಠದ ಪ್ರಾರಂಭಾವಸ್ಥೆ. ಇದರಿಂದ ಸೋಂಕು ಹರಡುವುದರಿಂದ ಇದು ಬಹಳ ಅಪಾಯಕರ.

ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿದೆ. ಉದಾರ ದಾನಿಗಳು ಇಲ್ಲವೆ ಬ್ಯಾಂಕುಗಳ ನೆರವಿನಿಂದ ಇಲ್ಲವೆ ಸ್ವಯಂಸೇವಾ ಸಂಸ್ಥೆಗಳ ಸಹಾಯದಿಂದ ಕುಷ್ಠರೋಗಿಯೇ ಕೆಲ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಂಡಲ್ಲಿ ಪ್ರೋತ್ಸಾಹಕವಾಗುವದಲ್ಲದೆ ರೋಗಿಗೆ ತಾನು ಗಳಿಸಬಲ್ಲೆ ಎಂಬ ಆತ್ಮತೃಪ್ತಿ ಮತ್ತು ಸಮೃದ್ಧಿ ತರಬಲ್ಲದು. ಕೆಲ ವಿಶಿಷ್ಟ ಪ್ರಸಂಗಗಳಲ್ಲಿ ಇದು ಸಮಸ್ಯೆಗೆ ಪರಿಹಾರವೂ ಎನಿಸಬಹುದು. ರೋಗಿಯು ತಾನೂ ಇತರರಂತೆ ಬಾಳಬಲ್ಲನೆಂಬ ಧೈರ್ಯ ಪಡೆಯುವನು. ರೋಗಿಯು ಇದ್ದ ಮನೆಯಲ್ಲಿಯೇ ಪುನರ್ವಸತಿಯ ಸೌಲಭ್ಯ ಕಲ್ಪಿಸುವದಕ್ಕಾಗಿ ಕೆಲ ಬಾರಿ ಸಾಕಷ್ಟು ಕಾರ್ಯಕರ್ತರು ಹಾಗೂ ಕ್ಷೇತ್ರ ಸಿಬ್ಬಂದಿ ಅವಶ್ಯಕವಾಗಬಹುದು. ಅವರು ರೋಗಿಯ ಅವಶ್ಯಕತೆಗಳನ್ನು ಮನಗಾಣಬೇಕಾಗುವದು. ಇಂಥ ಮನೆಯಲ್ಲಿಯೇ ಪುನರ್ವಸತಿ ಸೌಲಭ್ಯ ಕಲ್ಪಿಸುವ ಸಾಕಷ್ಟು ಅನುಭವ ನಮಗಿದೆ. ಫಲಿತಾಂಶ ತುಂಬಾ ಉತ್ತೇಜನಕಾರಿಯಾಗಿದೆ. ಸಮಾಜದ ಒಂದು ಗಳಿಕೆಯ ಭಾಗವಾಗಿ ಕುಷ್ಠರೋಗಿಯು ಉದ್ಯೋಗದಲ್ಲಿ ತೊಡಗುವದರಿಂದ ಸಾಮಾಜಿಕ ಕಲಂಕ ಕಡಿಮೆಯಾಗುವದಲ್ಲದೆ ಆತನಿಗೆ ಹೊಸ ಧೈರ್ಯದ ವಾತಾವರಣ ಸೃಷ್ಟಿಸಿದಂತಾಗುವದು. ಆದರೆ ಸಮಾಜ ಹಾಗೂ ಮನೆ ಬಿಟ್ಟು ಹೊರಹಾಕುವ ಯತ್ನ ಯಾವ ಕಾಲಕ್ಕೂ ಯೋಗ್ಯವಲ್ಲ. ಮನೆಯಲ್ಲಿಯ ಪುನರ್ವಸತಿ ಕೆಲಸ ಸಾಹಸದ್ದಾದರೂ ಅದನ್ನು ಹೆಚ್ಚು ಹೆಚ್ಚಾಗಿ ಬಳಕೆಗೆ ತಂದರೆ ಸಾಮಾಜಿಕ ಕಲಂಕ ತಾನಾಗಿಯೇ ದೂರು ತೊಲಗುವದು. ಮತ್ತು ಸಾಮಾಜಿಕ ಪರಿವರ್ತನೆಗೆ ಇದು ಪೋಷಕವಾಗುವದು.

ಪ್ರಶ್ನೆ : ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕುಷ್ಠರೋಗ ಕುರಿತು ಕೈಕೊಂಡ ಕಾರ್ಯಕ್ರಮಗಳು ಪ್ರಭಾವಿಯಾಗಿ ಕೆಲಸ ಮಾಡು

✡ ಕುಷ್ಠರೋಗವನ್ನು ಹಾನ್ಸೆನ್ನನ ರೋಗವೆಂದೂ ಕರೆಯಲಾಗುತ್ತದೆ. ಅದಕ್ಕೆ ಕಾರಣ ೧೮೭೪ ರಲ್ಲಿ ಹಾನ್ಸೆನ್ ಎಂಬ ವಿಜ್ಞಾನಿ ಈ ರೋಗಕಾರಕ ರೋಗಾಣು 'ಮೈಕೊ ಬೆಕ್ಟೀರಿಯಂ ಲೆಪ್ರೆ' ಎಂಬುದನ್ನು ಕಂಡು ಹಿಡಿದಿದ್ದು.

✡ ಜಿನ್‌ಫೋರ್ಡ್ ಎಂಬ ವಿಜ್ಞಾನಿಯು ಈ ರೋಗಾಣುಗಳನ್ನು ಪ್ರಾಣಿಗಳ ಮೇಲೆ ಪ್ರಯೋಗಿಸಿ, ರೋಗವನ್ನು ಬೆಳೆಸಿ ರೋಗವೃದ್ಧಿ ಮಾಡಿ ಪರೀಕ್ಷಿಸಿದರು.

✡ ಇದು ತೀರ ಪುರಾತನ ರೋಗ. ಆದರೆ ಅದರ ಸಾಂಸರ್ಗಿಕತೆಯ ಬಗ್ಗೆ ಜನರಲ್ಲಿ ತೀವ್ರ ಕಲ್ಪನೆಗಳಿದ್ದುವು. ಕುಷ್ಠ ರೋಗಿಯು ಬೀದಿಗಳಲ್ಲಿ ಅಡ್ಡಾಡುವಾಗ ಗಂಟೆ ಬಾರಿಸುತ್ತ ನಡೆಯಬೇಕು ಎಂಬ ನಿಯಮವು ಇಂಗ್ಲೆಂಡಿನಲ್ಲಿ ಇತ್ತು. ಕುಷ್ಠರೋಗಿ ಚರ್ಚಿನ ಕಾರ್ಯಕಲಾಪಗಳನ್ನು ವೀಕ್ಷಿಸಬೇಕಿದ್ದರೆ ಹೊರಗೆ ಬಾಗಿಲಲ್ಲಿ ಅವನಿಗಾಗಿ ಕೊರೆಯಲಾದ ರಂಧ್ರದ ಮೂಲಕ ನೋಡಬೇಕಾಗುತ್ತಿತ್ತು.

ತ್ರಿವೆಯೆ? ಸ್ವಯಂಸೇವಾ ಸಂಸ್ಥೆಗಳಿಗೆ ಈ ದಿಸೆಯಲ್ಲಿ ನಿಮ್ಮ ಸಲಹೆಗಳೇನು?

ಉತ್ತರ : ಕುಷ್ಠರೋಗ ಕ್ಷೇತ್ರದಲ್ಲಿ ಸರಕಾರದ ಕಾರ್ಯಕ್ರಮಗಳು ಬಹುಶಃ ನೂರಕ್ಕೆ ೮೦ರಷ್ಟು ನಿಸ್ಸಂಶಯವಾಗಿ ದೇಶದ ಕೆಲಭಾಗಗಳಲ್ಲಿ ಅವು ನಿರೀಕ್ಷಿಸಿದ ಮಟ್ಟದಲ್ಲಿ ಇಲ್ಲವೆಂದೂ ಹೇಳಬೇಕಾಗಿದೆ. ರಾಜ್ಯ ಸರಕಾರದ ಕಾರ್ಯಕ್ರಮಗಳಂತೂ ಕ್ಷೇತ್ರದಲ್ಲಿ ಕೆಲಸನಿರ್ವಹಿಸುವ ಅರೆ ವೈದ್ಯ ಸಿಬ್ಬಂದಿಯ ಮೇಲೆ ಅವಲಂಬಿಸಿರುವದು. ಮೇಲ್ವಿಚಾರಣೆಯಲ್ಲಿಯ ಔಷಧಿಪದ್ಧತಿ ಹಾಗೂ ಅದರ ವೈದ್ಯ ತಂತ್ರಜ್ಞಾನ ಕುರಿತು ಆ ಸಿಬ್ಬಂದಿಗೆ ತರಬೇತಿ ಕೊಡುವದು ಅವಶ್ಯವಾಗಿದೆ. ದಕ್ಷ ಹಾಗೂ ಪ್ರಬಲ ಅತ್ಯಾಧುನಿಕ ಔಷಧಿಗಳು ಲಭ್ಯವಿದ್ದು ಅವುಗಳನ್ನು ನಿತ್ಯ ಸೇವಿಸುವದರಿಂದ ಮನೆಯಲ್ಲಿಯೇ ಇದ್ದು ಇತರರಂತೆ ಜೀವನ ಸಾಗಿಸಬಹುದು. ಯಾವದೇ ಕಾರಣಗಳಿಂದ ರೋಗಿಯನ್ನು ಮನೆಯಿಂದ ಹೊರ ಹಾಕಿ ಪ್ರತ್ಯೇಕ ವಾಸಸ್ಥಾನ ಕಲ್ಪಿಸುವದು ಯಾವ ಕಾಲಕ್ಕೂ ಸರಿಯಲ್ಲ. ಇದುವೇ ಆತನಿಗೆ ಮಾನಸಿಕ ನೆಮ್ಮದಿ ನೀಡುವ ಸುಲಭ ಉಪಾಯ.

ಪ್ರಶ್ನೆ : ಕುಷ್ಠರೋಗಿಗೆ ನಿಮ್ಮ ಸಂದೇಶ ಸಲಹೆಗಳೇನು? ಸ್ವಲ್ಪದರಲ್ಲಿ?

ಉತ್ತರ : ತನಗೆ ಕುಷ್ಠ ತಾಗಿತೆಂದರೆ ತಾನು ಸಮಾಜದ ನಿಂದನೆಗೆ ಗುರಿಯಾಗುವೆನೆಂಬ ಮಾನಸಿಕ ಆಘಾತಕ್ಕೆ ಒಳಗಾಗುವ ಸಂಭವ ಜಾಸ್ತಿ. ಏಕೆಂದರೆ ದೇಹದ ವೈಕಲ್ಯ ವಿದ್ರೂಪತೆಯು ಈ ಎಲ್ಲ ಆತಂಕಗಳನ್ನು ತರುವದೆಂಬ ಭೀತಿಯ ಕಲ್ಪನೆಯು ಮನಸ್ಸಿನಲ್ಲಿ ಮೂಡುವದು. ವಿಶೇಷವಾಗಿ ಉಚ್ಚವರ್ಗದ ಕುಷ್ಠರೋಗಿಗಳು ಈ ರೀತಿ ಮಾನಸಿಕ ಆಘಾತಕ್ಕೆ ಒಳಗಾಗುವದರಿಂದ ಅವರಿಗೆ ಮಾನಸಿಕವಾಗಿ ಧೈರ್ಯ ಬೆಂಬಲ ನೀಡಬೇಕಲ್ಲದೆ ಇದು ಬಹು ಬೇಗನೆ ಗುಣಕಾರಿ ಎಂಬ ಮಾತನ್ನು ಬಿಂಬಿಸಬೇಕು. ಇಂತಹ ರೋಗಿಗಳು ತಜ್ಞ ವೈದ್ಯರ ಬಳಿ ಯೋಗ್ಯ ಔಷಧೋಪಚಾರ ಇಲ್ಲವೆ ಸರಕಾರವಿತ್ತ ಎಲ್ಲ ಸೌಲಭ್ಯಗಳನ್ನು ಪಡೆಯಲು ಪ್ರೋತ್ಸಾಹ ನೀಡಬೇಕು. ಈಗ ಸರಕಾರಿ ಆಸ್ಪತ್ರೆಗಳಲ್ಲಿ ಕುಷ್ಠರೋಗ ಕುರಿತು ಪ್ರತ್ಯೇಕ ಘಟಕಗಳ ಸೇವೆ ಲಭ್ಯವಾಗಿದ್ದು ಅವುಗಳ ಪ್ರಯೋಜನ ಪಡೆಯಲು ತಿಳಿಹೇಳಬೇಕು. ಪ್ರಾರಂಭಾವಸ್ಥೆಯಲ್ಲಿದ್ದ ಕುಷ್ಠೋಪಚಾರಕ್ಕಾಗಿ ಆಸ್ಪತ್ರೆಗೆ ಹೋಗಬೇಕೆಂದಿಲ್ಲ. ಮನೆಯಲ್ಲಿಯೇ ಡಾಕ್ಟರರಿಂದ ಸಲಹೆ ಪಡೆದು ಉಪಚಾರ ಪಡೆದರೆ ಸಾಕು. ಅಷ್ಟೇ ಏಕೆ ಮುಂದಿನ ಹಂತಗಳಿಂದ ಉಂಟಾದ ಊನತೆ, ವಿಕೃತಿಯನ್ನು ಫಿಜಿಯೋಥೇರಪಿ ಮತ್ತು ಶಸ್ತ್ರ ಚಿಕಿತ್ಸಾ ವಿಧಾನಗಳಿಂದ ಸಂಪೂರ್ಣ ಸರಿಪಡಿಸಬಹುದು. ಅತ್ಯಂತ ವಿಕೃತಗೊಂಡು ಪುನಃ ಸುಧಾರಿಸಲು ಬಾರದ ಕೆಲ ರೋಗಿಗಳನ್ನು ಬಿಟ್ಟು ಉಳಿದ ಎಲ್ಲ ಕುಷ್ಠರೋಗಿಗಳನ್ನು ಪುನಃ ಮೊದಲಿನಂತೆ ಸುಧಾರಿಸುವ ಮತ್ತು ಉತ್ತಮ ಸ್ಥಿತಿಗೆತರುವ ವಿಧಾನಗಳು ಈಗ ಬಳಕೆಯಲ್ಲಿವೆ. ವಿಕೃತಗೊಂಡ ರೋಗಿಯು ಮುಖ್ಯವಾಗಿ ರೋಗಪಸರಿಸುವ ಅಥವಾ ಸೋಂಕುನಿರ್ಮಿಸುವ ವ್ಯಕ್ತಿಯೆಂಬ ಕಲ್ಪನೆ ತಪ್ಪು. ಅವರಲ್ಲಿ ಸಾಕಷ್ಟು ರೋಗಿಗಳು 'ಸೋಂಕು'ರಹಿತ ವ್ಯಕ್ತಿಗಳಾಗಿರುತ್ತಾರೆ. ✡



ಚಿದಂಬರಂ

ಮಲಯಾಳಂ ಮೂಲ : ಸಿ. ವಿ. ಶ್ರೀರಾಮನ್
ಕನ್ನಡಕ್ಕೆ : ಡಾ. ಅಶೋಕ ಕುಮಾರ

ಗೋಪುರ ಮಾರ್ಗದ ಮೂಲಕ ನಡೆಯುವಾಗ ಆತನಿಗೆ ಅಪ್ಪಯ್ಯ ದೀಕ್ಷಿತರ ಸಾಲುಗಳು ನೆನಪಾದವು.

"ಚಿದಂಬರಮಿದಂ ಪ್ರಥಿತಮೇವ ಪುಣ್ಯ ಸ್ಥಲಂ". ಆತ ಸುತ್ತಲೂ ಕಣ್ಣೋಡಿಸಿದ. ಬೆರಗುಗೊಳಿಸುವ ಭೀಕರ ಭವ್ಯಾಕೃತಿಗಳು. ಗಗನ ಚುಂಬಿಗಳಾದ ನಾಲ್ಕು ಗೋಪುರಗಳು. ಬರಿ ನೋಟಕ್ಕೆ ಸಮಾನವೆನಿಸಿದರೂ ವಿಭಿನ್ನವಾದ ಶಿಲಾಕೃತಿಗಳು; ನಾಲ್ಕು ಗೋಪುರಗಳನ್ನು ಪರಸ್ಪರ ಬೆಸೆಯುವ ಅಸಂಖ್ಯಾತ ಕೋಣೆಗಳೂ ಮೊಗಸಾಲೆಗಳೂ ದೇಗುಲಕ್ಕಿಂತಲೂ ದುರ್ಗ ಸದೃಶವೆನಿಸಿದ್ದವು. ಒಳಗಿನಿಂದ ಹೊರಗಿನ ಕಗ್ಗಲ್ಲು ಹಾಸಿದ ಹಾದಿಯಲ್ಲಿ ಆತ ನಡೆದ. ಬಿಸಿಲು ಇನ್ನೂ ಇಳಿದಿರಲಿಲ್ಲ. ಬದಿಯ ಹುಲ್ಲುಹಾಸಿನ ಮೇಲೆ ನಡೆವಾಗ ಅಂಗಾಲಿಗೆ ಮುಳ್ಳು ಚುಚ್ಚಿದಾಗ ಹೊರಗೆ ಬಿಟ್ಟ ಚಪ್ಪಲಿಗಳ ಬಗ್ಗೆ ಯೋಚಿಸಿದ ...... ಹಾಗೆಯೇ ಇನ್ನೊಂದು ಯೋಚನೆಯೂ ಬಂತು: ಹೊರಗೆ ಚಿದಂಬರಂ ಕ್ಷೇತ್ರಕ್ಕೆ ನಾಲ್ಕು ಗೋಪುರಗಳಿದ್ದರೂ ತಾನೇಕೆ ದಕ್ಷಿಣ ಗೋಪುರ ಮಾರ್ಗದ ಮೂಲಕ ಒಳಬಂದೆ? ಬೇರೆ ಯಾವುದೇ ಗೋಪುರ ಮಾರ್ಗವಾಗಿ ಬಂದಿದ್ದರೆ ಮನಸ್ಸು ಈ ರೀತಿ ವಿಕಲ್ಪಗಳಿಗೆ ಒಳಗಾಗುತ್ತಿತ್ತೇ...?

ವಿಕಲ್ಪಗಳ ಆರಂಭ ದಕ್ಷಿಣ ಗೋಪುರ ಮಾರ್ಗದಲ್ಲಿ ಆಯಿತೇ?

ಅಲ್ಲ.

ಕಡಲೂರಿನಿಂದ ಪ್ರಯಾಣ ಹೊರಟು ಮಣಲೂರ್ ಗ್ರಾಮ ದಾಟಿ ಬಂದಾಗ ಈ ವಿಕಲ್ಪ ವಿಭ್ರಾಂತಿ ಆರಂಭವಾದುದು...

ರಸ್ತೆಯ ಬದಿಯಲ್ಲಿ ಮಣಲೂರ್ ಗ್ರಾಮದ ಬೋರ್ಡ್ ಕಂಡಾಗ ಅಯಾಚಿತವಾಗಿ ಮನಸ್ಸು ಉಚ್ಚರಿಸಿ ಬಿಟ್ಟಿತು–

ಸರಪ್ಪಣ್ಣನ್ ಶಂಗೋಡನ್ ಕೋನಾರ್
ಚುಣ್ಣಾಂಬುಕಾರ್ ಬೀದಿ
ಪೋಸ್ಟ್ ಮಣಲೂರ್
ವಯಾ ಚಿದಂಬರಂ
ತಂಜಾವೂರ್ ಜಿಲ್ಲೆ.

ಅಖಿಲಾಂಡಮ್ಮಾಳ್ ಬರೆದು ತರುತ್ತಿದ್ದ ಇನ್‌ಲ್ಯಾಂಡ್ ಪತ್ರದಲ್ಲಿ ಆತ ಈ ವಿಳಾಸವನ್ನು ಬರೆದು ಕೊಡುತ್ತಿದ್ದ.

ನೆನಪುಗಳಲ್ಲೇ ಮುಳುಗಿದ್ದ ಆತ ದೇಗುಲದ



ಒಳಾಂಗಣದ ಕೊಳದವರೆಗೆ ಸಾಗಿದ್ದ. ದೇಗುಲದ ಆವರಣದೊಳಗೆ ಸ್ವಚ್ಛವಾದ ಸೋಪಾನಗಳ ನಡುವೆ ವಿಶಾಲವಾಗಿ ಹರಡಿಕೊಂಡ ಕೊಳ. ಆತ ಸೋಪಾನದ ಮೇಲೆ ಕುಳಿತ. ಸ್ವಲ್ಪ ದೂರದಲ್ಲೇ ಇಬ್ಬರು ಸಂನ್ಯಾಸಿಗಳು ಕುಳಿತಿದ್ದಾರೆ. ಕಂಬವೊಂದಕ್ಕೆ ಒರಗಿಸಿಟ್ಟಿದ್ದ ಕಾವಡಿಯಿಂದ ಕೆಳಗೆ ಬಿದ್ದ ಭಸ್ಮದ ಸಂಚಿಯನ್ನು ಎತ್ತಿ ಪುನಃ ಅದಕ್ಕೆ ಸಿಗಿಸಿ ಅವರು ಮಾತುಗಳಲ್ಲಿ ಮಗ್ನರಾದರು. ಆತ ಅವರನ್ನು ಗಮನಿಸಿದ. ಎಂಥಾ ಆರೋಗ್ಯ, ದೃಢಕಾಯ! ಮೊಗದಲ್ಲಿ ಸಂತೃಪ್ತಿಯ ಜೀವಕಳೆ. ಹೀಗಿರುವಾಗ ಸಂನ್ಯಾಸಾಶ್ರಮ ಸ್ವೀಕರಿಸಲು ಅವರನ್ನು ಪ್ರೇರೇಪಿಸಿದುದು ಏನಿರಬಹುದು?

ಆಗ ಆತ ತನ್ನ ಬಗ್ಗೆ ಚಿಂತಿಸಲಾರಭಿಸಿದ:

'ನಾನು ಹೇಳಿದಂತೆ ಕೇಳುವುದಾದರೆ, ನೀವು ಇನ್ನಷ್ಟು ಕಾಲ ಬದುಕಬಹುದು.'

ಹೀಗೆ ಹೇಳಿದವರು ಓರ್ವ ವೇದಾಂತಿಯೇನಲ್ಲ. ತನ್ನ ಚಿಕಿತ್ಸೆ ನಡೆಸುತ್ತಿದ್ದ ಡಾಕ್ಟರೇ.

ಹಲವು ದಿನಗಳ ಬಳಿಕ ಭೇಟಿಯಾದಾಗ ಅವರು ಪುನಃ ಹೇಳಿದರು. 'ನೀವು ಖಂಡಿತ ನಿಲ್ಲಿಸಿಲ್ಲ. ನಿಮ್ಮ ಲಿವರ್‌ನ ಗತಿಯೋ... ರಿಯಲೀ ಅಲಾರ್ಮಿಂಗ್...ನಾನೂ ಒಬ್ಬ ಹಾರ್ಟ್ ಪೇಷಂಟ್. ನನಗೂ ಕೆಲ ಕೆಟ್ಟ ಚಟಗಳಿದ್ದವು. ನಿಮ್ಮಷ್ಟು ಹೆಚ್ಚಿನ ಪ್ರಮಾಣದಲ್ಲಿರಲಿಲ್ಲ ಅಷ್ಟೆ. ನಾನು ಹೇಗೆ ನಿಲ್ಲಿಸಿದೆ ಗೊತ್ತೇ? ಐ ಬಿಕೇಂ ಮೋರ್ ಆ್ಯಂಡ್ ಮೋರ್ ರಿಲಿಜಿಯಸ್. ಟೆಂಪ್ಟೇಷನ್ ಆದಾಗಲೆಲ್ಲಾ ಬೈಬಲ್ ತೆಗೆದು ಓದುತ್ತಿದ್ದೆ...ನೀವೂ ರಿಲಿಜಿಯಸ್ ಆಗಿ. ರಿಲಿಜಿಯಸ್ ಬುಕ್ಸ್ ಓದಿರಿ.' ಅಂದು ಡಾಕ್ಟರನ್ನು ಕಂಡು ಹಿಂದಿರುಗುವಾಗ ರಸ್ತೆ ಬದಿಗಳಲ್ಲಿ ನಿಲ್ಲಿಸಿದ್ದ ಜಾಹಿರಾತಿನ ಬೋರ್ಡುಗಳಲ್ಲಿದ್ದ ಆರೋಗ್ಯಶಾಲಿ ಮಾಡೆಲ್‌ಗಳನ್ನು ಅಸೂಯೆಯಿಂದ ನೋಡಿದ. ಅಂದಿನವರೆಗೂ ಕಾಲಿಡದ ಗ್ರಂಥಾಲಯದೊಳಗೆ ಹೊಕ್ಕ. ರ್‍ಯಾಕ್‌ಗಳಲ್ಲಿ ಇರಿಸಿದ್ದ ಪುಸ್ತಕಗಳ ಮೇಲೆ ಕಣ್ಣಾಡಿಸಿದ. ಪರಿಚಿತ ಹೆಸರುಗಳು ವಿರಳ. ತಿಲಕನ್ ಮತ್ತು ರೋಮಾ ರೋಲಾ ಪುಸ್ತಕಗಳನ್ನು ತೆಗೆದು ಓದಲಾರಂಭಿಸಿದಾಗ, ಹೊಟ್ಟೆ ತುಂಬುವ [illegible]ಯಿತು. ಏಕೆಂದರೆ ತನಗೆ ಗೊತ್ತಿಲ್ಲದುದು ಏನೊಂದೂ ಅವುಗಳಲ್ಲಿರಲಿಲ್ಲ. ಆದರೂ ವಾಕ್ಯ ರಚನೆ ಅಸೂಯೆ ಹುಟ್ಟಿಸುವಷ್ಟು ಸೊಗಸಾಗಿದ್ದರಿಂದ ಮತ್ತೆ ಮತ್ತೆ ಓದಿದ. ಆ ದಿನಗಳಲ್ಲಿ ಕಾಲುಗಳಲ್ಲಿ ಬಾವು ಬರಲಾರಂಭಿಸಿದ್ದು. ಒಮ್ಮೆ ಡಾಕ್ಟರ ಬಳಿ ಹೋದ. ನಿಮಗೆ "ನಿಲ್ಲಿಸಲು ಸಾಧ್ಯವಾಗಬೇಕೆಂದರೆ ನೀವು ಈ ವಾತಾವರಣದಿಂದ ಬೇರೆಲ್ಲಾದರೂ ಹೋಗಿ ಇರಬೇಕು. ನೀವು ಎಲ್ಲಾದರೂ ಪ್ರವಾಸಕ್ಕೆ ಹೋಗಿ ಬನ್ನಿ. ಪ್ರಿಫರೆಬ್ಲಿ ಟು ರಿಲಿಜಿಯಸ್ ಪ್ಲೇಸಸ್, ಎಂದರು.

ಅವರ ಸಲಹೆಯಂತೆ ಈ ಯಾತ್ರೆ ಆರಂಭಿಸಿದ್ದು.

ಇಂದು ಕಾವಡಿಯನ್ನು ಕಂಬಕ್ಕೊರಗಿಸಿ ಪದ್ಮಾಸನ ಹಾಕಿ ಕುಳಿತು ಶ್ರೋತೃವಿಗೆ ವೇದಾಂತ ಹೇಳುವ ಆ ಮನುಷ್ಯನ ಘನಗಾತ್ರವನ್ನು ಕಾಣುವಾಗ ಚಿಂತಿಸುತ್ತಾನೆ. ದೈಹಿಕ ಕ್ಲೇಶಗಳೇ ಸಂನ್ಯಾಸದ ಆರಂಭವೇ?

ಆತುರದ ಆಶಾಕೇಂದ್ರವೇ ಸಂನ್ಯಾಸವೇ?

ಅಥವಾ ಬದುಕಲಿಕ್ಕಾಗಿಯೇ ಹಂಬಲಿಸುವ ಉತ್ಕಟ ಸಾಹಸವೇ...? ಆತನ ಮನಸ್ಸು ಈ ಪ್ರಶ್ನೆಗಳ ಸಂಕಲೆಯಲ್ಲಿ ಅಡಗಿ ನಿಲ್ಲಲಿಲ್ಲ. ಏಕೆಂದರೆ ದಕ್ಷಿಣ ಗೋಪುರ ಮಾರ್ಗದ ಮೂಲಕ ಒಳ ಬರುವಾಗ ಉದಿಸಿದ ಚಿಂತೆಗಳು ಇನ್ನೂ ಆತನ ಮನಸ್ಸಿನಿಂದ ಹೋಗುತ್ತಿಲ್ಲ.

ಮರೆಯಲು ಯತ್ನಿಸಿದಷ್ಟೂ ನಾನಾ ವಿಧಗಳಿಂದ ಚಿತ್ತಾವ್ಯೂಹಗಳಲ್ಲಿ ಸಿಕ್ಕಿಬೀಳುತ್ತಿದ್ದಾನೆ.

ಗಾಯಗೊಂಡ ಮನಸ್ಸಿನಲ್ಲಿ 'ಹೆಡೋ'ದ ದುಪ್ರಸಾದದ ಕಟ್ಟಡ ಸ್ಪಷ್ಟವಾಗಿ ಮೂಡಿ ಬರುತ್ತದೆ. ಹಲಗೆಯ ಗೋಡೆ ಮತ್ತು [illegible] ಪಟ್ಟಿಗಳ ಮಾಡುಳ್ಳ ಕಟ್ಟಡ.

[illegible] 'ಹೆಡೋ' ಎಂಬ ಜಾಗದಲ್ಲಿ [illegible]. 'ಹೆಡೋ'ದ ಗುಡ್ಡದ ಸಾಲುಗಳು ಕಡಲಿನೊಂದಿಗೆ ಸರಸವಾಡುತ್ತವೆ [illegible] ನೋಡುತ್ತಾ ಕಳೆದ [illegible] ಉಬ್ಬರದಲ್ಲಿ ಕಡಲ [illegible] ದನ್ನೂ, [illegible]ದಲ್ಲಿ ಕಡಲ [illegible] ವಾಗುವುದನ್ನೂ, ಬಂಡೆಗಲ್ಲುಗಳಲ್ಲಿ [illegible]

ಕೆನ್ನೆಲುಬುಗಳು ಎದ್ದು ಕಾಣುವುದನ್ನೂ ನೋಡುತ್ತಾ...

ಆ ಮನೆಯ ಇನ್ನೊಂದು ಪಾರ್ಶ್ವದಲ್ಲಿ ವಾಸಿಸಲು ವಾಚ್ಚಪುರಿ ಮತ್ತು ಅವನ ಹೆಂಡತಿ ಬಂದರು. ಹೆಂಡತಿಯ ಹೆಸರು ಅಖಿಲಾಂಡಮ್ಮಾಳ್. ಅವಳ ಮುಖದಲ್ಲಿ ಕಿತ್ತು ನೆಟ್ಟ ಗಿಡದ ಶುಷ್ಕತೆಯಿತ್ತು. ಒಂದು ಬೃಹತ್ ರಾಶಿ ತಲೆಗೂದಲಿನ ಹೊರತು ಅವಳಲ್ಲಿ ಆಕರ್ಷಕವಾದುದೇನೂ ಇರಲಿಲ್ಲ. ಅವಳನ್ನು ಯುವತಿ ಎನ್ನುವುದಕ್ಕಿಂತ ದೊಡ್ಡ ಹುಡುಗಿ ಎಂದು ಹೇಳುವುದೇ ಸರಿ. ಅವಳೂ ತನ್ನಂತೆಯೇ ಯಾವಾಗಲೂ ಕಡಲಿನೆಡೆಗೆ ನೋಡುತ್ತಾ ಕುಳಿತ್ತಿರುತ್ತಿದ್ದಳು. ಒಮ್ಮೆ ಅವಳು ಕೇಳಿದ್ದಳು 'ಇಲ್ಲಿನ ಕಡಲಿನ ಬಣ್ಣ ಕಪ್ಪಾಗಿದೆ ಏಕೆ?' 'ಅದಕ್ಕೇ ಅಲ್ಲವೇ ಹಿಂದೂಸ್ತಾನಿಯಲ್ಲಿ ಈ ಊರಿಗೆ ಕಾಲಾ ಪಾನಿ ಎಂಬ ಹೆಸರಿಟ್ಟಿರುವುದು...' ಎಂದಾತ ಉತ್ತರಿಸಿದ್ದ. ಕಾಲಾ ಪಾನಿ ಎಂದರೆ ದೇಶಭ್ರಷ್ಟಗೊಳಿಸು ಎಂಬ ಅರ್ಥವೂ ಇತ್ತು.

ಅಲ್ಲಿನ ಏಕಾಂತತೆಯೇ ಅವರನ್ನು ಪರಸ್ಪರ ಸಮೀಪಕ್ಕೆ ತಂದಿತು. (ಅಲ್ಲಿನ ಏಕಾಂತತೆಯಲ್ಲಿ) ವಿಷಾದ ಧೂಳಿಗಳು ಸದಾ ಉದುರುತ್ತಿವೆಯೆಂದು ತೋರುವುದು. ಹಗಲೆಲ್ಲಾ ಅವಳು ಏಕಾಂಗಿಯಾಗಿ ಕುಳಿತಿರುತ್ತಿದ್ದಳು. ವಿಶಾಲ ಸಾಗರದ ಆಚೆಗೆ ಎಲ್ಲೋ ಇರುವ ಗ್ರಾಮದ ನೆನಪುಗಳಲ್ಲಿ ಮುಳುಗಿರುವಾಗ ಕೆಲವು ಸಲ ಕಣ್ಣೀರು ಹರಿಸುವುದನ್ನೂ ಕಾಣಬಹುದಿತ್ತು. ಉಳಿದ ವೇಳೆಯಲ್ಲಿ ಅವಳು ಪತ್ರಗಳನ್ನು ಬರೆಯುತ್ತಿದ್ದಳು— ತನ್ನ ತಂದೆಗೆ. ವಿಳಾಸವನ್ನು ಇವನು ಬರೆದು ಕೊಡುತ್ತಿದ್ದ.

ಧಾರ್ಮಿಕ ಸೀಮೆಗಳನ್ನು ಉಲ್ಲಂಘಿಸಿ ಇಬ್ಬರೂ ಪರಸ್ಪರ ಹತ್ತಿರವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ಮೊದಲೆಲ್ಲಾ ಆತ ಅವಳನ್ನು ಅಖಿಲಾಂಡಮ್ಮಾಳ್ ಎಂದು ಕರೆದ. ಬಳಿಕ ಅಖಿಲಾಮ್ಮಾಳ್ ಎಂದೂ, ಕೊನೆಗೆ ಅವಳು ಒತ್ತಾಯಿಸಿದಾಗ ಪಾಪ್ಪಾತ್ತಿ ಎಂದು ಕೂಗಿದ.

ತುಟಿಗಳು ಕೆನ್ನೆಯ ಮೇಲೆ ಚಲಿಸಿದಾಗ ಅಯಾಚಿತವಾಗಿ ಕೂಗಿ ಬಿಟ್ಟವು... ನನ್ನ ಪಾಪ್ಪಾತ್ತೀ...

ಒಂದು ಸಲ ಆ ಸಂಬಂಧ ಕೊನೆಗೊಂಡೀತೆಂದು ಖಚಿತವಾಗಿತ್ತು. ವಾಚ್ಚಾಪುರಿಗೆ ಪತ್ತಿರದ ಲೇಬರ್ ಬ್ಯಾರಾಕ್‌ನಲ್ಲಿ ವಸತಿ ಸಿಕ್ಕಾಗ ತನ್ನ ಹೆಂಡತಿಯೊಡನೆ ಅಲ್ಲಿ ವಾಸಿಸಲಾರಂಭಿಸಿದ... ಆದರೆ, ಅತಿ ಅನಿರೀಕ್ಷಿತವಾಗಿ ಒಂದು ಮಧ್ಯ ರಾತ್ರಿ ಅವಳು ಆತನ ಕೋಣೆಗೆ ಬಂದು ನಿಂತಳು. ಆತ ಬಿಳಿಚಿಕೊಂಡು ನಿಂತಾಗ ಅವಳು ಹೇಳಿದಳು. 'ವಾಚ್ಚಾಪುರಿಗೆ ರಾತ್ರಿ ಡ್ಯೂಟಿ.' 'ಆದರೂ ನೀನು ಈ ಅರ್ಧ ರಾತ್ರಿಯಲ್ಲಿ ಏಕೆ ಬಂದೆ?' ಎಂದು ಕೇಳ ಬೇಕೆಂದುಕೊಂಡ. ಆದರೆ ಅವನು ಕೇಳುವ ಮೊದಲೇ ಉತ್ತರಿಸಿದಳು 'ನನಗೆ ನಿಮ್ಮನ್ನೊಮ್ಮೆ ನೋಡಬೇಕೆನಿಸಿತು, ಬಂದುಬಿಟ್ಟೆ.'

ನಂತರ ವಾಚ್ಚಾಪುರಿಗೆ ರಾತ್ರಿ ಡ್ಯೂಟಿ ಇರುವಾಗಲೆಲ್ಲ ಯಾವ ಮುನ್ಸೂಚನೆಯೂ ಇಲ್ಲದೆ ಅವಳು ಅವನ ಕೋಣೆಗೆ ಬಂದುಬಿಡುತ್ತಿದ್ದಳು.

ಆದರೆ ತಾನಾಗಿ ಮೊದಲ ಬಾರಿ ಲೇಬರ್ ಬ್ಯಾರಾಕ್‌ಗೆ ಹೋದುದು ಯಾವಾಗ ಎಂದು ಆತನಿಗೆ ಇಂದು ನೆನಪಿಲ್ಲ... ಆದರೂ ಕೊನೆಯ ಬಾರಿ ಅಲ್ಲಿಂದ ಹೊರಬಿದ್ದುದನ್ನು ಹೇಗೆ ಮರೆಯಲಾದೀತು. ಲೇಬರ್ ಬ್ಯಾರಾಕ್‌ನ ಮರದ ಹಲಗೆಗಳ ಗೋಡೆಯ ಎಡೆಯ ಮೂಲಕ ನೋಡಿದರೆ ಚಿತ್ತಂ ದ್ವೀಪದ ಸರಕಾರಿ ಸಾ ಮಿಲ್‌ನ ದೀಪಗಳುರಿಯುವುದು ಕಾಣಿಸುತ್ತದೆ. ಕೆಲವು ನಿಮಿಷಗಳಿಗೊಮ್ಮೆ ಆತ ಇಣುಕಿ ನೋಡುತ್ತಿದ್ದ. ಅಂದು ರಾತ್ರಿ ತಟಕ್ಕನೆ ದೀಪಗಳು ಆರಿದವು. ಆತ ಹೊರಕ್ಕೆ ಬಂದ. ಪುನಃ ದೀಪಗಳು ಹೊತ್ತುವುದನ್ನು ಕಾದು ಹೊರಗೆ ನಿಂತ. ದಿಢೀರನೆ ಹೊರಗೆಲ್ಲಾ ಮರದ ಪುಡಿಯ ಮತ್ತು ಚೆವರಿನ ಗಂಧ ಹರಡಿತು. ಆತ ನಡುಗಿದ. ಎದುರಿನ ನೆರಳು ದಟ್ಟವಾಯಿತು. ವಾಚ್ಚಾಪುರಿ! ಆತ ಬೇಗನೆ ನಡೆದ. ತಿರುಗಿ ನೋಡಿದಾಗ ವಾಚ್ಚಾಪುರಿ ಹಿಂಬಾಲಿಸುತ್ತಿದ್ದ. ದಟ್ಟ ಕುರುಚಲು ಪೊದೆಗಳ ನಡುವೆ ಹಾದು ರಸ್ತೆಯನ್ನು ತಲುಪಿದಾಗ ಆತ ಓಡತೊಡಗಿದ್ದ— ಹಿಂತಿರುಗಿ ನೋಡಲೂ ಸಮಯ ವ್ಯರ್ಥ ಮಾಡದೆ. ಹಿಂದಿನಿಂದ ಕೇಳಿ ಬರುವ ಶಬ್ದದಲ್ಲಿ ಮರಣದ ಖುರ ಪುಟ ಧ್ವನಿಗಳು ಮೇಳೈಸಿದಂತೆ ಕೇಳಿಸಿತು.

‘ಹೆಡೋ’ದ ಆ ಮಲಯಾಳಿ ಹೋಟೆಲ್‌ನ ಮಾಳಿಗೆಯಲ್ಲಿ ಬೆಳಕು ಕಾಣಿಸಲು ಆತ ಓಡಿ ಅಲ್ಲಿಗೆ ತಲುಪಿದ. ಎಲ್ಲರೂ ಪರಿಚಯದವರೆ. ಅವರೆಲ್ಲಾ ಮೇಣದ ಬತ್ತಿ ಹೊತ್ತಿಸಿಟ್ಟು ಸುತ್ತುವರಿದು ಕುಳಿತು ಇಸ್ಪೀಟಾಡುತ್ತಿದ್ದರು. ಅವರಿಗೆ ಒತ್ತಾಗಿ ಕುಳಿತಾಗಲೂ ಭಯ ದೂರಾಗಲಿಲ್ಲ. ಆಗಾಗ ಹೊರಗೆ ಇಣುಕಿ ನೋಡುತ್ತಿದ್ದ. ಆಗಲೂ ವಾಚ್ಚಾಪುರಿ ಹೊರಗೆ ನಿಂತಿದ್ದ. ಮುಂಜಾನೆ ಪವರ್ ಹೌಸ್‌ನ ಕೆಲಸಗಾರರು ಬಂದಾಗ ಕರೆಂಟ್ ಹೋದುದರ ಕಾರಣ ತಿಳಿಯಿತು. ಪವರ್ ಹೌಸ್‌ನಲ್ಲಿ ಸಿಡಿತ ಸಂಭವಿಸಿತ್ತು. ಎಂಜಿನಿಯರ್ ಸ್ವಾಮಿ ಮತ್ತು ಇಬ್ಬರು ಕೆಲಸಗಾರರು ಷಾಕ್ ಹೊಡೆಸಿಕೊಂಡು ಸತ್ತಿದ್ದರು. ಬೆಳಕು ಹರಿದ ಬಳಿಕ ಈ ಸುದ್ದಿಯನ್ನು ನಿಸ್ತೇಜಗೊಳಿಸುವ ಇನ್ನೊಂದು ವಾರ್ತೆ ಹರಡಿತು. ವಾಚ್ಚಾಪುರಿ ಹೆಂಡತಿಯನ್ನು ಕೊಲ್ಲಲೆತ್ನಿಸಿದ್ದಾನೆ! ನಂತರ ಅವನು ಕಾರ್‌ಬನ್‌ಸ್ಕೊ ಕಡಲ ತೀರಕ್ಕೆ ಓಡಿ ಹೋದ. ಮಧ್ಯಾಹ್ನದ ವೇಳೆಗೆ ಮತ್ತೊಂದು ವಾರ್ತೆ ಹರಡಿತು. ಕಡಲ ತೀರದ ಒಂದು ಮ್ಯಾನ್‌ಗ್ರೋವ್ ಮರದ ಕೊಂಬೆಯಲ್ಲಿ ವಾಚ್ಚಾಪುರಿ ನೇಣು ಹಾಕಿಕೊಂಡು ಸತ್ತಿದ್ದಾನೆ! ಅಂದು ಇಡೀ ದಿನ ಆತನಿಗೆ ಯಾವುದೋ ಒಂದು ಭೀತಿ ಕಾಡಿತು. ಎರಡು ದಿನಗಳ ನಂತರ ವ್ಯವಸಾಯದ ಸಾಲಗಳ ವಸೂಲಿಗೆ ಜಪ್ತಿ ವಾರಂಟ್‌ಗೆ ಸಹಿ ಹಾಕಿಸಲು ಹೋದಾಗ ಆಫೀಸರ್ ಅತೀವ ಅನುಕಂಪದಿಂದ ಆತನನ್ನೊಮ್ಮೆ ನೋಡಿದರು. ಅಲ್ಲಿ ಈ ವೇಳೆಗೆ ಹಬ್ಬಿದ್ದ ಎಲ್ಲಾ ಸುದ್ದಿಗಳನ್ನೂ ಕಥೆಗಳನ್ನೂ ಕೇಳಿದ್ದೇನೆಂದು ಹೇಳಲಿಲ್ಲ. ಆದರೆ, ಕೇಳಿದ್ದಾರೆ ಎಂಬುದು ಆ ನೋಟದಲ್ಲಿ ಸ್ಪಷ್ಟವಿತ್ತು. ಬಳಿಕ ಹೇಳಿದರು:

‘ನಾನು ನಿಮ್ಮನ್ನು ಸಾಧ್ಯವಾದಷ್ಟು ದೂರ ವರ್ಗ ಮಾಡುತ್ತೇನೆ. ಅಟ್ಲಾಂಟಾ ಕೊಲ್ಲಿಯಲ್ಲಿ ಕಾಲೋನೈಸೇಷನ್ ನಡೆಯುತ್ತಿದೆಯಲ್ಲ, ನಾಳೆ ಒಂದು ತಂಡ ಅಲ್ಲಿಗೆ ಹೋಗುತ್ತದೆ. ಅವರೊಂದಿಗೆ ಹೋಗಿಬಿಡಿ...’

ಯಾವುದೇ ಆಪತ್ಕಾಲದಲ್ಲಿ ತನ್ನನ್ನು ಕಾಪಾಡುತ್ತಿದ್ದ ವಿಶಾಲ ಮನಸ್ಸಿನ ಆ ಆಫೀಸರ್ ಆ ದಿನವೂ ತನ್ನ ಸಹಾಯಕ್ಕೆ ಧಾವಿಸಿದರು. ಮರುದಿನ ಪಲವಾರು ಕಡೆ ಹೋಗಿ ಬೀಳ್ಕೊಂಡು ಬರುವಾಗ ತಟ್ಟನೆ ಆತ ಟ್ರಕ್ ನಿಲ್ಲಿಸಲು ಹೇಳಿದ. ಆಸ್ಪತ್ರೆಯ ವರಾಂಡದ ಮೂಲಕ ಹೆಂಗಸರ ವಾರ್ಡಿಗೆ ನಡೆದ. ತಮಿಳು ಹೆಂಗಸರ ಗುಂಪೊಂದು ಒಂದು ಮಂಚದ ಸುತ್ತಲೂ ನಿಶ್ಶಬ್ದವಾಗಿ ನಿಂತಿತ್ತು. ಮಂಚದಲ್ಲಿ ಬ್ಯಾಂಡೇಜ್‌ನಿಂದ ಆವರಿಸಲ್ಪಟ್ಟ ಶರೀರ... ಹತ್ತಿಯ ರಾಶಿಯನ್ನು ಇರಿಸಿದಂತೆ ಕಾಣುತ್ತಿತ್ತಷ್ಟೆ. ಮರಣವು ಕಣ್ಣು ಮುಚ್ಚಾಲೆಯಾಡುತ್ತಿತ್ತು. ಹತ್ತಿಯ ರಾಶಿಯನ್ನು ಬಿಗಿಯಲು ಯಮಪಾಶ ಹಿಂಜರಿಯುತ್ತಿತ್ತು. ಎಷ್ಟೋ ತಿಂಗಳುಗಳ ಬಳಿಕ ಗೊತ್ತಾಯಿತು. ಪಾಪ್ಪಾತ್ತಿಯ ಕುತ್ತಿಗೆಯ ಮೇಲಿನ ಅಪಾಯಕಾರಿ ಗಾಯವೂ ಸಹ ಮಾಗಿತೆಂದು. ಎರಡು ಬೆರಳುಗಳು ಸಂಪೂರ್ಣ ಕತ್ತರಿಸಿ ಹೋಗಿದ್ದವು. ತಮಿಳು ಕೆಲಸಗಾರರ ಸಂಘದ ವತಿಯಿಂದ ಹಡಗಿನ ಖರ್ಚಿಗೆ ಹಣ ಸಂಗ್ರಹಿಸಿ ಕೊಟ್ಟು ಪಾಪ್ಪಾತ್ತಿಯನ್ನು ಊರಿಗೆ ಕಳಿಸಲಾಯಿತು...

ಇಂದು ಚಿದಂಬರಂ ದೇವಾಲಯದ ಕೊಳದ ಮೆಟ್ಟಿಲಮೇಲೆ ಕುಳಿತು ಎಲ್ಲವನ್ನೂ ನೆನಪು ಮಾಡಿಕೊಳ್ಳುತ್ತಿದ್ದ. ಇಂದು ಪೋರ್ಟ್ ಬ್ಲೇಯರ್ ಪಟ್ಟಣ ಮತ್ತು ಅಟ್ಲಾಂಟಾ ಕೊಲ್ಲಿಯ ಸೆಟ್ಲ್‌ಮೆಂಟ್ ಸ್ಥಳಗಳೆಲ್ಲವೂ ನೋಡ ನೋಡುತ್ತಿರುವಂತೆ ಶೀಘ್ರತರವಾಗಿ ಅಗಲಿ ಹೋದ ಶರತ್ಕಾಲದ ಮೇಘರಾಶಿಗಳಂತೆ ತೋರುತ್ತಿವೆ.

ಆತ ಕೊಳದ ಸೋಪಾನದಿಂದ ಎದ್ದು ನಿಂತ.

ಆಗಲೂ ಆ ಸಂನ್ಯಾಸಿಗಳು ಯಾವುದೋ ಪುರಾಣ ಕಥೆಯೊಂದರ ಮಾಯಾಜಾಲದಲ್ಲಿ ಸಿಲುಕಿದ್ದರು. ಆತ ಮುಂದೆ ನಡೆದ.

ಎತ್ತರ ಕಟ್ಟಿರುವ ಅನೇಕ ಕಲ್ಲಿನ ಸ್ತೂಪಗಳು ಕಂಡುಬಂದವು. ಅವುಗಳ ಮೇಲೆ ತಮಿಳಿನಲ್ಲಿ ವಾಕ್ಯಗಳನ್ನು ಕೆತ್ತಲಾಗಿತ್ತು. ತಮಿಳು ಓದಲು [illegible] [illegible] ಗೊಂಡ. [illegible] ತನ್ನ [illegible] ಪಾಪ್ಪಾತ್ತಿ ಎಂದು ಬರೆಯಲು [illegible]

ಗೊತ್ತು. ಅದನ್ನು ಪಾಪ್ಪಾತ್ತಿ ಕಲಿಸಿದ್ದಳು. ಆ ಸಣ್ಣ ಸ್ತೂಪಗಳನ್ನು ದಾಟಿ ಮುಂದುವರಿದು ಒಂದು ಕತ್ತಲಾದ ಮೊಗಸಾಲೆಗೆ ಬಂದು ತಲಪಿದ. ಅಲ್ಲಿ ವೈಷ್ಣವ ವೈದಿಕನಂತೆ ನಾಮಗಳನ್ನು ಹಚ್ಚಿಕೊಂಡು ಜುಟ್ಟು ಬಿಟ್ಟಿದ್ದ ಓರ್ವ ಪಾಶ್ಚಾತ್ಯನು ದೇವಾಲಯದ ಮೊಕ್ತೇಸರನೊಂದಿಗೆ ಏನೋ ಚೌಕಾಸಿ ಮಾಡುತ್ತಿದ್ದ. ನೋಟುಗಳು ಹಸ್ತಾಂತರಗೊಂಡವು. ವಿಗ್ರಹ ಚೌರ್ಯಕ್ಕೆ ಅಡ್ವಾನ್ಸೋ ಅಥವಾ ನಿಗದಿತ ಸಮಯಕ್ಕೆ ಮೊದಲೇ ದೇವರ ದರ್ಶನ ಮಾಡಿಸಲು ಲಂಚವೋ!

ಕಿರಿದಾದ ಆವರಣದೊಳಗೆ ಸಾಗಿದ. ಮುಚ್ಚಿದ್ದ ಭಾರೀ ಪ್ರವೇಶ ದ್ವಾರದ ಬಾಗಿಲ ಮುಂದೆ ಕಣ್ಣು ಮುಚ್ಚಿಕೊಂಡು ನಿಂತ.

ಶಂಭುದೇವನ ಮುಖವನ್ನು ನಟರಾಜನಾಗಿ ಕಲ್ಪಿಸಿಕೊಂಡ.

ಆಗ ಆತ ಯೋಚಿಸಿದ: ದೇಗುಲದ ಬಾಗಿಲು ತೆರೆದಾಗ, ಕಣ್ಣೆದುರು ನಟರಾಜನ ವಿಗ್ರಹವು ಕಂಗೊಳಿಸಿದಾಗ ತಾನು ಏನು ಬೇಡುವುದು? ಹೃದಯರೋಗವನ್ನು ಗುಣಪಡಿಸು ಎಂದು ಬೇಡುವುದೇ, ಮನಸ್ಸಿಗೆ ಶಾಂತಿ ಕೊಡು ಎನ್ನುವುದೇ...ಮೋಕ್ಷ ಪ್ರಾಪ್ತಿಯಾಗುವಂತೆ ಅನುಗ್ರಹಿಸು ಎನ್ನುವುದೇ?

ಫಕ್ಕನೆ ಆತನಿಗೆ ನಗೆಯುಕ್ಕಿ ಬಂತು. ಹೃದಯರೋಗ. ಆತ ನಕ್ಕ. ವರ್ಷಗಳ ಕಾಲ ತಿಳಿದೂ ತಿಳಿದೂ ಶರೀರವನ್ನು ನಿರ್ಲಕ್ಷಿಸಿ ತಾನಾಗಿ ತಂದುಕೊಂಡ ಹೃದಯರೋಗ.

ಮನಸ್ಸಿಗೆ ಶಾಂತಿಯೇ... ಆತ ಪುನಃ ನಕ್ಕ.

ಇಷ್ಟಾನಿಷ್ಟಗಳಿಗೆ ತಕ್ಕಂತೆ ಹದಗೊಳಿಸಿಕೊಂಡಾಗಲೆಲ್ಲ ಮನಸ್ಸು ಎನ್ನುವುದೊಂದನ್ನು ಕುರಿತು ಚಿಂತಿಸಿದನೇ. ಇನ್ನು ಮೋಕ್ಷವೇ......

ತನ್ನ ಪಾಪಗಳಲ್ಲಿ ಭಾಗಿಯಾಗಲು ಬಂದವರಿಗೆ ಯಾರಿಗಾದರೂ ಮೋಕ್ಷ ದೊರೆಯಲೆಂದು ತಾನು ಇಷ್ಟು ದಿನಗಳವರೆಗೆ ಪ್ರಾರ್ಥಿಸಿದ್ದೆನೆ?

ಚಿದಂಬರಂ ನಟರಾಜ ಕ್ಷೇತ್ರದ ಪ್ರಾಂಗಣದಿಂದ ಆತ ಬೇಗನೆ ಹೊರಬಂದ. ಹಗಲಿನ ಬೆಳಕಿನಲ್ಲಿ ತನ್ನ ಕಾವಿಯಂಗಿ ಮತ್ತು ಕಾವಿ ಪೈಜಾಮಗಳೆಡೆಗೆ ನೋಡಿಕೊಂಡಾಗ ಆತನಿಗೆ ಲಜ್ಜೆಗಿಂತಲೂ ಮಿಗಿಲಾಗಿ ಅವಜ್ಞೆ ತೋರಿತು.

ಕಾಮ್ಯಾನಾಂ ಕರ್ಮಣಾಂ ನ್ಯಾಸಂ
ಸಂನ್ಯಾಸಂ ಕವಯೋ ವಿದುಃ

ಕ್ಲೇಶದಿಂದ ಈ ಸಾಲುಗಳನ್ನು ಹೇಳಿಕೊಳ್ಳುತ್ತ ಆತ ನಡೆದ... ಜೇಬಿನಿಂದ ಚಪ್ಪಲಿಯ ಟೋಕನ್ ತೆಗೆದು, ಟೋಕನ್ ಮತ್ತು ಹತ್ತು ಪೈಸೆ ಕೊಟ್ಟು ಚಪ್ಪಲಿಗಳನ್ನು ಹಿಂತಿರುಗಿ ಪಡೆದು ಹೋಗುವುದು ಎಂದುಕೊಂಡ. ಸ್ವಲ್ಪ ಹೊತ್ತಿಗೆ ಮುಂಚೆ ಚಪ್ಪಲಿಗಳನ್ನು ತೆಗೆದುಕೊಳ್ಳುವಾಗ ತನ್ನೊಡನೆ ಸರಸವಾಗಿ ಮಾತನಾಡಿದ ಮತ್ತು ಸ್ವರಸಾಮ್ಯತೆಯಿಂದ ಪಾಪ್ಪಾತ್ತಿಯ ನೆನಪುಗಳನ್ನು ಕೆದಕಿಯೂ ಬಿಟ್ಟ ಆ ಹೆಂಗಸನ್ನು ಹುಡುಕುತ್ತ ಆತ ಹೊರ ಬಂದ. ಆಕೆ ಕೈಕಟ್ಟಿಕೊಂಡು, ಅಲ್ಪ ಕುಸಿದು ಬಿದ್ದ ಬಾವಿ ಕಟ್ಟೆಯ ಮೇಲೆ ಕುಳಿತಿದ್ದಳು. ಕುತ್ತಿಗೆಗೆ ಕಪ್ಪು ಮಫ್ಲರೊಂದನ್ನು ಸುತ್ತಿಕೊಂಡಿದ್ದಳು. ಆತ ಅವಳನ್ನು ಸೂಕ್ಷ್ಮವಾಗಿ ನೋಡಿದ—ನೆರೆತ ತಲೆಗೂದಲಿನಲ್ಲಿ, ಸುಕ್ಕು ಬಿದ್ದ ಕೆನ್ನೆಗಳಲ್ಲಿ ಎಲ್ಲಾದರೂ ಅವಳು ತನ್ನ ಪಾಪ್ಪಾತ್ತಿಯನ್ನು ಮರೆಮಾಡಿ ಹಿಡಿಯುತ್ತಿದ್ದಾಳೋ ಎಂದು. ನಂತರ ಚಪ್ಪಲಿ ಹಾಕಿಕೊಳ್ಳುತ್ತ ಕೇಳಿದ.

"ಅಮ್ಮಾ, ನಿಮ್ಮ ಮನೆ ಇದೇ ಊರಿನಲ್ಲೇನು?"

"ಅಲ್ಲ, ನನ್ನ ಹುಟ್ಟೂರು ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಒಂದು ಗ್ರಾಮ"

ಆತ ಆ ಗ್ರಾಮದ ಹೆಸರನ್ನು ಕೇಳಲಿಲ್ಲ. ಅವಳ ಹೆಸರನ್ನು ಕೇಳಿದ.

ನನ್ನ ಹೆಸರೇ..." ಅವಳು ಕನಲಿದಳು "ಹೇ... ಸ್ವಾಮಿ...ಕಾವೀ ಧರಿಸಿ ಮೋಕ್ಷ ಹುಡುಕುತ್ತಾ ನಡೆಯುವ ನಿಮಗೆ ನನ್ನ ಹೆಸರು ತಿಳಿದುಕೊಂಡ್ರೆ ಏನು ಸಿಕ್ಕೀತು...ನಿಮ್ಮ ಪಾಡಿಗೆ ನೀವು ಹೋಗಿ."

ಆತ ತನ್ನ ಪಾದರಕ್ಷೆಗಳನ್ನು ಮೆಟ್ಟಿಕೊಂಡು ಹಿಂತಿರುಗಿ ನೋಡದೆ ನಡೆದ. ✡

ಅರೇಬಿಯಾ
ಮತ್ತು
ಕನ್ನಡ ಶಬ್ದಕೋಶ

ಡಾ. ಪ್ರಕಾಶ ಕೊಣ್ಣೂರ

ಹಿಂದಿನ ಡಿಸೆಂಬರ್ ತಿಂಗಳು. ನಾನು ಜೆಡ್ಡಾ ನಗರದ ಕಿಂಗ್ ಅಬ್ದುಲ್ ಅಜೀಜ್ ವಿಮಾನ ನಿಲ್ದಾಣದಲ್ಲಿ ಇಳಿದಾಗ ಒಂದು ರೀತಿಯ ದುಗುಡ. ಭಾರತದ ಹೊರಗೆ ಅನೇಕ ದೇಶಗಳನ್ನು ಸುತ್ತಿದ್ದರೂ ಅರಬ್ ಮುಸ್ಲಿಂ ದೇಶವೊಂದನ್ನು ಮೊದಲನೆಯ ಬಾರಿಗೆ ಪ್ರವೇಶಿಸುತ್ತಿದ್ದೆ.

ಹೊರಗಿನಿಂದ ನೋಡಲು ಅಂತಹ ಬೃಹತ್ತೇನೂ ನಿಲ್ದಾಣವಂತೆ ಕಾಣದು. ಆದರೆ ಅಭ್ಯಂತರದಲ್ಲೂ ಚೆನ್ನಾಗಿ ನಿರ್ಮಿಸಲ್ಪಟ್ಟಿರುವ ಈ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಇಮಿಗ್ರೇಶನ್ ಮುಗಿಸಿ ಹೊರಗೆ ಬಂದೆ. ಟ್ಯಾಕ್ಸಿಯೊಂದನ್ನು ಕರೆದಾಗ ಒಬ್ಬ ಸೌದಿ ಟ್ಯಾಕ್ಸಿ ಡ್ರೈವರ್ ತನ್ನ ಗಾಡಿಯನ್ನು ತೆಗೆದುಕೊಂಡು ಬಂದ. ಜೆಡ್ಡಾದಲ್ಲಿ ಪಾಕಿಸ್ತಾನದ ಮತ್ತು ಬಂಗ್ಲಾ ದೇಶದ ಚಾಲಕರಿರುವ ಬಹಳಷ್ಟು ಟ್ಯಾಕ್ಸಿಗಳಿವೆ. ನಾನು ಭಾಷೆಯ ಅನುಕೂಲವನ್ನು ಗಮನಿಸದೇ ಸೌದಿ ಡ್ರೈವರನ ಟ್ಯಾಕ್ಸಿಯಲ್ಲೇ ಹೋಗಲು ನಿರ್ಧರಿಸಿದೆ. ಅವನು "ಸಾಕಿನ್ ಫೇನ್?" ಎಂದ. ನಾನು ಹೋಗಬೇಕಾಗಿದ್ದ ಹೋಟೆಲಿನ ಹೆಸರನ್ನು ಹೇಳಿದಾಗ ಆ ಕಡೆಗೆ ಹೊರಟ. ನನಗೆ ಅವನು ಅಂದ "ಸಾಕಿನ್ ಫೇನ್"ನ ಅರ್ಥವನ್ನು ತಿಳಿಯುವ ಕುತೂಹಲ. ಹೋಟೆಲಿಗೆ ತಲುಪಿ ನನ್ನ ಅರಬ್ಬಿ-ಇಂಗ್ಲಿಷ್ ನಿಘಂಟನ್ನು ತೆಗೆದು ನೋಡಿದೆ. "ಸಾಕಿನ ಫೇನ್"ನ ಅರ್ಥ 'ಎಲ್ಲಿ ವಾಸ?' ಎಂದು ಇತ್ತು. ನನಗೆ ಥಟ್ಟನೆ ಕನ್ನಡದಲ್ಲಿಯೂ ಈ ಶಬ್ದ (ಸಾಕಿನ) ಇರುವ ಒಂದು ಅರ್ಥದಲ್ಲಿ ಬಳಕೆಯಲ್ಲಿರುವ ನೆನಪಾಯಿತು. ವಿಶೇಷವಾಗಿ ಉತ್ತರ ಕರ್ನಾಟಕದ ಕನ್ನಡದ ಭಾಷೆಯಲ್ಲಿ ಈ ಪದ ಸಾಮಾನ್ಯವಾಗಿ ಬಳಸಲ್ಪಡುತ್ತದೆ. ಇದು ಒಂದು ಕನ್ನಡ ಶಬ್ದವೆಂದು

ತಿಳಿದುಕೊಂಡಿದ್ದ ನನಗೆ ಅದರ ಅರಬ್ಬಿ ಮೂಲ ತಿಳಿದಾಗ ಆಶ್ಚರ್ಯವಾಯಿತು. ಇದರ ಜೊತೆಗೆ ಜಿಜ್ಞಾಸೆಯೂ ಹುಟ್ಟಿತು. ಸೌದಿ ಅರೇಬಿಯಾದಲ್ಲಿ ಇರುವ ವರೆಗೆ ಕನ್ನಡ ಭಾಷೆಯಲ್ಲಿ ಬರುವ ಅರಬ್ಬೀ ಶಬ್ದಗಳನ್ನು ಜೋಡಿಸುವ ಒಂದು ಹವ್ಯಾಸವೇ ಬೆಳೆಯಿತು.

ಸೌದಿ ಅರೇಬಿಯಾದ ಬಹು ಭಾಗವನ್ನು ಆವರಿಸಿರುವ 'ರಬ್ ಅಲ್ ಖಾಲಿ' ಎಂಬ ಮರುಭೂಮಿಯಿದೆ. ಅದರ ಅರ್ಥ 'ಬರಿದಾದ ಮರುಭೂಮಿ' ಎಂದು. ಶುದ್ಧ ಕನ್ನಡ ಪದವಾದ 'ಬರಿದು' ಎಂಬುದರ ಬದಲು ನಾವು ದಿನನಿತ್ಯದ ಬಳಕೆಯಲ್ಲಿ 'ಖಾಲಿ' ಎಂಬ ಪದವನ್ನು ಎಲ್ಲೆಲ್ಲಿಯೂ ಬಳಸುತ್ತೇವೆ. ಅದು ಕನ್ನಡ ಅಥವಾ ಇನ್ನಾವುದೇ ಭಾರತೀಯ ಪದವಲ್ಲ. ಶುದ್ಧ ಅರಬ್ಬೀ ಪದ.

"ಬಾಕಿ", ಅಂದರೆ ಉಳಿದದ್ದು, ಎಂಬ ಅರ್ಥದಲ್ಲಿ ಬಳಸಲ್ಪಡುವ ಪದ ಅರಬ್ಬಿ ಭಾಷೆಯದು.

'ಮುಕ್ಕಾಮ್' ಎಂದು ಕನ್ನಡದಲ್ಲಿ ನಾವು 'ನೆಲೆ' ಎಂಬ ಅರ್ಥದಲ್ಲಿ ಬಳಸುವ ಶಬ್ದ 'ಮುಕಯ್ಯಿಮ್' ಎಂಬ ಅರಬ್ಬಿ ಪದದ ರೂಪಾಂತರ.

ನಾವು 'ಆಸನ' ಎಂದು ಹೇಳುವದಕ್ಕಿಂತ ಹೆಚ್ಚಾಗಿ 'ಖುರ್ಚಿ' ಅಥವಾ 'ಕುರ್ಚಿ' ಎಂದು ಹೇಳುತ್ತೇವೆ. ಈ 'ಖುರ್ಸಿ' ಅರಬ್ಬಿಯಿಂದ ಬಂದದ್ದು.

ಉತ್ತರ ಕರ್ನಾಟಕದ ಕನ್ನಡದಲ್ಲಿ 'ವಿಶೇಷ' ಎಂಬ ಅರ್ಥ ಬರಲು 'ಖಾಸ್' ಎಂಬ ಶಬ್ದವನ್ನು ಹೆಚ್ಚಾಗಿ ಬಳಸುತ್ತೇವೆ. ಇದೂ ಅರಬ್ಬಿ. 'ಕಾಣಿಕೆ' ಎನ್ನುವದರ ಬದಲು 'ಬಕ್ಷೀಸ್' ಎನ್ನುತ್ತೇವೆ. ಇದೂ ಅರಬ್ಬಿಯೇ.

'ಖಲಾಸ್' ಎಂಬ ಪದ 'ಮುಗಿಯಿತು' ಎಂಬುದಕ್ಕಿಂತ ಹೆಚ್ಚು ಬಳಕೆಯಲ್ಲಿದೆ. ಅದರಂತೆಯೇ 'ದುನಿಯಾ' ಎಂಬ ಶಬ್ದ 'ಜಗತ್ತು' ಎಂಬ ಅರ್ಥದಲ್ಲಿ ಆಡು ಮಾತಿನಲ್ಲಿ ಬಳಕೆಯಲ್ಲಿದೆ. ಇವೆರಡೂ ಅರಬಸ್ತಾನದ ದೇಣಿಗೆಯೆ.

'ದಫ್ತರ್' ಎಂಬ ಅರಬ್ಬಿ ಶಬ್ದ ಕಾಗದ ಪತ್ರಗಳಿಗೆ ಸಂಬಂಧಿಸಿದಂತೆ ನಮ್ಮಲ್ಲಿ ಬಳಸಲ್ಪಡುತ್ತದೆ. 'ಸಂದೂಕ' ಎಂಬ ಅರಬ್ಬಿ ಶಬ್ದ 'ಪೆಟ್ಟಿಗೆ'ಗೆ ಬದಲು ಬೆಳಗಾವಿ-ಬೈಲಹೊಂಗಲದ ಕಡೆಗೆ ಬಹಳವಾಗಿ ಉಪಯೋಗದಲ್ಲಿದೆ. ನಾವು ಹಣ ಇಡುವ 'ಖಜಾನೆ'ಯ ಮೂಲ ಅರಬ್ಬಿಯದೇ.

'ಬದಲ್' ಎಂಬ ಅರಬ್ಬಿ ಶಬ್ದಕ್ಕೆ 'ಬದಲಾಗಿ' (? ಬೇರೆಯಾಗಿ) ನನಗೆ ಸಮಾನ ಕನ್ನಡ ಪದ ಸಿಗಲಿಲ್ಲ.

ಮೈಸೂರು ಕಡೆಗೆ ಬಳಕೆಯಲ್ಲಿರುವ 'ಮೊಹಲ್ಲಾ' ಮತ್ತು 'ಮಹಲ್' ಅರಬ್ಬಿ ಪದಗಳು.

'ಬೇರೆ' ಅಥವಾ 'ತಪ್ಪು' ಎನ್ನುವ ಅರ್ಥದಲ್ಲಿ 'ಗೈರ್' ಎಂಬ ಅರಬ್ಬೀ ಪದ ಕನ್ನಡದಲ್ಲಿ ಬಳಸಲ್ಪಡುತ್ತಿದೆ.


'ತಪ್ಪು' ಎಂಬುದಕ್ಕೆ ಬದಲಾಗಿ 'ಗಲತ್' ಎಂಬ ಅರಬ್ಬಿ ಶಬ್ದದ ಉಪಯೋಗ ನಮ್ಮಲ್ಲಿ ಅಪರೂಪವೇನಲ್ಲ.

ಇವೆಲ್ಲ ಶಬ್ದಗಳು ಕರ್ನಾಟಕದಲ್ಲಿ ಮುಸ್ಲಿಮರ ಆಗಮನದ ನಂತರವೇ ಬಳಕೆಯಲ್ಲಿ ಬಂದವು. ಪಟ್ಟಿ ಮಾಡುತ್ತ ಹೋದಂತೆ ಇನ್ನೂ ಹಲವಾರು ದಿನನಿತ್ಯದ ಬಳಕೆಯಲ್ಲಿರುವ ಅರಬ್ಬಿ ಪದಗಳು ಸಿಗುತ್ತವೆ. ಇದಕ್ಕೆ ಬದಲಾಗಿ ನನಗೆ ಅರಬ್ಬಿ ಭಾಷೆಯಲ್ಲಿ ಕನ್ನಡ ಅಥವಾ ಸಂಸ್ಕೃತಜನ್ಯವಾದ ಒಂದು ಪದವೂ ಸಿಗಲಿಲ್ಲ. ನಾವು ಹಿಂದಿ ಅಥವಾ 'ಹಿಂದುಸ್ತಾನಿ' ಎಂದು ಕರೆಯುವ ಭಾಷೆಯಲ್ಲಿ ನೂರಕ್ಕೆ ಇಪ್ಪತ್ತರಷ್ಟು ಅರಬ್ಬಿ ಶಬ್ದಗಳು ಇರಬಹುದೆಂದು ನನ್ನ ಅಂದಾಜು. ❀

ಬಿಂಬ ಬಿಂಬಿ
ಪ್ರತಿಬಿಂಬ ಬಿಂಬಿತ್ರ

ಶ್ರೀನಿವಾಸ ತೋಫಖಾನೆ

ಶೂದ್ರಕನ ಮೃಚ್ಛಕಟಿಕ ವಿಶ್ವನಾಟಕಗಳ ಪಂಕ್ತಿಗೆ ಸೇರಿದ ಸಂಸ್ಕೃತ ನಾಟಕಗಳಲ್ಲೊಂದಾಗಿದೆ. ತನ್ನ ಉದಾರ ಸ್ವಭಾವದಿಂದ ಚಾರುದತ್ತ ಬಡತನದ ಬವಣೆಯಲ್ಲಿ ಸಿಲುಕಿಕೊಳ್ಳುತ್ತಾನೆ. ಬಡತನ ತಂದೊಡ್ಡುವ ವಿಪತ್ತುಗಳು ಒಂದಲ್ಲ ಎರಡಲ್ಲ; ಸಾಲುಗಟ್ಟಿ ಒಂದರ ಹಿಂದೊಂದು ಅವು ಬಂದು ಮಾನವನನ್ನು ಗಾಸಿಗೊಳಿಸುತ್ತವೆ ಇದನ್ನು ಸಮರ್ಥಿಸುವ ಅಲ್ಲಿನ ಹಲವು ಶ್ಲೋಕಗಳಲ್ಲಿ ಒಂದು ಇಂತಿದೆ :



ಏಕಸ್ಯ ದುಃಖಸ್ಯ ನ ಯಾವದಂತಂ
ಗಚ್ಛಾಮ್ಯಹಂ ಪಾರಮಿವಾರ್ಣವಸ್ಯ।
ತಾವದ್ ದ್ವಿತೀಯಂ ಸಮುಪಸ್ಥಿತಂ ಮೇ
ಛಿದ್ರೇಷ್ವನರ್ಥಾ ಬಹುಲೀ ಭವಂತಿ।।

ಕನ್ನಡ ಭಾವಾನುವಾದ :

ದುಃಖವೊಂದರ ಘೋರ ಆಳಕೆ ಮುಳುಗಿ
ಏಳುತ ಆಚೆಗೆ
ಕಡಲ ದಡವನು ತಲುಪುವಂದದಿ ಕಾಂಬ
ಮುನ್ನವೇ ಪಾರವ

ಬೇರೆ ದುಃಖವು ಸಾರುತೆನ್ನನು ಮುತ್ತಿ
ಮುಕ್ಕುತಲಿದೆ ಇದೋ
ಮನುಜ ಜೀವಕೆ ಛಿದ್ರ ತರುವುದು ಬಹು
ಅನರ್ಥದ ಭಾರವ

ಪಟ್ಟೆ-ಪಟ್ಟಿ

ಮೂಲ : ಆರ್ಥರ್ ಕಾನನ್ ಡಾಯ್ಲ್
ಅನು: ಸಂಜೀವ ಪ್ಯಾಟಿ

೧೮೮೩ರ ಏಪ್ರಿಲ್ ತಿಂಗಳದು. ಅಂದು ಬೆಳಿಗ್ಗೆ ನಾನು ಕಣ್ತೆರೆದಾಗ ನನ್ನ ಹಾಸಿಗೆಯ ಬಳಿ ಶೆರ್ಲಾಕ್ ಹೋಮ್ಸ್ ಸಿದ್ಧನಾಗಿ ನಿಂತಿದ್ದ. ಗಡಿಯಾರ ನೋಡಿದೆ. ಏಳು ಗಂಟೆ ಹದಿನೈದು ನಿಮಿಷವಾಗಿತ್ತು. ಹೋಮ್ಸ್ ಸಾಮಾನ್ಯವಾಗಿ ಬೇಗ ಏಳುತ್ತಿರಲಿಲ್ಲ. ಇಂದೇಕೆ ಇಷ್ಟು ಬೇಗ ಎದ್ದಿದ್ದಾನೆಂದು ಅಚ್ಚರಿಯಿಂದ ಅವನತ್ತ ನೋಡಿದೆ. ನಾನು ಪಿಳಿ ಪಿಳಿ ಕಣ್ಣು ಬಿಡುತ್ತಿರುವುದನ್ನು ನೋಡಿ ಅವನು ಹೇಳಿದ.

"ಹೊರಗೆ ಯಾರೋ ಒಬ್ಬ ತರುಣಿ ಬಂದಿದ್ದಾಳಂತೆ ವ್ಯಾಟ್ಸನ್. ಅವಳು ಬಹಳ ಹೆದರಿದಂತೆ ತೋರುತ್ತಿದ್ದು, ನನ್ನನ್ನು ಭೆಟ್ಟಿಯಾಗಲು ಒತ್ತಾಯಪಡಿಸುತ್ತಿದ್ದಾಳಂತೆ. ಒಬ್ಬ ತರುಣಿ, ಅದೂ ಇಂಥ ವೇಳೆಯಲ್ಲಿ ನನ್ನನ್ನು ಭೆಟ್ಟಿಯಾಗಲು ಬಯಸಿದ್ದಾಳೆಂದರೆ ಅದಕ್ಕೆ ಬಲವಾದ ಕಾರಣವೇನಾದರೂ ಇರಲೇಬೇಕು. ಅವನ್ನು ತಿಳಿಯಲು ನಿನಗೂ ನನ್ನಷ್ಟೆ ಕುತೂಹಲವಿರಬಹುದೆಂದು ಎಣಿಸಿ ನಿನ್ನನ್ನು ಎಬ್ಬಿಸಿದೆ."

ನನ್ನ ನಿದ್ದೆ ಹಾರಿಹೋಯಿತು. ಹೋಮ್ಸ್‌ನ ತನಿಖೆಯ ವಿಧಾನ, ಕ್ಷಣಮಾತ್ರದಲ್ಲಿ ಎಲ್ಲವನ್ನೂ ಕರಾರುವಾಕ್ಕಾಗಿ ಲೆಕ್ಕ ಹಾಕುವ ಅವನ ಕೌಶಲ, ಸಮಸ್ಯಾ ಪರಿಹಾರದಲ್ಲಿ ಆತ ತೋರುತ್ತಿದ್ದ ಜಾಣ್ಮೆ ನನ್ನನ್ನು ಮಂತ್ರಮುಗ್ಧನನ್ನಾಗಿಸುತ್ತಿದ್ದವು. ಕೆಲ ನಿಮಿಷಗಳಲ್ಲೇ ನಾನು ಬಟ್ಟೆ ಬದಲಿಸಿ ಸಿದ್ಧನಾಗಿ ಅವನ ಜೊತೆ ಹೊರಗಿನ ಕೋಣೆಗೆ ಬಂದೆ. ಆಗ ಅಲ್ಲಿ ಕುಳಿತಿದ್ದ, ಮುಖವನ್ನು ಮುಚ್ಚುವ ಬುರ್ಖಾದಂಥ ಕಪ್ಪು ಉಡುಪನ್ನು ತೊಟ್ಟಿದ್ದ ತರುಣಿ ನಮ್ಮಿಬ್ಬರನ್ನೂ ನೋಡಿ ಎದ್ದು ನಿಂತಳು.

"ಗುಡ್ ಮಾರ್ನಿಂಗ್ ಮ್ಯಾಡಂ, ನನ್ನ ಹೆಸರು ಶೆರ್ಲಾಕ್ ಹೋಮ್ಸ್. ಇವನು ನನ್ನ ಆತ್ಮೀಯ ಸ್ನೇಹಿತ, ಸಹಕಾರಿ ವ್ಯಾಟ್ಸನ್. ನೀವು ಇಲ್ಲಿ ಬೆಂಕಿಗೂಡಿನ ಹತ್ತಿರ ಕುಳಿತುಕೊಳ್ಳಿ. ನಿಮಗೆ ಬಹಳ ಚಳಿಯಾಗಿರುವಂತೆ ಕಾಣುತ್ತದೆ" ಎಂದ ಹರ್ಷಚಿತ್ತ ಹೋಮ್ಸ್.

"ನಾನು ನಡುಗುತ್ತಿರುವುದು ಚಳಿಯಿಂದಲ್ಲ" ಆಕೆ ಸಣ್ಣಗಿನ ಧ್ವನಿಯಲ್ಲಿ ಹೇಳಿದಳು.

"ಮತ್ತೆ?"

"ನಾನು ಹೆದರಿಕೆಯಿಂದ ನಡುಗುತ್ತಿದ್ದೇನೆ! ಓಹ್ ಎಷ್ಟು ಭಯಾನಕ!" ಎನ್ನುತ್ತ ಆಕೆ ತನ್ನ ಮುಖದ ಮೇಲಿನ ಪರದೆಯನ್ನು ಸರಿಸಿದಳು. ಅವಳ ಮುಖದಲ್ಲಿ ತೀವ್ರ ಬಳಲಿಕೆಯ ಲಕ್ಷಣಗಳಿದ್ದವು, ಕಣ್ಣುಗಳಲ್ಲಿ ಹೆದರಿಕೆಯ ಛಾಯೆಯಿತ್ತು. ಆಕೆಯ ವಯಸ್ಸು ಮೂವತ್ತಾಗಿರಬಹುದೆನಿಸಿತು. ಆದರೆ ಆಗಲೇ ಅವಳ ಕೂದಲು ಅಲ್ಲಲ್ಲಿ ನರೆತಿತ್ತು. ಹೋಮ್ಸ್ ಆಕೆಯತ್ತ ತನ್ನ ಪರೀಕ್ಷಕ ದೃಷ್ಟಿಯಿಂದ ನೋಡಿ ಹೇಳಿದ:

"ನೀವೇನೂ ಹೆದರಿಕೊಳ್ಳಬೇಡಿ. ಎಲ್ಲಾ ಸರಿಯಾಗುವಂತೆ ಮಾಡೋಣ. ಅಂದಹಾಗೆ ನೀವು ಬೆಳಿಗ್ಗೆ ರೈಲಿನಲ್ಲಿ ಬಂದಿದ್ದೀರೆಂದು ಕಾಣುತ್ತದೆ"

"ಹಾಗಾದರೆ ನಿಮಗೆ ನನ್ನ ಬಗ್ಗೆ ಗೊತ್ತಿದೆಯೆ?"

"ಇಲ್ಲ; ಆದರೆ ನಿಮ್ಮ ಕೈಯಲ್ಲಿ ಮರುಪ್ರಯಾಣದ ಟಿಕೇಟಿದೆಯಲ್ಲ. ಇಂದು ಬೆಳಿಗ್ಗೆ ನೀವು ಕಚ್ಚಾ ರಸ್ತೆಯ ಮೂಲಕ ಟಾಂಗಾದಲ್ಲಿ ರೇಲ್ವೆ ನಿಲ್ದಾಣಕ್ಕೆ ಬಂದಿರಬೇಕಲ್ಲವೆ?"

ಆಶ್ಚರ್ಯದಿಂದ ಆಕೆಗೆ ಮಾತೇ ಹೊರಡಲಿಲ್ಲ. ರೆಪ್ಪೆ ಬಡಿಯದೆ ಹೋಮ್ಸ್‌ನ ಮುಖವನ್ನೇ ನೋಡುತ್ತ ಕುಳಿತಳು. ಆಗ ಹೋಮ್ಸ್ ಮುಗುಳ್ನಗುತ್ತ,

"ನಾನು ಹೇಳಿದ್ದರಲ್ಲಿ ಆಶ್ಚರ್ಯಪಡುವಂಥದೇನೂ ಇಲ್ಲ ಮ್ಯಾಡಂ. ನಿಮ್ಮ ಜಾಕೀಟಿನ ಎಡತೋಳಿನ ಮೇಲೆ ಏಳು ಕಡೆ ಸ್ವಲ್ಪ ತಾಜಾತನದ ಮಣ್ಣು ರಾಡಿ ಸಿಡಿದ ಕಲೆಗಳಿವೆ. ಹೀಗೆ ಕಲೆ ಬೀಳಬೇಕೆಂದರೆ ನೀವು ಟಾಂಗಾದಲ್ಲೇ ಪ್ರಯಾಣಿಸಿರಬೇಕು. ನೀವು ಟಾಂಗಾದವನ ಎಡಭಾಗ ಕುಳಿತಿರಬೇಕಲ್ಲವೆ?"

"ಹೌದು. ನೀವು ಹೇಳಿದ್ದರಲ್ಲಿ ಎಳ್ಳಷ್ಟೂ ತಪ್ಪಿಲ್ಲ. ನಾನು ಆರು ಗಂಟೆಗಿಂತ ಸ್ವಲ್ಪ ಮೊದಲೇ ಮನೆ ಬಿಟ್ಟು ಇಲ್ಲಿಗೆ ಬಂದಿದ್ದೇನೆ. ಭೀತಿಯಿಂದ ನಾನು ಸೋತು ಹೋಗಿದ್ದೇನೆ. ಈಗ ನೀವು ಸಹಾಯ ಮಾಡದಿದ್ದರೆ ನನಗೆ [illegible] ಸೇವೆಗೆ ತಕ್ಕ ಪ್ರತಿಫಲ ಸಲ್ಲಿಸುವ ಸ್ಥಿತಿಯಲ್ಲಿ ನಾನಿಲ್ಲ. ಆದರೆ ಇನ್ನಾರು ವಾರಗಳಲ್ಲಿ ನಾನು [illegible]ಗಲಿದ್ದೇನೆ. ನಂತರ ನನಗೆ ಸ್ವಲ್ಪ ಆಸ್ತಿ ಸಿಗಲಿದೆ. ಆಗ ನಿಮ್ಮ ಋಣವನ್ನು ಖಂಡಿತ ತೀರಿಸುತ್ತೇನೆ" ಎಂದಾಕೆ ಗೋಗರೆದಳು.

"ಅದರ ಬಗ್ಗೆ ಚಿಂತಿಸಬೇಡಿ. ಮೊದಲು ನಿಮ್ಮ ಸಮಸ್ಯೆಯನ್ನು ಹೇಳಿ" ಹೋಮ್ಸ್ ನುಡಿದ.

ಆಕೆ ಹೇಳತೊಡಗಿದಳು.

"ನನ್ನ ಹೆಸರು ಹೆಲನ್ ಸ್ಟೋನರ್. ನಾನು ನನ್ನ ಮಲ ತಂದೆಯ ಜೊತೆಗೆ ವಾಸಿಸುತ್ತಿದ್ದೇನೆ. ಅವನು ಸರ್ರೆಯ ಪಶ್ಚಿಮ ಗಡಿಯಲ್ಲಿರುವ ರಾಯ್‌ಲಟ್ ಆಫ್ ಸ್ಟೋಕ್‌ಮೋರನ್ನಿನ ವಂಶಕ್ಕೆ ಸೇರಿದವ. ಒಂದು ಕಾಲಕ್ಕೆ ಇಂಗ್ಲಂಡಿನಲ್ಲೇ ಅತ್ಯಂತ ಶ್ರೀಮಂತ ವಂಶವಾಗಿದ್ದ ರಾಯ್‌ಲಟ್ಸ್ ವಂಶದ ಆಸ್ತಿಗೆ ನನ್ನ ಮಲತಂದೆ ಸದ್ಯ ಏಕೈಕ ವಾರಸುದಾರ. ಆದರೆ ಈಗ ಆಸ್ತಿಯೆಲ್ಲ ಕೈಬಿಟ್ಟು ಹೋಗಿದೆ. ಹಿಂದಿನ ನಾಲ್ಕೈದು ಜನ ವಾರಸುದಾರರು ಎಲ್ಲವನ್ನೂ ನಾಶ ಮಾಡಿದ್ದಾರೆ. ನನ್ನ ಮಲತಂದೆ ವಾರಸುದಾರನಾದಾಗ ಜೀವನ ಸಾಗಿಸಲು ತಾನು ಯಾವುದಾದರೊಂದು ವೃತ್ತಿ ಕೈಗೊಳ್ಳಬೇಕೆಂಬುದನ್ನು ಮನಗಂಡ. ಅದ್ದರಿಂದ ಸಂಬಂಧಿಕರೊಬ್ಬರಿಂದ ಸಾಲ ಪಡೆದು ವೈದ್ಯಕೀಯ ಪದವಿ ಪಡೆದ. ನಂತರ ಭಾರತಕ್ಕೆ ಹೋಗಿ ತನ್ನ ವೃತ್ತಿಯಲ್ಲಿ ಸಾಕಷ್ಟು ಯಶಸ್ಸು ಗಳಿಸಿದ. ಆದರೆ ಒಂದು ಬಾರಿ ಅವನ ಮನೆಯಲ್ಲಿ ಕಳ್ಳತನವಾಯಿತು. ಆಗ ಸಿಟ್ಟಿನ ಭರದಲ್ಲಿ ತನ್ನ ಸೇವಕನನ್ನು ಹೊಡೆದು ಕೊಂದುಬಿಟ್ಟ. ನಂತರ ದೀರ್ಘಕಾಲ ಶಿಕ್ಷೆ ಅನುಭವಿಸಿ ನಿರಾಶೆಯಿಂದ ಇಂಗ್ಲೆಂಡಿಗೆ ಮರಳಿ ಬಂದ.

"ಭಾರತದಲ್ಲಿದ್ದಾಗ ಅವನು ನನ್ನ ವಿಧವೆ [illegible]


2044

ಅವಳಿ ಸೋದರಿ ಜೂಲಿಯಾ ಕೇವಲ ಎರಡು ವರ್ಷದವರಿದ್ದೆವು. ಆಗ ನನ್ನ ತಾಯಿಗೆ ವರ್ಷಕ್ಕೆ ಒಂದು ಸಾವಿರ ಪೌಂಡುಗಳಿಗೂ ಹೆಚ್ಚಿನ ಆದಾಯವಿತ್ತು. ಮದುವೆಯಾದ ನಂತರ ಈ ಆದಾಯಕ್ಕೂ ಡಾ. ರಾಯ್‌ಲಟ್ ವಾರಸುದಾರ ನಾದ; ತನ್ನಿಬ್ಬರು ಪುತ್ರಿಯರು – ಅಂದರೆ ನಾವು—ಮದುವೆಯಾದ ಮೇಲೆ ನಮಗೆ ಆ ಆದಾಯದಲ್ಲಿ ಸಮ ಪಾಲು ಕೊಡಬೇಕೆಂದು ನನ್ನ ತಾಯಿ ಒಪ್ಪಂದ ಮಾಡಿಕೊಂಡಿದ್ದಳು. ನಾವೆಲ್ಲರೂ ಇಂಗ್ಲೆಂಡಿಗೆ ಮರಳಿ ಬಂದ ಕೆಲ ತಿಂಗಳುಗಳಲ್ಲೇ ನನ್ನ ತಾಯಿ ರೇಲ್ವೇ ಅಪಘಾತಕ್ಕೆ ಬಲಿಯಾದಳು — ಅದು ಎಂಟು ವರ್ಷಗಳ ಹಿಂದೆ. ನಂತರ ಡಾ. ರಾಯ್‌ಲಟ್ ಲಂಡನ್ನಿನಲ್ಲಿನ ತನ್ನ ವೈದ್ಯಕೀಯ ವೃತ್ತಿಗೆ ಶರಣು ಹೊಡೆದು ನಮ್ಮಿಬ್ಬರನ್ನು ಕರೆದು ಕೊಂಡು ಸ್ಟೋಕ್‌ಮೋರನ್ನಿನ ತನ್ನ ವಂಶಜರ ನಿವಾಸದಲ್ಲಿ ಬಂದು ವಾಸಿಸತೊಡಗಿದ. ಜೀವನ ಸಾಗಿಸಲು ಸಾಕಾಗುವಷ್ಟಿದ್ದ ನನ್ನ ತಾಯಿ ಬಿಟ್ಟು ಹೋಗಿದ್ದ ಹಣದಿಂದಾಗಿ ನಾವು ಅತ್ಯಂತ ಸುಖಿಗಳೆಂದುಕೊಂಡಿದ್ದೆವು.

"ಆದರೆ ಏತನ್ಮಧ್ಯೆ ನನ್ನ ಮಲ ತಂದೆ ಬಹಳ ಬದಲಾದ. ಎಲ್ಲರೊಂದಿಗೆ ವಿನಾಕಾರಣ ಜಗಳ ಕಾಯುತೊಡಗಿದ. ಹೊಡೆದಾಟಗಳಾಗುತ್ತಿದ್ದ ಪ್ರಸಂಗಗಳೂ ಉಂಟು. ಹೀಗಾಗಿ ಇಡೀ ಊರಿನಲ್ಲಿ ಅವನನ್ನು ಮಾತನಾಡಿಸುವುದಿರಲಿ, ಎಲ್ಲರೂ ಅವನನ್ನು ಕಂಡರೆ ಹೆದರಿ ದೂರ ಸರಿಯುತ್ತಾರೆ. ಬಲಿಷ್ಠನಾದ ಆತ ಸಿಟ್ಟು ಬಂದಾಗ ಏನು ಮಾಡುತ್ತಾನೆಂದೇ ಹೇಳಲಿಕ್ಕಾಗದು. ಆದರೆ ಜಿಪ್ಸಿಗಳ ಮೇಲೆ ಅವನಿಗೆ ಅದೇನು ಮೋಹವೋ ಗೊತ್ತಿಲ್ಲ. ಅವರಿಗೆ ತನ್ನ ಎಸ್ಟೇಟಿನಲ್ಲಿ ಟೆಂಟುಗಳನ್ನು ಹಾಕಿಕೊಂಡು ವಾಸಿಸಲು ಅನುಮತಿ ಕೊಡುತ್ತಾನೆ. ಅವರೊಡನೆ ವಾರಗಟ್ಟಲೆ ಅಲೆಯಲೂ ಹೋಗುತ್ತಾನೆ. ಭಾರತದಿಂದ ಪ್ರಾಣಿಗಳನ್ನು ತರಿಸಿ ಸಾಕುವುದು ಅವನ ಇನ್ನೊಂದು ಹವ್ಯಾಸ. ಈಗ ಅವನ ಬಳಿ ಒಂದು ಚಿರತೆ ಹಾಗೂ ಒಂದು ಮಂಗವಿದೆ. ಅವೆರಡೂ ಜನರನ್ನು ಹೆದರಿಸುತ್ತ ಎಸ್ಟೇಟಿನ ತುಂಬ ಓಡಾಡುತ್ತಿರುತ್ತವೆ.

"ಇಂಥ ಪರಿಸ್ಥಿತಿಯಲ್ಲಿ ನನ್ನ ಹಾಗೂ ಜೂಲಿಯಾಳ ಜೀವನ ಹೇಗಿತ್ತೆಂಬುದನ್ನು ನೀವು ಊಹಿಸಬಹುದು. ನಮ್ಮ ಮನೆಯಲ್ಲಿ ಕೆಲಸ ಮಾಡಲು ಯಾವ ಆಳೂ ಸಿದ್ಧವಿರುತ್ತಿರಲಿಲ್ಲವಾಗಿ ಎಲ್ಲ ಕೆಲಸಗಳನ್ನೂ ನಾವೇ ಮಾಡಬೇಕಿತ್ತು. ಜೂಲಿಯಾ ಸಾಯುವ ವೇಳೆಗೆ ಕೇವಲ ಮೂವತ್ತು ವರ್ಷ ವಯಸ್ಸಿನವಳು. ಆದರೂ ತಲೆಗೂದಲೆಲ್ಲ ನರೆತಿದ್ದವು. ಈಗ ನನ್ನದೂ ಅದೇ ಪರಿಸ್ಥಿತಿ."

"ಅಂದರೆ, ನಿಮ್ಮ ಸೋದರಿ ಜೂಲಿಯಾ ತೀರಿಕೊಂಡಿದ್ದಾಳೆಯೇ?" ಹೋಮ್ಸ್ ಕೇಳಿದ.

"ಹೌದು ಎರಡು ವರ್ಷಗಳ ಹಿಂದೆಯೇ ತೀರಿಕೊಂಡಳು. ಆಕೆಯ ಸಾವಿನ ಬಗ್ಗೆಯೇ ನಾನು ನಿಮಗೆ ಹೇಳಲಿಚ್ಛಿಸುವುದು. ಸಾವಿಗೆ ಕೆಲವೇ ವಾರಗಳ ಮುನ್ನ ಆಕೆಯ ಮದುವೆಯು ನಿಶ್ಚಿತಾರ್ಥವಾಗಿತ್ತು. ನಮಗೆ ಬೇರೆ ಸ್ನೇಹಿತರಾರೂ ಇಲ್ಲದ್ದರಿಂದ ಆಗೀಗ ನಮ್ಮ ತಾಯಿಯ ಸೋದರಿ ಹೋನೋರಿಯಾ ವೆಸ್ಟ್‌ಫೇಲಳ ಮನೆಗೆ ಕೆಲ ದಿನಗಳ ಭೇಟಿ ಕೊಡಲು ನಮಗೆ ಡಾ. ರಾಯ್‌ಲಟ್ ಅನುಮತಿ ಕೊಡುತ್ತಿದ್ದ. ಜೂಲಿಯಾ ಎರಡು ವರ್ಷಗಳ ಹಿಂದೆ ಕ್ರಿಸ್‌ಮಸ್ ಹಬ್ಬಕ್ಕೆ ಅಲ್ಲಿ ಹೋಗಿದ್ದಾಗ ನೌಕಾಪಡೆಯ ಮೇಜರ್‌ನೊಬ್ಬನ ಪರಿಚಯವಾಗಿ ಇಬ್ಬರೂ ಮದುವೆಯಾಗಲು ನಿರ್ಧರಿಸಿದರು. ಈ ಸುದ್ದಿ ತಿಳಿದ ನನ್ನ ಮಲ ತಂದೆ ಆಕ್ಷೇಪವೆತ್ತಲಿಲ್ಲವಾದರೂ ಮದುವೆಗೆ ಕೇವಲ ಎರಡು ವಾರಗಳು ಉಳಿದಿರುವಾಗ ಆ ಭಯಾನಕ ಘಟನೆ ಸಂಭವಿಸಿ ನಾನು ಒಬ್ಬಂಟಿಯಾಗುವಂತಾಯಿತು."

[illegible] ದಿಂದ ಆಲಿಸುತ್ತ ಕುಳಿತಿದ್ದ ಹೋಮ್ಸ್ [illegible] ಕಣ್ತೆರೆದು "[illegible]

ತಪ್ಪದೆ ಹೇಳಿ" ಎಂದ.

ಸ್ಟೋನರ್ ಮುಂದುವರೆಸಿದಳು: "ಮನಸ್ಸಿನ ಮೇಲೆ ಆ ಘಟನೆಗಳೆಲ್ಲ ಆಳವಾಗಿ ಮೂಡಿವೆ: ನಾವು ಈಗ ವಾಸಿಸುವ ಮನೆಯ ಒಂದು ಭಾಗ ಮಾತ್ರ ವಾಸಕ್ಕೆ ಯೋಗ್ಯವಾಗಿದೆ. ಈ ಭಾಗದ ಕೆಳಗಿನ ಅಂತಸ್ತಿನಲ್ಲಿ ಮೂರು ಮಲಗುವ ಕೋಣೆಗಳಿವೆ. ಮೊದಲನೆಯದು ನನ್ನ ಮಲ ತಂದೆಯದಾಗಿದ್ದು, ಕೊನೆಯದು ನನ್ನದು. ನಡುವಿನ ಕೋಣೆಯೇ ನನ್ನ ಸೋದರಿಯ ದಾಗಿತ್ತು. ಒಂದರ ಪಕ್ಕ ಇನ್ನೊಂದಿರುವ ಈ ಮೂರು ಕೋಣೆಗಳ ಮಧ್ಯ ಸಂಪರ್ಕವಿರಲಿಲ್ಲ. ಆದರೆ ನಾನು ನನ್ನ ಕೋಣೆಗೆ ಹೋಗಬೇಕಾದರೆ ಉಳಿದೆರಡು ಕೋಣೆಗಳನ್ನು ದಾಟಿಯೇ ಹೋಗ ಬೇಕು. ಮೂರೂ ಕೋಣೆಗಳಿಗೆ ಹಿಂದಿನ ಹುಲ್ಲುಹಾಸಿನ ಅಂಗಳ ಕಾಣುವಂತೆ ಕಿಟಕಿ ಗಳಿದ್ದವು.

"ಆ ಭಯಂಕರ ಘಟನೆ ಸಂಭವಿಸಿದ ದಿನ ಡಾ. ರಾಯ್‌ಲಟ್ ಬೇಗನೆ ತನ್ನ ಕೋಣೆಗೆ ಹೋಗಿದ್ದ. ಆದರೆ ಅವನಿನ್ನೂ ಮಲಗಿರಲಿಲ್ಲವೆಂಬುದು ನಮಗೆ ಗೊತ್ತಿತ್ತು. ಅವನು ಸೇದುತ್ತಿದ್ದ ಇಂಡಿಯನ್ ಸಿಗಾರಿನ ಕಟುವಾಸನೆ ಪಕ್ಕ ದಲ್ಲಿಯೇ ಇದ್ದ ಜೂಲಿಯಾಳ ಕೋಣೆಗೂ ನುಗ್ಗುತ್ತಿತ್ತು. ಆಕೆಗೆ ಆ ಸಿಗಾರಿನ ವಾಸನೆ ಹಿಡಿಸುತ್ತಿರಲಿಲ್ಲ. ಆದ್ದರಿಂದ ಆಕೆ ಎದ್ದು ನನ್ನ ಕೋಣೆಗೆ ಬಂದಳು. ಸ್ವಲ್ಪ ಹೊತ್ತು ನಾವು ಆಕೆಯ ಮದುವೆಯ ಬಗ್ಗೆ ಮಾತನಾಡುತ್ತ ಕುಳಿತೆವು. ರಾತ್ರಿ ಹನ್ನೊಂದು ಗಂಟೆಗೆ ಜೂಲಿಯಾ ಎದ್ದು ಹೊರಡುವ ಮುನ್ನ ಕೇಳಿ-ದಳು.

"'ಹೆಲನ್ ಕಳೆದ ಕೆಲ ದಿನಗಳಿಂದ ಬೆಳಿಗ್ಗೆ ಸುಮಾರು ಮೂರು ಗಂಟೆಯ ಹೊತ್ತಿಗೆ ನನಗೆ ಪಕ್ಕದ ಕೋಣೆಯಿಂದಲೋ, ಹೊರಗೆ ಅಂಗಳ ದಿಂದಲೋ ಯಾರೋ ಸಿಳ್ಳು ಹಾಕಿದ ಶಬ್ದ ಕೇಳಿ ಬರುತ್ತಿದೆ. ನಿನಗೂ ಕೇಳಿಸಿರಬೇಕಲ್ಲವೆ.'

"'ಇಲ್ಲವಲ್ಲ. ಬಹುಶಃ ನಾನು ನಿನಗಿಂತ ಹೆಚ್ಚು ಗಾಢ ನಿದ್ರೆ ಮಾಡುತ್ತಿರಬೇಕು. ಅಥವಾ ಇದು ಹೊರಗೆ ಎಸ್ಟೇಟ್‌ನಲ್ಲಿರುವ ಜಿಪ್ಸಿಗಳ ಕುಂಟು ಚೇಷ್ಟೆಯಿದ್ದರೂ ಇರಬಹುದು.'

"'ಹಾಗೇ ಇರಬೇಕು. ಹೋಗಲಿ ಬಿಡು. ಇದೇನು ಅಂಥ ದೊಡ್ಡ ಸಂಗತಿಯಲ್ಲ' ಎಂದು ಹೇಳಿ ಜೂಲಿಯಾ ತನ್ನ ಕೋಣೆಗೆ ಹೋದಳು.

"ಅಂದು ರಾತ್ರಿ ಯಾಕೋ ಏನೋ, ನಿದ್ರೆ ನನ್ನ ಬಳಿ ಸುಳಿಯಲಿಲ್ಲ. ಹೊರಗೆ ಭಾರಿ ಮಳೆ ಗಾಳಿ ಆರಂಭವಾಗಿತ್ತು. ಎಷ್ಟೋ ಸಮಯದ ನಂತರ ಒಮ್ಮೆಲೆ ಜೂಲಿಯಾ ಜೋರಾಗಿ ಅರಚಿ ಕೊಂಡದ್ದು ಕೇಳಿಸಿತು. ತಟ್ಟನೆ ಎದ್ದು ಹೊರ ಗೋಡಿದೆ. ಆದರೆ ನಾನು ಹೊರಗೆ ಹೋಗಲು ನನ್ನ ಕೋಣೆಯ ಬಾಗಿಲು ತೆರೆಯುವಾಗ ಆಕೆ ವಿವರಿಸಿದ್ದಂಥ ಸಿಳ್ಳಿನ ಶಬ್ದ – ನಂತರ ಠಣ್ ಎಂಬ ಸಪ್ಪಳ ಕೇಳಿಸಿತು. ನಾನು ಹೊರ ಬಂದಾಗ ಜೂಲಿಯಾಳ ಕೋಣೆಯ ಬಾಗಿಲು ತೆರೆದಿತ್ತು. ಬಾಗಿಲಲ್ಲಿ ಆಕೆ ನಿಂತಿದ್ದಳು. ಅವಳ ಮುಖ ಗಾಬರಿಯಿಂದ ನಿಸ್ತೇಜ ವಾಗಿತ್ತು. ಮತ್ತೇರಿದವರಂತೆ ಓಲಾಡು ತ್ತಿದ್ದಳು. ನಾನು ಓಡಿ ಹೋಗಿ ಅವಳನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಆದರೆ ಅಷ್ಟ ರಲ್ಲೇ ಕುಸಿದುಬಿದ್ದಳು. ತೀವ್ರ ನೋವಿ ನಿಂದ ಹೊರಳಾಡುತ್ತಿದ್ದ ಆಕೆ 'ಅಯ್ಯೋ ದೇವರೆ! ಹೆಲನ್! ಆ ಉದ್ದನೆಯ ಪಟ್ಟಿ! ಚುಕ್ಕೆಗಳಿದ್ದ ಆ ಪಟ್ಟಿ!' ಎನ್ನುತ್ತ ಡಾ. ರಾಯ್‌ಲಟ್‌ನ ಕೋಣೆಯತ್ತ ಕೈ ತೋರಿದಳು. ಅಷ್ಟರಲ್ಲಿ ಆಕೆಯ ನೋವು ತೀವ್ರ ವಾಯಿತು. ನಾನು ನನ್ನ ಮಲತಂದೆಯನ್ನು ಕೂಗುತ್ತ ಅವನ ಕೋಣೆಯತ್ತ ಹೊರಟೆ. ಆದರೆ ಅವನಾಗಲೇ ಹೊರಬಂದಿದ್ದ. ಅವನು ಜೂಲಿಯಾಳ ಬಳಿ ಹೋದಾಗ ಅವಳು ಪ್ರಜ್ಞಾ ಹೀನಳಾಗಿದ್ದಳು. ತಕ್ಷಣ ಅವನು ವೈದ್ಯಕೀಯ ಚಿಕಿತ್ಸೆಗೆ ತೊಡಗಿದರೂ ಪ್ರಯೋಜನವಾಗಲಿಲ್ಲ. ಕೊನೆಗೂ ಪ್ರಜ್ಞೆ ಮರಳಲೇ ಇಲ್ಲ. ಸಾಯುವಾಗ ಆಕೆಯ ಎಡಗೈಯಲ್ಲಿ ಕಡ್ಡಿಪೆಟ್ಟಿಗೆ, ಬಲಗೈ

ಯಲ್ಲಿ ಗೀರಿದ್ದ ಬೆಂಕಿಕಡ್ಡಿ ಇದ್ದವು."

"ಅಂದರೆ ಸಾಯುವ ಮುನ್ನ ಆಕೆ ಕಡ್ಡಿ ಗೀರಿದ್ದಳೆಂದಂತಾಯಿತು. ಇರಲಿ, ಇದರ ಬಗ್ಗೆ ಕೋರೋನರ್ ಏನು ಹೇಳಿದ?"

"ಅವನು ಆಕೆಯ ಕೋಣೆಯ ಮೂಲೆ ಮೂಲೆಯನ್ನೂ ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿದ. ಸುತ್ತಮುತ್ತಲ ಪ್ರದೇಶದಲ್ಲಿ ಡಾ. ರಾಯ್‌ಲಟ್‌ನ ಬಗ್ಗೆ ಅಷ್ಟು ಒಳ್ಳೆಯ ಅಭಿಪ್ರಾಯ ಇಲ್ಲದಿರುವುದರಿಂದ ಈ ಕಾರ್ಯವನ್ನು ಬಲು ಎಚ್ಚರಿಕೆಯಿಂದ ಮಾಡಲಾಗಿತ್ತು. ಆದರೆ ಏನೂ ಸುಳಿವು ಸಿಗಲಿಲ್ಲ. ವಿಷ ಪ್ರಯೋಗವಾಗಿದೆಯೇ ಎಂಬುದನ್ನೂ ಪರಿಶೀಲಿಸಲಾಯಿತು. ಅದರಲ್ಲಿಯೂ ಏನೂ ಗೊತ್ತಾಗಲಿಲ್ಲ. ಆದ್ದರಿಂದ ಆಕೆ ಮಾನಸಿಕ ಆಘಾತದಿಂದ ಸತ್ತಿರಬೇಕೆಂಬುದು ನನ್ನ ಅಭಿಪ್ರಾಯ."

"ಮತ್ತೆ ಆ ಚುಕ್ಕೆ ಚುಕ್ಕೆಯ ಉದ್ದನೆಯ ಪಟ್ಟಿಯ ಬಗ್ಗೆ ನೀವೇನು ಹೇಳುತ್ತೀರಿ?" ಹೋಮ್ಸ್ ಕೇಳಿದ.

"ಅದು ಆಕೆ ಮಾನಸಿಕ ಅಸಮತೋಲನದಿಂದ ಬಡಬಡಿಸಿದ್ದಾಗಿರಬಹುದು. ನಮ್ಮ ಎಸ್ಟೇಟ್‌ನಲ್ಲಿರುವ ಜಿಪ್ಸಿಗಳು ಚುಕ್ಕೆಗಳಿರುವ ಕರವಸ್ತ್ರಗಳನ್ನು ತಲೆಗೆ ಸುತ್ತಿಕೊಳ್ಳುತ್ತಾರೆ. ಅದು ಆಕೆಗೆ ನೆನಪಾಗಿರಬಹುದು, ಅಷ್ಟೆ."

ಆಕೆಯ ಉತ್ತರದಿಂದ ಹೋಮ್ಸ್ ತೃಪ್ತನಾದಂತೆ ಕಾಣಲಿಲ್ಲ. ಆದರೂ ತಲೆಯಲ್ಲಾಡಿಸಿ "ಹೂಂ, ನಿಮ್ಮ ಕಥೆ ಮುಂದುವರಿಸಿ" ಎಂದ.

"ಆ ಘಟನೆ ಸಂಭವಿಸಿ ಈಗ ಎರಡು ವರ್ಷವಾಗಿದೆ. ಇತ್ತೀಚೆಗೆ ಪರ್ಸಿ ಆರ್ಮಿಟೇಜ್ ಎಂಬುವನೊಡನೆ ನನ್ನ ಮದುವೆ ನಿಶ್ಚಯವಾಗಿದೆ. ನನ್ನ ಮಲತಂದೆ ಈಗಲೂ ಆಕ್ಷೇಪವೆತ್ತಿಲ್ಲ. ಆದರೆ ಈಗ ಎರಡು ದಿನಗಳ ಹಿಂದೆ ನಾವು ವಾಸಿಸುವ ಮನೆಯ ಭಾಗವನ್ನು ದುರಸ್ತಿ ಮಾಡಲು ಆರಂಭಿಸಿದ್ದು ನನ್ನ ಕೋಣೆಯ ಗೋಡೆಯನ್ನು ಕೆಡವಿದ್ದಾರೆ. ಆದ್ದರಿಂದ ಈಗ ನಾನು ನನ್ನ ಸೋದರಿಯ ಕೋಣೆಯಲ್ಲಿ ಮಲಗಲಾರಂಭಿಸಿದ್ದೇನೆ. ನಿನ್ನೆ ರಾತ್ರಿ ಜೂಲಿಯಾಳ ಸಾವಿನ ಬಗ್ಗೆಯೇ ಯೋಚಿಸುತ್ತ ಮಲಗಿದ್ದೆ. ಸುತ್ತಮುತ್ತಲೆಲ್ಲ ನಿಶ್ಶಬ್ದ ವಾತಾವರಣವಿತ್ತು. ಆಗ ಒಮ್ಮೆಲೇ ಸಣ್ಣ ಸಿಳ್ಳಿನ ಶಬ್ದ ಕೇಳಿಬಂದಾಗ ನನ್ನ ಸ್ಥಿತಿ ಹೇಗಾಗಿರಬೇಡ! ತಟ್ಟನೆದ್ದು ಕಡ್ಡಿ ಗೀರಿದೆ. ಏನೂ ಕಾಣಿಸಲಿಲ್ಲ. ನಂತರ ರಾತ್ರಿಯಿಡೀ ನನಗೆ ನಿದ್ರೆ ಹತ್ತಿಲ್ಲ. ಬೆಳಗಾದ ತಕ್ಷಣ ನಿಮ್ಮನ್ನು ಭೇಟಿಯಾಗಲು ಧಾವಿಸಿ ಬಂದಿದ್ದೇನೆ."

"ಇದೆಲ್ಲ ವಿಚಿತ್ರವೆನಿಸುತ್ತದೆ. ಎಲ್ಲವನ್ನೂ ಸಂಪೂರ್ಣ ತಿಳಿದುಕೊಳ್ಳಬೇಕಾದ್ದು ಅವಶ್ಯ. ಅಂದ ಹಾಗೆ ಇಂದು ನಾನು ನಿಮ್ಮ ಮಲತಂದೆಗೆ ಗೊತ್ತಿಲ್ಲದಂತೆ ನಿಮ್ಮ ಮನೆಗೆ ಬಂದು ಪರೀಕ್ಷೆ ನಡೆಸಲು ಸಾಧ್ಯವಾಗಬಹುದೆ?"

"ಓಹೋ ಆಗಲಿ. ಹೇಗೂ ಅವನು ಇಂದು ಊರಲ್ಲಿಲ್ಲ."

"ಒಳ್ಳೆಯದಾಯಿತು. ಹಾಗಾದರೆ ನಾವು ಮಧ್ಯಾಹ್ನ ಅಲ್ಲಿಗೆ ಬರುತ್ತೇವೆ."

ಆಕೆ ಕೃತಜ್ಞತೆ ಸಲ್ಲಿಸಿ ಹೊರಟು ಹೋದಳು. ನಂತರ ನಾವಿಬ್ಬರೂ ಇದರ ಬಗ್ಗೆಯೇ ಮಾತನಾಡುತ್ತ ಕುಳಿತೆವು. ಕೆಲ ನಿಮಿಷಗಳಲ್ಲೇ ಧಡಾರೆಂದು ಬಾಗಿಲು ತೆರೆದುಕೊಂಡಿತು. ಹೊರಗೆ ದೈತ್ಯ ವ್ಯಕ್ತಿಯೊಬ್ಬ ನಿಂತಿದ್ದ. ವಯಸ್ಸಾಗಿದ್ದರೂ ಅವನು ಸಾಕಷ್ಟು ಶಕ್ತಿಶಾಲಿಯಾಗಿದ್ದ.

"ನಿಮ್ಮಿಬ್ಬರಲ್ಲಿ ಹೋಮ್ಸ್ ಯಾರು?" ಆತ ಕೇಳಿದ.

"ನಾನೇ ಸರ್, ದಯವಿಟ್ಟು ಕುಳಿತುಕೊಳ್ಳಿ."

"ಅದರ ಅವಶ್ಯಕತೆಯಿಲ್ಲ. ನಾನು ಡಾ. ರಾಯ್‌ಲಟ್. ಇಲ್ಲಿಗೆ ಹೆಲನ್ ಬಂದಿದ್ದಳೆಂದು ನನಗೆ ಗೊತ್ತಾಗಿದೆ. ಆಕೆ ನಿಮಗೆ ಏನೇನು ಹೇಳಿದ್ದಾಳೆ?"

ಹೋಮ್ಸ್ ಆತನ ಮಾತುಗಳನ್ನು ಕೇಳಿಸಿಕೊಂಡಿಲ್ಲವೆಂಬಂತೆ "ಹೊರಗೆ ತುಂಬ ಚಳಿ ಅಲ್ಲವೇ?" ಎಂದ.

ಡಾ. ರಾಯ್‌ಲಟ್‌ನ ಸಿಟ್ಟು ನೆತ್ತಿಗೇರಿತು. "ನನ್ನನ್ನು ಮೂರ್ಖನಾಗಿಸಬೇಕೆಂದು ಕೊಂಡೆಯಾ? ನಿನ್ನ ಬಗ್ಗೆ ನನಗೆಲ್ಲಾ ಗೊತ್ತಿದೆ. ನನ್ನ ವ್ಯವಹಾರದಲ್ಲಿ ನೀನು ಕೈ ಹಾಕಬೇಡ, ಈ ರಾಯ್‌ಲಟ್ ಬಹಳ ಅಪಾಯಕಾರಿ. ತಿಳಿದುಕೋ" ಎಂದವನೇ ಆತ ಬಂದಷ್ಟೇ ವೇಗದಿಂದ ಹೊರನಡೆದ.

ಆತ ಅತ್ತ ಹೋಗುತ್ತಲೇ ಹೋಮ್ಸ್ ಗಹಗಹಿಸಿ ನಕ್ಕು, "ವ್ಯಾಟ್ಸನ್, ನನಗೆ ಸ್ವಲ್ಪ ಕೆಲಸವಿದೆ, ಹೋಗಿಬರುತ್ತೇನೆ" ಎಂದವನೇ ಎದ್ದು ಹೋದ.

ಅವನು ತಿರುಗಿ ಬಂದಾಗ ಮಧ್ಯಾಹ್ನ ಸುಮಾರು ಒಂದು ಗಂಟೆಯಾಗಿತ್ತು. ಕೈಯಲ್ಲಿ ಏನೇನೋ ಗೀಚಿದ್ದ ಒಂದು ನೀಲಿ ಹಾಳೆಯಿತ್ತು.

"ನಾನು ಡಾ. ರಾಯ್‌ಲಟ್‌ನ ಹೆಂಡತಿಯ ಮೃತ್ಯುಪತ್ರವನ್ನು ಪರಿಶೀಲಿಸಿದ್ದೇನೆ. ಆಕೆ ಸತ್ತಾಗ ಅವಳ ವಾರ್ಷಿಕ ಆದಾಯ ಸುಮಾರು ೧೧೦೦ ಪೌಂಡುಗಳಷ್ಟಿತ್ತು. ಈಗ ಅದು ೭೫೦ ಪೌಂಡುಗಳಿಗಿಳಿದಿದೆ. ಅಂದರೆ ಅವಳ ಇಬ್ಬರೂ ಹುಡುಗಿಯರು ಮದುವೆಯಾಗಿ ತಲಾ ೨೫೦ ಪೌಂಡುಗಳ ವಾರ್ಷಿಕ ಆದಾಯಕ್ಕೆ ಹಕ್ಕುದಾರರಾಗಬಹುದು. ಆದರೆ ಹೀಗಾದರೆ ಉಳಿಯುವುದು ೨೫೦ ಪೌಂಡುಗಳ ಆದಾಯ ಮಾತ್ರ. ಇದು ಡಾ. ರಾಯ್‌ಲಟ್‌ನಿಗೆ ಸಾಲದು. ಆದ್ದರಿಂದಲೇ ಈ ವಿಚಿತ್ರ ವ್ಯವಹಾರಕ್ಕೆ ಆತ ಕೈ ಹಾಕಿರಬೇಕೆಂದು ತೋರುತ್ತದೆ. ನಡೆ ಹೋಗೋಣ. ಹಾಗೆಯೇ ನಿನ್ನ ರಿವಾಲ್ವರನ್ನು ತೆಗೆದುಕೋ" ಎಂದ.

ಇಬ್ಬರೂ ಹೊರಟು ಸ್ಟೋಕ್ ಮೋರನ್ ತಲಪಿದೆವು. ದಾರಿಯುದ್ದಕ್ಕೂ ಹೋಮ್ಸ್ ಗಾಢ ಆಲೋಚನೆಯಲ್ಲಿ ಮುಳುಗಿದ್ದ.

ಸ್ಟೋಕ್‌ಮೋರನ್ನಿನಲ್ಲಿ ಹೆಲನ್ ಸ್ಟೋನರ್ ನಮ್ಮನ್ನು ಬರಮಾಡಿಕೊಂಡ ನಂತರ ಹೋಮ್ಸ್ ಡಾ. ರಾಯ್‌ಲಟ್ ನಮ್ಮ ಮನೆಗೆ ಬಂದ.ದನ್ನು ಹೇಳಿ, "ಇಂದು ನೀವು ಅವರನ್ನು ಭೆಟ್ಟಿಯಾಗದಿರುವುದೇ ಒಳ್ಳೆಯದು." ಎಂದೂ ಸೂಚಿಸಿದ.

ನಂತರ ಹೋಮ್ಸ್ ಹೊರಗಿನಿಂದ ಮನೆಯೆಲ್ಲವನ್ನೂ ಪರೀಕ್ಷಿಸಿದ. ಹೆಲನ್‌ಳ ಕೋಣೆಯಿದ್ದ ಭಾಗವನ್ನು ದುರಸ್ತಿ ಮಾಡಿಸುವ ಅವಶ್ಯಕತೆಯಿದ್ದಂತೆ ತೋರಲಿಲ್ಲ. ಹೊರಗಿನಿಂದ, ಮುಚ್ಚಿದ್ದ ಕಿಟಕಿಗಳನ್ನೂ ಪರಿಶೀಲಿಸಿ ಯಾರೂ ಒಳಗೆ ಹೋಗಲು ಸಾಧ್ಯವಿಲ್ಲವೆಂಬುದನ್ನು ಖಚಿತಪಡಿಸಿಕೊಂಡ ನಂತರ ಒಳಗೆ ಹೋದೆವು. ಹೋಮ್ಸ್ ನೇರವಾಗಿನಡುವಿನ ಕೋಣೆಗೆ ನಡೆದ. ಅಲ್ಲಿ ಕೆಲ ನಿಮಿಷಗಳ ವರೆಗೆ ಎಲ್ಲವನ್ನೂ ಮೌನವಾಗಿ ಅವಲೋಕಿಸಿದ. ಕೊನೆಗೆ ಮೇಲೆ ಗೋಡೆಯಿಂದ ಇಳಿಬಿದ್ದಿದ್ದ ಹಗ್ಗದತ್ತ ಕೈ ತೋರಿಸಿ "ಅದೇನು ಆಳುಗಳನ್ನು. ಕರೆಯುವ ಗಂಟೆಯ ಹಗ್ಗವೆ?" ಎಂದು ಕೇಳಿದ.

"ಹೌದು. ಅದನ್ನು ಡಾ. ರಾಯ್‌ಲಟ್ ಹಾಕಿಸಿದ್ದಾನೆ" ಹೆಲನ್ ಉತ್ತರಿಸಿದಳು. ಆ ಹಗ್ಗದ ತುದಿ ಸರಿಯಾಗಿ ಮಂಚದ ಮೇಲಿದ್ದ ತಲೆದಿಂಬಿನ ಮೇಲೆ ಇಳಿಬಿದ್ದಿತ್ತು.

"ಅದರ ಅವಶ್ಯಕತೆ ಇರಲಿಲ್ಲವೆಂದು ತೋರುತ್ತದೆ" ಎನ್ನುತ್ತ ಹೋಮ್ಸ್ ತನ್ನ ಭೂತಗನ್ನಡಿ ಹಿಡಿದು ನೆಲವನ್ನು ಪರೀಕ್ಷಿಸತೊಡಗಿದ. ಅದೇ ರೀತಿ ಗೋಡೆ ಮತ್ತು ಮಂಚಗಳನ್ನೂ ಪರೀಕ್ಷಿಸಿದ. ಕೊನೆಗೆ ಆ ಹಗ್ಗವನ್ನೊಮ್ಮೆ ಎಳೆದು ನೋಡಿದ.

"ಅರೆ, ಇದು ಗಂಟೆಯಲ್ಲವಲ್ಲ!" ಎಂದ.

"ಅಂದರೆ?"

"ಸುಮ್ಮನೆ ಈ ಹಗ್ಗವನ್ನು ಇಳಿಬಿಟ್ಟಿದ್ದಾರೆ. ಅಲ್ಲದೆ ಈ ಎರಡು ಕೋಣೆಗಳ ನಡುವೆ ಮಾಳಿಗೆಗೆ ಸಮೀಪ ಒಂದು ಕಿಟಕಿಯಿದೆಯಲ್ಲ. ಎಷ್ಟು ವಿಚಿತ್ರ" ನಮಗೂ ಅದು ವಿಚಿತ್ರವಾಗಿಯೆ ತೋರಿತು. ಎರಡೂ ಕೋಣೆಗಳ ನಡುವೆ ಮೇಲೆ ಗೋಡೆಯಲ್ಲಿ ಚಿಕ್ಕ ಕಿಟಕಿಯಂಥ ಒಂದು ಕಿಂಡಿ ಕೊರೆದು ಅಲ್ಲಿಂದ ಆ ಹಗ್ಗವನ್ನು ಇಳಿಬಿಡಲಾಗಿತ್ತು. "ಈ ಬದಲಾವಣೆಗಳೆಲ್ಲ ಇತ್ತೀಚಿನ ಕೆಲ ವರ್ಷಗಳಲ್ಲಿ ಆದಂಥವು" ಹೆಲನ್ ಹೇಳಿದಳು.

"ಇರಬಹುದು. ನಾವೀಗ ಡಾ. ರಾಯ್‌ಲಟ್‌ನ ಕೋಣೆಗೆ ಹೋಗೋಣ" ಎಂದ ಹೋಮ್ಸ್. ಅವನ ಕೋಣೆಯನ್ನು ಪರೀಕ್ಷಿಸಿದ ನಂತರ "ಡಾ. ರಾಯ್‌ಲಟ್ ಬೆಕ್ಕು ಸಾಕಿದ್ದಾನೆಯೆ?" ಎಂದು ಕೇಳಿದ.

"ಇಲ್ಲವಲ್ಲ" ಆಶ್ಚರ್ಯದಿಂದ ನುಡಿದಳು ಹೆಲನ್

"ಹಾಗಾದರೆ ಇದನ್ನೇಕೆ ಇಟ್ಟುಕೊಂಡಿದ್ದಾನೆ?" ಎಂದು ಒಂದು ಸಣ್ಣ ಬಸಿಯುತ್ತ ಕೈ ಮಾಡಿ ತೋರಿಸಿದ. ಅದರಲ್ಲಿ ಹಾಲು ಇತ್ತು. ಹೆಲನ್‌ಳಿಗೆ ಉತ್ತರ ಹೊಳೆಯದೆ ಸುಮ್ಮನಾದಳು.

"ಇರಲಿ, ನಾವಿನ್ನು ಹೋಗೋಣ" ಎನ್ನುತ್ತ ಹೋಮ್ಸ್ ಎದ್ದ. ಅಷ್ಟರಲ್ಲೇ ಮಂಚದ ಹತ್ತಿರ ಬಿದ್ದ ನಾಯಿಯ ಕುತ್ತಿಗೆ ಪಟ್ಟಿ ಅವನ ಕಣ್ಣಿಗೆ ಬಿತ್ತು. ಅದರ ತುದಿಯನ್ನು ಗಂಟುಹಾಕಲಾಗಿತ್ತು. ಅದನ್ನು ಪರೀಕ್ಷಿಸಿದ ಹೋಮ್ಸ್‌ನ ಮುಖ ಗಂಭೀರವಾಯಿತು. ಎಲ್ಲರೂ ಹೊರಬಂದೆವು. ಕೆಲ ನಿಮಿಷಗಳ ಆಲೋಚನೆಯ ನಂತರ ಹೋಮ್ಸ್ ಹೇಳಿದ.

"ಮಿಸ್. ಸ್ಟೋನರ್ ಇಂದು ನಾನು ಮತ್ತು ನನ್ನ ಗೆಳೆಯ ವ್ಯಾಟ್ಸನ್ ಇಬ್ಬರೂ ನಿಮ್ಮ ಈಗಿನ ಮಲಗುವ ಕೋಣೆಯಲ್ಲಿ ರಾತ್ರಿ ಕಳೆಯಬೇಕಾಗುತ್ತದೆ". ನಮಗಿಬ್ಬರಿಗೂ ಆಶ್ಚರ್ಯದಿಂದ ಮಾತೇ ಹೊರಡಲಿಲ್ಲ. ಹೋಮ್ಸ್ ಅದನ್ನು ಗಮನಿಸಲಿಲ್ಲ. "ಈ ಮನೆಯ ಎದುರಿನಲ್ಲಿರುವ ವಸತಿಗೃಹದ ಕೋಣೆಯನ್ನು ನಾವು ಬಾಡಿಗೆಗೆ ಒಡೆಯುತ್ತೇವೆ. ಆ ಕೋಣೆಯ ಕಿಟಕಿಯಿಂದ ನಿಮ್ಮ ಕೋಣೆ ಕಾಣಿಸುತ್ತದೆ. ಇಂದು ನೀವು ತಲೆನೋವಿನ ನೆಪ ಹೇಳಿ ಬೇಗನೆ ಕೋಣೆಗೆ ಹೋಗಿ. ನಂತರ ನಿಮ್ಮ ಮಲತಂದೆ ತನ್ನ ಕೋಣೆಗೆ ಹೋದುದನ್ನು ಖಚಿತ ಪಡಿಸಿಕೊಂಡು ನಿಮ್ಮ ಕಿಟಕಿ ತೆರೆದು ದೀಪ ಅಲ್ಲಾಡಿಸಿ ನನಗೆ ಸೂಚನೆ ಕೊಡಿ. ನಂತರ ನೀವು ನಿಮ್ಮ ಮೊದಲಿನ ಕೋಣೆಗೆ ಹೋಗಿ ಮಲಗಿಕೊಳ್ಳಿ. ಒಂದು ರಾತ್ರಿ ನೀವು ಹೇಗಾದರೂ ಅಲ್ಲಿ ಕಳೆಯಲೇಬೇಕು. ಇಷ್ಟು ಮಾಡಲು ನಿಮ್ಮಿಂದ ಸಾಧ್ಯವಾಗುತ್ತದಲ್ಲವೆ?"

ಹೆಲನ್ ಆಗಲೆಂಬಂತೆ ತಲೆಯಲ್ಲಾಡಿಸಿದಳು.

ನಂತರ ನಾವಿಬ್ಬರೂ ವಸತಿಗೃಹಕ್ಕೆ ಹೋಗಿ ಕೋಣೆಯೊಂದನ್ನು ಬಾಡಿಗೆಗೆ ಒಡಿದೆವು. ಕೆಲ ಸಮಯದ ನಂತರ ಡಾ. ರಾಯ್‌ಲಟ್ ತಿರುಗಿ ಬಂದಿದ್ದು ಕಾಣಿಸಿತು.

ಒಂಬತ್ತು ಗಂಟೆಯ ವೇಳೆಗೆ ರಾಯ್‌ಲಟ್ ನಿವಾಸದ ದೀಪಗಳೆಲ್ಲ ಆರಿದವು. ಸುಮಾರು ಎರಡು ಗಂಟೆಗಳ ನಂತರ, ಮಧ್ಯದ ಕೋಣೆಯಿಂದ ಬೆಳಕು ಕಾಣಿಸಿತು. ವಸತಿಗೃಹದ ಮಾಲೀಕನಿಗೆ ಸುಳ್ಳು ಹೇಳಿ ಇಬ್ಬರೂ ಹೊರಟೆವು. ಎಸ್ಟೇಟನ್ನು ಪ್ರವೇಶಿಸುವುದು ಕಷ್ಟವಾಗಲಿಲ್ಲ. ಆದರೆ ಹುಲ್ಲು ಹಾಸಿನ ಮೇಲೆ ನಡೆಯುತ್ತ ನಮ್ಮ ಗುರಿಯತ್ತ ಸಾಗುತ್ತಿರುವಾಗ ಒಮ್ಮೆಲೇ ಗಿಡಗಳ ಮಧ್ಯದಿಂದ ಮಗುವೊಂದು ಜಿಗಿದು ಓಡಿಹೋದಂತಾಯಿತು. ಇಬ್ಬರೂ ಬೆಚ್ಚಿಬಿದ್ದೆವು. ಸರಿಯಾಗಿ ನೋಡಿದಾಗ ಅದು ರಾಯ್‌ಲಟ್ ಸಾಕಿದ್ದ ದೊಡ್ಡ ಕೋತಿಯಾಗಿತ್ತು. ನಂತರ ಸಾವರಿಸಿಕೊಂಡು ಕಿಟಕಿಯ ಮೂಲಕ ಕೋಣೆಯನ್ನು ಪ್ರವೇಶಿಸಿದೆವು. ಹೆಲನ್ ನಾವು ಹೇಳಿದ್ದಂತೆ ಮೊದಲೇ ಕಿಟಕಿಯ ಬಾಗಿಲನ್ನು ತೆಗೆದಿಟ್ಟಿದ್ದಳು.

ಒಳ ಹೋದ ನಂತರ ಕೊಂಚವೂ ಶಬ್ದ ಮಾಡದಂತೆ ಹೋಮ್ಸ್ ಎಚ್ಚರಿಸಿದ. ಒಮ್ಮೆ ಆರಿಸಿದ ಮೇಲೆ ಮತ್ತೆ ದೀಪವನ್ನು ಹಚ್ಚುವಂತಿರಲಿಲ್ಲ. ಏಕೆಂದರೆ ರಾಯ್‌ಲಟ್‌ನಿಗೆ ಆತನ ಮತ್ತು ನಾವಿದ್ದ ಕೋಣೆಯ ಮಧ್ಯದ ಕಿಂಡಿಯಿಂದ ದೀಪ ಹಚ್ಚಿದ ಸುಳಿವು ಸಿಗುತ್ತಿತ್ತು. ಹೋಮ್ಸ್ ತನ್ನೊಂದಿಗೆ ಉದ್ದ ಕೋಲೊಂದನ್ನು ತಂದಿದ್ದ. ಅದನ್ನು ಬೆಂಕಿಪೆಟ್ಟಿಗೆಯೊಂದಿಗೆ ಮಂಚದ ಮೇಲಿಟ್ಟು ಪಕ್ಕದಲ್ಲಿ ಕುಳಿತುಕೊಂಡ. ನಾನು ರಿವಾಲ್ವರಿನೊಂದಿಗೆ ಕುರ್ಚಿಯಲ್ಲಿ ಕುಳಿತೆ. ನಂತರ ಅವನು ದೀಪ ಆರಿಸಿಬಿಟ್ಟ. ಕಿಟಕಿಯನ್ನೂ ಹಾಕಿದ ನಂತರ ಏನೂ ಕಾಣಿಸದಷ್ಟು ಕತ್ತಲೆ. ಸುತ್ತಲೂ ಸಂಪೂರ್ಣ ನಿಶ್ಶಬ್ದತೆ. ದೂರದ ಗಡಿಯಾರದ ಗೋಪುರದಿಂದ ಹನ್ನೆರಡು, ಒಂದು, ಎರಡು, ಮೂರು ಗಂಟೆಗಳಾದ ಸದ್ದು ಕೇಳಿದ

ತ್ತಿತ್ತು. ಇಬ್ಬರೂ ಚಡಪಡಿಸುತ್ತ ಕುಳಿತಿದ್ದೆವು. ತಟ್ಟನೆ ಕೋಣೆಯಲ್ಲಿ ಕಿಂಡಿಯ ಮುಖಾಂತರ ಕ್ಷೀಣ ಬೆಳಕು ಬಿತ್ತು. ಪಕ್ಕದ ಕೋಣೆಯಲ್ಲಿ ಯಾರೋ ದೀಪ ಹೊತ್ತಿಸಿದ್ದರು. ಸಣ್ಣ ಸಪ್ಪಳವೂ ಕೇಳಿಸಿತು. ಅರ್ಧಗಂಟೆಯವರೆಗೆ ಏನೂ ಆಗಲಿಲ್ಲ. ನಂತರ ಒಮ್ಮೆಲೆ 'ಹಿಸ್' ಎಂಬ ಸದ್ದು ಕೇಳಿಸಿತು. ತಕ್ಷಣ ಹೋಮ್ಸ್ ಎದ್ದು ಕಡ್ಡಿಗೀರಿ ಕೋಲನ್ನು ಹಗ್ಗದತ್ತ ಬೀಸುತ್ತ,

"ನೋಡಿದೆಯಾ ವ್ಯಾಟ್ಸನ್, ನೋಡಿದೆಯಾ?" ಎಂದು ಕೂಗಿದ.

ನನಗೇನೂ ಕಾಣಿಸಲಿಲ್ಲ. ಆದರೆ ಅವನು ದೀಪ ಹಚ್ಚಿದ ಕೂಡಲೆ ಸಣ್ಣ ಸಿಳ್ಳಿನ ಶಬ್ದ ಮಾತ್ರ ಕೇಳಿಸಿತ್ತು. ಕಣ್ಣಿನ ಮೇಲೆ ಒಮ್ಮೆಲೇ ಬೆಳಕು ಬಿದ್ದಿದ್ದರಿಂದ ಕೆಲ ಕ್ಷಣಗಳವರೆಗೆ ಏನನ್ನೂ ನೋಡಲು ಸಾಧ್ಯವಾಗಿರಲಿಲ್ಲ. ನನಗೆ ಪರಿಸ್ಥಿತಿಯ ಅರಿವಾಗುವ ವೇಳೆಗೆ ಹೋಮ್ಸ್ ಹೊಡೆಯುವುದನ್ನು ನಿಲ್ಲಿಸಿದ್ದ. ಅವನ ಮುಖ ಮಾತ್ರ ಭೀತಿಯಿಂದ ಬಿಳಿಚಿಕೊಂಡಿತ್ತು. ಕೆಲ ಕ್ಷಣಗಳಲ್ಲೇ ಡಾ. ರಾಯ್‌ಲಟ್‌ನ ಕೋಣೆಯಿಂದ ದೊಡ್ಡ ಚೀತ್ಕಾರ ಕೇಳಿಬಂತು. ಪಕ್ಕದ ಹಳ್ಳಿಯಲ್ಲಿದ್ದವರಿಗೂ ಅದು ಕೇಳಿಸಿತೆಂದು ನಂತರ ನಮಗೆ ತಿಳಿದುಬಂತು. ಅದನ್ನು ಕೇಳಿ ನಾವಿಬ್ಬರೂ ಪರಸ್ಪರ ಮುಖವನ್ನು ನೋಡಿಕೊಂಡೆವು.

"ಇದೆಲ್ಲ ಏನು?" ನಾನು ಪಿಸುಗುಟ್ಟಿದೆ.

"ನಡೆ, ರಾಯ್‌ಲಟ್‌ನ ಕೋಣೆಗೆ ಹೋಗೋಣ. ನಿನ್ನ ಪಿಸ್ತೂಲನ್ನೂ ತೆಗೆದುಕೋ" ಹೋಮ್ಸ್ ಹೇಳಿದ.

ಒಳಗೆ ಹೋದಾಗ ಡಾ. ರಾಯ್‌ಲಟ್ ಕುರ್ಚಿಯ ಮೇಲೆ ಕುಳಿತಿದ್ದ. ಅವನ ತೊಡೆಯ ಮೇಲೆ ನಾವು ಮಧ್ಯಾಹ್ನ ನೋಡಿದ್ದ ಕುತ್ತಿಗೆ ಪಟ್ಟಿಯಿತ್ತು. ಅವನ ದೃಷ್ಟಿ ಸೀಲಿಂಗಿನ ಮೇಲಿತ್ತು. ಮುಖದಲ್ಲಿ ಭಯಾನಕ ಕಳೆಯಿತ್ತು. ಅವನ ಹಣೆಯ ಸುತ್ತ ಒಂದು ಚುಕ್ಕೆಚುಕ್ಕೆಯ ವಿಚಿತ್ರ ಪಟ್ಟಿಯಿತ್ತು.

"ಓಹ್, ಆ ಚುಕ್ಕೆ ಚುಕ್ಕೆಯ ಪಟ್ಟಿ" ಹೋಮ್ಸ್ ಪಿಸುಗುಟ್ಟಿದ.

ನಾವಿಬ್ಬರೂ ಒಳಗೆ ಪ್ರವೇಶಿಸಿದೆವು. ಆದರೆ ಡಾ. ರಾಯ್‌ಲಟ್‌ನಲ್ಲಿ ಯಾವುದೇ ರೀತಿಯ ಚಲನೆ ಕಂಡು ಬರಲಿಲ್ಲ. ನಾವು ಇನ್ನೊಂದು ಹೆಜ್ಜೆ ಮುಂದಿಡುತ್ತಿದ್ದಂತೆಯೇ ಅವನ ಹಣೆಯ ಸುತ್ತಲಿನ ಪಟ್ಟಿ ಚಲಿಸಲಾರಂಭಿಸಿತು. ಕ್ಷಣಾರ್ಧದಲ್ಲೇ ಅವನ ಕೂದಲಿನ ಮಧ್ಯದಿಂದ ವಜ್ರದ ಆಕೃತಿಯ ವಿಷಸರ್ಪದ ತಲೆ ಕಾಣಿಸಿಕೊಂಡಿತು.

"ಕೊಳಚೆ ಹಾವು" ಹೋಮ್ಸ್ ಚೀರಿದ, "ಭಾರತದ ಅತ್ಯಂತ ಭೀಕರ ವಿಷಸರ್ಪ. ಅದು ಕಚ್ಚಿದ ಹತ್ತು ಸೆಕೆಂದುಗಳಲ್ಲೇ ಆತ ಸತ್ತಿದ್ದಾನೆ. ಬೇರೆಯವರಿಗಾಗಿ ಒಡ್ಡಿದ ಬಲೆಯಲ್ಲಿ ತಾನೇ ಸಿಕ್ಕು ಬಿದ್ದಿದ್ದಾನೆ" ಎನ್ನುತ್ತ ಮುಂದೆ ಹೋಗಿ ಡಾ. ರಾಯ್‌ಲಟ್‌ನ ತೊಡೆಯ ಮೇಲಿದ್ದ ಕುತ್ತಿಗೆಪಟ್ಟಿಯನ್ನೆಳೆದುಕೊಂಡ. ತುದಿಯಲ್ಲಿದ್ದ ಉರುಳನ್ನು ಸರ್ಪದ ಕುತ್ತಿಗೆಯ ಸುತ್ತ ಹಾಕಿ ಬಿಗಿ ಮಾಡಿ ಎಳೆದ. ನಂತರ ಅದನ್ನೊಯ್ದು ಕೋಣೆಯಲ್ಲಿದ್ದ ಕಬ್ಬಿಣದ ಕಪಾಟಿನಲ್ಲೊಗೆದು ಬಾಗಿಲು ಮುಚ್ಚಿದ.

ಭೀತಿಯಿಂದ ಕಂಗೆಟ್ಟಿದ್ದ ಹೆಲನ್‌ಳಿಗೆ ವಿಷಯ ತಿಳಿಸಿ ಆಕೆಯನ್ನು ಅವಳ ಚಿಕ್ಕಮ್ಮನ ಮನೆಗೆ ಕಳಿಸಿಕೊಟ್ಟೆವು. ರಾಯ್‌ಲಟ್‌ನ ಸಾವಿನ ತನಿಖೆ ನಡೆಸಿದ ವೈದ್ಯರು ಆತ ತನ್ನ ಸಾಕುಪ್ರಾಣಿಯೊಂದಿಗೆ ಆಟವಾಡುತ್ತಿದ್ದಾಗ ಸತ್ತನೆಂದು ಅಭಿಪ್ರಾಯಪಟ್ಟರು. ಇಷ್ಟಾದರೂ ನನಗೆ ಆ ರಾತ್ರಿ ಏನಾಯಿತೆಂಬುದು ಸಂಪೂರ್ಣವಾಗಿ ಗೊತ್ತಿರಲಿಲ್ಲ. ಮರುದಿನ ನಾವು ತಿರುಗಿ ಲಂಡನ್ನಿಗೆ ಬರುವಾಗ ಹೋಮ್ಸ್ ವಿವರಗಳನ್ನೆಲ್ಲ ತಿಳಿಸಿದ. ಅದನ್ನು ಅವನ ಮಾತಿನಲ್ಲೇ ಕೇಳಿ:

"ಎಸ್ಟೇಟಿನಲ್ಲಿ ಜಿಪ್ಸಿಗಳ ವಾಸ್ತವ್ಯ ಮತ್ತು ಚುಕ್ಕೆ ಪಟ್ಟಿಯ ವಿಷಯ ಕೇಳಿ ನಾನು ತಪ್ಪು ನಿರ್ಣಯಕ್ಕೆ ಬಂದಿದ್ದೆ. ಆದರೆ ಮುಚ್ಚಿದ ಕಿಟಕಿಯನ್ನು ತೆರೆದು ಯಾರಿಗೂ ಒಳಬರಲು ಸಾಧ್ಯವಿಲ್ಲವೆಂದು ತಿಳಿದಾಗ ನಾನು ವಿಚಾರಮಾಡ

ತೊಡಗಿದೆ. ಆಗ ಮಧ್ಯದ ರೂಮಿನಲ್ಲಿದ್ದ ನಿರುಪಯೋಗಿ ಹಗ್ಗ ಹಾಗೂ ಸಣ್ಣ ಕಿಂಡಿ ನನ್ನ ಗಮನ ಸೆಳೆದುವು. ಎರಡು ಕೋಣೆಗಳ ಮಧ್ಯ ಸಂಪರ್ಕವಿಲ್ಲವೆಂದು ಹೆಲನ್ ಹೇಳಿದ್ದಳು. ಆದರೆ ಜೂಲಿಯಾ ಸಾಯುವ ರಾತ್ರಿ, ರಾಯ್‌ಲಟ್‌ನ ಸಿಗಾರಿನ ವಾಸನೆ ಹಿಡಿಸಲಾಗದೆ ತನ್ನ ಕೋಣೆಗೆ ಬಂದಿದ್ದಳೆಂದೂ ಹೇಳಿದ್ದಳು. ಸಿಗಾರಿನ ವಾಸನೆ ಬರಬೇಕಾದರೆ ಸಂಪರ್ಕವಿರಲೇಬೇಕಲ್ಲವೆ? ಆದ್ದರಿಂದ ಸಣ್ಣ ಕಿಂಡಿಯೊಂದು ಇರಬೇಕೆಂದು ನಾನು ಮೊದಲೇ ಊಹಿಸಿದ್ದೆ. ಅದೂ ಅಲ್ಲದೆ, ಆ ಕೋಣೆಯಲ್ಲಿದ್ದ ಮಂಚವನ್ನು ಅಲುಗಾಡಿಸಲು ಬಾರದಂತೆ ನೆಲದಲ್ಲಿ ಹೂಳಲಾಗಿತ್ತು. ಆಗ ನನ್ನ ವಿಚಾರ ಸರಣಿ ಬದಲಾಯಿತು. ಕಿಂಡಿಯಿಂದ ಮಂಚಕ್ಕೆ ಸಂಪರ್ಕ ಕಲ್ಪಿಸುವುದಕ್ಕಾಗಿ ಆ ಹಗ್ಗವನ್ನು ಬಳಸಿಕೊಳ್ಳಲಾಗುತ್ತಿತ್ತು. ಆಗ ನನಗೆ ಹಾವನ್ನು ಬಳಸಬಹುದೆಂಬ ವಿಷಯ ಹೊಳೆಯಿತು. ರಾಯ್‌ಲಟ್ ಭಾರತದಿಂದ ಪ್ರಾಣಿಗಳನ್ನು ತರಿಸಿಕೊಳ್ಳುವ ವಿಷಯ ಇದಕ್ಕೆ ಪುಷ್ಟಿ ನೀಡಿತು. ಭೀಕರ ವಿಷಸರ್ಪದ ಕಡಿತವನ್ನು ಪತ್ತೆ ಹಚ್ಚುವುದು ಯಾವ ವೈದ್ಯನಿಗೂ ಸಾಧ್ಯವಿಲ್ಲ. ಅದು ಕಚ್ಚಿದಲ್ಲಿ ಎರಡು ಅತಿಚಿಕ್ಕ ಚುಕ್ಕೆಯಂಥ ತೂತುಗಳಿರುತ್ತವೆ ಅಷ್ಟೆ. ಅದು ಸಾಮಾನ್ಯವಾಗಿ ಯಾರ ಕಣ್ಣಿಗೂ ಬೀಳುವುದಿಲ್ಲ. ಅಲ್ಲದೆ ಕಚ್ಚಿದ ವ್ಯಕ್ತಿ ತಕ್ಷಣ ಸಾವನ್ನಪ್ಪುತ್ತಾನೆ ಎಂಬುದು ರಾಯ್‌ಲಟ್‌ನಿಗೆ ಸಹಾಯಕಾರಿ ಅಂಶವಾಗಿತ್ತು. ಅವನು ತನ್ನಲ್ಲಿದ್ದ ವಿಷಸರ್ಪವನ್ನು ಕಿಂಡಿಯ ಮೂಲಕ ಕೋಣೆಯ ಒಳಗೆ ತೂರಿಸುತ್ತಿದ್ದ. ಅದು ಹಗ್ಗದಗುಂಟ ಮಂಚದ ಮೇಲೆ ಬರುತ್ತಿತ್ತು. ಅದು ಮಂಚದ ಮೇಲಿದ್ದವರನ್ನು ಒಂದಲ್ಲ ಒಂದು ದಿನ ಕಚ್ಚುವುದು ಖಚಿತ. ಅದನ್ನು ತಿರುಗಿ ಕರೆಯಲು ಅವನು ಸಿಳ್ಳು ಹಾಕುತ್ತಿದ್ದ. ಸಿಳ್ಳು ಹಾಕಿದ ಕೂಡಲೇ ಹಾಲಿನ ಆಶೆಯಿಂದ ಅದು ತಿರುಗಿ ಬರುವಂತೆ ಅದಕ್ಕೆ ತರಬೇತಿ ನೀಡಿದ್ದ.

"ಅವನ ಕೋಣೆಯನ್ನು ಪ್ರವೇಶಿಸುವ ಮುನ್ನವೆ ನಾನು ಇದನ್ನೆಲ್ಲಾ ನಿರ್ಧರಿಸಿದ್ದೆ. ಅವನ ಕೋಣೆಯಲ್ಲಿ ಕುರ್ಚಿಯನ್ನು ಪರಿಶೀಲಿಸಿದಾಗ ಅದರ ಮೇಲೆ ಅವನ ಹೆಜ್ಜೆಯ ಗುರುತುಗಳಿದ್ದುವು. ಅಂದರೆ ಅವನು ಅದರ ಮೇಲೆ ನಿಂತು ಕಿಂಡಿಯನ್ನು ತಲುಪುತ್ತಿದ್ದ. ತುದಿಯಲ್ಲಿ ಉರುಳು ಹಾಕಿದ್ದ ಕುತ್ತಿಗೆ ಪಟ್ಟಿ, ಕಬ್ಬಿಣದ ಕಪಾಟು ಮತ್ತು ಹಾಲಿನ ಬಸಿ ನನ್ನಲ್ಲಿ ಉಳಿದಿದ್ದ ಸಂಶಯಗಳನ್ನು ಸಂಪೂರ್ಣವಾಗಿ ನಿವಾರಿಸಿ ಬಿಟ್ಟವು. ಜೂಲಿಯಾ ಸತ್ತ ದಿನ ಹೆಲನ್‌ಳಿಗೆ ಕೇಳಿಸಿದ ಠಸ್ ಎಂಬ ಶಬ್ದ, ಡಾ. ರಾಯ್‌ಲಟ್ ಸರ್ಪವನ್ನು ಒಳಗೆ ಎಸೆದು ಕಪಾಟನ್ನು ಮುಚ್ಚಿದಾಗ ಆದದ್ದು. ಅದನ್ನು ಒರೆಗೆ ಹಚ್ಚಲು ನಿರ್ಧರಿಸಿ ನಾನು ಕಾವಲು ಕಾಯುವ ನಿರ್ಧಾರ ಕೈಗೊಂಡೆ. ನನಗೆ ಹಿಸ್ ಎಂಬ ಶಬ್ದ ಕೇಳಿಸಿದಾಗ ತಕ್ಷಣ ಕಡ್ಡಿಗೀರಿ ಕೋಲಿನಿಂದ ಹಾವನ್ನು ಚೆನ್ನಾಗಿ ಹೊಡೆದೆ."

"ಅಂದರೆ ಅದು ತಿರುಗಿ ಹೋಗಲೆಂದಲ್ಲವೆ?" ನಾನು ಮಧ್ಯ ಬಾಯಿ ಹಾಕಿದೆ.

"ಅಷ್ಟೇ ಅಲ್ಲ, ಸಿಟ್ಟಿನಿಂದ ಅದು ತನ್ನ ಯಜಮಾನನ ಮೇಲೆಯೇ ತಿರುಗಿ ಬೀಳಲೆಂದು. ಏಟು ಚೆನ್ನಾಗಿಯೇ ಬಿದ್ದಿದ್ದರಿಂದ ಅದು ಕೆರಳಿ ಹಿಂತಿರುಗಿತು. ಅಲ್ಲಿ ರಾಯ್‌ಲಟ್ ಕಾಣಸಿದಾಗ ಅವನ ಮೇಲೆ ತಿರುಗಿ ಬಿತ್ತು. ಹೀಗೆ ಒಂದರ್ಥದಲ್ಲಿ ಡಾ. ರಾಯ್‌ಲಟ್‌ನ ಸಾವಿಗೆ ನಾನೇ ಕಾರಣ. ಆದರೆ ಅದರ ಬಗ್ಗೆ ನನಗೇನು ಪಶ್ಚಾತ್ತಾಪ ಪಡುವುದಿಲ್ಲ ಬಿಡು" ಎಂದ ಹೋಮ್ಸ್. ✡



ಗಣಿತಜ್ಞರು ೯

ಶ್ರೀನಿವಾಸ ರಾಮಾನುಜನ್

ಗಣಿತಾಶ್ಚರ್ಯ ಶ್ರೀನಿವಾಸ ರಾಮಾನುಜನ್

"ಪ್ರತಿಯೊಂದು ಧನಪೂರ್ಣಾಂಕವೂ ರಾಮಾನುಜನ್ನರ ಆತ್ಮೀಯ ಸ್ನೇಹಿತ."

"ಮಹಾಪುರುಷನೊಬ್ಬ ತಾರುಣ್ಯದಲ್ಲಿ ಗತಿಸುವುದು ಘೋರ ನಷ್ಟ ನಿಜ. ಆದರೆ ಹೋಲಿಕೆಯಿಂದ ಹೇಳುವುದಾದರೆ ಒಬ್ಬ ಗಣಿತವಿದ ಮೂವತ್ತರ ವೇಳೆಗಾಗುವಾಗ ಸಾಕಷ್ಟು ವೃದ್ಧನಾಗಿರುತ್ತಾನೆ. ಆದ್ದರಿಂದ ಅವನ ಮರಣ ಅದು ಕಾಣುವಷ್ಟರ ಮಟ್ಟಿನ ಸರ್ವನಾಶ ವಲ್ಲ."

ರಾಮಾನುಜನ್ ಜನ್ಮಶತಾಬ್ದಿ ವರ್ಷದ ಸಂದರ್ಭದಲ್ಲಿ 'ಕಸ್ತೂರಿ ಓದುಗರಿಗೆ' ನೀಡಿರುವ ವಿಶಿಷ್ಟ ಕೊಡುಗೆ ಇದು.

ಹಾರ್ಡಿ ನುಡಿಗಳಲ್ಲಿ

ಶ್ರೀನಿವಾಸ ರಾಮಾನುಜನ್ (೧೮೮೭–೧೯೨೦) ಎಂಬ ಅನಾಮಧೇಯ ಗಣಿತ ವಿಹಾರಿಯನ್ನು ಆವಿಷ್ಕರಿಸಿ (discover) ಪ್ರಪಂಚ ನಭೋಂಗಣದಲ್ಲಿ ಉಜ್ವಲ ತಾರೆಯಾಗಿ ಬಿಂಬಿಸಿದವರು ಇಂಗ್ಲೆಂಡಿನ ಪ್ರಸಿದ್ಧ ಅಂತಾರಾಷ್ಟ್ರೀಯ ಗಣಿತ ವಿದ್ವಾಂಸ ಜಿ. ಎಚ್. ಹಾರ್ಡಿ (೧೮೭೭–೧೯೪೭). ರಾಮಾನುಜನ್ ಗಣಿತ ಕುರಿತು ಇವರು ೧೯೩೬ರಲ್ಲಿ — ಆ ವೇಳೆಗೆ ರಾಮಾನುಜನ್ ಗತಿಸಿ ಹದಿನಾರು ವರ್ಷಗಳು ಸಂದಿದ್ದವು– ಅಮೇರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಕೆಲವು ತಾಂತ್ರಿಕ ಉಪನ್ಯಾಸ ನೀಡಿದರು. ಈ ಮಾಲೆಗೆ ಪೀಠಿಕೆಯಾಗಿ ಅವರು 'ಭಾರತೀಯ ಗಣಿತವಿದ ರಾಮಾನುಜನ್' ಎಂಬ ವಿಷಯ ಕುರಿತು ಮಾತಾಡಿದ್ದಾರೆ;

"ಈ ಭಾಷಣಮಾಲೆಯಲ್ಲಿ ನಾನು ಬಲು ಗುರುತರವಾದ ಹೊಣೆಯನ್ನು ವಿಧಿಸಿಕೊಂಡಿದ್ದೇನೆ. ಇದರ ನಿರ್ವಹಣೆಯಲ್ಲಿ ಏಕೆ ವಿಫಲನಾದೆನೆಂಬುದನ್ನು ನಿಮಗೆ ವಿವರಿಸಲು ನಿರ್ಧರಿಸಿದ್ದಾದರೆ ಈ ಕೆಲಸ ಅಸಾಧ್ಯವೆಂದೇ ಹೇಳಬೇಕು. ಗಣಿತದ ಈಚೆಗಿನ ಇತಿಹಾಸದಲ್ಲಿ ಅತ್ಯಂತ ವರ್ಣಮಯವಾಗಿದ್ದ ಒಬ್ಬ ವ್ಯಕ್ತಿಯ ಬಗ್ಗೆ ನಾನು ಈತನಕ ಎಂದೂ ಮಾಡಿರದಂಥ ಬಹು ಸಕಾರಣೀಯ ಅಂದಾಜನ್ನು ರೂಪಿಸಬೇಕು. ಅಷ್ಟೇ ಅಲ್ಲ, ನೀವೂ ಅಂಥ ಅಂದಾಜನ್ನು ರೂಪಿಸಿಕೊಳ್ಳಲು ನೆರವೂ ಆಗಬೇಕು. ಇವರ ಜೀವನವೋ ಅದು ವಿರೋಧಾಭಾಸಗಳ ಹಾಗೂ ಅಸಾಂಗತ್ಯಗಳ ಒಂದು ಕಗ್ಗಂಟು ಎಂದು ಭಾಸವಾಗುತ್ತದೆ. ನಾವು ಸಾಧಾರಣವಾಗಿ ಪರಸ್ಪರರನ್ನು ಅಳೆಯಲು ಬಳಸುವ ಹೆಚ್ಚು ಕಡಿಮೆ ಎಲ್ಲ ವಿಧಿನಿಯಮಗಳನ್ನೂ ಇವರು ಮೀರಿದವರಾಗಿ ತೋರುತ್ತಾರೆ. ಇದು ಹೇಗೂ ಇರಲಿ. ಯಾವುದೋ ಒಂದು ಅರ್ಥದಲ್ಲಿ ಇವರೊಬ್ಬ ಮಹಾಗಣಿತಮತಿ ಎಂಬ ತೀರ್ಪಿನ ಬಗ್ಗೆ ನಾವೆಲ್ಲರೂ ಒಮ್ಮತದವರಾಗಿದ್ದೇವೆ.

"ರಾಮಾನುಜನ್ನರನ್ನು ಅಳೆಯುವಾಗ ಎದುರಾಗುವ ಸಮಸ್ಯೆಗಳು ಸಾಕಷ್ಟು ಸಂಸ್ಪಷ್ಟವೂ ಅಪರಿಹಾರ್ಯವೂ ಆಗಿವೆ. ಅವರು ಭಾರತೀಯರು. ಒಬ್ಬ ಭಾರತೀಯನೂ ಒಬ್ಬ ಇಂಗ್ಲೀಷ್ ವ್ಯಕ್ತಿಯೂ ಪರಸ್ಪರ ಸಮರ್ಪಕವಾಗಿ ಅರ್ಥಮಾಡಿಕೊಳ್ಳುವುದು ಯಾವಾಗಲೂ ಕಷ್ಟದ ಕೆಲಸವೇ. ಅತಿ ಹೆಚ್ಚೆಂದರೆ ಅವರೊಬ್ಬ ಅರ್ಧ ಶಿಕ್ಷಣ ಪಡೆದಿದ್ದ ಭಾರತೀಯ. ಕನಿಷ್ಠತ ಭಾರತೀಯ ಶಿಕ್ಷಣದ ಸೌಕರ್ಯಗಳೇನಾದರೂ ಇದ್ದ ಪಕ್ಷದಲ್ಲಿ ಅವು ಅವರಿಗೆ ಲಭಿಸಿರಲಿಲ್ಲ. ಭಾರತೀಯ ವಿಶ್ವವಿದ್ಯಾಲಯವೊಂದರ ಪ್ರಥಮ ಕಲಾ ಪರೀಕ್ಷೆಯನ್ನು (F. A.) ಕೂಡ ಅವರು ದಾಟಿರಲಿಲ್ಲ. ಇನ್ನು failed B. A. ಮಟ್ಟ ಐದುವುದಂತೂ ಅವರಿಗೆ ಅಸಾಧ್ಯವೇ ಆಯ್ತು. ತಮ್ಮ [illegible] ಅಧಿಕ ಭಾಗ [illegible]

ಕಡಿಮೆ ಆಧುನಿಕ ಯುರೋಪಿಯನ್ ಗಣಿತದ ಗಂಧ ಗಾಳಿ ಇಲ್ಲದೆ ಕೆಲಸ ಮಾಡಿದ ಅವರು ಆ ಗಣಿತ ಶಿಕ್ಷಣ ಇನ್ನೇನು ಪ್ರಾರಂಭವಾಯಿತು ಎನ್ನುವಾಗೆ ಅಳಿದೇ ಹೋದರು. ಆಗ ಅವರ ವಯಸ್ಸು ಮೂವತ್ತು ದಾಟಿತ್ತು ಮಾತ್ರ. ಅವರು ಸಮ್ಯಕ್ಸ್ಪಷ್ಟವಾಗಿ ಪ್ರಕಟಿಸಿದರು. ಅವರ ಪ್ರಕಟಿತ ಪ್ರಬಂಧಗಳು ೪೦೦ ಪುಟಗಳ ಒಂದು ಸಂಪುಟ ತುಂಬುತ್ತವೆ. ಸಾಕಷ್ಟು ಅಪ್ರಕಟಿತ ವಸ್ತುವನ್ನೂ ಅವರು ಹಿಂದೆ ಬಿಟ್ಟು ಹೋಗಿದ್ದಾರೆ. ಇದೇ ಕೆಲವು ವರ್ಷಗಳ ಹಿಂದಿನ ತನಕವೂ ಇದನ್ನು ಸಮರ್ಪಕವಾಗಿ ವಿಶ್ಲೇಷಿಸಲಾಗಿರಲಿಲ್ಲ. ಇದರಲ್ಲಿ ಸಾಕಷ್ಟು ಹೊಸ ವಿಷಯ ಉಂಟು. ಆದರೆ ಅದಕ್ಕಿಂತ ಹೆಚ್ಚು ಪುನರಾವಿಷ್ಕೃತ (rediscovered)-ಅಲ್ಲಿಯೂ ಅಪರಿಪೂರ್ಣವಾಗಿ – ವಸ್ತು ತುಂಬಿಕೊಂಡಿದೆ. ಅಲ್ಲದೇ ಅವರು ಪುನರಾವಿಷ್ಕರಿಸಿರಬಹುದಾದದ್ದನ್ನೂ ಅದಾವುದೋ ಬಗೆಯಲ್ಲಿ ಕಲಿತಿರಬಹುದಾದದ್ದನ್ನೂ ಪ್ರತ್ಯೇಕಿಸುವುದು ಕೆಲ ವೇಳೆ ಇಂದಿಗೂ ಸಾಧ್ಯವಾಗದು. ರಾಮಾನುಜನ್ ಅದೆಷ್ಟು ಉನ್ನತ ದರ್ಜೆಯ ಗಣಿತವಿದರಾಗಿದ್ದರೆಂಬುದನ್ನಾಗಲಿ, ಅದಕ್ಕಿಂತ ಮಿಗಿಲಾಗಿ ಅವರು ಅದೆಷ್ಟು ಉನ್ನತ ದರ್ಜೆಯ ಗಣಿತವಿದರಾಗಬಹುದಿತ್ತೆಂಬುದನ್ನಾಗಲಿ ಇಂದಾದರೂ ಭರವಸೆಯಿಂದ ಯಾರಾದರೂ ಹೇಳಿಯಾರೆಂದು ನಾನೇನೂ ಭಾವಿಸಿಲ್ಲ.

"ಇಲ್ಲಿ ಜಟಿಲ ಸಿಕ್ಕುಗಳಿವೆ. ಆದರೆ ಈ ಪೈಕಿ ಕೆಲವು ಅವು ಕಾಣುವುದಕ್ಕಿಂತ ಕಡಿಮೆ ಕಠಿಣವೆಂಬುದನ್ನು ತಿಳಿಯಲಿದ್ದೇವೆ. ಇನ್ನು ನನಗೆ ಎದುರಾಗಿರುವ ದೊಡ್ಡ ತೊಡಕೇನು ಗೊತ್ತೇ? ರಾಮಾನುಜನ್ ಜೀವನದ ಸುಸ್ಪಷ್ಟ ವಿರೋಧಾಭಾಸಗಳ ಜೊತೆ ಇದಕ್ಕೇನೂ ಸಂಬಂಧವಿಲ್ಲ. ನಿಜವಾದ ತೊಡಕು ಇದು: ಒಂದು ಅರ್ಥದಲ್ಲಿ ರಾಮಾನುಜನ್ನರನ್ನು ಆವಿಷ್ಕರಿಸಿದಾತ ನಾನು. ಅವರನ್ನು ನಾನೇನೂ ತಯಾರು ಮಾಡಲಿಲ್ಲ. ಇತರ ಮಹಾವ್ಯಕ್ತಿಗಳಂತೆ ಸ್ವತಃ ಅವರೇ ತಮ್ಮನ್ನು ತಯಾರಿಸಿಕೊಂಡಿದ್ದರು. ಆದರೆ ಅವರ ಕೆಲವು ಕೃತಿಗಳನ್ನು ನೋಡುವ ಸಂದರ್ಭ ಒದಗಿದ ಮೊದಲ ಸಮರ್ಥ ವ್ಯಕ್ತಿ ನಾನೇ. ಆಗ ನಾನು ಗುರುತಿಸಿದ್ದು ಎಂಥ ಹೊನ್ನ ಹೆಗ್ಗಯನ್ನು ಎಂಬ ವಿಚಾರದಲ್ಲಿ ಈಗಲೂ ನನಗೆ ಸಂತೃಪ್ತಿ ಉಂಟು. ಇಂದಾದರೂ ರಾಮಾನುಜನ್ನರನ್ನು ಇತರ ಎಲ್ಲರಿಗಿಂತಲೂ ಹೆಚ್ಚು ತಿಳಿದಾತ ನಾನೇ ಎಂದು ಭಾವಿಸಿದ್ದೇನೆ; ಮತ್ತು ಈ ವಿಷಯ ಕುರಿತಂತೆ ಇಂದಿಗೂ ಅಧಿಕಾರಯುಕ್ತವಾಗಿ ಮಾತಾಡಬಲ್ಲ ಪ್ರಥಮ ವ್ಯಕ್ತಿ ನಾನೇ. ಇಂಗ್ಲಂಡಿನಲ್ಲಿ ಬೇರೆಯವರೂ ಇದ್ದಾರೆ; ವಿಶೇಷತಃ ಪ್ರೊಫೆಸರ್ ವಾಟ್ಸನ್ ಅಲ್ಲದೇ ಪ್ರೊಫೆಸರ್ ಮಾರ್ಡೆಲ್ ಕೂಡ. ರಾಮಾನುಜನ್ನರ ಸಮಗ್ರ ಕೃತಿಯ ಕೆಲವು ಭಾಗಗಳಲ್ಲಿ ಈ ಮಹನೀಯರುಗಳಿಗೆ ನನಗಿಂತ ಹೆಚ್ಚಿನ ಪ್ರವೇಶ ಉಂಟು. ಆದರೆ ಖುದ್ದು ರಾಮಾನುಜನ್ನರನ್ನು ನಾನು ಅರಿತಿದ್ದಂತೆ ವಾಟ್ಸನ್ ಆಗಲಿ ಮಾರ್ಡೆಲ್ ಆಗಲಿ ಅರಿತಿರಲಿಲ್ಲ. ಹಲವು ವರ್ಷಪರ್ಯಂತ ನಾನವರನ್ನು ಹೆಚ್ಚು ಕಡಿಮೆ ಪ್ರತಿ ದಿನ ನೋಡಿದೆ, ಅವರೊಡನೆ ಮಾತಾಡಿದೆ. ಇವೆಲ್ಲವುಗಳಿಗಿಂತಲೂ ಮುಖ್ಯವಾಗಿ ನಾನವರ ಜೊತೆ ವಾಸ್ತವ ಸಹೋದ್ಯಮಿಯಾಗಿದ್ದೆ. ಈ ಪ್ರಪಂಚದಲ್ಲಿ ಒಂದು ಅಪವಾದದ ಹೊರತಾಗಿ ನಾನವರಿಗೆ ಅಧಿಕ ಋಣಿಯಾಗಿದ್ದೇನೆ. ಅವರ ಜೊತೆಗಿನ ಸಹಯೋಗ ನನ್ನ ಬಾಳಿನ ಒಂದು ರಮ್ಯ ಘಟನೆ. ಅಂದ ಮೇಲೆ ನನ್ನ ತೊಡಕು ನಾನವರ ಬಗ್ಗೆ ತಿಳಿದಿರುವುದು ಸಾಕಷ್ಟು ಇಲ್ಲ ಎಂದಲ್ಲ, ಬದಲು, ನಾನು ತಿಳಿದು ಅನುಭವಿಸಿರುವುದು ಅತಿಶಯವಾಗಿದೆ. ಎಂದೇ ಈ ವಿಚಾರದಲ್ಲಿ ನಿರ್ವಿಕಾರಚಿತ್ತದಿಂದ ವರ್ತಿಸುವುದು ನನಗಂತೂ ಅಸಾಧ್ಯ."

ಹಾರ್ಡಿ ಎಡತಿ ಸಂಧಿಸಿದ ಹೊನ್ನ ಹೆಗ್ಗ

೧೯೧೩ರಲ್ಲಿ ಒಂದು ದಿನ. ಎಂದಿನಂತೆ ಆ ಮುಂಜಾನೆಯೂ ಹಾರ್ಡಿ ತಮಗೆ ಬಂದಿದ್ದ ಟಪಾಲಿನ ಹೊರೆ ಕರಗಿಸುವುದರಲ್ಲಿ ಮಗ್ನರಾಗಿದ್ದರು. ಆ ರಾಶಿಯಲ್ಲಿ ಭಾರತದ ಅಂಚೆ ಚೀಟಿಗಳನ್ನು ಧರಿಸಿದ್ದ ತೂಕವಾದ ಒಂದು ಲಕೋಟೆ ಹಣುಕುತ್ತಿತ್ತು. ಅವರದನ್ನು ಪೂರ್ತಿ ನಿರ್ವಿಕಾರಚಿತ್ತದಿಂದ ಒಡೆದು ಹೂರಣ ಹೊರತೆಗೆದರು. ಗಣಿತ ಪ್ರತೀಕಗಳೂ, ಚಿಹ್ನೆಗಳೂ

ತುಂಬಿ ಬಿರಿಯುತ್ತಿದ್ದ ಹಲವಾರು ಹಾಳೆಗಳ ಕಂತೆ ಅದು. ಒಂದು ಕ್ಷಣ ಅವುಗಳ ಮೇಲೆ ಕಣ್ಣಾಡಿಸಿ ಉದಾಸೀನ ಭಾವದಿಂದ ಅವನ್ನು ಬದಿಗೆ ಸರಿಸಿ ಇತರ ಕೆಲಸಗಳತ್ತ ಗಮನ ಹರಿಸಿದರು.

ಇದು ದಿನ ದಿನ ತಾನು ಎದುರಿಸಲೇಬೇಕಾದ ವೃತ್ತಿ ಗಂಡಾಂತರವೆಂತಲ್ಲದೇ (ಗಣಿತಶಾಸ್ತ್ರದಲ್ಲಿ ಅಸಾಧನೀಯವಾದ ಸಮಸ್ಯೆಗಳಿಗೆ ತಾವು ವಿನೂತನ ಪರಿಹಾರ ಶೋಧಿಸಿರುವುದಾಗಿ ವಂಚಕರು ವಿಖ್ಯಾತ ಗಣಿತಜ್ಞರಿಗೆ ರವಾನಿಸುವ ಪತ್ರಗಳು– Professional hazards) ತನ್ನೊಳಗೆ ಏನೋ ಅಂತ ಸತ್ವವನ್ನು ಗರ್ಭಿಸಿಟ್ಟುಕೊಂಡಿರುವ ವಿಶೇಷ ಸಂಶೋಧನೆ ಆಗಿರಲಾರದೇ? ಈ ಒಂದು ದನಿ ಹಾರ್ಡಿಯವರ ಮನದಾಳದಲ್ಲಿ ಮಿಡಿಯುತ್ತಿತ್ತು. ಅಲ್ಲಿ ಲಿಖಿತವಾಗಿದ್ದ ಗಣಿತ ಸಮೀಕರಣಗಳ ಸಹಜ ಸೌಂದರ್ಯ ಅವರನ್ನು ಆಕರ್ಷಿಸದಿರಲಿಲ್ಲ.

ರಾಮಾನುಜನ್ ಉದಾಹರಿಸಿದ್ದ ಕೆಲವೊಂದು ಫಲಿತಾಂಶಗಳ ಬಗೆಗೆ ಹಾರ್ಡಿ ೧೯೩೭ರಲ್ಲಿ ಹೇಳಿದರು "ಇವನ್ನು ಹೋಲುವಂಥ ಏನನ್ನೂ ಇವುಗಳ ಆದಿಮ ರೂಪದಲ್ಲಿ ಕೂಡ ನಾನು ಹಿಂದೆಂದೂ ನೋಡಿರಲಿಲ್ಲ. ಕೇವಲ ಒಮ್ಮೆ ಅವುಗಳ ಮೇಲೆ ದೃಷ್ಟಿ ಹಾಯಿಸಿದರೆ ಸಾಕು, ಪರಮೋತ್ಕೃಷ್ಟ ವರ್ಗದ ಗಣಿತವಿದ ಮಾತ್ರ ಅವನ್ನು ರೂಪಿಸಬಲ್ಲ ಎಂಬುದು ನಿಮಗೇ ವೇದ್ಯವಾಗುತ್ತದೆ. ಅವು ನಿಜವೇ ಇರತಕ್ಕದ್ದು. ಏಕೆಂದರೆ ನಿಜವಲ್ಲದ ಅಂಥವನ್ನು ಸೃಷ್ಟಿಸುವ ಕಲ್ಪನಾಸಾಮರ್ಥ್ಯ ಯಾರಿಗೂ ಒದಗದು. ಕೊನೆಯದಾಗಿ, ಪ್ರಪಂಚದಲ್ಲಿ ಇಂಥ ಊಹಾತೀತ ಚಳಕವಿರುವ ಚೋರ ಹಾಗೂ ವಂಚಕರಿಗಿಂತ ಮಹಾಗಣಿತವಿದರೇ ಅಧಿಕ ಸಾಮಾನ್ಯ. (ನನಗೆ ರಾಮಾನುಜನ್ ವಿಚಾರ ಏನೂ ಗೊತ್ತಿರಲಿಲ್ಲ ಎಂಬುದು ನೆನಪಿನಲ್ಲಿರಲಿ, ಎಂದೇ ಎಲ್ಲ ಸಾಧ್ಯತೆಗಳನ್ನೂ ನಾನು ಪರ್ಯಾಲೋಚಿಸಬೇಕಾಗಿತ್ತು.")

ಹಾರ್ಡಿ ತಮ್ಮ ಸಹೋದ್ಯೋಗಿ ಜೆ. ಇ. ಲಿಟಲ್‌ವುಡ್ ಜೊತೆ ಈ ಭಾರತೀಯ ಪತ್ರದ ಬಗ್ಗೆ ಪ್ರಸ್ತಾಪಿಸಿ ಸಂಜೆ ವಿರಾಮದಲ್ಲಿ ಅವನ್ನು ಓದಲು ಕೈಗೆತ್ತಿಕೊಂಡರು.

ಮದ್ರಾಸ್ ಪೋರ್ಟ್ ಟ್ರಸ್ಟಿನಲ್ಲಿ ಗುಮಾಸ್ತ ಆಗಿದ್ದ ರಾಮಾನುಜನ್, ಹಾರ್ಡಿಯವರಿಗೆ ಬರೆದ ಮೊದಲ ಪತ್ರವಿದು (೧೬–೧–೧೯೧೩):

"ನಾನು ಮದ್ರಾಸಿನ ಪೋರ್ಟ್ ಟ್ರಸ್ಟ್ ಕಚೇರಿಯ ಲೆಕ್ಕಪತ್ರ ವಿಭಾಗದಲ್ಲಿ ವಾರ್ಷಿಕವಾಗಿ ೨೦ ಪೌಂಡ್ ಸಂಬಳ ಪಡೆಯುತ್ತಿರುವ ಒಬ್ಬ ಕಾರಕೂನ. ಈಗ ನನ್ನ ವಯಸ್ಸು ಸುಮಾರು ೨೩ ವರ್ಷ. ವಿಶ್ವವಿದ್ಯಾಲಯ ಶಿಕ್ಷಣ ನನಗೆ ದೊರೆಯಲಿಲ್ಲ. ಪ್ರೌಢಶಾಲೆಯ ಸಾಧಾರಣ ಶಿಕ್ಷಣ ಪಡೆದಿದ್ದೇನೆ ಅಷ್ಟೆ. ಶಾಲೆಯಿಂದ ಹೊರಬಂದ ಬಳಿಕ ಬಿಡುವೇಳೆಯಲ್ಲಿ ಗಣಿತಾನ್ವೇಷಣೆ ಮುಂದುವರಿಸಿಕೊಂಡು ಬಂದಿದ್ದೇನೆ. ವಿಶ್ವವಿದ್ಯಾಲಯ ಶಿಕ್ಷಣರಂಗದಲ್ಲಿ ಅನುಸರಿಸುವ ಸಾಂಪ್ರದಾಯಿಕ ಕ್ರಮಬದ್ಧ ಶಿಕ್ಷಣದ ಮೂಲಕ ನಡೆದು ಬಂದವ ನಾನಲ್ಲ. ನನಗಾಗಿ ಹೊಸತೊಂದು ಹಾದಿ ರೂಪಿಸಿಕೊಳ್ಳುತ್ತಿದ್ದೇನೆ. ಸಾರ್ವತ್ರಿಕವಾಗಿ ಹೇಳುವುದಾದರೆ ನಾನು ಅಪಸರಣ ಶ್ರೇಣಿಗಳ (divergent series) ವಿಶೇಷಾನ್ವೇಷಣೆ ಮಾಡಿದ್ದೇನೆ. ಈ ನಿಟ್ಟಿನಲ್ಲಿ ನಾನು ಪಡೆದಿರುವ ಫಲಿತಾಂಶಗಳನ್ನು ಸ್ಥಳೀಯ ಗಣಿತಜ್ಞರು 'ಅದ್ಭುತ' ಎಂದಿದ್ದಾರೆ.

"n ಒಂದು ಧನ ಪೂರ್ಣಾಂಕವಾಗಿರುವಾಗ a^n ನ್ನು ವ್ಯಾಖ್ಯಿಸುವ ನಿಯಮದ ಪರಿಮಿತಿಯೊಳಗೆ ಇದಕ್ಕೆ ಪ್ರಾಥಮಿಕ ಗಣಿತದಲ್ಲಿ n ಋಣಾತ್ಮಕವಾಗಿರುವಾಗಲೂ, ಭಿನ್ನರಾಶ್ಯಾತ್ಮಕವಾಗಿರುವಾಗಲೂ ಒಂದು ಅರ್ಥ ನೀಡಿರುವುದು ಸರಿಯಷ್ಟೆ. ಅದೇ ರೀತಿ ನಾನು ನನ್ನ ಸಮಸ್ತ ಅನ್ವೇಷಣೆಗಳಲ್ಲಿಯೂ nನ ಎಲ್ಲ ಬೆಲೆಗಳಿಗೆ ಆಯ್ಲರಿಯನ್ ಎರಡನೆಯ ಅನುಕಲಕ್ಕೆ (Eulerian Second Integral) ಅರ್ಥವೀಯಲು ಪ್ರಯತ್ನಿಸಿದ್ದೇನೆ. ವಿಶ್ವವಿದ್ಯಾಲಯದ ಕ್ರಮಬದ್ಧ ಶಿಕ್ಷಣ ಪಡೆದಿರುವ ನನ್ನ ಮಿತ್ರರ ಪ್ರಕಾರ n ಧನಾತ್ಮಕವಾಗಿರುವಾಗ ಮಾತ್ರ

$$\int_0^\infty x^{n-1} e^{-x} dx = \Upsilon(n)$$

ನಿಜವೆಂದಿದೆ. n ಋಣಾತ್ಮಕವಾಗಿರುವಾಗ ಈ ಅನುಕಲ ಸಂಬಂಧ ನಿಜವಲ್ಲವೆನ್ನುತ್ತಾರೆ ಅವರು,

ಇದು nನ ಧನಾತ್ಮಕ ಬೆಲೆಗಳಿಗೆ ಮಾತ್ರ ನಿಜವೆಂದೂ $n\Upsilon(n) = \Upsilon(n+1)$ ಎಂಬ ವ್ಯಾಖ್ಯೆ ಸಾರ್ವತ್ರಿಕವಾಗಿ ನಿಜವೆಂದೂ ಭಾವಿಸಿ ನಾನು ಈ ಅನುಕಲಗಳಿಗೆ ಅರ್ಥ ನೀಡಿದ್ದೇನೆ; ಮತ್ತು ಈ ನಿರ್ಬಂಧಗಳ ವ್ಯಾಪ್ತಿಯಲ್ಲಿ ಈ ಅನುಕಲ nನ ಸಮಸ್ತ ಬೆಲೆಗಳಿಗೂ — ಋಣಾತ್ಮಕ ಹಾಗೂ ಭಿನ್ನರಾಶ್ಯಾತ್ಮಕ — ನಿಜವೆನ್ನುತ್ತೇವೆ. ನನ್ನ ಎಲ್ಲ ಅನ್ವೇಷಣೆಗಳೂ ಇದನ್ನು ಆಧರಿಸಿ ನಿಂತಿವೆ. ಈ ಭಾವನೆಯನ್ನು ನಾನು ಸಾಕಷ್ಟು ವಿಸ್ತಾರವಾಗಿ ಅಭಿವರ್ಧಿಸುತ್ತಿದ್ದೇನೆ. ಸ್ಥಳೀಯ ಗಣಿತಜ್ಞರು ನನ್ನ ಈ ಉನ್ನತ ಯಾನಗಳನ್ನು ಅರ್ಥವಿಸಲಾರದವರಾಗಿದ್ದಾರೆ.

"ನೀವು ಪ್ರಕಟಿಸಿರುವ Orders of Infinity (ಅನಂತದ ವರ್ಗಗಳು) ಎಂಬ ಹೊತ್ತಗೆಯನ್ನು ತೀರ ಈಚೆಗೆ ಓದಿದ್ದೇನೆ. ಅದರ ೩೬ನೆಯ ಪುಟದಲ್ಲಿ ಒಂದು ಹೇಳಿಕೆ ಉಂಟು: ಯಾವುದೇ ದತ್ತ ಸಂಖ್ಯೆಗಿಂತ ಕಡಿಮೆ ಇರುವ ಅವಿಭಾಜ್ಯಗಳ (primes) ಸಂಖ್ಯೆ ಎಷ್ಟೆಂಬುದನ್ನು ನಿರ್ಧರಿಸಲು ಖಚಿತ ಸೂತ್ರವೇನೂ ಈ ತನಕ ಪತ್ತೆ ಆಗಿಲ್ಲ. ಆದರೆ ವಾಸ್ತವ ಫಲಿತಾಂಶಕ್ಕೆ ಅತಿ ಸನ್ನಿಹಿತವಾಗಿರುವ ಒಂದು ಸೂತ್ರವನ್ನು ನಾನು ಶೋಧಿಸಿದ್ದೇನೆ. ಇದರಲ್ಲಿಯ ದೋಷ ಅತ್ಯಲ್ಪ. ಈ ಕಾಗದಕ್ಕೆ ಲಗತ್ತಿಸಿರುವ ಪ್ರಬಂಧಗಳನ್ನು ನೀವು ಪರಾಂಬರಿಸಬೇಕೆಂದು ಬಿನ್ನವಿಸುತ್ತೇನೆ. ನಾನು ಬಡವ. ಈ ಪ್ರಮೇಯಗಳಲ್ಲಿ (theorems) ಏನಾದರೂ ಹುರುಳಿದೆಯೆಂದು ನಿಮಗೆ ಮನವರಿಕೆಯಾದರೆ ಇವನ್ನು ಪ್ರಕಟಿಸಬೇಕೆಂದು ಕೋರುತ್ತೇನೆ. ನಾನು ಮಾಡಿರುವ ವಾಸ್ತವ ಅನ್ವೇಷಣೆಗಳನ್ನಾಗಲಿ, ಪಡೆದಿರುವ ಗಣಿತೋಕ್ತಿಗಳನ್ನಾಗಲಿ ಇಲ್ಲಿ ನಮೂದಿಸಿರುವುದಿಲ್ಲ. ಆದರೆ ನಾನು ಯಾವ ಹಾದಿ ಹಿಡಿದಿರುವೆನೆಂಬುದನ್ನು ಸೂಚಿಸಿದ್ದೇನೆ. ಅನನುಭವಿಯಾದ ನಾನು ನೀವು ನೀಡಬಹುದಾದ ಯಾವುದೇ ಹಿತೋಕ್ತಿಯನ್ನೂ ಅಮೂಲ್ಯವಾದದ್ದೆಂದು ಸ್ವೀಕರಿಸುತ್ತೇನೆ. ನಿಮಗೆ ತೊಂದರೆ ಕೊಟ್ಟಿದ್ದೇನೆ. ದಯವಿಟ್ಟು ನನ್ನನ್ನು ಮನ್ನಿಸಬೇಕು."

ಸಾಣೆಹಿಡಿಯದ ವಜ್ರ

ಈ ಪತ್ರಕ್ಕೆ ರಾಮಾನುಜನ್ ಲಗತ್ತಿಸಿದ್ದ ಗಣಿತ ಫಲಿತಾಂಶಗಳನ್ನು ಗಮನಿಸಿದ ಹಾರ್ಡಿ ಅವುಗಳಲ್ಲಿಯ ಸ್ವಂತತ್ವ ಮತ್ತು ಸೌಂದರ್ಯಗಳಿಗೆ ಮಾರುಹೋದರು. ಆದರೆ ಈ ಹಿನ್ನೆಲೆಗೆ ಒಂದಿಷ್ಟೂ ಹೊಂದದ ಹಲವಾರು ಪ್ರಾಥಮಿಕ ದೋಷಗಳನ್ನು ಅಲ್ಲಿ ಕಂಡು ಕರ್ತೃವಿನ ಚಿಂತನ ವಿಧಾನ ಕುರಿತು ಸಂದೇಹಗ್ರಸ್ತರಾದರು. ರಾಮಾನುಜನ್ ಅಕಾಲ ಮರಣವಪ್ಪಿದಾಗ ಹಾರ್ಡಿ ಬರೆದ ನುಡಿಕಾಣಿಕೆಯಲ್ಲಿ ಈ ಅಂಶ ಸ್ಪಷ್ಟಪಡಿಸಿದ್ದಾರೆ, "ರಾಮಾನುಜನ್ನರಿಗೆ ಮಿಶ್ರಚರದ ಉತ್ಪನ್ನಗಳ ಸಿದ್ಧಾಂತ ಗೊತ್ತಿಲ್ಲದಿದ್ದುದರಿಂದ ಅವಿಭಾಜ್ಯಗಳನ್ನು ಕುರಿತ ಅವರ ಸಿದ್ಧಾಂತ ದೋಷಪೂರ್ಣವಾಗಿತ್ತು. ಉದಾಹರಣೆಗೆ ರೀಮಾನ್ ಉತ್ಪನ್ನಕ್ಕೆ ಮಿಶ್ರ ಶೂನ್ಯಗಳು ಇಲ್ಲವಾಗಿದ್ದರೆ ಆ ಸಿದ್ಧಾಂತ ಹೇಗಿರಬಹುದೋ ಅಂಥ ಸ್ಥಿತಿ. ಅವರ ಸಾಧನ ವಿಧಾನಗಳು ಅಪಸರಣ ಶ್ರೇಣಿಗಳ ಸಗಟು ಬಳಕೆಯನ್ನು ಅವಲಂಬಿಸಿದ್ದುವು. ದ್ವಿಪರಿಮಿತಿ ಪರಿಕರ್ಮಗಳ (double limit operations) ಅಂತರಬದಲಾವಣೆ ಎದುರೊಡ್ಡುವ ಎಲ್ಲ ತೊಡಕುಗಳನ್ನೂ ಅವರು ಪೂರ್ತಿಯಾಗಿ ಅಲಕ್ಷಿಸಿದ್ದರು. ಉದಾಹರಣೆಗೆ ಆಧುನಿಕ ವಿಶ್ಲೇಷಣ ಗಣಿತವಿದನೊಬ್ಬ ಇಂಥ ಸಂದರ್ಭಗಳಲ್ಲಿ $\sum a_n$ ಎಂಬ ಶ್ರೇಣಿಯ ಮೊತ್ತಕ್ಕೂ ಅಬೇಲಿಯನ್ ಪರಿಮಿತಿ $\lim_{x\to 1} \sum a_n x^n$ ಎಂಬುದಕ್ಕೂ ನಡುವೆ ವ್ಯತ್ಯಾಸ ಕಾಣುತ್ತಾನೆ. ಆದರೆ ರಾಮಾನುಜನ್ ಈ ವ್ಯತ್ಯಾಸ ಗಮನಿಸಿರಲಿಲ್ಲ. ಆಧುನಿಕ ಗಣಿತ ವಿಧಿಗಳು ಬೇಡುವ ನಿಷ್ಠುರ ನಿಷ್ಕೃಷ್ಟತೆಯನ್ನು ಅಷ್ಟೇನೂ ಅಪಾಯವಿಲ್ಲದೆ ಅಲಕ್ಷಿಸಬಹುದಾದ ಗಣಿತವಲಯಗಳಿವೆ. ಆದರೆ ಸಂಖ್ಯೆಗಳ ವಿಶ್ಲೇಷಕ ಸಿದ್ಧಾಂತ (Analytic Theor\ of Numbers) ಇವುಗಳಲ್ಲಿ ಸೇರಿಲ್ಲ. ಎಂದೇ ಅವಿಭಾಜ್ಯಗಳನ್ನು ಕುರಿತಂತೆ ರಾಮಾನುಜನ್ ಭಾರತದಲ್ಲಿ ಪಡೆದ ಫಲಿತಾಂಶವೂ, ವಿಶ್ಲೇಷಕ ಸಿದ್ಧಾಂತಕ್ಕೆ ಸಂಬಂಧಿಸಿದಂಥ ಇತರ ಎಲ್ಲ ಸಮಸ್ಯೆಗಳನ್ನು ಕುರಿತ ಕೃತಿಯೂ ತಪ್ಪಾಗಿದ್ದುವೆಂಬುದು

ಸಂದೇಹಾತೀತ. ಅವರು ನೀಡಿದ ಸಾಧನೆಗಳು ಅಸಾಧಾರಣವಾಗಿದ್ದುದು ನಿರೀಕ್ಷಿತವೆ. ಆದರೆ ಈ ದೋಷಗಳು ಇನ್ನೂ ಆಳಕ್ಕೆ ಇಳಿದಿದ್ದುವು. ಅವರು ಪಡೆದಿದ್ದ ಹಲವಾರು ಅಂತಿಮ ಫಲಿತಾಂಶಗಳು ಪೂರ್ತಿ ತಪ್ಪು. ಅಭಿಜಾತ ಸೂತ್ರಗಳ ಪ್ರಧಾನ ಪದಗಳನ್ನು ಅವರು ಅಸಾಧು ವಿಧಾನಗಳ ಮೂಲಕವೇ ಆದರೂ, ಪಡೆದದ್ದು ನಿಜ. ಆದರೆ ಅವು ಯಾವುವೂ ಅವರು ಭಾವಿಸಿದ್ದಂತೆ ಸನ್ನಿಕಟ ಸನ್ನಿಹಿತತೆ (close approximation) ಆಗಿರಲಿಲ್ಲ.

"ಇದು ರಾಮಾನುಜನ್ನರ ಬಲು ದೊಡ್ಡ ವೈಫಲ್ಯ ಎನ್ನಬಹುದು. ಹಾಗಿದ್ದರೂ ಕೆಲವು ವಿಚಾರಗಳಲ್ಲಿ ಈ ವೈಫಲ್ಯ ಕೂಡ ಅವರ ಯಾವುದೇ ವಿಜಯದಷ್ಟೇ ಅದ್ಭುತವಲ್ಲವೇ ಎಂಬ ಸಂದೇಹ ನನಗಿದೆ. ನಿದರ್ಶನಾರ್ಥ ಸಮಸ್ಯೆ (೪)ನ್ನು ಪರಿಶೀಲಿಸಿ. ಇಲ್ಲಿಯ ಪ್ರಧಾನ ಪದವನ್ನು – ರಾಮಾನುಜನ್ ಅನುಸರಿಸಿರುವ ಅಂಕನ ಪದ್ಧತಿಯಲ್ಲಿ $KB/\sqrt{\log B}$— ಲಾಂಡಾ ಮೊದಲ ಬಾರಿಗೆ ೧೯೦೮ರಲ್ಲಿ ಪಡೆದಿದ್ದರು. ರಾಮಾನುಜನ್ನರ ಬತ್ತಳಿಕೆಯಲ್ಲಿ ಲಾಂಡಾ ಅವರ ಯಾವ ಅಸ್ತ್ರಗಳೂ ಇರಲಿಲ್ಲ. ಯಾವುದೇ ಫ್ರೆಂಚ್ ಅಥವಾ ಜರ್ಮನ್ ಪುಸ್ತಕವನ್ನು ಅವರು ಓದಿರಲಿಲ್ಲ. ಪರಿಸ್ಥಿತಿ ಇಂತಿದ್ದರೂ ಯುರೋಪಿನ ಅತ್ಯುತ್ತಮ ಗಣಿತ ಧೀಮಂತರು ಯಾವ ಸಮಸ್ಯೆಗಳನ್ನು ಪರಿಹರಿಸಲು ನೂರು ವರ್ಷಗಳನ್ನೇ ತೆಗೆದುಕೊಂಡರೋ — ವರ್ತಮಾನ ದಿನದ ತನಕ ಈ ಪರಿಹಾರವಿನ್ನೂ ಪೂರ್ಣಗೊಂಡಿಲ್ಲ—ಅವುಗಳ ಬಗ್ಗೆ ರಾಮಾನುಜನ್ ಕನಸು ಕಂಡದ್ದು ಕೂಡ ಪರಮಾಶ್ಚರ್ಯಕರ ಸಂಗತಿ."

ರಾಮಾನುಜನ್ನರ ಮುಗ್ಧ ಪತ್ರದ ತಳದಲ್ಲಿ ಹಾರ್ಡಿ ಕಂಡದ್ದು ನಿರ್ಮಲ ಹೃದಯವನ್ನು; ಆ ಪತ್ರಕ್ಕೆ ಅವರು ಲಗತ್ತಿಸಿದ್ದ ಫಲಿತಾಂಶಗಳ ಒನ್ನೆಲೆಯಲ್ಲಿ ಗುರುತಿಸಿದ್ದು ಸಾಣೆ ಹಿಡಿಯದ ವಜ್ರವನ್ನು; ಒಟ್ಟಾರೆ ನವನವೋನ್ಮೇಷಶಾಲಿ ಅನಿರ್ಬಂಧಿತ ಚೈತನ್ಯದ ವಿಕಿರಣಪಟುತ್ವವನ್ನು (radioactivity). ಈ ಫಲಿತಾಂಶಗಳ ಸಾರ ಕುರಿತು ಹಾರ್ಡಿ ಹೇಳಿದರು (೧೯೩೭) "ರಾಮಾನುಜನ್ನರ ಕೃತಿಯನ್ನು ಪರೀಕ್ಷಿಸಿದಾಗ ಅವರ ಅತ್ಯಧಿಕಾಂಶ ಮೊದಲೇ ಗೊತ್ತಿದ್ದ ವಿಷಯವೆಂದು ತಿಳಿಯಿತು. ಇದು ಅನಿವಾರ್ಯ. ಏಕೆಂದರೆ ಅವರೊಂದು ಪ್ರಬಲ ಪ್ರತಿಬಂಧಕದೆದುರು ಕೆಲಸವೆಸಗುತ್ತಿದ್ದರು. ಬಡವ ಮತ್ತು ಒಂಟಿ ಹಿಂದೂ ಯುವಕನಾಗಿದ್ದ ಅವರ ಮಿದುಳು ಯೂರೋಪಿನ ಸಂಚಿತ ಧೀಮಂತಿಕೆಯ ಎದುರು ನಿಲ್ಲಬೇಕಾಗಿತ್ತು. ಅವರಿಗೆಂದೂ ಯೋಗ್ಯ ಶಿಕ್ಷಣ ಲಭಿಸಿರಲಿಲ್ಲ. ಭಾರತದಲ್ಲಿ ಅವರಿಗೆ ಏನನ್ನಾದರೂ ಹೇಳಿಕೊಡಬಲ್ಲಂಥವರು ಯಾರೂ ಇರಲಿಲ್ಲ. ಅವರು ಹೊರಗೆ ನೋಡಿರಬಹುದಾದ ಉತ್ತಮ ಗುಣಮಟ್ಟದ ಗ್ರಂಥಗಳು ಮೂರೋ ನಾಲ್ಕೋ ಇರಬಹುದು. ಅವೆಲ್ಲವೂ ಇಂಗ್ಲೀಷ್ ಭಾಷೆಯಲ್ಲಿದ್ದಂಥವು. ಅವರಿಗೆ ಮದ್ರಾಸಿನ ಗ್ರಂಥ ಭಂಡಾರಕ್ಕೆ ಪ್ರವೇಶ ಒದಗಿದ ಸನ್ನಿವೇಶಗಳು ಕೆಲವಿದ್ದುವು. ಆದರೆ ಆ ಭಂಡಾರ ಅಷ್ಟೇನೂ ಹಿರಿದಾದುದಾಗಿರಲಿಲ್ಲ. ಅದರಲ್ಲಿ ಕೇವಲ ಕೆಲವೇ ಫ್ರೆಂಚ್ ಮತ್ತು ಜರ್ಮನ್ ಗ್ರಂಥಗಳಿದ್ದುವು. ರಾಮಾನುಜನ್ನರಿಗೋ ಈ ಭಾಷೆಗಳ ಒಂದು ಪದವೂ ತಿಳಿದಿರಲಿಲ್ಲ. ಭಾರತದಲ್ಲಿ ಅವರು ಗೈದ ಅತ್ಯುತ್ಕೃಷ್ಟ ಕೃತಿಯ ಮೂರನೆಯ ಎರಡು ಭಾಗ ಪುನರಾವಿಷ್ಕಾರವೆಂಬುದು ನನ್ನ ಅಂದಾಜು."

ಇಂಥ ಅಪೂರ್ವ ಸೃಷ್ಟಿಶೀಲ ಮನಸ್ಸು ಪೂರ್ವದ ಗಣಿತ ಶುಷ್ಕ ಪರಿಸರದಲ್ಲಿ ಮುರುಟಿ ಹೋಗಬಾರದು, ಬದಲು, ಇಂಗ್ಲೆಂಡಿನ ಆಧುನಿಕ ಗಣಿತ ಪರಿಸರದಲ್ಲಿ ಯೋಗ್ಯ ಅವಕಾಶ ಗಳಿಸಿ, ತಕ್ಕಷ್ಟು ಸವಾಲು ಎದುರಿಸಿ ಅರಳಿ ಪರಿಮಳಿಸಬೇಕೆಂಬುದು ಹಾರ್ಡಿಯವರ ಅಭಿಪ್ರಾಯ. ತತ್ಪ್ರಕಾರ ರಾಮಾನುಜನ್ನರಿಗೆ ಮಾರೋಲೆ ಬರೆದರು. ತಮ್ಮ ಪತ್ರಕ್ಕೆ ಹಾರ್ಡಿಯವರಿಂದ ಪ್ರೋತ್ಸಾಹದಾಯಕ ಪ್ರತಿಕ್ರಿಯೆ ಬಂದದ್ದು ಸಹಜವಾಗಿ ರಾಮಾನುಜನ್ನರಿಗೆ ಮುದ ನೀಡಿತು. ಇವರು ೨೭—೨—೧೯೧೩ರಂದು ಹಾರ್ಡಿಯವರಿಗೆ ಬರೆದ ಕಾಗದದಲ್ಲಿ ಈ ಭಾವ ಅನುರಣಿಸುತ್ತದೆ. "ನನ್ನ ಪರಿಶ್ರಮವನ್ನು ಸಹಾನುಭೂತಿಯಿಂದ ಪರಿಶೀಲಿಸುವ ಒಬ್ಬ ಸ್ನೇಹಿತನನ್ನು ನಿಮ್ಮಲ್ಲಿ ಗುರುತಿಸಿದ್ದೇನೆ. ನನಗ

ಮುಂದೆ ನಡೆಯಲು ಇದೊಂದಿಷ್ಟು ಉತ್ತೇಜನ ನೀಡಿದೆ. ನಿಷ್ಕೃಷ್ಟ ಸಾಧನೆಗಳು (proofs) ಬೇಕೆಂದು ನೀವು ಮತ್ತೆ ಮತ್ತೆ ಕೇಳಿದ್ದೀರಿ. ನಾನು ಸಾಧನೆ ಪಡೆದಿರುವ ವಿಧಾನವನ್ನು ನಿಮಗೆ ತಿಳಿಸಬೇಕೆಂದು ಅಪೇಕ್ಷಿಸಿದ್ದೀರಿ. ನನ್ನ ಸಿದ್ಧಾಂತದ ಪ್ರಕಾರ ಈ ಕೆಳಗಿನ ಶ್ರೇಣಿಯ ಅನಂತ ಪದಗಳ ಮೊತ್ತ ೧+೨+ ೩ + ೪+ ......= —೧/೧೨. ಇದನ್ನು ನಾನು ನಿಮಗೆ ಹೇಳಿದ್ದಾದರೆ ಹುಚ್ಚಾಸ್ಪತ್ರೆಯೇ ನನ್ನ ಸರಿಯಾದ ನೆಲೆ ಎಂದು ನೀವು ಆ ಕಡೆ ಕೈ ತೋರಿಸುತ್ತೀರಿ. ನಾನು ಹೇಳುವುದಿಷ್ಟು: ನಾನು ಕೊಟ್ಟಿರುವ ಫಲಿತಾಂಶಗಳನ್ನು ತಾಳೆ ನೋಡಿ; ಅವು ನಿಮ್ಮ ಫಲಿತಾಂಶಗಳ ಜೊತೆ ಹೊಂದಿಕೊಂಡರೆ ನನ್ನ ಮೂಲಭೂತ ಚಿಂತನೆಯಲ್ಲಿ ಏನೊ ಹುರುಳಿದೆ ಎಂಬುದಷ್ಟನ್ನಾದರೂ ನೀವು ಒಪ್ಪಬೇಕು.

"ನನ್ನ ಮಿದುಳನ್ನು ಕಾಪಾಡಿಕೊಳ್ಳಲು ನನಗೆ ಆಹಾರ ಅಗತ್ಯವಾಗಿದೆ. ಇದೇ ನನ್ನ ಪ್ರಥಮಾವಶ್ಯಕತೆ. ನಿಮ್ಮಿಂದ ಬರಬಹುದಾದ ಯಾವುದೇ ಅನುಕಂಪಪೂರಿತ ಪತ್ರವೂ ಇಲ್ಲಿಯ ವಿಶ್ವವಿದ್ಯಾಲಯದಿಂದ ಇಲ್ಲವೇ ಸರಕಾರದಿಂದ ನನಗೊಂದು ವಿದ್ಯಾರ್ಥಿ ವೇತನ ದೊರಕಿಸಿ ಕೊಡುವಲ್ಲಿ ನೆರವಾದೀತು."

ವೃಥಾ ಮನಃಕಷಾಯ

ಹಾರ್ಡಿ ಎಂಥ ಉತ್ತುಂಗ ಗಣಿತವ್ಯಕ್ತಿ ಆಗಿದ್ದರೋ ಅಂಥ ಸಹೃದಯ ಉದಾರಿಯೂ ಆಗಿದ್ದರು. ರಾಮಾನುಜನ್ನರ ಪ್ರತಿಭೆಯ ಆಳ, ಹರವು ಮತ್ತು ಪರಿಮಿತಿಗಳನ್ನು ಚೆನ್ನಾಗಿ ಗ್ರಹಿಸಿದ ಇವರು ಇಂಥ ವಿಲಕ್ಷಣ ಪುರುಷ ಸಮಾನ ಪ್ರತಿಭಾನ್ವಿತರ ಜೊತೆ ಅನುಕೂಲ ಪರಿಸರದಲ್ಲಿ ವಿಕಸಿಸತಕ್ಕದ್ದೆಂದು ನಿರ್ಧರಿಸಿದರು. ಅಂದರೆ ರಾಮಾನುಜನ್ ಕೇಂಬ್ರಿಜ್ ಸೇರುವುದೊಂದೇ ಹಾದಿ. ಲಂಡನ್ನಿನಲ್ಲಿದ್ದ ಭಾರತ ವಿದ್ಯಾರ್ಥಿ ಸಂಸ್ಥೆಗೆ ಹಾರ್ಡಿ ಈ ಕುರಿತ ಕೋರಿಕೆಯೋಲೆ ಸಲ್ಲಿಸಿದರು. ಅದರ ಅಧಿಕಾರಿಗಳು ಒಡನೆ ತಮ್ಮ ಮದ್ರಾಸ್ ಶಾಖೆಯ ಮೂಲಕ ರಾಮಾನುಜನ್ನರನ್ನು ಸಂಪರ್ಕಿಸಿದಾಗ ದೊರೆತ ಉತ್ತರ–ನಕಾರ. ಕಾರಣ? ಜಾತಿಯ ಕಟ್ಟುಪಾಡುಗಳು ಕಡಲಯಾನದ ವಿರುದ್ಧ ಹೇರಿದ್ದ ಅಡ್ಡಗೋಡೆಗಳು! ಹಾರ್ಡಿ ಹತಾಶರಾದರು. ಆದರೆ ಪ್ರಯತ್ನ ನಿಲ್ಲಿಸಲಿಲ್ಲ.

ಇದು ಹಾಗಿರಲಿ. ಈ ಪರಮ ಸಜ್ಜನ ಮತ್ತು ಸಾಫ್‌ಸೀದಾ ವ್ಯಕ್ತಿ ರಾಮಾನುಜನ್ ತಮ್ಮ ಫಲಿತಾಂಶಗಳ ಬಗೆಗಿನ ಸಾಧನೆಗಳನ್ನೇಕೆ ರವಾನಿಸುತ್ತಿಲ್ಲ? ಇದು ಹಾರ್ಡಿಯವರ ಎದುರು ನಿಂತ ಒಗಟು. ತಮ್ಮ ಸಹೋದ್ಯೋಗಿ ಜೆ. ಇ. ಲಿಟಲ್‌ವುಡ್ ಜೊತೆ ಇದನ್ನು ಚರ್ಚಿಸಿ ಹಾರ್ಡಿ ರಾಮಾನುಜನ್ನರಿಗೊಂದು ಪತ್ರ ಬರೆದರು (೨೬–೩–೧೯೧೩). "ನಿಮ್ಮ ಹಿಂದಿನ ಕಾಗದವನ್ನು ಮಿ. ಲಿಟಲ್‌ವುಡ್ ಅವರಿಗೆ ಕಳಿಸಿದ್ದೆ. ಅವರ ಪ್ರತಿಕ್ರಿಯೆ ಈಗ ನನ್ನ ಕೈ ಸೇರಿದೆ. ಏತನ್ಮಧ್ಯೆ ನಾನು ನಿಮಗೊಂದು ಪತ್ರ ಹಾಕಿದ್ದೇನೆ. ಇತ್ತ ನಿಮ್ಮ ಇನ್ನಷ್ಟು ಫಲಿತಾಂಶಗಳನ್ನು ಪರಿಶೀಲಿಸಿದ್ದೇನೆ.

"ಅಪಸರಣ ಶ್ರೇಣಿಗಳ ಸಿದ್ಧಾಂತ, ಸಾಮಾನ್ಯ ನಿಯಮವೋ ಎಂಬಂತೆ, ಸರಿಯಾದ ಫಲಿತಾಂಶಗಳತ್ತಲೇ ಸಾಗುತ್ತದೆ. ಈ ಸಾಮಾನ್ಯ ನಿಯಮದಲ್ಲಿಯ ಪ್ರಮುಖ ಅಪವಾದಗಳು ಅವಿಭಾಜ್ಯ ಸಂಖ್ಯೆಗಳ ಸಿದ್ಧಾಂತದಲ್ಲಿ ಕಂಡುಬರುತ್ತವೆ. ಶುದ್ಧ ಗಣಿತದ ಎಲ್ಲ ಶಾಖೆಗಳ ಪೈಕಿ ಇದು ಅತ್ಯಂತ ಕಠಿಣವಾದದ್ದು. ಪ್ರಾಯಶಃ ಈ ಕಾರಣದಿಂದ ಇದರಲ್ಲಿ ನೀವು ತಪ್ಪು ಮಾಡಿರಬಹುದು. ಇಂತಿದ್ದರೂ ನೀವು ಸಾಧಿಸಿರುವುದು ಗಮನಾರ್ಹವಾಗಿದೆ ಎಂಬ ನನ್ನ ಅಭಿಪ್ರಾಯ ಕಿಂಚಿತ್ತೂ ಅಲುಗಾಡದು: ಸಂತತ ಭಿನ್ನರಾಶಿಗಳ ಹಾಗೂ ಎಲ್ಲಿಪ್ಟಿಕ್ ಉತ್ಪನ್ನಗಳ ಬಗ್ಗೆ ನೀವು ಮಂಡಿಸಿರುವ ಫಲಿತಾಂಶಗಳೇ (ಇವು ಸರಿಯಾಗಿವೆ ಎಂದು ಅಂಗೀಕರಿಸಿದಲ್ಲಿ ನಾನು ಇದಕ್ಕೆ ಸಿದ್ಧನಿದ್ದೇನೆ) ಇದಕ್ಕೆ ಸಮರ್ಥನೆ.

"ಸಾಧನೆಗಳನ್ನು ನನಗೆ ರವಾನಿಸುವುದರಲ್ಲಿ ನೀವು ಹಿಂದೇಟು ಹೊಡೆಯುತ್ತಿರುವುದು ಪ್ರಾಯಶಃ ನಾನು ಅವನ್ನು ಹೇಗೆ ಬಳಸಿಕೊಂಡೇನೆಂಬ ಶಂಕೆಯಿಂದಾಗಿರಬಹುದೆಂದು ಮಿ. ಲಿಟಲ್‌ವುಡ್ ಸೂಚಿಸಿದ್ದಾರೆ. ನನ್ನ ನಿಲುವನ್ನು ನೇರವಾಗಿ ನಿಮಗೆ ತಿಳಿಸಬಯಸು

ತ್ತೇನೆ. ನಿಮ್ಮೊಡನೆ ಈಗ ನನ್ನ ಮೂರು ದೀರ್ಘ ಪತ್ರಗಳಿವೆ. ನೀವು ಏನನ್ನು ಸಾಧಿಸಿದ್ದೀರಿ ಅಥವಾ ಸಾಧನೀಯ ಎಂದು ಹೇಳಿದ್ದೀರಿ ಎಂಬುದನ್ನು ನಾನು ಆ ಕಾಗದಗಳಲ್ಲಿ ಪ್ರಸ್ತಾವಿಸಿದ್ದೇನೆ. ನಿಮ್ಮ ಕಾಗದಗಳನ್ನು ನಾನು ಮಿ. ಲಿಟಲ್‌ವುಡ್, ಡಾ. ಬಾರ್ನೆಸ್, ಮಿ. ಬೆರ್ರಿ ಮತ್ತು ಇತರ ಗಣಿತಜ್ಞರಿಗೆ ತೋರಿಸಿದ್ದೇನೆ. ಆದ್ದರಿಂದ ನಿಮ್ಮ ಯಾವುದೇ ಫಲಿತಾಂಶಗಳನ್ನು ನಾನು ಕಾನೂನುಬಾಹಿರವಾಗಿ ಉಪಯೋಗಿಸಿಕೊಳ್ಳಲು ಯತ್ನಿಸಿದ್ದೇ ಆದರೆ ನನ್ನನ್ನು ಬಯಲಿಗೆಳೆಯಲು ನಿಮ್ಮಲ್ಲಿ ಸಾಕಷ್ಟು ಪುರಾವೆಗಳಿವೆ ಎನ್ನುವುದು ಸ್ಪಷ್ಟ. ಈ ಪರಿಸ್ಥಿತಿಯನ್ನು ಇಷ್ಟೊಂದು ಖಂಡತುಂಡವಾಗಿ ಬರೆದಿರುವುದಕ್ಕೆ ನೀವು ನನ್ನನ್ನು ಕ್ಷಮಿಸಬೇಕು. ನಿಮ್ಮಲ್ಲಿ ಎದ್ದು ಪ್ರಕಟವಾಗುತ್ತಿರುವ ಗಣಿತ ಸಾಮರ್ಥ್ಯದ ಉತ್ಕೃಷ್ಟ ಉಪಯೋಗ ಪಡೆಯಲು ನಿಮಗೆ ಸಮರ್ಪಕ ಸಂಪರ್ಕ ಒದಗಿಸಿ ಕೊಡುವುದೊಂದೇ ನನ್ನ ಪ್ರಾಮಾಣಿಕ ಆಸಕ್ತಿ. ಇಲ್ಲವಾಗಿದ್ದರೆ ಈ ಮೇಲಿನಂತೆ ಬರೆಯುತ್ತಿರಲಿಲ್ಲ.

“ಎಲ್ಲಕ್ಕೂ ಮಿಗಿಲಾಗಿ ನನಗೆ ಬೇಕಾದದ್ದು ಇದು: ಸಂತತ ಭಿನ್ನ ರಾಶಿಗಳಿಗೆ ಸಂಬಂಧಿಸಿದಂತೆ ನೀವು ಪಡೆದಿರುವ ಕೆಲವು ಫಲಿತಾಂಶಗಳಿಗೆ ನಿರ್ದಿಷ್ಟ ಸಾಧನೆ. ಇಂಥ ಒಂದು ಸಾಧನೆ ಆದಷ್ಟು ಬೇಗನೆ ನನ್ನ ಕೈಸೇರುವಂತೆ ಮಾಡುವುದೇ ನೀವು ನಿಮ್ಮ ಹಿತಾಸಕ್ತಿಗಳ ದೃಷ್ಟಿಯಿಂದ ಅನುಸರಿಸಬಹುದಾದ ಅತ್ಯಂತ ಶ್ರೇಯಸ್ಕರ ಮಾರ್ಗ.”

ಕೋಮಲಾಂತಃಕರಣಿ ರಾಮಾನುಜನ್ನರಿಗೆ ಈ ನೇರ ವಿವರಣೆಯಿಂದ ಆಘಾತವಾಗಿ ಬಡಿಯಿತು. ೧೭-೪-೧೯೧೩ರಂದು ಇವರು ಹಾರ್ಡಿಯವರಿಗೆ ಮಾರೋಲೆ ಬರೆದರು. “ನೀವು ಬರೆದುದನ್ನು ಓದಿ ನನಗೆ ವೇದನೆಯಾಗಿದೆ. ನನ್ನ ವಿಧಾನಗಳನ್ನು ಇತರರು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ನನಗೆ ಕಿಂಚಿತ್ತು ಚಿಂತೆಯೂ ಇಲ್ಲ. ಬದಲು, ನನ್ನ ವಿಧಾನ ಕಳೆದ ಎಂಟು ವರ್ಷಗಳಿಂದಲೂ ನನ್ನೊಡನೆ ಇರುವುದಾದರೂ ಅದನ್ನು ಮೆಚ್ಚಬಲ್ಲ ಯಾರೊಬ್ಬರನ್ನೂ ಕಂಡಿಲ್ಲ. ಹಿಂದಿನ ಕಾಗದದಲ್ಲಿ ನಾನು ಬರೆದಿರುವಂತೆ ನಿಮ್ಮಲ್ಲಿ ಒಬ್ಬ ಅನುಕಂಪಶೀಲ ಸ್ನೇಹಿತನನ್ನು ಗುರುತಿಸಿದ್ದೇನೆ. ನನ್ನಲ್ಲಿರುವ ತೃಣವನ್ನು ಮುಕ್ತ ಮನಸ್ಸಿನಿಂದ ನಿಮ್ಮ ಕರಗಳಿಗೊಪ್ಪಿಸಲು ಸಿದ್ಧನಿದ್ದೇನೆ. ನಾನು ಬಳಸಿರುವ ವಿಧಾನದ ಹೊಸತನವೊಂದೇ ಈಗಲಾದರೂ ನನ್ನನ್ನು, ಈಗಾಗಲೇ ನಾನು ನಿಮಗೆ ಕಳಿಸಿರುವ ಫಲಿತಾಂಶಗಳನ್ನು ಹೇಗೆ ಪಡೆದೆನೆಂದು ತಿಳಿಸುವಲ್ಲಿ, ಹಿಂಜರಿಯುವಂತೆ ಮಾಡುತ್ತಿರುವುದಾಗಿದೆ...ಸ್ಥಳೀಯ (ಮದ್ರಾಸ್) ವಿಶ್ವವಿದ್ಯಾಲಯವು ನನಗೆ ೬೦ ಪೌಂಡುಗಳ ವಾರ್ಷಿಕ ವಿದ್ಯಾರ್ಥಿವೇತನವನ್ನು ಎರಡು ವರ್ಷ ಪರ್ಯಂತ ಮಂಜೂರು ಮಾಡಿದೆಯೆಂದು ತಿಳಿಸಲು ಸಂತೋಷವಾಗುತ್ತದೆ.”

ಪ್ರತಿಭೆಯ ಉಗಮ

ಶ್ರೀನಿವಾಸ ಅಯ್ಯಂಗಾರ್ ಕುಂಭಕೋಣಮ್ಮಿನಲ್ಲಿಯ ಒಂದು ಬಟ್ಟೆ ಅಂಗಡಿಯಲ್ಲಿ ಗುಮಾಸ್ತರು. ಕೋಮಲಮ್ಮಾಳ್ ಇವರ ಪತ್ನಿ. ಈ ದಂಪತಿಗಳ ಮಗನಾಗಿ ರಾಮಾನುಜನ್ ಈರೋಡಿನಲ್ಲಿ (ತಾಯಿಯ ತವರೂರು) ೨೨-೧೨-೧೮೮೭ರಂದು ಜನಿಸಿದರು. ಬಡತನ, ದೈವ ಭಕ್ತಿ ಮತ್ತು ಕರ್ಮಠ ಸಂಪ್ರದಾಯ ಇವರ ಬಾಳ ಸಂಗಾತಿಗಳು.

ಆಧುನಿಕ ಇಂಗ್ಲಿಷ್ ಶಿಕ್ಷಣ ಕ್ರಮ ದೇಶಾದ್ಯಂತ ಪಸರಿಸುತ್ತಿದ್ದ ಆ ದಿನಗಳಂದು [illegible] ರಾಮಾನುಜನ್ನರನ್ನು ಕುಂಭಕೋಣಮ್ಮಿನ ಪ್ರಾಥಮಿಕ ಶಾಲೆಗೆ ಸೇರಿಸಿದರು (೧೮೯೨). ಪ್ರಾಥಮಿಕ ಪರೀಕ್ಷೆಯಲ್ಲಿ ಇವರು ತಂಜಾವೂರು ಜಿಲ್ಲೆಯಲ್ಲೇ ಪ್ರಥಮ ಸ್ಥಾನ ಗಳಿಸಿ ಉತ್ತೀರ್ಣರಾದರು (೧೮೯೭). ಮುಂದೆ ಎರಡನೆಯ ಫಾರ್ಮಿಗೆ (ಇಂದಿನ ಆರನೆಯ ಕ್ಲಾಸ್) ಬಂದಾಗ ಇವರನ್ನು ಕಾಡುತ್ತಿದ್ದ ಪ್ರಶ್ನೆ “ಗಣಿತ ಶಾಸ್ತ್ರದಲ್ಲಿ ಪರಮೋಚ್ಚ ಸತ್ಯ ಯಾವುದು?”

ಮೂರನೆಯ ಫಾರ್ಮಿನಲ್ಲಿ ನಡೆದ ಒಂದು ಪ್ರಸಂಗ (೧೯೦೦):

ಅಂಕಗಣಿತದಲ್ಲಿ ಭಾಗಾಹಾರದ ವಿಧಿಯನ್ನು ವಿವರಿಸುತ್ತಿದ್ದ ಉಪಾಧ್ಯಾಯರೆಂದರು: “

ಹಣ್ಣುಗಳನ್ನು ೧೩ ಮಂದಿಯಲ್ಲಿ ಸಮವಾಗಿ ಹಂಚಿದಾಗ ಪ್ರತಿಯೊಬ್ಬನಿಗೂ ದೊರೆಯುವ ಹಣ್ಣಿನ ಸಂಖ್ಯೆ ೧. ಹೇಗೆ? ಹಣ್ಣುಗಳ ಸಂಖ್ಯೆಯನ್ನು ಮಂದಿಯ ಸಂಖ್ಯೆಯಿಂದ ಭಾಗಿಸುತ್ತೇವೆ. ಆದ್ದರಿಂದ ಯಾವುದೇ ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಭಾಗಿಸಿದಾಗ ದೊರೆಯುವ ಲಬ್ಧ ೧."

ರಾಮಾನುಜನ್ ತಟಕ್ಕನೆ ಪ್ರಶ್ನೆ ಕೇಳಿದರು. "ಹಾಗಾದರೆ ಇಲ್ಲದ ಹಣ್ಣುಗಳ ಸಂಖ್ಯೆಯನ್ನು ಇಲ್ಲದ ಮಂದಿಯ ಸಂಖ್ಯೆಯಿಂದ ಭಾಗಿಸಿದಾಗ ಕೂಡ ಅಂದರೆ ೦ ಯನ್ನು ೦ ಯಿಂದ ಭಾಗಿಸಿದಾಗ, ಲಬ್ಧ ೧ ದೊರೆಯುವುದೇ?"

ಈ ಪ್ರಶ್ನೆಗೆ ಉಪಾಧ್ಯಾಯರು ಏನು ಉತ್ತರ ಕೊಟ್ಟರೆಂಬುದು ವರದಿ ಆಗಿಲ್ಲ. (೦ ÷ ೦ಯ ವಿಶ್ಲೇಷಣೆ ಅಂಕಗಣಿತದ ಸೀಮೆ ದಾಟಿ ಕಲನಶಾಸ್ತ್ರದ (Calculus) ವ್ಯಾಪ್ತಿಯಲ್ಲಿ ಬರುತ್ತದೆ. ಇಂದಿನ ಪ್ರೀ ಯೂನಿವರ್ಸಿಟಿ ಗಣಿತ ವಿದ್ಯಾರ್ಥಿಗಳಿಗೆ ಇದನ್ನು ಬೋಧಿಸುತ್ತಾರೆ.)

ಇಂಥ ಮೂಲಭೂತ ಗಣಿತ ಸಂದೇಹಗಳು ರಾಮಾನುಜನ್ನರಿಗೆ ಪ್ರವಾಹರೂಪದಲ್ಲಿ ಬರತೊಡಗಿದುವು. ಪ್ರಾಯಕ್ಕೂ, ತರಗತಿಗೂ ಮೀರಿ ಇವರ ಗಣಿತ ದಾಹ ಹಬ್ಬಿತ್ತು. ಸ್ವಂತ ಪರಿಶ್ರಮದಿಂದ ಹಾಗೂ ಪ್ರೌಢ ಗಣಿತ ಪಠ್ಯಪುಸ್ತಕಗಳ ಅಧ್ಯಯನದಿಂದ ತ್ರಿಕೋಣಮಿತಿ, ಬೀಜ ಗಣಿತ, ಜ್ಯಾಮಿತಿ ಮುಂತಾದ ಶುದ್ಧ ಗಣಿತ ವಿಭಾಗಗಳಲ್ಲಿ ಅವರು ವಯಸ್ಸಿಗೆ ಮೀರಿದ ಪ್ರಾವೀಣ್ಯ ಗಳಿಸಿದ್ದರು. ಹಲವಾರು ಮೂಲಭೂತ ಫಲಿತಾಂಶಗಳನ್ನು ಸ್ವಂತ 'ಸಂಶೋಧನೆ'ಯಿಂದ ಪಡೆದರು. ಆದರೆ ಅವು ಹಳೆಯ ಸತ್ಯಗಳ ಹೊಸ ಆವಿಷ್ಕಾರ ಮಾತ್ರ! ಬಾಲ ಪ್ರತಿಭೆಗೆ ಸಮರ್ಥ ಮಾರ್ಗದರ್ಶನ ಒದಗದಾಗ ಆಗುವುದೇ ಹೀಗೆ: ಸ್ಥಾಪಿತ ಸತ್ಯಗಳ ಪುನರಾವಿಷ್ಕಾರದಲ್ಲಿ ವೃಥಾ ಶಕ್ತಿಹ್ರಾಸ.

ಆರನೆಯ ಫಾರ್ಮಿನಲ್ಲಿದ್ದಾಗ (೧೯೦೩) ಇವರ ಕೈಗೊಂದು 'ಅಮೂಲ್ಯ, ಅನರ್ಘ್ಯ' ಗಣಿತ ರತ್ನ ಬಿತ್ತು: A Synopsis of Elementary Results: PURE MATHEMATICS containing Propositions, Formulae and Methods of Analysis, with Abridged notations by G. S. Carr, M. A., Published in London (1886). ಇದು ಗಣಿತ ಸೂತ್ರಗಳ ಹಾಗೂ ಫಲಿತಾಂಶಗಳ ಸಂಕಲನ ಮಾತ್ರ, ಗಣಿತದ ಯಾವುದೇ ವಿಭಾಗವನ್ನು ಶಾಸ್ತ್ರೀಯವಾಗಿ ವಿವೇಚಿಸುವ ಆಕರ ಗ್ರಂಥವಲ್ಲ.

ಈ Synopsis ರಾಮಾನುಜನ್ನರನ್ನು ನೂತನ ವಿಸ್ಮಯಲೋಕವೊಂದಕ್ಕೆ ಒಯ್ಯಲು ನಿಮಿತ್ತ ಮಾತ್ರವಾಯಿತು. ಇದರಲ್ಲಿದ್ದ ಒಂದೊಂದು ಸೂತ್ರವೂ ಒಂದೊಂದು ಫಲಿತಾಂಶವೂ ಇವರಿಗೆ ಒಂದೊಂದು ಸಂಶೋಧನ ಸಮಸ್ಯೆಯೇ. ಏಕೆಂದರೆ ಬಹುತೇಕವಾಗಿ ಅವುಗಳಿಗೆ ಸಾಧನೆ ಅಲ್ಲಿರುತ್ತಿರಲಿಲ್ಲ. ಅದನ್ನು ಸ್ವಂತವಾಗಿ ಪಡೆಯುವ ಸಾಹಸದಲ್ಲಿ ಇವರು ಹೊಸ ಹಾದಿ ಹಿಡಿದು ಸಾಗಬೇಕಾಯಿತು. ಆಗ ಇವರು ವಿಹರಿಸಿದ ಕ್ಷೇತ್ರಗಳೆಂದರೆ ಬೀಜಗಣಿತ, ಜ್ಯಾಮಿತಿ, ತ್ರಿಕೋಣಮಿತಿ, ಕಲನಶಾಸ್ತ್ರ ಹಾಗೂ ವಿಶ್ಲೇಷಣ ಗಣಿತ. ತಮ್ಮ ಆರಾಧ್ಯ ದೈವವಾದ ನಾಮಗಿರಿದೇವಿ ಕನಸಿನಲ್ಲಿ ತಮಗೆ ಕಾಣಿಸಿಕೊಂಡು ಗಣಿತ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಿದ್ದಳೆಂದು ಇವರೊಮ್ಮೆ ಹೇಳಿದ್ದರು. ನಿದ್ದೆ ತಿಳಿದೆದ್ದಾಗ ಇವರು ಮಾಡುತ್ತಿದ್ದ ಮೊದಲ ಕೆಲಸವೆಂದರೆ ಈ ಎಲ್ಲ ಪರಿಹಾರಗಳನ್ನೂ ತಮ್ಮ ಅಮೂಲ್ಯ ಟಿಪ್ಪಣಿ ಪುಸ್ತಕದಲ್ಲಿ ಗುರುತಿಸುತ್ತಿದ್ದುದು; ಬಳಿಕ ನಿಧಾನವಾಗಿ ಇವನ್ನು ಸರಿಯೇ ಎಂದು ತಾಳೆ ನೋಡುತ್ತಿದ್ದರು. ಪ್ರತಿಯೊಂದು ಫಲಿತಾಂಶಕ್ಕೂ ನಿಷ್ಕೃಷ್ಟ ಸಾಧನೆ ಒದಗಿಸಲು ಇವರಿಗೆ ಸಾಧ್ಯವಾಗುತ್ತಿರಲಿಲ್ಲ.

ರಾಮಾನುಜನ್ ಹುಟ್ಟಿನಿಂದಲೇ ಒಬ್ಬ ಗಣಿತ ಪಟು, ಶಿಕ್ಷಣದಿಂದ ಆದವರಲ್ಲ. ಇವರ ಗಣಿತ ಪ್ರತಿಭೆಗೆ ಸಮತೂಕವಾದ ಆಧುನಿಕ ಗಣಿತ ಶಿಕ್ಷಣ ಇವರಿಗೆ ತರುಣ ಪ್ರಾಯದಿಂದಲೇ ದೊರೆತಿದ್ದರೆ, ಎಂದರೆ ಈ ಪ್ರತಿಭೆ ವ್ಯವಸ್ಥಿತ ಹಾದಿಯಲ್ಲಿ ಸಾಗುವಂತಾಗಿದ್ದರೆ, ಪುರಾತನ ಮತ್ತು ಅದೆಷ್ಟೋ ವೇಳೆ ಅಪ್ರಚಲಿತ ಫಲಿತಾಂಶ

ಗಳನ್ನು ಇವರು ಪುನರಪಿ ಸಂಶೋಧಿಸುವ ವ್ಯರ್ಥ ಪರಿಶ್ರಮವನ್ನು ನಿವಾರಿಸಬಹುದಿತ್ತು; ಅದೇ ಪರಿಶ್ರಮದಿಂದ ಗಣಿತ ಕ್ಷಿತಿಜವನ್ನು ಇನ್ನಷ್ಟು ವಿಸ್ತರಿಸಬಹುದಿತ್ತು ಪ್ರಾಯಶಃ. ಇದು ಹೇಗೂ ಇರಲಿ. ರಾಮಾನುಜನ್ನರ ಗಣಿತ ತಳಪಾಯ ಏರ್ಪಟ್ಟದ್ದು ಹೀಗೆ: ಯಾದೃಚ್ಛಿಕವಾಗಿ ದೊರೆತ ಪುಸ್ತಕಗಳ ಅನುಸಂಗದಿಂದ, ಸ್ವಂತ ಪ್ರಯತ್ನದಿಂದ ಸಂತತ ತಪಸ್ಸಿನಿಂದ;

ಮದ್ರಾಸ್ ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಇವರು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ್ದರಿಂದ (೧೯೦೩) ಇವರಿಗೆ ಯೋಗ್ಯತಾ ವಿದ್ಯಾರ್ಥಿವೇತನ ಮಂಜೂರಾಯಿತು. ಹೀಗಾಗಿ ಬಡತನದ ನಡುವೆಯೂ ಕಾಲೇಜ್ ಶಿಕ್ಷಣವನ್ನು ಮುಂದುವರಿಸುವುದು ಸಾಧ್ಯವಾಯಿತು. ಆದರೆ ಅಲ್ಲಿ ಇವರು ತಮ್ಮ ಏಕೈಕ ಆಸಕ್ತಿಯಾದ ಪ್ರೌಢ ಗಣಿತದ ಹೊರತು ಎಲ್ಲ ಕಡ್ಡಾಯ ವಿಷಯಗಳನ್ನೂ ಅಲಕ್ಷಿಸಿದರು. ಪರೀಕ್ಷೆಯ ದೃಷ್ಟಿಯಿಂದ ಇದು ವಿಘಾತಕವಾಯಿತು. F. A. ಪ್ರಥಮ ವರ್ಷದ ಪರೀಕ್ಷೆಯಲ್ಲಿ (೧೯೦೪) ಇವರು FAIL. ಪರೀಕ್ಷೆಯ ಅಂಧ ಯಂತ್ರಕ್ಕೆ ಪ್ರತಿಭೆಯ ಉಜ್ಜ್ವಲ ಪ್ರಭೆ ಹೇಗೆ ತಾನೆ ಗೋಚರವಾದೀತು?

ಯೋಗ್ಯತಾ ವಿದ್ಯಾರ್ಥಿ ವೇತನ ರದ್ದಾಯಿತು. ಹೀಗಾಗಿ ಈ ಜಗತ್ಪ್ರತಿಭೆ ಆ ಎಳವೆಯಲ್ಲಿಯೇ (೧೭) ಅನಾಥವಾಗಿ, ನೆಲೆತಪ್ಪಿ, ಕಾಲ ಮತ್ತು ಪರಿಸರ ತಳ್ಳಿದೆಡೆಗೆ ಮೂಕವಾಗಿ ಅಲೆಯಬೇಕಾಯಿತು. ಮನೆಯಲ್ಲೋ ಕಡುಬಡತನ. ಅರೆ ಮನೆಯನ್ನೇ ಬಾಡಿಗೆಗೆ ಕೊಡಲೆಂದು ತೆರವು ಮಾಡಿದ್ದರು.

ಪ್ರತಿಭೆಯ ಅಲೆತ

ಸ್ನೇಹಿತರ ಒತ್ತಾಯದಿಂದ ರಾಮಾನುಜನ್ ಮದ್ರಾಸ್ ನಗರ ಸೇರಿದರು (೧೯೦೬). ಅಲ್ಲಿ ಹೊಟ್ಟೆಪಾಡು ನಿಭಾಯಿಸುತ್ತ ವಿದ್ಯಾರ್ಜನೆ ಮುಂದುವರಿಸುವುದು ಸಾಧ್ಯವಾದೀತೆಂಬುದು ಅವರ ಆಶಯ. ಪಚ್ಚಯ್ಯಪ್ಪ ಕಾಲೇಜಿನಲ್ಲಿ ಎಫ್. ಎ. ಎರಡನೆಯ ವರ್ಷದ ವಿದ್ಯಾರ್ಥಿಯಾಗಿ ದಾಖಲಾದರು. ಆ ಮಹಾನಗರದ ಕಿರುಗಲ್ಲಿಯೊಂದರಲ್ಲಿದ್ದ ಪರಕು ಪಠಾರದಲ್ಲಿ ಇವರ ಮುರುಕು ನೆಲೆ. ಕಡು ಆಚಾರವಂತರಾದ ಇವರಿಗೆ ಮಡಿಯಲ್ಲಿ ಆಹಾರ ಒದಗಿಸಲು ಅಜ್ಜಿ ಜೊತೆಗಿದ್ದರು. ಸಂಪಾದನೆ? ಖಾಸಗಿಯಾಗಿ ಪಾಠ ಹೇಳಿ ದೊರೆತ ಪುಡಿಗಾಸೇ ಗತಿ. ಅಲ್ಲಿಯ ಮೂರು ತಿಂಗಳ ವಾಸ್ತವ್ಯದಲ್ಲಿ ಇವರ ಆರೋಗ್ಯ ಹಳಿತಪ್ಪಿತು. ಹೀಗಾಗಿ ಕುಂಭಕೋಣಮ್ಮಿಗೆ ಹಿಂತಿರುಗಿ ಮರುವರ್ಷ ಮತ್ತೆ ಮದ್ರಾಸಿಗೆ ಮರಳಿ ಖಾಸಗಿ ಅಭ್ಯರ್ಥಿಯಾಗಿ ಎಫ್. ಎ. ಅಂತಿಮ ಪರೀಕ್ಷೆ ಬರೆದರು (೧೯೦೭). ಪುನಃ ಗಣಿತದ ಹೊರತು ಉಳಿದೆಲ್ಲ ವಿಷಯಗಳೂ ಕೈಕೊಟ್ಟಿದ್ದುವು.

ಹೀಗೆ ರಾಮಾನುಜನ್ನರ ಸಾಂಪ್ರದಾಯಿಕ ಶಿಕ್ಷಣದ ದೋಣಿ ನಿರಾಸಕ್ತ ವಿಷಯಗಳ ಬಂಡೆಗೆ ಬಡಿದು ನುಚ್ಚುನೂರಾಯಿತು. ಆದರೆ ಇವರ ಗಣಿತ ವಿಹಾರಗಳು ಮಾತ್ರ ವೈಫಲ್ಯ, ದಾರಿದ್ರ್ಯ, ಅನಾರೋಗ್ಯ ಮುಂತಾದ ಯಾವುದೇ ಅಡ್ಡಿ – ಆತಂಕ ಲೆಕ್ಕಿಸದೆ ಅವ್ಯಾಹತವಾಗಿ ಮುಂದುವರಿದುವು.

೧೯೦೭-೧೧ ಅವಧಿಯನ್ನು ಇವರ ಬಾಳಿನ ತೀವ್ರ ಪಟುತ್ವದ ಪ್ರಥಮ ಘಟ್ಟ ಎಂದು ಗುರುತಿಸಲಾಗಿದೆ—ಒಂದು ತೆರನಾದ ದೈವಿಕ ಉನ್ಮಾದ ಅಥವಾ ಆಂತರಿಕ ಜ್ಯೋತಿ ಆಗ ಇವರನ್ನು ಕೈ ಹಿಡಿದು ಮುನ್ನಡೆಸತೊಡಗಿತೋ ಎಂಬಂತೆ. ಶುದ್ಧ ಗಣಿತದ ವಿವಿಧ ಶಾಖೆಗಳಲ್ಲಿಯ ಫಲಿತಾಂಶಗಳು ಪುಂಖಾನುಪುಂಖವಾಗಿ ಇವರ ಮನದಾಳದಿಂದ ಬುದ್ಬುದಿಸತೊಡಗಿದುವು. ಇವನ್ನು ಟಿಪ್ಪಣಿ ಪುಸ್ತಕದಲ್ಲಿ ವ್ಯವಸ್ಥಿತವಾಗಿ ಗುರುತಿಸುತ್ತಿದ್ದರು. ಆದರೆ ಸಾಧನೆ? ಪ್ರಾಯಶಃ ಫಲಿತಾಂಶಗಳು ಇವರಿಗೆ ಅತ್ಯಂತ ಸುಸ್ಪಷ್ಟವಾಗಿದ್ದುದರಿಂದ ಸಾಧನೆ ಬರೆಯುವ ಅಥವಾ ಅರಿಯುವ ಗೊಡವೆಗೇ ಹೋಗಿರಲಿಲ್ಲ.

ಆ ದಿನಗಳ ಸಂಪ್ರದಾಯಾನುಸಾರ ಇವರಿಗೆ ಇಪ್ಪತ್ತೆರಡನೆಯ ವಯಸ್ಸಿನಲ್ಲಿ (೧೯೦೯) ಕೇವಲ ಒಂಬತ್ತು ವರ್ಷ ವಯಸ್ಸಿನ ಜಾನಕಿ ಎಂಬ ಹುಡುಗಿಯೊಡನೆ ಮದುವೆ ನಡೆಯಿತು. ಈ ದಂಪತಿಗಳಿಗೆ ಮಕ್ಕಳಾಗಲಿಲ್ಲ. ಜಾನಕಿ ಅಮ್ಮಾಳ್

ಈಗ ಮದ್ರಾಸಿನಲ್ಲಿ ವಾಸವಾಗಿದ್ದಾರೆ.

ಗೃಹಸ್ಥ ರಾಮಾನುಜನ್ ದುಬಾರಿ ಮದ್ರಾಸಿನಲ್ಲಿ ಬದುಕಿನ ಜಟಕಾ ಬಂಡಿಯನ್ನು ಚಲಾಯಿಸಬೇಕು. ಹೇಗೆ? ಸ್ನೇಹಿತರ ನೆರವಿನಿಂದ ದೊರೆತ ಹಂಗಾಮಿ ಹುದ್ದೆಗಳು ತಾತ್ಕಾಲಿಕ ಪರಿಹಾರ ನೀಡಿದುವು. ಒಮ್ಮೆ ಇವರಿಗೆ ತಮ್ಮ ಹಳೆಯ ಗೆಳೆಯನೊಬ್ಬನ ಭೇಟಿ ಆಯಿತು (೧೯೧೦). ಇವರ ಹಿರಿಮೆ, ಬವಣೆ ಎರಡನ್ನೂ ಅರಿತಿದ್ದ ಆತನ ಸಲಹೆ ಮೇರೆಗೆ ಇವರು ದಿವಾನ್ ಬಹದೂರ ಆರ್. ರಾಮಚಂದ್ರರಾಯರನ್ನು ಭೇಟಿಯಾಗಿ ಕೆಲಸ ಯಾಚಿಸಲು ನೆಲ್ಲೂರಿಗೆ ಹೋದರು. ರಾಯರು ಇಂಡಿಯನ್ ಮ್ಯಾಥ್‌ಮ್ಯಾಟಿಕಲ್ ಸೊಸೈಟಿಯ ಅಧ್ಯಕ್ಷರೂ ಹಾಗೂ ನೆಲ್ಲೂರು ಜಿಲ್ಲೆಯ ಕಲೆಕ್ಟರ್—ಗಣಿತವನ್ನು ಪರಿಗ್ರಹಿಸಬಲ್ಲ ಹಾಗೂ ಕೆಲಸವನ್ನು ಅನುಗ್ರಹಿಸಬಲ್ಲ ಉಭಯ ಸಾಮರ್ಥ್ಯವಂತ.

ಈ ಭೇಟಿಯ ವೈಖರಿಯನ್ನು ಸ್ವತಃ ರಾಯರೆ ಕೆಲವು ವರ್ಷಾನಂತರ ವರ್ಣಿಸಿದ್ದಾರೆ:

"ಕೆಲವು ವರ್ಷಗಳ ಹಿಂದಿನ ಪ್ರಸಂಗ. ಗಣಿತ ಜ್ಞಾನದಲ್ಲಿ ತೀರ ಎಳೆ ಮಗುವೆನಿಸಿದ್ದ ನನ್ನ

ಸಂಬಂಧಿ ಹುಡುಗನೊಬ್ಬ 'ಕಕ್ಕಾ! ಗಣಿತ ವಿಚಾರವನ್ನೇ ಮಾತಾಡುತ್ತಿರುವ ಒಬ್ಬ ಆಗಂತುಕ ನಮ್ಮಲ್ಲಿಗೆ ಬಂದಿದ್ದಾನೆ. ಅವನು ಹೇಳುವುದು ನನಗೆ ಅರ್ಥವಾಗುತ್ತಿಲ್ಲ. ಅವನ ಮಾತಿನಲ್ಲಿ ಏನಾದರೂ ಹುರುಳುಂಟೇ, ನೋಡುವಿರಾ?' ಎಂದ. ಗಣಿತ ಧೀಶಕ್ತಿಯಲ್ಲಿ ಪರಿಪೂರ್ಣನಾಗಿದ್ದ ನಾನು ರಾಮಾನುಜನ್ನನಿಗೆ ನನ್ನ ಸಮ್ಮುಖಕ್ಕೆ ಬರಲು ಪರವಾನಿಗೆ ನೀಡಿದೆ.

"ಬಂದವನು ಕುಳ್ಳ, ಒರಟ ತೋರ ಇದ್ದ, ಗಡ್ಡ ಹೆರೆದಿರಲಿಲ್ಲ, ಅಷ್ಟೇನೂ ಮಡಿಯಾಗಿಯೂ ಇರಲಿಲ್ಲ. ಆದರೆ ಅವನಲ್ಲಿದ್ದ ಒಂದು ಗಮನಾರ್ಹ ವೈಲಕ್ಷಣ್ಯ ನನ್ನನ್ನು ಆಕರ್ಷಿಸಿತು: ಉಜ್ವಲ ನೇತ್ರಗಳು. ಜೀರ್ಣವಾಗಿದ್ದ ಒಂದು ಟಿಪ್ಪಣಿ ಪುಸ್ತಕವನ್ನು ಕಂಕುಳಡಿಯಲ್ಲಿ ಅಮುಕಿ ಹಿಡಿದಿದ್ದ. ಅವನ ಬಡತನ ಅತಿ ದಾರುಣವಾಗಿತ್ತು. ಕುಂಭಕೋಣಮ್ಮಿನಿಂದ ಮದ್ರಾಸಿಗೆ ಓಡಿಹೋಗಿದ್ದ—ಅಲ್ಲಿ ತನಗೆ ಅಧ್ಯಯನ ಮುಂದುವರಿಸಲು ಬೇಕಾಗುವ ಬಿಡುವು ದೊರೆತೀತೆಂಬ ಆಸೆಯಿಂದ. ಯಾವ ತೆರನಾದ ಮನ್ನಣೆಗೂ ಹಾತೊರೆದವನು ಅವನಲ್ಲ. ಅವನಿಗೆ ಬೇಕಾದದ್ದು ಬಿಡುವು. ಅರ್ಥಾತ್ ಯಾವ ಶ್ರಮವೂ ಆಗದೆ ಸರಳ ಆಹಾರ ದೊರೆಯಬೇಕು ಮತ್ತು ಕನಸು ಕಾಣಲು ಹಾಗೂ ಕಟ್ಟಲು ಅವಕಾಶ ಒದಗಬೇಕು.

"ಅವನು ತನ್ನ ಪುಸ್ತಕ ತೆರೆದು ಅದರಲ್ಲಿದ್ದ ಕೆಲವು ಆವಿಷ್ಕಾರಗಳನ್ನು ನನಗೆ ವಿವರಿಸತೊಡಗಿದ. ಇಲ್ಲೇನೋ ಅಸಾಮಾನ್ಯವಾದದ್ದು ಇದೆಯೆಂದು ತತ್‌ಕ್ಷಣವೇ ನನಗೆ ಹೊಳೆಯಿತು. ಆದರೆ ಅವನು ಹೇಳುತ್ತಿದ್ದುದು ಸುಬದ್ಧವೇ ಅಬದ್ಧವೇ ಎಂದು ತೀರ್ಮಾನಿಸಲು ನನ್ನ ಜ್ಞಾನ ಸಾಲದಾಗಿತ್ತು. ತೀರ್ಪನ್ನು ತಡೆಹಿಡಿದು ಪುನಃ ಬಂದು ನನ್ನನ್ನು ಕಾಣುವಂತೆ ಅವನಿಗೆ ಹೇಳಿದೆ. ಮರಳಿ ಬಂದ. ಆದರೆ ಈ ವೇಳೆಗೆ ನನ್ನ ಅಜ್ಞತೆಯನ್ನು ಅವನು ಅರಿತಿದ್ದ. ಹೀಗಾಗಿ ಕೆಲವು ಸರಳ ಫಲಿತಾಂಶಗಳನ್ನು ಮಾತ್ರ ನನಗೆ ತೋರಿಸಿದ. ಅವು ಪ್ರಚಲಿತ ಗ್ರಂಥಗಳನ್ನು ಬಹುವಾಗಿ ಮೀರಿದಂಥವಾಗಿದ್ದುವು. ಅಸಾಮಾನ್ಯ ವಿಲಕ್ಷಣ ಪುರುಷ ಎನ್ನುವುದರಲ್ಲಿ ನನಗೆ ಅನುಮಾನವೇ ಉಳಿಯಲಿಲ್ಲ. ಮುಂದೆ ಅವನು ಹಂತಹಂತವಾಗಿ ನನ್ನನ್ನು ಎಲ್ಲಿಪ್ಟಿಕ್ ಅನುಕಲಗಳಿಗೂ ಹೈಪರ್ ಜಿಯೊಮೆಟ್ರಿಕ್ ಶ್ರೇಣಿಗಳಿಗೂ ಕರೆದೊಯ್ದ. ಕೊನೆಯಲ್ಲಿ, ಅಪಸರಣ ಶ್ರೇಣಿಗಳನ್ನು ಕುರಿತ, ಪ್ರಪಂಚಕ್ಕೆ ಇನ್ನೂ ಪ್ರಕಟಗೊಳಿಸದಿದ್ದ ಅವನ ಸಿದ್ಧಾಂತ ತನ್ನ ಅಭಿಪ್ರಾಯವನ್ನೇ ಬದಲಾಯಿಸಿಬಿಟ್ಟಿತು. ಅವನಿಗೆ ಏನು ಬೇಕಾಗಿದೆ ಎಂದು ಕೇಳಿದೆ. ತನ್ನ ಸಂಶೋಧನೆಗಳನ್ನು ಮುಂದುವರಿಸಿಕೊಂಡು ಹೋಗುವಷ್ಟರ ಮಟ್ಟಿಗೆ ಬದುಕಿಕೊಂಡಿರಲು ಸಾಕಾಗುವಷ್ಟು ಅಲ್ಪಾದಾಯ ಒದಗಿಸಬೇಕೆಂದು ಕೋರಿದ."

ಇಂಥ ಅದ್ಭುತ ಅಪೂರ್ವ ಪ್ರತಿಭೆ ಸರಕಾರಿ ಖಾತೆ ಅಥವಾ ಖಾನೆಯೊಂದರ ಬುದ್ಧಿರಿಕ್ತ ಮೂಲೆಯಲ್ಲಿ ಕೊಳೆತು ನಶಿಸಿ ಹೋಗಬಾರದೆಂದು ರಾಮಚಂದ್ರರಾಯರು ನಿರ್ಧರಿಸಿದರು. ತಾವು ಪ್ರತಿ ತಿಂಗಳೂ ಒಂದಿಷ್ಟು ಭತ್ಯೆ ಕೊಡುವುದಾಗಿಯೂ ಇದರ ನೆರವಿನಿಂದ ರಾಮಾನುಜನ್ ಮದ್ರಾಸಿನಲ್ಲಿ ವಾಸಿಸುತ್ತ ಸಂಶೋಧನೆ ಮುಂದುವರಿಸಬೇಕಾಗಿಯೂ ಸೂಚಿಸಿದರು. ಈ ಔದಾರ್ಯಪೂರಿತ ಉತ್ತೇಜನ ಇವರಿಗೆ ತಾತ್ಕಾಲಿಕ ಪರಿಹಾರವನ್ನೇನೋ ಒದಗಿಸಿತು. (೧೯೧೧-೧೨). ಆದರೆ ಶಾಶ್ವತ ಸ್ವಾವಲಂಬನೆ?

ಇವರ ಅಖಂಡ ಗಣಿತ ಚಿಂತನೆ ಸಾಧನೆ ಮುಂದುವರಿದವು. ರಾಮಾನುಜನ್ ಎಂಬ ಹೆಸರು ಕ್ರಮೇಣ ಗಣ್ಯರ ಗಮನ ಸೆಳೆಯತೊಡಗಿತು. ಇಂಥ ಒಂದು ದಿವಸ ಇವರ ಹಳೆಯ ಸ್ನೇಹಿತನೊಬ್ಬ ಇವರನ್ನು ಮದ್ರಾಸಿನ ಮರೀನಾ ಕಡಲ ಕಿನಾರೆಯಲ್ಲಿ ಕಂಡ. "ಏನಪ್ಪಾ! ನಿನ್ನನ್ನೊಬ್ಬ ಅತಿ ಅಸಾಮಾನ್ಯ ಮೇಧಾವಿ ಎಂದು ಎಲ್ಲರೂ ಹೇಳುತ್ತಿದ್ದಾರೆ" ಎಂದು ಮೆಚ್ಚುನುಡಿ ಆಡಿದ.

ರಾಮಾನುಜನ್ನರಿಗೋ ಸಹಜ ಮತ್ತು ಮುಗ್ಧ ವಿನಯ. "ನಾನೊಬ್ಬ ಅತಿ ಮಹಾನ್ ಮೇಧಾವಿ? ನನ್ನ ಮೊಣಕೈಯನ್ನು ನೋಡು. ಅದು ಕತೆ ಹೇಳುತ್ತದೆ!"

"ಇದೆಲ್ಲ ಏನು ರಾಮಾನುಜನ್? ಇದೇಕೆ ಇಷ್ಟು ಕಪ್ಪಾಗಿಯೂ, ದೊರಗಾಗಿಯೂ ಉಂಟು?"

"ನನ್ನನ್ನು ಅತಿ ಮಾನುಷ ಮೇಧಾವಿಯಾಗಿ ಮಾಡುವಲ್ಲಿ ನನ್ನ ಮೊಣಕೈ ದೊರಗು ಮತ್ತು ಕಪ್ಪು ಆಗಿದೆ. ಹಗಲಿರುಳು ನಾನು ಬಳಪದ ಹಲಗೆ ಮೇಲೆ ಲೆಕ್ಕ ಮಾಡುತ್ತೇನೆ. ಬರೆದುದನ್ನು ಉಜ್ಜಲು ಚಿಂದಿ ಹುಡುಕುವುದು ಬಲು ವಿಳಂಬದ ಕೆಲಸ. ಪ್ರತಿ ಕೆಲವೇ ನಿಮಿಷಗಳಿಗೊಮ್ಮೆ ನನ್ನ ಮೊಣಕೈಯಿಂದಲೇ ಹಲಗೆ ಅಳಿಸುತ್ತೇನೆ."

"ಅಂದರೆ ನೀನು ಉದ್ಯಮಶೀಲತೆಯ ಪರ್ವತವೇ ಸೈ. ಅಷ್ಟೊಂದು ಲೆಕ್ಕ ಮಾಡಬೇಕಾಗಿರುವಾಗ ಬಳಪದ ಹಲಗೆ ಬಳಸುವದೇಕೆ? ಕಾಗದ ಉಪಯೋಗಿಸಬಾರದೇ?"

"ಅನ್ನಕ್ಕೇ ತತ್ವಾರವಾಗಿರುವಾಗ ಕಾಗದ ಕೊಳ್ಳಲು ಹಣ ಎಲ್ಲಿಂದ ತರಲಿ? ಪ್ರತಿ ತಿಂಗಳೂ ನನಗೆ ನಾಲ್ಕು ರೀಮುಗಳಷ್ಟು ಕಾಗದ ಬೇಕಾದೀತು."

"ಆಹಾರ ಸಂಪಾದಿಸಲು ನೀನೇನು ಮಾಡುವೆ? ಎಲ್ಲಾದರೂ ಕೆಲಸ ಮಾಡುತ್ತಿರುವೆಯಾ?"

"ನೆಲ್ಲೂರಿನ ಕಲೆಕ್ಟರ್ ಆಗಿರುವ ದಿವಾನ್ ಬಹದೂರ ರಾಮಚಂದ್ರರಾಯರೆನ್ನುವ ಉಪಕಾರಿಗಳು ಪ್ರತಿ ತಿಂಗಳೂ ನನಗೆ ಒಂದಿಷ್ಟು ಹಣ ಕಳಿಸುತ್ತಿದ್ದರು. ಆದರೆ ಎಷ್ಟು ಕಾಲ ಪರಾವಲಂಬಿ ಆಗಿ ಇರಲಿ? ಈ ಅಪಮಾನದಿಂದ ಈಗಾಗಲೇ ಜರ್ಜರಿತನಾದ ನಾನು ಕಳೆದ ತಿಂಗಳಿನಿಂದ ಅವರ ಔದಾರ್ಯದ ನೆರವು ತೆಗೆದುಕೊಳ್ಳುತ್ತಿಲ್ಲ."

"ಎಂಥ ದುಡುಕಿನ ಹೆಜ್ಜೆ. ಹಾಗಾದರೆ ಈಗ ಏನು ಮಾಡುತ್ತಿರುವೆ?"

"ಮದ್ರಾಸಿನ ಪೋರ್ಟ್ ಟ್ರಸ್ಟ್ ಕಚೇರಿಯಲ್ಲಿ ಗುಮಾಸ್ತನಾಗಿ ಸೇರಿದ್ದೇನೆ. ಸಂಬಳ ತಿಂಗಳಿಗೆ ಇಪ್ಪತ್ತೈದು ರೂಪಾಯಿ."

ಕುಂಭಕೋಣಮ್ಮಿನಲ್ಲಿ ರಾಮಾನುಜನ್ನರ ಗುರುವೂ, ಹಿರಿಯ ಗಣಿತ ಪ್ರಾಧ್ಯಾಪಕರೂ ಆಗಿದ್ದ ಪಿ. ವಿ. ಶೇಷು ಅಯ್ಯರ್ ಈ ಮಹಾ ಪ್ರತಿಭೆ ಗಣಿತವೊಂದನ್ನೇ ಉಸಿರಾಡಿಕೊಂಡಿರಲು ಅನುಕೂಲವಾಗುವಂತೆ ಇವರಿಗೆ ಮದ್ರಾಸ ವಿಶ್ವವಿದ್ಯಾಲಯದ ಸಂಶೋಧನ ವಿದ್ಯಾರ್ಥಿ ವೇತನ ದೊರಕಿಸಲು ಪ್ರಯತ್ನಿಸಿ ವಿಫಲರಾದರು. ಯಾವುದೇ ಪದವಿ ಗಳಿಸಿರದಾತನಿಗೆ ಇಂಥ ವೇತನ ಮಂಜೂರುಮಾಡಲು ವಿಶ್ವವಿದ್ಯಾಲಯದ ಕಾಯ್ದೆಯಲ್ಲಿ ಎಡೆ ಇರಲಿಲ್ಲ.

ಮತ್ತೆ ಅಯ್ಯರ್ ಹಾಗೂ ಮಿತ್ರರ ಪ್ರಯತ್ನದ ಫಲವಾಗಿ ಇವರಿಗೆ ಮದ್ರಾಸ ಪೋರ್ಟ್ ಟ್ರಸ್ಟ್ ಕಚೇರಿಯಲ್ಲಿ ಕಾರಕೂನನ ಕೆಲಸ ದೊರೆಯಿತು (೧-೩-೧೯೧೨). ಹೀಗೆ ಗೊತ್ತಾದ ಒಂದು ಹುದ್ದೆ, ನಿಗದಿಯಾದ ಒಂದಿಷ್ಟು ಸಂಬಳ ಮತ್ತು ಜೀವನಯಾಪನೆಗೆ ಹಿತಕರವಾದ ಒಂದು ಪರಿಸರ ಒದಗಿದ್ದರಿಂದ ರಾಮಾನುಜನ್ ನಿರಾಡಂಬರವಾಗಿಯೂ ನಿರಾತಂಕವಾಗಿಯೂ ಬಾಳುವುದು ಸಾಧ್ಯವಾಯಿತು. ಇವರ ಹಿರಿಮೆಯನ್ನು ಕೆಲವು ಮಿತ್ರರು ಟ್ರಸ್ಟಿನ ಅಧ್ಯಕ್ಷರಾದ ಸರ್ ಫ್ರಾನ್ಸಿಸ್ ಸ್ಪ್ರಿಂಗರ ಗಮನಕ್ಕೆ ತಂದರು. ಗುಣ-ಪಕ್ಷಪಾತಿಗಳಾದ ಸ್ಪ್ರಿಂಗ್ ರಾಮಾನುಜನ್ನರಿಗೆ ತಮ್ಮ ಗಣಿತಾಧ್ಯಯನ ಹಾಗೂ ಉದ್ಯಯನ ಮುಂದುವರಿಸಲು ಎಲ್ಲ ಬಗೆಯ ಪ್ರೋತ್ಸಾಹ ನೀಡಿದರು.

ಈ ವೇಳೆಗೆ ರಾಮಾನುಜನ್ ಮದ್ರಾಸ ನಗರದ ಗಣಿತ ಕೇಂದ್ರವಾಗಿದ್ದರು. ಹಿರಿಯ ಪ್ರಾಧ್ಯಾಪಕರು ಹಲವರು ತಮ್ಮ ವಿವಿಧ ಗಣಿತ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಇವರನ್ನೇ ಆಶ್ರಯಿಸಿದ್ದರು. ಜರ್ನಲ್ ಆಫ್ ದಿ ಇಂಡಿಯನ್ ಮ್ಯಾಥ್‌ಮ್ಯಾಟಿಕಲ್ ಸೊಸೈಟಿಯ ಸಂಚಿಕೆಗಳಲ್ಲಿ ಇವರ ಸಂಶೋಧನ ಪ್ರಬಂಧಗಳೂ, ಪ್ರಶ್ನೆಗಳೂ ಕ್ರಮಶಃ ಪ್ರಕಟವಾಗತೊಡಗಿದುವು.

ಪ್ರಖರ ಪ್ರತಿಭೆ, ನಿರಂತರ ಕ್ರಿಯಾಶೀಲತೆ, ನಿರಾಡಂಬರ ಜೀವನ, ಅನುಪಮ ಸೌಜನ್ಯ, ಸ್ವಂತ ಯೋಗ್ಯತೆ ಬಗ್ಗೆ ದಿವ್ಯ ನಿರ್ಲಕ್ಷ್ಯ, ಜನ ಮತ್ತು ವ್ಯವಹಾರ ಕುರಿತಂತೆ ಅತಿಶಯ ಮುಗ್ಧತೆ ಇವು ರಾಮಾನುಜನ್ ವ್ಯಕ್ತಿತ್ವದ ಪ್ರಧಾನ ರೇಖೆಗಳು. ಇವರ ಸಂಶೋಧನ ಫಲಗಳ ಆಳ, ಅಗಲ ಅರಿಯಲು ಭಾರತದಲ್ಲಿ ಯಾವ ಗಣಿತ ವಿದ್ವಾಂಸನಿಗೂ ಸಾಧ್ಯವಿಲ್ಲ ಎಂಬ ಭಾವನೆ ಕ್ರಮೇಣ ಹೆಪ್ಪುಗಟ್ಟುತ್ತಿತ್ತು. ಈ ಕೆಲಸ ಮಾಡಲು ಸಮರ್ಥರಾದ ಒಬ್ಬ ವ್ಯಕ್ತಿ ಇದ್ದರೆ ಅವರು ಅಂತಾರಾಷ್ಟ್ರೀಯ ಖ್ಯಾತಿಯ

ಗಣಿತ ವಿದ್ವಾಂಸರೂ, ಕೇಂಬ್ರಿಜ್ಜಿನ ಟ್ರಿನಿಟಿ ಕಾಲೇಜಿನ ಗಣಿತ ಪ್ರಾಧ್ಯಾಪಕರೂ ಆಗಿರುವ ಪ್ರೊ. ಜಿ. ಎಚ್. ಹಾರ್ಡಿಯವರೇ ಸರಿ ಎಂದು ಬಲ್ಲವರು ಭಾವಿಸಿದರು. ಈ ಎಲ್ಲ ಸಹೃದಯ ಚೇತನಗಳ ಪ್ರೇರಣೆ ಮೇರೆಗೆ ರಾಮಾನುಜನ್ ಹಾರ್ಡಿಯವರಿಗೆ ಬರೆದ ೧೬–೧–೧೯೧೩ರ ಪತ್ರ ಈ ಭಾರತೀಯ ಸುಪ್ತ ಪ್ರತಿಭೆಗೆ ಅಂತಾರಾಷ್ಟ್ರೀಯ ಸಾರ್ವಕಾಲಿಕತೆಯನ್ನು ತಂದು ಕೊಟ್ಟಿತು.

ಮದ್ರಾಸ ವಿಶ್ವವಿದ್ಯಾಲಯದ ಸಂಶೋಧನ ವಿದ್ಯಾರ್ಥಿ

ಸರ್ ಫ್ರಾನ್ಸಿಸ್ ಸ್ಪ್ರಿಂಗ್ ರಾಮಾನುಜನ್ನರಿಗೆ ಮದ್ರಾಸ್ ವಿಶ್ವವಿದ್ಯಾಲಯದಿಂದ ಸಂಶೋಧನ ವಿದ್ಯಾರ್ಥಿ ವೇತನ ದೊರಕಿಸಿ ಕೊಡುವ ದಿಶೆಯಲ್ಲಿ ತಮ್ಮ ವರ್ಚಸ್ಸು ಬೀರಿದರು. ಸ್ಪ್ರಿಂಗರ ಮಿತ್ರರಾದ ಡಾ. ಜಿ. ಟಿ. ವಾಕರ್ ೧೯೧೩ರ ಆರಂಭದಲ್ಲಿ ಮದ್ರಾಸಿಗೆ ಬಂದಿದ್ದರು. ಇವರು ಭಾರತ ಸರಕಾರದ ವೇಧಶಾಲೆಗಳ ಮಹಾನಿರ್ದೇಶಕ, ಟ್ರಿನಿಟಿ ಕಾಲೇಜಿನ ಫೆಲೋ ಮತ್ತು ಗಣಿತ ವಿದ್ವಾಂಸ. ಇವರಿಗೆ ಸ್ಪ್ರಿಂಗ್ ರಾಮಾನುಜನ್ನರ ಗಣಿತ ಸಿದ್ಧಿಗಳನ್ನು ವಿವರಿಸಿ ಇವರ ಹಲವಾರು ಸಂಶೋಧನ ಪ್ರಬಂಧಗಳನ್ನು ಓದಲು ಕೊಟ್ಟರು. ಈ ಅವಲೋಕನದಿಂದ ವಿಶೇಷವಾಗಿ ಪ್ರಭಾವಿತರಾದ ವಾಕರ್ ಮದ್ರಾಸ ವಿಶ್ವವಿದ್ಯಾಲಯದ ಕುಲಸಚಿವರಿಗೆ ೨೬–೨–೧೯೧೩ ರಂದು ಒಂದು ಕಾಗದ ಬರೆದರು:

"ಮದ್ರಾಸ ಪೋರ್ಟ್ ಟ್ರಸ್ಟಿನ ಲೆಕ್ಕಪತ್ರ ಇಲಾಖೆಯಲ್ಲಿ ಕಾರಕೂನರಾಗಿರುವ ಎಸ್. ರಾಮಾನುಜನ್ನರತ್ತ ತಮ್ಮ ಗಮನ ಸೆಳೆಯಲು ಅಪೇಕ್ಷಿಸುತ್ತೇನೆ. ಇವರನ್ನು ನಾನು ನೋಡಿಲ್ಲ. ಆದರೆ ಇವರ ಕೆಲ ಕೃತಿಗಳನ್ನು ನಿನ್ನೆ ಸರ್ ಫ್ರಾನ್ಸಿಸ್ ಸ್ಪ್ರಿಂಗರ ಸಮಕ್ಷಮ ನೋಡಿದ್ದೇನೆ. ಇವರ ವಯಸ್ಸು ೨೨ ವರ್ಷಗಳಂತೆ. ಇನ್ನು ನಾನು ನೋಡಿದ ಕೃತಿಯ ಲಕ್ಷಣವೇನು? ಸ್ವಂತಿಕೆಯಲ್ಲಿ ಅದು ಕೇಂಬ್ರಿಜ್ಜಿನ ಯಾವುದೇ ಕಾಲೇಜಿನ ಗಣಿತ ಫೆಲೋವಿನ ಕೃತಿಯದರ ಜೊತೆ ತುಲನಾರ್ಹವಾಗಿದೆಯೆಂದು ಭಾವಿಸುತ್ತೇನೆ. ಈ ಫಲಿತಾಂಶಗಳ ಸಾರ್ವತ್ರಿಕ ಸಾಧುತ್ವ ಅಂಗೀಕರಿಸಲು ಅವಶ್ಯವಾದ ಪರಿಪೂರ್ಣತೆ ಹಾಗೂ ನಿಷ್ಕೃಷ್ಟತೆ ಇವುಗಳಲ್ಲಿಲ್ಲ. ಪ್ರಚಲಿತ ಪರಿಸ್ಥಿತಿಯನ್ನು ಗಮನಿಸಿದಾಗ ಇದು ನಿರೀಕ್ಷಿತವೆ. ಇವರು ಕೃತಿ ರಚಿಸಿರುವ ಶುದ್ಧ ಗಣಿತದ ಶಾಖೆಗಳಲ್ಲಿ ನಾನು ವಿಶೇಷ ಪರಿಣತಿ ಪಡೆದವನಲ್ಲ. ಎಂದೇ ಯುರೋಪಿನಲ್ಲಿಯೂ ಖ್ಯಾತಿ ತಂದುಕೊಡಬಲ್ಲಷ್ಟು ಗುಣಮಟ್ಟ ಇರಬಹುದಾದ ಇವರ ಸಾಮರ್ಥ್ಯದ ಬಗ್ಗೆ ಸರಿಯಾದ ಒಂದು ಅಂದಾಜು ರೂಪಿಸುವುದು ನನಗೆ ಸಾಧ್ಯವಾಗಿಲ್ಲ. ಆದರೆ ಇವರು ಸ್ವಂತ ಜೀವನಯಾಪನೆಯ ಬಗ್ಗೆ ಪೂರ್ಣ ನಿಶ್ಚಿಂತೆಯಿಂದಿದ್ದು ಕೆಲವು ವರ್ಷಗಳಾದರೂ ಇವರ ಪೂರ್ತಿ ವೇಳೆಯನ್ನು ಗಣಿತಾಧ್ಯಯನಕ್ಕೆ ಮೀಸಲಿಡುವಂತೆ ವಿಶ್ವವಿದ್ಯಾಲಯ ಇವರಿಗೆ ಆರ್ಥಿಕ ನೆರವು ಒದಗಿಸುವುದು ಅಪೇಕ್ಷಣೀಯ ಎಂದು ನನಗನ್ನಿಸುತ್ತದೆ. ಅಲ್ಲದೇ ವಿಶ್ವವಿದ್ಯಾಲಯ ಕೇಂಬ್ರಿಜ್ಜಿನ ಟ್ರಿನಿಟಿ ಕಾಲೇಜಿನ ಫೆಲೋ ಆಗಿರುವ ಮಿ. ಜಿ. ಎಚ್. ಹಾರ್ಡಿಯವರ ಜೊತೆ ಪತ್ರ ವ್ಯವಹಾರದಲ್ಲಿ ತೊಡಗಿ—ರಾಮಾನುಜನ್ ಇದನ್ನು ಈಗಾಗಲೇ ಆರಂಭಿಸಿದ್ದಾರೆ— ಇವರ ಬಗ್ಗೆ ವಿಶ್ವವಿದ್ಯಾಲಯಕ್ಕೆ ಇರುವ ಆಸಕ್ತಿಯನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕೆಂದು ಸೂಚಿಸಬಯಸುತ್ತೇನೆ."

ಈ ಕಾಗದಕ್ಕೆ ಯೋಗ್ಯ ಪುರಸ್ಕಾರ ದೊರೆಯಿತು. ವಿಶ್ವವಿದ್ಯಾಲಯ ಕಾನೂನಿನ ಎಲ್ಲ ಮುಳ್ಳುಗಳನ್ನೂ, ಬಲೆಗಳನ್ನೂ ಕಾನೂನುಬದ್ಧವಾಗಿಯೇ ಆಡ್ಡ ಹಾಯ್ದು ರಾಮಾನುಜನ್ನರಿಗೆ ಸಂಶೋಧನ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿತು: ತಿಂಗಳಿಗೆ ರೂ. ೭೫, ಎರಡು ವರ್ಷ ಪರ್ಯಂತ. ಇವರು ೧-೫-೧೯೧೩ರಂದು ಈ ಸಂಶೋಧನ ವೃತ್ತಿಗೆ ದಾಖಲಾದರು. ಮುಂದೆ ಇವರೆಂದೂ ಗಣಿತೋದ್ಯಮಿಯಾಗಿಯೇ ಬಾಳಿದರು.

ವಿದೇಶಯಾನ

ರಾಮಾನುಜನ್ನರನ್ನು ಇಂಗ್ಲೆಂಡಿಗೆ ಕರೆಸಲು

ಮಾಡಿದ ಮೊದಲ ಪ್ರಯತ್ನದಲ್ಲಿ ಹಾರ್ಡಿ ವಿಫಲರಾದರೂ ಹತಾಶರಾಗಲಿಲ್ಲ. ಲಂಡನ್ನಿನಲ್ಲಿದ್ದ ಭಾರತ ಕಚೇರಿಗೆ ಈ ಬಗ್ಗೆ ಶಿಫಾರಸು ಪತ್ರ ಬರೆದರು. ಇದೇ ಸುಮಾರಿಗೆ (೧೯೧೩-೧೪) ಹಾರ್ಡಿಯವರ ತರುಣ ಸಹೋದ್ಯೋಗಿ ಇ. ಎಚ್. ನೆವಿಲ್ ಮದ್ರಾಸ ವಿಶ್ವವಿದ್ಯಾಲಯಕ್ಕೆ ಸಂದರ್ಶನ ಪ್ರಾಧ್ಯಾಪಕರಾಗಿ ಹೋಗುವವರಿದ್ದರು. ಅವರಿಗೆ ಹಾರ್ಡಿ ಸಮಸ್ತ ವಿಷಯವನ್ನೂ ಅರುಹಿ ಮದ್ರಾಸಿನಲ್ಲಿ ರಾಮಾನುಜನ್ನರನ್ನು ಭೇಟಿಯಾಗಿ ಕೇಂಬ್ರಿಜ್ಜಿಗೆ ಬರಲು ಒಪ್ಪಿಸಬೇಕೆಂದು ಸೂಚಿಸಿದರು.

ನೆವಿಲ್ ತಮ್ಮ ರಾಯಭಾರವನ್ನು ತುಂಬ ಮುತುವರ್ಜಿಯಿಂದ ನಿರ್ವಹಿಸಿದರು. ರಾಮಾನುಜನ್ ಬಗ್ಗೆ ಇವರಿಗೆ ಮೊದಲೇ ಇದ್ದ ಸದ್ಭಾವನೆ, ವಾಸ್ತವ ಸಂಪರ್ಕ ಹಾಗೂ ಗಣಿತ ಪರಿಕಲ್ಪನೆಗಳ ವಿನಿಮಯಾನಂತರ ಪರಮ ಗೌರವಕ್ಕೆ ತಿರುಗಿತು. ನೆವಿಲ್ ಬರೆದಿದ್ದಾರೆ "೧೯೧೪ರ ಆರಂಭದಲ್ಲಿ ನಾನು ಮದ್ರಾಸ್ ತಲಪಿದೆ. ನನ್ನ ಮೊದಲ ಉಪನ್ಯಾಸ ಮುಗಿದೊಡನೆಯೇ ರಾಮಾನುಜನ್ನರನ್ನು ನನಗೆ ಪರಿಚಯಿಸಲಾಯಿತು. ನಾವು ಕುಳಿತುಕೊಂಡೆವು. ಅವರು ತಮ್ಮ ಟಿಪ್ಪಣಿ ಪುಸ್ತಕದ ತಾನುಗಳನ್ನು ತಿರುವಿದರು. ಎರಡು ದಿನಗಳ ಬಳಿಕ ಪುನಃ ಅವನ್ನು ಮುಗುಚಿದರು. ಮೂರನೆಯ ಭೈಠಕ್ಕಿನ ನಂತರ 'ಪ್ರಾಯಶಃ ನೀವಿದನ್ನು ನಿಮ್ಮ ಜೊತೆ ಒಯ್ಯಬೇಕೆಂದಿರುವಿರಿ' ಎಂದರು. ಅವರು ನನ್ನಲ್ಲಿ ತಳೆದ ಪೂರ್ಣ ವಿಶ್ವಾಸಕ್ಕೆ ಮಾರುಹೋದೆ. ಆ ಅತ್ಯಮೂಲ್ಯ ಸಂಪುಟವೆಂದೂ ಅವರ ವಶದಿಂದ ಹೊರಹೋಗಿರಲಿಲ್ಲ. ಯಾವ ಭಾರತೀಯನೂ ಅದನ್ನು ಅರ್ಥವಿಸಲಾರದವನಾಗಿದ್ದ, ಯಾವ ಇಂಗ್ಲೀಷ್ ವ್ಯಕ್ತಿಯೂ ಅದನ್ನು ಕುರಿತಂತೆ ವಿಶ್ವಾಸಪಾತ್ರನಾಗಿರಲಿಲ್ಲ. ನಿಜ ಸಂಗತಿ ಏನೆಂದರೆ ಇಂಗ್ಲೀಷ್ ಜನ ಆಡಳಿತ ಸಂಯಂತ್ರದ ಅಂಗಗಳಾಗಿ—ವ್ಯಕ್ತಿಗಳಾಗಿ ಅಲ್ಲ—ಸಂಶಯಾಸ್ಪದ ಮಂದಿಯಾಗಿದ್ದರು. ನಾನಾದರೋ ಈ ಸಂಯಂತ್ರದ ಹೊರಗಿನಿಂದ ಬಂದವನಾಗಿದ್ದುದರಿಂದ-ಬೇರಾವ ಕಾರಣಕ್ಕೂ ಅಲ್ಲ—ಅತ್ಯಪೇಕ್ಷಿತ ಸಲಿಗೆ ಗಳಿಸಿದ್ದೆ."

ಈ ವೇಳೆಗೆ ರಾಮಾನುಜನ್ ಇಂಗ್ಲಂಡಿಗೆ ತೆರಳುವುದರ ಬಗ್ಗೆ ಒಪ್ಪಿಗೆ ನೀಡಿದ್ದರು. ಇನ್ನುಳಿದಿದ್ದು ಇವರ ತಾಯಿಯ ಅನುಮತಿ. ಅನಿರೀಕ್ಷಿತ ರೀತಿಯಲ್ಲಿ ಇದೂ ಒದಗಿ ಬಂದಿತು. ಕೋಮಲಮ್ಮಾಳರಿಗೆ ನಾಮಗಿರಿದೇವಿ ಕನಸಿನಲ್ಲಿ ಕಾಣಿಸಿಕೊಂಡು ಮಗನ ಜೀವನ ಯಾತ್ರೆಯ ಸಫಲತೆಗೆ ಅಡ್ಡಿ ಬರಬಾರದಾಗಿ ವಿಧಿಸಿದಳು.

ಆರ್ಥಿಕವಾಗಿ ಈ ಯಾನವನ್ನು ಸಾಧ್ಯಗೊಳಿಸುವುದು ಹೇಗೆ? ನೆವಿಲ್ ೨೮-೧-೧೯೧೪ರಂದು ಕುಲಸಚಿವರಿಗೆ ಪತ್ರ ಬರೆದರು "ಎಸ್. ರಾಮಾನುಜನ್ನರ ಪ್ರತಿಭೆಯ ಆವಿಷ್ಕಾರ ವರ್ತಮಾನ ಕಾಲದ ಗಣಿತ ಪ್ರಪಂಚದ ಅತ್ಯಂತ ಕುತೂಹಲಕಾರಿ ಘಟನೆ ಆಗುವ ಸಾಧ್ಯತೆ ಉಂಟು. ಇವರು (ಹಾರ್ಡಿಯವರಿಗೆ) ಕಳುಹಿಸಿಕೊಟ್ಟ ಮೊದಲ ಫಲಿತಾಂಶಗಳನ್ನು ಅವಲೋಕಿಸಿದೊಡನೆಯೇ ಇವರಲ್ಲಿ ಅಸಾಧಾರಣ ಸಾಮರ್ಥ್ಯ ಹುದುಗಿದೆಯೆಂದು ಕೇಂಬ್ರಿಜ್ಜಿನ ಗಣಿತ ವಿದ್ವಾಂಸರು ಮನಗಂಡರು. ಇನ್ನು ಇವರನ್ನು ಕಂಡು ಮಾತಾಡಿ ಇವರ ಗಣಿತ ವಿಧಾನಗಳ ಪರಿಚಯ ಗಳಿಸಿರುವ ನನ್ನಲ್ಲಾದರೋ ಈ ನಂಬಿಕೆ ಮತ್ತಷ್ಟು ದೃಢಗೊಂಡಿದೆ. ಇದೇ ವೇಳೆಗೆ ರಾಮಾನುಜನ್ನರನ್ನು ಆಧುನಿಕ ಗಣಿತ ವಿಧಾನಗಳಲ್ಲಿ ಅಂತರ್ಗತವಾಗಿರುವ ನಯ ನಾಜೂಕುಗಳಿಗೆ ಪ್ರವೇಶ ನೀಡುವುದು, ಮತ್ತು ಅನ್ವೇಷಿತ ಗಣಿತ ಭಾವನೆಗಳ ವ್ಯಾಪ್ತಿ ಅರಿತಿರುವ ಹಿರಿಯ ವ್ಯಕ್ತಿಗಳ ಜೊತೆ ಇವರಿಗೆ ಸಂಪರ್ಕ ಒದಗಿಸಿಕೊಡುವುದು ಅವಶ್ಯ. ಇವು ಅತಿ ಮುಖ್ಯವೆಂದು ಭಾವಿಸಿದ್ದೇನೆ."

"ಸಮಕಾಲೀನವಾಗಿ ಯುರೋಪಿನಲ್ಲಾಗಿರುವ ಬೆಳವಣಿಗೆಗಳ ಬಗ್ಗೆ ಕಿಂಚಿತ್ತು ಸುಳುಹೂ ಇಲ್ಲದೇ ರಾಮಾನುಜನ್, ತಮ್ಮ ಇತರ ಸಿದ್ಧಾಂತಗಳ ಜೊತೆಗೆ, ಅತ್ಯಂತ ಫಲಪ್ರದವೂ ಕ್ರಾಂತಿಕಾರಕವೂ ಆಗಿರುವ ಎರಡು ಸಿದ್ಧಾಂತಗಳನ್ನು ಅಭಿವರ್ಧಿಸಿರುವರು. ಇವು ಅಲ್ಲಿ ಕಳೆದ ಹತ್ತು ಹದಿನೈದು ವರ್ಷಗಳಿಂದ ಅಧ್ಯಯನ ವಿಷಯಗಳಾಗಿದ್ದು, ಈಗಲೂ ವಿಜ್ಞಾನ ನಿಯತಕಾಲಿಕೆಗಳಲ್ಲಿಯ ಸಂಶೋಧನ ಪ್ರಬಂಧಗಳ

ರೂಪದಲ್ಲಿ ಮಾತ್ರ ಇವೆಯೇ ಹೊರತು ಪತ್ರ ಪುಸ್ತಕಗಳಲ್ಲಾಗಲಿ ಆಕರ ಗ್ರಂಥಗಳಲ್ಲಾಗಲೀ ಪ್ರಕಟವಾಗಿಲ್ಲ. ಈ ಗಣಿತ ಸಾಧನಗಳ ಉಪಜ್ಞೆಯಲ್ಲಿ (invention) ರಾಮಾನುಜನ್ನರ ಶಕ್ತಿ ನಿಯೋಜಿತವಾಗಿದದ್ದರೆ, ಇವರು ಬೇರಾವ ಭವ್ಯ ಸೌಧ ಕಟ್ಟುತ್ತಿದ್ದರೋ! ಇತರರು ಗಮನಿಸಿರದ ಬೇರಾವ ಉಪಯೋಗಗಳನ್ನು ಈ ಪ್ರಕ್ರಿಯೆಗಳಲ್ಲಿ ಕಂಡಿರುತ್ತಿದ್ದರೋ! ಯಾರು ತಾನೇ ಹೇಳಬಲ್ಲರು? ಸ್ಫೂರ್ತಿ ಒಂಟಿ ಆವಿಷ್ಕಾರಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಆದ್ದರಿಂದ ಇಬ್ಬರು ಒಂದೇ ಕೆಲಸಗೈದರೆ ಅದರಿಂದ ವಿಜ್ಞಾನಕ್ಕೆ ಬಲು ದೊಡ್ಡ ನಷ್ಟ.

"ಅಲ್ಲದೆ, ರಾಮಾನುಜನ್ ಇನ್ನೂ ಅರಿತಿರದ ಒಂದು ಸಂಗತಿಯನ್ನು ಯೂರೋಪಿನಲ್ಲಿ ನಾವು ಕಂಡುಕೊಂಡಿದ್ದೇವೆ: ಅಧಿಕ ಶಕ್ತಿಶಾಲಿ ವಿಧಾನವನ್ನು ಅಧಿಕ ಜಾಗರೂಕತೆಯಿಂದ ಬಳಸಬೇಕು. ಆಭಾಸಗಳನ್ನು ನಿವಾರಿಸುತ್ತ ಮುಂದುವರಿಯುವ ಕೌಶಲ ಮಹಾ ಪ್ರತಿಭೆಗಿದೆಯೆಂದು ಅನೇಕ ವೇಳೆ ಭಾವಿಸುವುದುಂಟು. ಅಪಾಯವನ್ನು ಮುಂಗಾಣಬಹುದಾದಂಥ ಒಂದು ಸುಪ್ತ ಸಾಮರ್ಥ್ಯ ಅದಕ್ಕಿದೆ ಎನ್ನುವವರ ಮಟ್ಟಿಗೆ ಇದು ನಿಜ. ಯಾವಾಗ ವಿಶೇಷ ಜಾಗರೂಕತೆ ಅಗತ್ಯ ಎಂಬ ಪ್ರಜ್ಞೆ ಒಬ್ಬ ಸುಶಿಕ್ಷಿತ ಗಣಿತಜ್ಞನಿಗೆ ಅಂತರ್ಬೋಧಾತ್ಮಕವಾಗಿಯೇ ಪ್ರಾಪ್ತವಾಗಿರುತ್ತದೆ. ಆದರೆ ಇದೇ ಅಂತರ್ಬೋಧೆ ಮಹಾಪ್ರತಿಭೆಯಲ್ಲಿಯೂ ಈತನ ಖ್ಯಾತಿ ಏನೇ ಇದ್ದರೂ, ಅಭಿವರ್ಧನೆಗೊಂಡಿರುವುದೆಂಬುದರ ಬಗ್ಗೆ ಯಾವ ಇಂಗ್ಲಿಷ್ ವಿಶ್ಲೇಷಣ ಗಣಿತಜ್ಞನೂ ಭರವಸೆ ಕೊಡಲಾರ. ತರುವಾಯದ ಪ್ರತ್ಯಕ್ಷ ತಪಾಸಣೆಗಳಲ್ಲಿ ತಪ್ಪಾಗಿ ಕಂಡು ಬಂದ ಅನೇಕ ಫಲಿತಾಂಶಗಳನ್ನು ಸ್ವತಃ ರಾಮಾನುಜನ್ನರೇ ಕೇಂಬ್ರಿಜ್ಜಿಗೆ ರವಾನಿಸಿದ್ದರೆಂಬುದು ಇದಕ್ಕೆ ನಿರ್ಣಾಯಕ ಸಮರ್ಥನೆ. ಸಧ್ಯಕ್ಕೆ ಇವರ ಪ್ರತಿಯೊಂದು ಫಲಿತಾಂಶವನ್ನೂ, ಅದನ್ನು ಪ್ರತ್ಯೇಕವಾಗಿ [illegible] ಸಂದೇಹದಿಂದಲೇ ನೋಡಬೇಕಾಗುತ್ತದೆ. ಇಂಥ ಪರಿಸ್ಥಿತಿ ಮುಂದುವರಿಯಬಾರದು.

"ಅತ್ಯುನ್ನತ ದರ್ಜೆಯ ಪಾಶ್ಚಾತ್ಯ ಗಣಿತವಿದರೊಂದಿಗಿನ ಸಂಪರ್ಕ ಪ್ರೇರಿಸುವ ಉದ್ದೀಪನೆಗೆ (stimulus) ರಾಮಾನುಜನ್ ಪೂರ್ತಿಯಾಗಿ ಅನುಕ್ರಿಯೆ (response) ವ್ಯಕ್ತಪಡಿಸಿಯೇ ತೀರುತ್ತಾರೆ ಎಂಬ ವಿಚಾರದಲ್ಲಿ ನನಗೆ ಇನಿತೂ ಸಂದೇಹವಿಲ್ಲ. ಇದು ಕೂಡಿಬಂದರೆ ಆಗ ಇವರ ಹೆಸರು ಗಣಿತೇತಿಹಾಸದಲ್ಲಿಯ ಅತ್ಯುನ್ನತ ನಾಮಗಳಲ್ಲಿ ಒಂದಾಗುವುದು, ಹಾಗೂ ಇವರನ್ನು ಅಜ್ಞಾತದಿಂದ ಖ್ಯಾತಿಯೆಡೆಗೆ ಉದ್ಧರಣಗೊಳಿಸಲು ನೆರವಾದ ಮದ್ರಾಸ ನಗರವೂ, ವಿಶ್ವವಿದ್ಯಾಲಯವೂ ಸಹಜವಾಗಿ ಹೆಮ್ಮೆ ತಳೆಯಬೇಕಾದ ಮಹಾ ಘಟನೆ ಅದಾಗುವುದು."

ವಿಶ್ವವಿದ್ಯಾಲಯದ ಸಿಂಡಿಕೇಟ್ ಈ ಯೋಜನೆಯನ್ನು ಹಾರ್ದಿಕವಾಗಿ ಅನುಮೋದಿಸಿ ತನ್ನ ಘನತೆಗೆ ಹಿರಿಮೆ ತಂದುಕೊಂಡಿತು.

ಅಂದು ರಾಮಾನುಜನ್ನರ ದುಸ್ತು ಮತ್ತು ಸ್ವರೂಪ ಹೇಗಿದ್ದುವು? ಮಧ್ಯಮ ಗಾತ್ರದ ಸ್ಥೂಲ ಕಾಯ. ಅಂತರ್ಮುಖಿ. ಅತ್ಯಂತ ಉಜ್ವಲ ನೇತ್ರದ್ವಯ. ನೆತ್ತಿಯಲ್ಲಿ ಗಟ್ಟಿ ಜುಟ್ಟು. ನೊಸಲಿನಲ್ಲಿ ಒಪ್ಪುವ ಶ್ರೀವೈಷ್ಣವ ಲಾಂಛನ. ಅಚ್ಚಬೈರಾಸು ಸುತ್ತಿ ಮೇಲೊಂದು ಕುಪ್ತ, ಬಿಗಿಗಾಲ ಸಡಿಗೆ, ಸಸ್ಯಾಹಾರಿ ಕರ್ಮಠ ಹಾರುವಯ್ಯ. ಇಂಥ ಪೂರ್ತಿ ಕಚ್ಚಾ ಸ್ವದೇಶಿ ಮಾಲು ಅಂದಿನ ಸಂಪರ್ಕಬಂಧ ದಿನಗಳಲ್ಲಿ ಇಂಗ್ಲೆಂಡಿನ ಪೂರ್ಣ ಭಿನ್ನವಾದ ಭೌತಿಕ ಹಾಗೂ ಸಾಂಸ್ಕೃತಿಕ ಪರಿಸರಕ್ಕೆ ನೇರವಾಗಿ ಹೊಂದಿಕೊಂಡು ಅಲ್ಲಿಯ ಬೌದ್ಧಿಕ ರಂಗದಲ್ಲಿ ಕೆಲಸ ಮಾಡುವುದೇನೂ ಸಾಮಾನ್ಯ ಸಾಹಸವಾಗಿರಲಿಲ್ಲ.

ಮಿತ್ರರ ಒತ್ತಾಸೆ, ಒತ್ತಾಯಗಳಿಂದ ಜುಟ್ಟು 'ಕಟ್' ಆಯಿತು. ಪಟ್ಟವಾಗಿ ಬಾಚಿದ ಕೂದಲು ಶಿರೋಭೂಷಣವಾಯಿತು. ಸೂಟು, ಬೂಟು, ಕಂಠಕೌಪೀನ, ಟೋಪಿಯ ಧಾರಣೆ [illegible]. ಅಲ್ಲದೆ [illegible] ಸ್ವಾತಂತ್ರ್ಯ ಸುಖ ಆಸ್ವಾದಿಸಿದ್ದ ಪಾದ[illegible] [illegible] ಯಾಗಿ ನಡಿಗೆ ದುಸ್ಸಹನೀಯವಾಯಿತು.

ನಾಗರಿಕತೆಯ ಪ್ರಗತಿಗೆ ವ್ಯಕ್ತಿ ತೆರಬೇಕಾದ ದಂಡ!

ಸಸ್ಯಾಹಾರವರ್ಜನೆಯನ್ನು ಮಾತ್ರ ಅವರು ಒಪ್ಪಲೇ ಇಲ್ಲ.

ರಾಮಾನುಜನ್ ೧೭-೩-೧೯೧೪ ರಂದು ಭಾರತದಿಂದ ಹೊರಟು ೧೪-೪-೧೯೧೪ ರಂದು ಇಂಗ್ಲಂಡ್ ತಲಪಿದರು. ಹಾರ್ಡಿಯವರ ಕನಸು ಮತ್ತು ಭಾರತೀಯ ಗಣಿತಜ್ಞರ ಹರಕೆ ಹೀಗೆ ನನಸಾದುವು.

ಶಿಕ್ಷಣ ಕ್ರಮ

ರಾಮಾನುಜನ್ ಈಗ ಕೇಂಬ್ರಿಜ್ಜಿನ ಟ್ರಿನಿಟಿ ಕಾಲೇಜ್ ವಿದ್ಯಾರ್ಥಿ. ಅವರ ಜೀವನದ ತೀವ್ರ ಪಚಿತ್ವದ ಎರಡನೆಯ ಅವಧಿ (೧೯೧೪-೧೯) ಇದರೊಂದಿಗೆ ಆರಂಭವಾಯಿತು.

ಇವರಿಗೆಂಥ ಶಿಕ್ಷಣ ನೀಡಬೇಕು? ಈ ಸ್ವಚ್ಛಂದ ಪ್ರತಿಭೆಯ ಮುಕ್ತ ವಿಹಾರ ಮತ್ತು ಅದರ ಕಟ್ಟು ಫಲ ಗಮನಿಸಿದ ಹಾರ್ಡಿ ಮತ್ತು ಲಿಟಲ್‌ವುಡ್ ಈ ಬಗ್ಗೆ ಪರ್ಯಾಲೋಚಿಸಿ ಒಂದು ತೀರ್ಮಾನಕ್ಕೆ ಬಂದರು: ಇವರಿಗೆ ಆಧುನಿಕ ಗಣಿತ ಕುರಿತ ಶಿಸ್ತುಬದ್ಧ ಶಿಕ್ಷಣ ಒದಗಿಸಬೇಕು; ಇದರಿಂದ ಇವರ ಪ್ರತಿಭೆಯ ವ್ಯಾಪ್ತಿ ವಿಸ್ತರಿಸಿ ಅದು ಸೊಂಪಾಗಿ ಅರಳುವುದು.

ಹಾರ್ಡಿ ಬರೆದಿದ್ದಾರೆ (೧೯೨೦) "ಅವರಿಗೆ ಮದ್ರಾಸಿನಿಂದ ಮಂಜೂರಾದ ವಿದ್ಯಾರ್ಥಿವೇತನ (ವಾರ್ಷಿಕವಾಗಿ) ೨೫೦ ಪೌಂಡ್. ಅದರಲ್ಲಿ ೫೦ ಪೌಂಡನ್ನು ಭಾರತದಲ್ಲಿದ್ದ ಅವರ ಕುಟುಂಬದ ಪೋಷಣೆಗೆಂದು ಮೀಸಲಿಡಲಾಗಿತ್ತು. ಟ್ರಿನಿಟಿ ೬೦ ಪೌಂಡನ್ನು ಒದಗಿಸುತ್ತಿತ್ತು. ಹಾಸ್ಯಾಸ್ಪದ ವೆನ್ನಿಸುವಷ್ಟು ಸರಳ ಸ್ವಭಾವದವರಾದ ಅವರಿಗೆ ಈ ಆದಾಯ ಯಥೇಚ್ಛವಾಗಿತ್ತು. ಅವರು ಸಾಕಷ್ಟು ಮೊತ್ತವನ್ನು ಉಳಿತಾಯಮಾಡಲು ಶಕ್ತರಾಗಿದ್ದರು. ಮುಂದೊಂದು ದಿನ ಇದು ತುರ್ತಾಗಿ ಬೇಕಾಯಿತೆಂಬುದು ಬೇರೆ ಮಾತು. ಅವರಿಗೆ ನಿಗದಿಯಾದ ಕರ್ತವ್ಯವೇನೂ ಇರಲಿಲ್ಲ. ಮನಸ್ಸೋ ಇಚ್ಛೆ ಇರಬಹುದಿತ್ತು. ಆದರೂ ಸಂಶೋಧನ ವಿದ್ಯಾರ್ಥಿಯಾಗಿ ಕೇಂಬ್ರಿಜ್ ಪದವಿ ಪಡೆಯಬೇಕೆಂಬುದು ಅವರ ಬಯಕೆ. ಆದರೆ ಇದೊಂದು ಔಪಚಾರಿಕ ವಿಧಿ ಮಾತ್ರ. ಜೀವನದಲ್ಲಿ ಮೊದಲ ಬಾರಿಗೆ ಅವರೀಗ ನಿಜಕ್ಕೂ ಹಿತಕರ ಪರಿಸರದಲ್ಲಿದ್ದರು. ಆದ್ದರಿಂದ ಯಾವ ಅಡ್ಡಿ ಆತಂಕವೂ ಇಲ್ಲದೇ ಅವರೀಗ ಸಂಶೋಧನೆಯಲ್ಲಿ ಮಗ್ನರಾಗಬಹುದಿತ್ತು.

"ಅವರಿಗೆ ಆಧುನಿಕ ಗಣಿತ ಕಲಿಸುವ ಹಾದಿಯಲ್ಲಿ ನಾವೇನು ಮಾಡಬೇಕೆಂಬುದು ದೊಡ್ಡ ಒಗಟಾಗಿ ನಿಂತಿತ್ತು. ಅವರ ಜ್ಞಾನದ ಸೀಮಿತಗಳು ಅದರ ಗಭೀರತೆಯಷ್ಟೇ ಚಕಿತಗೊಳಿಸುವಂತಿದ್ದುವು. ಮಾಡ್ಯುಲರ್ ಸಮೀಕರಣಗಳನ್ನೂ ಮಿಶ್ರ ಗುಣಾಕಾರದ ಪ್ರಮೇಯಗಳನ್ನೂ ಯಾರೂ ಕಂಡರಿಯದಿದ್ದ ವರ್ಗಗಳ (orders) ವರೆಗೆ ಸಲೀಸಾಗಿ ನಿಭಾಯಿಸಬಲ್ಲ ವ್ಯಕ್ತಿ ಅವರು; ಸಂತತ ಭಿನ್ನರಾಶಿಗಳ ಬಗ್ಗೆ, ಕನಿಷ್ಠ ಅವುಗಳ ರೂಪ್ಯಕ ಪಾರ್ಶ್ವ (formal side) ಕುರಿತಂತಾದರೂ, ಅವರಿಗಿದ್ದ ಪ್ರಭುತ್ವ ಪ್ರಪಂಚದಲ್ಲಿಯ ಯಾರೇ ಗಣಿತಜ್ಞನದಕ್ಕಿಂತಲೂ ಮೇಲಿನ ಸ್ತರದಲ್ಲಿತ್ತು; ರ್‍ಝೀಟ ಉತ್ಪನ್ನದ ಉತ್ಪನ್ನಾತ್ಮಕ ಸಮೀಕರಣವನ್ನೂ, ಸಂಖ್ಯೆಗಳ ವಿಶ್ಲೇಷಣ ಸಿದ್ಧಾಂತದ ಅತ್ಯಂತ ಪ್ರಸಿದ್ಧ ಸಮಸ್ಯೆಗಳಲ್ಲಿಯ ಪ್ರಧಾನ ಪದಗಳನ್ನೂ ಸ್ವಂತವಾಗಿ ಸಂಶೋಧಿಸಿದ್ದರು; ಆದರೆ ದ್ವಿನಿಯತಕಾಲಿಕ ಉತ್ಪನ್ನವನ್ನಾಗಲಿ (doubly periodic function) ಕೌಶಿಯ ಪ್ರಮೇಯವನ್ನಾಗಲಿ ಅವರೆಂದೂ ಕೇಳಿಯೇ ಇರಲಿಲ್ಲ; ಮಿಶ್ರಚರ ಉತ್ಪನ್ನದ ಬಗ್ಗೆ ಅವರ ಕಲ್ಪನೆ ತೀರ ಮಂಜು ಮಂಜು. ಯಾವುದು ಗಣಿತ ಸಾಧನೆ ಎಂಬುದನ್ನು ಕುರಿತಂತೆ ಅವರ ಅಭಿಪ್ರಾಯ ಅತ್ಯಂತ ಸಂದೇಹಕಾರಕವಾಗಿತ್ತು. ಅವರು ಎಲ್ಲ ಫಲಿತಾಂಶಗಳನ್ನೂ ಹೊಸತು ಅಥವಾ ಹಳತು, ಸರಿ ಅಥವಾ ತಪ್ಪು ವಾದ, ಅಂತರ್ಬೋಧೆ ಮತ್ತು ಅನುಗಮನ ಬೆರೆತ ಸಂಮಿಶ್ರ ಪ್ರಕ್ರಿಯೆಯೊಂದರ ಮೂಲಕ ಪಡೆದಿದ್ದರು. ಈ ಕುರಿತು ಯಾವುದೇ ಸುಸಂಬದ್ಧ ವಿವರಣೆ ನೀಡಲು ಅವರು ಅಶಕ್ತರಾಗಿದ್ದರು.

"ಇಂಥ ವ್ಯಕ್ತಿಯನ್ನು ವ್ಯವಸ್ಥಿತ ಶಿಕ್ಷಣಕ್ಕೆ ಒಳಪಡುವಂತೆ, ಎಂದರೆ ಗಣಿತವನ್ನು ಪ್ರಾರಂಭದಿಂದ ಪುನರಪಿ ಕಲಿಯುವಂತೆ ನಿರ್ಬಂಧಿಸುವುದು

ಅಸಾಧ್ಯವಾಗಿತ್ತು. ಅಲ್ಲದೇ ರಾಮಾನುಜನ್ ಉಪದ್ರವಕಾರಿ ಎಂದು ಭಾವಿಸಬಹುದಾದ ವಿಧಿ ನಿಯಮಗಳ ಮೇಲೆ ಅವಧಾರಣೆ ಹೇರಿದರೆ ಅವರ ಆತ್ಮವಿಶ್ವಾಸವನ್ನೇ ಅದು ನಾಶಪಡಿಸಿಬಿಡಬಹುದು. ಇಲ್ಲವೇ ಅವರ ಸ್ಫೂರ್ತಿಯ ನಿರಂತರ ಸೆಲೆಯನ್ನೇ ಬತ್ತಿಸಿಬಿಡಬಹುದು ಎಂಬ ಭಯ ಸಹ ನನಗಿತ್ತು. ಆದರೆ ಇದರೊಂದಿಗೆ ಇನ್ನೊಂದು ಸಂಗತಿಯೂ ಮುಖ್ಯವಾಗಿತ್ತು. ರಾಮಾನುಜನ್ ತಿಳಿಯಲೇಬೇಕಾಗಿದ್ದ ಕ್ಷೇತ್ರಗಳು ಅನೇಕ ಇದ್ದವು. ಅವರು ಪಡೆದಿದ್ದ ಹಲವಾರು ಫಲಿತಾಂಶಗಳು ತಪ್ಪು. ವಿಶಿಷ್ಟವಾಗಿ ಹೇಳುವುದಾದರೆ ಅವರು ಅತ್ಯಧಿಕ ಮಹತ್ತ್ವ ಆರೋಪಿಸಿದ್ದ ಅವಿಭಾಜ್ಯಗಳ ವಿತರಣೆಗೆ ಸಂಬಂಧಿಸಿದ್ದ ಫಲಿತಾಂಶಗಳು. ರಿಝೀಟ ಉತ್ಪನ್ನದ ಎಲ್ಲ ಶೂನ್ಯಗಳೂ ನೈಜವೆಂಬ ತಮ್ಮ ಭಾವನೆಯನ್ನು ಅವರು ಸದಾ ನೆಚ್ಚಿಕೊಂಡು ಮುಂದುವರಿಯುವಂತೆ ಬಿಡುವುದು ಸಾಧುವಾಗಿರಲಿಲ್ಲ. ಆದ್ದರಿಂದ ಅವರಿಗೆ ಪಾಠ ಹೇಳಿಕೊಡಲು ನಾನು ಶ್ರಮಿಸಬೇಕಾಯಿತು. ಇದರಲ್ಲಿ ನಾನು ತಕ್ಕಮಟ್ಟಿಗೆ ಯಶಸ್ವಿಯಾದೆನಾದರೂ ಅವರು ನನ್ನಿಂದ ಕಲಿತುದಕ್ಕಿಂತ ಹೆಚ್ಚು ನಾನೇ ಅವರಿಂದ ಕಲಿತೆ. ಕೆಲವೇ ವರ್ಷಗಳ ಅವಧಿಯಲ್ಲಿ ಅವರಿಗೆ ಉತ್ಪನ್ನಗಳ ಸಿದ್ಧಾಂತ ಹಾಗೂ ಸಂಖ್ಯೆಗಳ ವಿಶ್ಲೇಷಕ ಸಿದ್ಧಾಂತ ಇವುಗಳ ಪರಿಚಯ ಸಾಕಷ್ಟು ಸಿದ್ಧಿಸಿತು. ಅವರೆಂದೂ ಆಧುನಿಕ ಚಿಂತನ ವಿಧಾನದ ಗಣಿತಜ್ಞರಾಗಿರಲಿಲ್ಲ. ಅವರನ್ನು ಹಾಗೆ ಮಾಡುವುದು ಅಪೇಕ್ಷಣೀಯವೂ ಆಗಿರಲಿಲ್ಲ. ಆದರೆ ಒಂದು ಪ್ರಮೇಯವನ್ನು ತಾನು ಯಾವಾಗ ಸಾಧಿಸಿದೆ ಮತ್ತು ಯಾವಾಗ ಸಾಧಿಸಲಿಲ್ಲ ಎಂಬ ಸಂಗತಿ ಅವರಿಗೆ ಗೊತ್ತಾಗುತ್ತಿತ್ತು. ಅವರಿಂದ ಪ್ರವಹಿಸುತ್ತಿದ್ದ ಮೂಲಭೂತ ಭಾವನೆಗಳು ಎಂದೂ ಹಿಂಗುವ ಲಕ್ಷಣ ಪ್ರಕಟವಾಗಲಿಲ್ಲ.

"ಗಣಿತದ ಹೊರಗೆ ಅವರಿಗಿದ್ದ ಆಸಕ್ತಿಗಳ ಕುರಿತು ಒಂದು ಮಾತು ಸೇರಿಸಲೇಬೇಕು. ಅವರ ಗಣಿತದಂತೆ ಅವು ಕೂಡ ವೈಪರೀತ್ಯಗಳ ಸರಮಾಲೆ. ಸಾಹಿತ್ಯ ಅಥವಾ ಕಲೆ ಬಗ್ಗೆ ಅವರ ಆಸಕ್ತಿ ಅತ್ಯಲ್ಪ. ಅವರೂ ಒಳ್ಳೆಯ ಸಾಹಿತ್ಯ ಯಾವುದು, ಕೆಟ್ಟದ್ದು ಯಾವುದು ಎಂದು ವಿಮರ್ಶಿಸಬಲ್ಲವರಾಗಿದ್ದರು. ಇದಕ್ಕೆ ಬದಲಾಗಿ, ಆಧುನಿಕ ಕೇಂಬ್ರಿಜ್ ಚಿಂತನಶೀಲರಿಗೆ ಕಂಡು ಬಂದ ಪ್ರಕಾರ, ಅವರೊಬ್ಬ ಅಸ್ಪಷ್ಟತೆ ಮುಸುಕಿದ್ದ ಉತ್ಸುಕ ತತ್ವಜ್ಞಾನಿಯೂ, ಅತ್ಯುಗ್ರ ಬಗೆಯ ಶಾಂತಿವಾದದಲ್ಲಿ ಒಲವಿದ್ದ ಉಜ್ಜ್ವಲ ರಾಜಕಾರಣಿಯೂ ಆಗಿದ್ದರು. ಇಂಗ್ಲೆಂಡ್ ನಿವಾಸಿಗಳಾಗಿರುವ ಭಾರತೀಯರಲ್ಲಿ ತೀರ ಅಸಾಧಾರಣವಾಗಿರುವ ನೈಷ್ಠುರ್ಯದಿಂದ ಅವರು ತಮ್ಮ ಜಾತಿಯ ಧಾರ್ಮಿಕಾಚರಣೆಗಳಿಗೆ ಅಂಟಿಕೊಂಡಿದ್ದರು. ಆದರೆ ಅವರ ಧರ್ಮ ಎಂಬುದು ಆಚರಣೆ ಕುರಿತದ್ದಾಗಿತ್ತೇ ಹೊರತು ಬೌದ್ಧಿಕ ನಂಬಿಕೆಯ ಫಲವಾಗಿರಲಿಲ್ಲ. ಎಲ್ಲ ಧರ್ಮಗಳೂ ಹೆಚ್ಚು ಕಡಿಮೆ ಸಮವಾಗಿಯೇ ನಿಜವೆಂದು ತಮಗೆ ತೋರುವುದಾಗಿ ಅವರೊಮ್ಮೆ ಹೇಳಿ ನನ್ನನ್ನು ಚಕಿತಗೊಳಿಸಿದ್ದರು. ಸಾಹಿತ್ಯ, ತತ್ತ್ವಶಾಸ್ತ್ರ ಅಥವಾ ಗಣಿತ ಒಂದೊಂದರಲ್ಲೂ ಅನಿರೀಕ್ಷಿತ, ವಿಚಿತ್ರ ಮತ್ತು ವಿಲಕ್ಷಣವಾದುದರ ಬಗೆಗೆ ಅವರಿಗೆ ಗಾಢಾನುರಕ್ತಿ. ವೃತ್ತದ ಸಲೆಗೆ ಸಮವಾಗುವ ಚೌಕ ರಚಿಸುವೆವೆಂಬವರ (ವೃತ್ತ–ಚೌಕಕಾರರು) ಮತ್ತು ಇಂಥ ಇತರ ಮೋಡಿಗಾರರ ಹಲವಾರು ಪುಸ್ತಕಗಳ ಸಂಗ್ರಹವೇ ಅವರಲ್ಲಿತ್ತು."

ಹಾರ್ಡಿ ಮತ್ತು ಅವರ ಸಹೋದ್ಯೋಗಿ ಲಿಟಲ್‌ವುಡ್ ರಾಮಾನುಜನ್ನರ ಶಿಕ್ಷಣದ ಹೊಣೆ ಹೊತ್ತುಕೊಂಡಿದ್ದರು. ಇವರಲ್ಲಿ ಕಲಿಸುವವರು ಯಾರೋ, ಕಲಿಯುವವರು ಯಾರೋ! ಅಂತೂ ಈ ಅಪೂರ್ವತ್ರಯ ರಾಮಾನುಜನ್ ಗಣಿತ ಸಮಸ್ಯೆಗಳ ಮೇಲೆ ಬಿರುಸಾಗಿ ಕೆಲಸ ಮಾಡಿತು. ೧೯೧೪–೧೮ ಅವಧಿಯಲ್ಲಿ ರಾಮಾನುಜನ್ ಪ್ರಕಟಿಸಿದ ಸಂಶೋಧನ ಪ್ರಬಂಧಗಳ ಸಂಖ್ಯೆ ೨೧. ಇವೆಲ್ಲವೂ ಪ್ರಾರೈಸಿದ ತಾಜಾ ಮಾಲುಗಳೇ.

ಟ್ರಿನಿಟಿ ಕಾಲೇಜಿನ ಫೆಲೋ ಹಾಗೂ ಟ್ಯೂಟರ್ ಆಗಿದ್ದ ಇ. ಡಬ್ಲ್ಯೂ. ಬಾರ್ನೆಸ್ ರಾಮಾನುಜನ್ನರ ಪ್ರಗತಿ ಕುರಿತು ಮದ್ರಾಸು ವಿಶ್ವವಿದ್ಯಾಲಯಕ್ಕೆ ವರದಿ ಕಳಿಸಿದರು ([illegible]) "ಎಸ್. ಎಸ್. ರಾಮಾನುಜನ್ನರ ಕೃತಿ ಹಾಗೂ ಪ್ರಗತಿ ಅತ್ಯುತ್ಕೃಷ್ಟವಾಗಿದೆ. ಇಲ್ಲಿಗೆ ಬಂದಾಗ ಹಾಕಿಕೊಂಡಿದ್ದ ನಿರೀಕ್ಷೆಗಳ

ವನ್ನೂ ಸಫಲಗೊಳಿಸಿದ್ದಾರೆ. ಅವರು ಈ ಕಾಲೇಜಿನ ಫೆಲೋ ಆಗಿ ಆಯ್ಕೆಯಾಗುವ ತನಕವೂ ಅವರ ವಿದ್ಯಾರ್ಥಿವೇತನವನ್ನು ಮುಂದುವರಿಸುವ ವಿಚಾರದಲ್ಲಿ ಏನೂ ಸಂದೇಹ ಉಳಿದಿರಬಾರದು. ಈ ಆಯ್ಕೆ ೧೯೧೮ರ ಅಕ್ಟೋಬರಿನಲ್ಲಿ ಆದೀತೆಂದು ನಿರೀಕ್ಷಿಸಿದ್ದೇನೆ."

ಹಾರ್ಡಿ ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಬರೆದರು (೧೧-೧೧-೧೯೧೫): "ಯುದ್ಧದಿಂದಾಗಿ ರಾಮಾನುಜನ್ನರಿಗೆ ತುಂಬ ತೊಂದರೆಯಾಗಿದೆ. ಇವರಿಗೆ ಪಾಠ ಹೇಳಿಕೊಡುವುದರಲ್ಲಿ ನನ್ನೊಡನೆ ಸಹಕರಿಸುತ್ತಿದ್ದ ಮಿ. ಲಿಟಲ್‌ವುಡ್ ರಣಾಂಗಣಕ್ಕೆ ತೆರಳಿದ್ದಾರೆ. ಇಂಥ ಫಲವಂತ ಮೇಧಾಶಕ್ತಿ ಇರುವಂಥ ವಿದ್ಯಾರ್ಥಿಗೆ ಪಾಠ ಹೇಳಲು ಒಬ್ಬ ಉಪಾಧ್ಯಾಯ ಸಾಲದೇ ಸಾಲದು... ಆಧುನಿಕ ಯುಗದ ಸರ್ವ ಶ್ರೇಷ್ಠ ಗಣಿತ ವಿದ್ವಾಂಸ ಇವರೆನ್ನುವುದು ಪ್ರಶ್ನಾತೀತ. ವಿಷಯಗಳ ಆಯ್ಕೆಯಲ್ಲಿಯೂ ಅವುಗಳೊಡನೆ ವ್ಯವಹರಿಸುವ ವಿಧಾನಗಳಲ್ಲಿಯೂ ಇವರು ಸದಾ ವಿಚಿತ್ರ...ಆದರೆ ಇವರ ಅಸಾಧಾರಣ ಶಕ್ತಿ ವಿಚಾರವಾಗಿ ಸಂದೇಹವೇ ಇಲ್ಲ. ಕೆಲವೊಂದು ರೀತಿಗಳಲ್ಲಿ ನಾನು ತಿಳಿದಿರುವ ಸಕಲ ಗಣಿತ ತಜ್ಞರಲ್ಲೂ ಇವರೊಬ್ಬ ಅತಿ ಗಮನಾರ್ಹ ವ್ಯಕ್ತಿ."

ಕೇಂಬ್ರಿಜ್ ವಿಶ್ವವಿದ್ಯಾಲಯ ರಾಮಾನುಜನ್ನರಿಗೆ ೧೯೧೬ರಲ್ಲಿ ಗೌರವ ಬಿ. ಎ. ಪದವಿ ನೀಡಿ ಗೌರವಿಸಿತು. ಲಂಡನ್ನಿನ ವರಿಷ್ಠ ವಿಜ್ಞಾನ ಸಂಘವಾದ ರಾಯಲ್ ಸೊಸೈಟಿ ಇವರನ್ನು ತನ್ನ ಫೆಲೋ ಆಗಿ ಆಯ್ಕೆ ಮಾಡಿಕೊಂಡು (ಎಫ್. ಆರ್. ಎಸ್.) ಒಬ್ಬ ಗಣಿತವಿದನಿಗೆ ಸಲ್ಲಿಸಬಹುದಾದ ಅತ್ಯುನ್ನತ ಪ್ರಶಸ್ತಿ ಪ್ರದಾನಿಸಿತು (೨೮-೨-೧೯೧೮) ಎಫ್. ಆರ್. ಎಸ್. ಗೌರವಕ್ಕೆ ಭಾಜನರಾದ ಎರಡನೆಯ ಭಾರತೀಯರಿವರು. (ತತ್ಪೂರ್ವ ಎಂ. ಕರ್ಸೆಟ್ಜೀ ಎಂಬ ನೌಕಾ ಎಂಜನಿಯರ್ ೧೮೪೧ ರಲ್ಲಿ ಎಫ್ ಆರ್. ಎಸ್. ಪಡೆದಿದ್ದರು.)

ಆಹಾರ ಸಮಸ್ಯೆ

ಕೇಂಬ್ರಿಜ್ಜಿನಲ್ಲಿ ಕರುಣೆ, ಪ್ರೀತಿ, ವಾತ್ಸಲ್ಯ, ಔದಾರ್ಯ ಈ ಉತ್ಪ್ರೇರಕ ಗುಣಗಳ ಪರಿಸರದಲ್ಲಿ ರಾಮಾನುಜನ್ ತಮ್ಮ ಸಂಶೋಧನೆ ಮುಂದುವರಿಸಿದರು. ಈ ಗಣಿತ ವೈಚಿತ್ರ್ಯವನ್ನು ಜತನದಿಂದ ಕಾಪಾಡುವುದರಲ್ಲಿ ಎಲ್ಲರೂ—ಶಿಕ್ಷಕರು, ಸಹ ವಿದ್ಯಾರ್ಥಿಗಳು ಹಾಗೂ ಇತರರು ಸಮಾಸಕ್ತಿ ಹೊಂದಿದ್ದರು.

ಅಲ್ಲಿ ರಾಮಾನುಜನ್ 'ಸ್ವಯಂಪಾಕಿ'ಗಳಾಗಿದ್ದರು. ಭಾರತದಲ್ಲಿದ್ದ ಒಬ್ಬ ಸ್ನೇಹಿತನಿಗೆ ೧೩-೧೧-೧೯೧೪ ರಂದು ಬರೆದ ಕಾಗದದಲ್ಲಿ ಈ ಪ್ರಶ್ನೆ ಎತ್ತಿದ್ದಾರೆ "...ಆಹಾರದ ವಿಷಯ ಹೇಳುವುದಾದರೆ ನನ್ನ ಆಹಾರವನ್ನು ನಾನೇ ಬೇಯಿಸಿಕೊಳ್ಳದೇ ವಿಧಿ ಇಲ್ಲ. ಈ ಕಾಲೇಜಿನ ಹತ್ತಿರ ಎಲ್ಲಿಯೂ ಶಾಕಾಹಾರ ದೊರೆಯದು. ಕಾಲೇಜಿನಿಂದ ಹೊರಗೆ ಹೋಗಿ ಬರುವುದು ಅಸಾಧ್ಯ ನನಗೆ. ಕೆಲವು ಭಾರತೀಯ ಸಾಮಗ್ರಿಗಳು ಇಲ್ಲಿ ದೊರೆಯುತ್ತವೆ. ಸ್ವಲ್ಪ ಹುಣಸೇಹಣ್ಣನ್ನೂ (ಬೀಜ ತೆಗೆದದ್ದು) ಒಳ್ಳೆಯ ತೆಂಗಿನೆಣ್ಣೆಯನ್ನೂ ಅಂಚೆ ಭಾಂಗಿ ಮಾಡಿ ಬಲು ಕಡಿಮೆ ವೆಚ್ಚದ ಹಾದಿ ಮೂಲಕ ನನಗೆ ರವಾನಿಸಿದರೆ ಮಹದುಪಕಾರವಾಗುತ್ತದೆ ತೆಂಗಿನೆಣ್ಣೆಯೇ ಅತಿ ಪ್ರಶಸ್ತ. ಏಕೆಂದರೆ ಶೈತ್ಯದಲ್ಲಿ ಅದು ಗಟ್ಟಿ ಕಟ್ಟುತ್ತದೆ ಮತ್ತು ಹಾಳಾಗುವುದಿಲ್ಲ. ಹುಣಸೇಹಣ್ಣಿನ ಬದಲು ನಿಂಬೆ ಹಣ್ಣುಗಳನ್ನು, ಇವು ಹುಳಿಯಾಗಿದ್ದರೆ ಮಾತ್ರ, ಉಪಯೋಗಿಸಬಲ್ಲೆ. ಆದರೆ ಇಲ್ಲಿಯ ನಿಂಬೇ ಹಣ್ಣುಗಳಿಗೆ ನಮ್ಮಲ್ಲಿಯವುಗಳಿಗಿರುವಂಥ ಹುಳಿಯೇ ಇಲ್ಲ. ವಾಸ್ತವವಾಗಿ ಇವು ನಿಂಬೆ ಹಣ್ಣುಗಳೇ ಅಲ್ಲ—ಸೀನಿಂಬೆಗಳು..."

ಆದರೆ ಮುಂದಿನ ಸಲ ಭಾರತದಿಂದ ತಾಯಿ ಕಳಿಸಿದ್ದ ಭಾಂಗಿಯಲ್ಲಿದ್ದ ಪದಾರ್ಥಗಳು ಕೆಟ್ಟು ಹೋಗಿದ್ದುವು. ಆ ಭಾಂಗಿಯನ್ನು ಸಾಕಷ್ಟು ಭದ್ರವಾಗಿ ಕಟ್ಟಿರಲಿಲ್ಲ. ೭-೧-೧೯೧೫ರಂದು ಸ್ನೇಹಿತನಿಗೆ ಬರೆದ ತೀಕ್ಷ್ಣ ಪತ್ರದಲ್ಲಿ ಇದನ್ನು ಪ್ರಸ್ತಾವಿಸಿದ್ದಾರೆ "...ದಯವಿಟ್ಟು ನಿಮ್ಮ ಸಹೋದರನ ವಿಳಾಸ ತಿಳಿಸುವಿರಾ? ನಿಮ್ಮ ಒಂದು ಕಾಗದದಲ್ಲಿ ಅವರು ಬಾಪಟ್ಲಾದಲ್ಲಿ ಉಪಾಧ್ಯಾಯರಾಗಿರುವರೆಂದು ಮಾತ್ರ ಹೇಳಿದ್ದೀರಿ. ನಾನು ಭಾರತ ಬಿಟ್ಟ ಬಳಿಕ ಅವರು ನನಗೆ ಕಾಗದವನ್ನೇ ಬರೆದಿರುವುದಿಲ್ಲ ಎಂದೋ

ಪರೀಕ್ಷೆಯಲ್ಲಿ ಅವರು ಅನುತ್ತೀರ್ಣರಾದ್ದರಿಂದ ಆ ವಿಷಯವನ್ನು ನನಗೆ ತಿಳಿಸಲು ಪರಿತಪಿಸುತ್ತಿದ್ದಾರೆ. ಇಲ್ಲವೇ ನಾನು ಅಲ್ಲಿಂದ ಹೊರಡುವ ಮೊದಲೇ ನನ್ನ ಬಗ್ಗೆ ಅಪಾರ್ಥ ಕಲ್ಪಿಸಿಕೊಂಡಿದ್ದಾರೆ. ಎರಡೂ ಅಲ್ಲದಿದ್ದರೆ ನಾನು ಕಡಲು ದಾಟಿರುವುದು ಅವರಿಗೆ ಕೋಪ ಉಂಟುಮಾಡಿದೆ. ನಿಜ ಕಾರಣ ನನಗೆ ಸ್ಪಷ್ಟವಾಗುತ್ತಿಲ್ಲ. ನನಗೆ ರವಾನಿಸಲೋಸ್ಕರ ಒಂದಿಷ್ಟು ಆಹಾರ ಪದಾರ್ಥಗಳನ್ನು ಭದ್ರವಾಗಿ ಕಟ್ಟಲು ನಿಮ್ಮ ಸಹೋದರನ ನೆರವು ಪಡೆಯಬೇಕೆಂದು ತಾಯಿಗೆ ಬರೆದಿದ್ದೆ. ಮತ್ತು ಈ ವಿಷಯ ನಿಮ್ಮ ಸಹೋದರನಿಗೆ ತಿಳಿಸಿಯೂ ಇದ್ದೆ. ಎಂದೇ ನನ್ನ ತಾಯಿ ಅವರ ನೆರವು ಕೋರಿದರು ಆದರೆ ಅವನು ಮಾತ್ರ ಕೃಪೆದೋರಲಿಲ್ಲ. ಆ ಪದಾರ್ಥಗಳು ನನ್ನ ಕೈ ಸೇರಿದಾಗ ಅರ್ಧಕ್ಕರ್ಧ ಹಾಳಾಗಿ ನಷ್ಟವಾಗಿತ್ತು. ಆಹಾರ ಸಾಮಗ್ರಿಗಳನ್ನು ಇಷ್ಟು ದೂರ ಕಳಿಸುವ ಸಂದರ್ಭದಲ್ಲಿ ಅವನ್ನು ತಾವೇ ಕಟ್ಟುವಂಥ ಮುತ್ಸದ್ದಿತನ ಪ್ರದರ್ಶಿಸಿದ್ದೇಕೆಂದು ತಾಯಿಯನ್ನು ಕೇಳಿದೆ. ತನಗೆ ನೆರವು ನೀಡಬಲ್ಲವರು ಯಾರೂ ಇರಲಿಲ್ಲ ನಿಮ್ಮ ಸಹೋದರನಿಂದ ದೊರೆತ ಒಂದೇ ಒಂದು ಉತ್ತರವೆಂದರೆ 'ಎಲ್ಲವನ್ನೂ ನೀವೇ ಮಾಡಬಹುದು' —ಹೀಗೆ ಅವರು ಉತ್ತರಿಸಿದರು. ಈಗ ಆಗಲೀ ಇನ್ನು ಮುಂದೆ ಆಗಲೀ ನನಗೆ ಅಲ್ಲಿಂದ ಏನೂ ಬೇಕಾಗದು. ಏಕೆಂದರೆ ನಾಲಿಗೆ ಮೇಲೆ ಈಗ ನನಗೆ ಪೂರ್ಣ ಹತೋಟಿ ಲಭಿಸಿದೆ. ಕೇವಲ ಅನ್ನ, ಸ್ವಲ್ಪ ಉಪ್ಪು ಮತ್ತು ನಿಂಬೇ ರಸದ ಮೇಲೆ ಅನಿರ್ದಿಷ್ಟ ಕಾಲ ಬದುಕಬಲ್ಲೆ. ಸಾಧ್ಯವಾದರೆ ನಿಮ್ಮ ಸಹೋದರನಿಗೆ ನನ್ನ ಹಳೆಯ ಸ್ನೇಹವನ್ನು ನೆನಪಿಸಿ."

ಆ ದಿನಗಳಂದು (೧೯೧೪-೧೮) ರಾಮಾನುಜನ್ ವೈಯಕ್ತಿಕವಾಗಿ ಸಂತೋಷಿಯಾಗಿದ್ದರೆ? ಎಂಬ ಪ್ರಶ್ನೆಗೆ ಉತ್ತರ ನೀಡುವುದು ಕಷ್ಟ. ಗಣಿತ ಚಿಂತನೆ ಅವರ ಜೀವನ ಸರ್ವಸ್ವವನ್ನೂ ವ್ಯಾಪಿಸಿಬಿಟ್ಟಿತ್ತು. ಹೀಗಾಗಿ [illegible] ಏನು ಬೇಕು, ಏನು ಬೇಡ, ತನಗೆ ಯಾವುದರಿಂದ ಸಂತೋಷ ಎನ್ನುವುದರ ಕಡೆ ನಿಗವೇ ಇರಲಿಲ್ಲ. ಇಂಗ್ಲೆಂಡಿನ ಹವೆ ಮತ್ತು ಆಹಾರ ಅವರಿಗೆ ಸುತರಾಂ ಸರಿಹೊಂದಲಿಲ್ಲ. ಮೊದಲೇ ಅದೃಢಕಾಯರಾದ ಅವರ ಮೇಲೆ ಇವೆಲ್ಲ ಕ್ರಮೇಣ, ಆದರೂ ಸ್ಪಷ್ಟವಾಗಿ, ವಿನಾಶಕಾರಿ ಪರಿಣಾಮವನ್ನು ಅಂಕಿಸಲು ತೊಡಗಿದುವು. ಅಂದು ರಾಮಾನುಜನ್ ಬಾಳಿದ್ದು ಉಲ್ಕೆಯಂತೆ— ತನ್ನನ್ನೇ ಉರಿಸಿಕೊಂಡು ಪ್ರಪಂಚಕ್ಕೆ ಶಕ್ತಿ ಮೀರಿ ಬೆಳಕು ಬೀರಿ ಹೊಸ ದಾರಿ ರೇಖಿಸಿ ಎಲ್ಲಿಯೋ ಮರೆಯಾಗಿ ಹೋಗುವ ತ್ವರಿತ ಬಾಳನ್ನು.

ಕೃಷ್ಣ ಮೇಘದ ಸ್ಪಷ್ಟ ಆಗಮನ

ಮೇ ೧೯೧೭ರ ಸುಮಾರಿಗೆ ಹಾರ್ಡಿ ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಕಳಿಸಿದ ವರದಿ ಅನಿರೀಕ್ಷಿತವೂ, ಕಳವಳಕಾರಿಯೂ ಆಗಿತ್ತು; ರಾಮಾನುಜನ್ ತೀವ್ರ ವ್ಯಾಧಿಯೊಂದಕ್ಕೆ ತುತ್ತಾಗಿದ್ದರು. ಭಾರತಕ್ಕೆ ಮರಳಿಸೋಣವೆಂದರೆ ಯುದ್ಧ ದಿನಗಳು, ಅಲ್ಲಿ (ಭಾರತ) ಸಮರ್ಥ ವೈದ್ಯಕೀಯ ಸೇವೆ ಲಭಿಸುವ ಪರಿಸ್ಥಿತಿಯೂ ಇರಲಿಲ್ಲ. ಆದ್ದರಿಂದ ಅವರನ್ನು ಲಂಡನ್ನಿನ ಬಳಿಯಿದ್ದ ಒಂದು ವಿಶ್ರಾಂತಿ ಧಾಮಕ್ಕೆ ಸಾಗಿಸಲಾಯಿತು. ಅವರು ತೀವ್ರ ಕ್ಷಯರೋಗಗ್ರಸ್ತರಾಗಿದ್ದರು. ಔಷಧಿ, ಪಥ್ಯ, ಅನುಪಾನ ಎಲ್ಲದರಲ್ಲೂ ಅತಿ ಕ್ಲಿಷ್ಟ ರೋಗಿ. ಹಾಲು ಮತ್ತು ಅದರ ಉತ್ಪನ್ನಗಳ ಹೊರತಾಗಿ ಸಸ್ಯೇತರ ಮೂಲಗಳಿಂದ ಬಂದ ಎಲ್ಲ ಆಹಾರ ಪದಾರ್ಥಗಳೂ ಔಷಧಿಯೂ ಈ ಕರ್ಮಠನಿಗೆ ವರ್ಜ್ಯ. ೧೯೧೭–೧೮ ಅವಧಿ ಹೀಗೆ ಒಂದು ವಿಶ್ರಾಂತಿ ಧಾಮದಿಂದ ಇನ್ನೊಂದು ವಿಶ್ರಾಂತಿ ಧಾಮ— ಇವರೆ ಎಲ್ಲವೂ ಗ್ರೇಟ್ ಬ್ರಿಟನ್ನಿನೊಳಗೇ ಇದ್ದವು—ಪರ್ಯಟನೆಯಲ್ಲಿ ಕಳೆಯಿತು.

ಮುಂದೇನು? ಸಪ್ಟೆಂಬರ್ ೧೯೧೮ರ ವೇಳೆಗೆ ಕಾಯಿಲೆ ಸ್ವಲ್ಪ ಹತೋಟಿಗೆ ಬರುವ ಲಕ್ಷಣ ತೋರಿತು. ಆಗ [illegible] ಹಂತದಲ್ಲಿದ್ದುದರಿಂದ ಒಂದು ಸಲವಾದರೂ ರಾಮಾನುಜನ್ ಭಾರತಕ್ಕೆ ಮರಳಿ ಅಲ್ಲಿಯ [illegible] ಉಲ್ಲಾಸದಾಯಕ ಪರಿಸರದಲ್ಲಿದ್ದರೆ ಪೂರ್ಣ [illegible]

ಯಾವರೂ ಭಾವಿಸಿದರು. ಆದರೆ ನೇರವಾಗಿ ಈ ಸೂಚನೆಯನ್ನು ರಾಮಾನುಜನ್ನರ ಮುಂದಿಟ್ಟರೆ ಅವರದನ್ನು ಎರಡನೆಯ ಯೋಚನೆ ಇಲ್ಲದೆ ತಳ್ಳಿ ಹಾಕಿಬಿಡಬಹುದೆಂಬ ಆತಂಕ ಹಾರ್ಡಿಯವರಿಗಿತ್ತು; ತಾನು ವಿದ್ಯಾರ್ಥಿವೇತನದ ಸಹಾಯದಿಂದ ಬಾಳುತ್ತಿರುವಾತ, ಹೀಗಿರುವಾಗ ಈ ರೀತಿ ಅನಧಿಕೃತ ರಜೆ ಪಡೆಯಲು ತನಗೆ ಹಕ್ಕಿಲ್ಲ ಎಂಬುದು ರಾಮಾನುಜನ್ನರ ಚಿಂತನೆಯ ಧಾಟಿ. ಈ ಸೂಕ್ಷ್ಮ ಮನಗಂಡಿದ್ದ ಹಾರ್ಡಿ ಮದ್ರಾಸ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರಿಗೆ ಸವಿವರ ಪತ್ರ ಬರೆದರು (೨೬-೧೧-೧೯೧೮):

"ರಾಮಾನುಜನ್ ತಾತ್ಕಾಲಿಕವಾಗಿ ಭಾರತಕ್ಕೆ ಮರಳುವ ವಿಷಯವನ್ನೂ, ಸ್ಥೂಲವಾಗಿ ಅವರ ಭವಿಷ್ಯದ ವಿಷಯವನ್ನೂ ಪರಿಶೀಲಿಸಲು ಕಾಲ ಈಗ ಪಕ್ವವಾಗಿದೆಯೆಂಬುದು ನನ್ನ ಭಾವನೆ. ಅವರ ಆರೋಗ್ಯವೀಗ ಉತ್ತಮಗೊಳ್ಳುತ್ತಿದೆಯೆಂದು ತಿಳಿಸಲು ತುಂಬ ಸಂತೋಷವಾಗುತ್ತದೆ. ಅವರೀಗ ಅಪಾಯದ ಘಟ್ಟದಿಂದ ಪಾರಾಗಿದ್ದರೆ ಮತ್ತು ಪೂರ್ಣ ಚೇತರಿಕೆಯ ಹಾದಿಯಲ್ಲಿದ್ದಾರೆಂದು ನಂಬಬಹುದು. ಅವರ ಮಾನಸಿಕ ಸ್ಥಿತಿ ಕುರಿತು ಅನೇಕ ಸಂದರ್ಭಗಳಲ್ಲಿ ನಾವು ಸಾಕಷ್ಟು ಕಾತರರಾಗಿದ್ದುಂಟು. ಅದರಲ್ಲಿ ಪ್ರಬಲವಾದ ಕೊರತೆ ಏನಾದರೂ ಇದೆಯೆಂದು ನನಗನ್ನಿಸುವುದಿಲ್ಲ. ಆದರೆ ಸುದೀರ್ಘ ವ್ಯಾಧಿ ಹಾಗೂ ಏಕಾಂತ ಜೀವನ ಅವರ ಮೇಲೆ ದುಷ್ಪರಿಣಾಮ ಬೀರಿವೆ. ಇದರಿಂದಾಗಿ ಅವರು ಅತಿಶಯ ಮಾನಸಿಕ ಮ್ಲಾನತೆ ಅನುಭವಿಸುವುದುಂಟು. ಅವರು ಊರಿಗೆ ಒಮ್ಮೆ ಮರಳಿದರೆ ಪರಿಸ್ಥಿತಿ ಸುಧಾರಿಸಬಹುದೆಂದು ಭಾವಿಸಿದ್ದೇನೆ. ನೀವು ಅವರ ತಾತ್ಕಾಲಿಕ ಮರಳಿಕೆ ಬಯಸಿ ಅಧಿಕೃತವಾಗಿ ನಮಗೆ ಪತ್ರ ಬರೆದರೆ ಅದು ಖಂಡಿತ ಫಲಕಾರಿ ಆಗುತ್ತದೆ...... ಅವರ ಅಸಾಧಾರಣ ಗಣಿತ ಸಾಮರ್ಥ್ಯದಲ್ಲಿ ಇಳಿತದ ಸೂಚನೆ ಎಂದೂ ಕಂಡುಬಂದದ್ದಿಲ್ಲ. ಅನಾರೋಗ್ಯದ ದಿನಗಳಲ್ಲಿ ಅವರಿಂದ ಪ್ರವಹಿಸಿದ ಗಣಿತ ಫಲಿತಾಂಶಗಳು ಸಹಜವಾಗಿಯೇ ಕಡಿಮೆ ಆದರೆ ಗುಣಮಟ್ಟದಲ್ಲಿ ಅವು ಹಿಂದಿನಂತೆ ಉತ್ಕೃಷ್ಟವಾಗಿದ್ದುವು... ವಿಜ್ಞಾನ ರಂಗದಲ್ಲಿ ಈ ಮೊದಲು ಯಾವ ಭಾರತೀಯನೂ ಪಡೆಯದಿದ್ದಂಥ ಮಹೋನ್ನತ ಸ್ಥಾನವನ್ನೂ ಕೀರ್ತಿಯನ್ನೂ ಗಳಿಸಿ ಅವರು ಭಾರತಕ್ಕೆ ಮರಳುವವರಿದ್ದಾರೆ. ಅವರೆಂಥ ಅನರ್ಘ್ಯನಿಧಿ ಎನ್ನುವುದನ್ನು ಭಾರತ ಪರಿಗಣಿಸುವುದೆಂಬ ವಿಶ್ವಾಸ ನನಗುಂಟು. ಅವರ ನೈಜ ಸರಳತೆ ಹಾಗೂ ವಿನಯ ಯಶಸ್ಸಿನಿಂದ ತಿಲಮಾತ್ರವೂ ಮಾಸಲಿಲ್ಲ. ಆಗಬೇಕಾದ್ದಿಷ್ಟೆ: ತಾನು ನಿಜವಾಗಿಯೂ ಒಬ್ಬ ಯಶಃ ಪುರುಷ ಎಂಬುದು ಅವರಿಗೆ ಮನವರಿಕೆ ಆಗಬೇಕು."

ರಾಮಾನುಜನ್ನರು ದೈಹಿಕವಾಗಿ ತೀವ್ರ ವ್ಯಾಧಿಗ್ರಸ್ತರಾಗಿದ್ದರೂ ಅವರ ಬುದ್ಧಿ ಹಿಂದಿನಂತೆಯೇ ನಿಶಿತವಾಗಿತ್ತೆನ್ನುವುದನ್ನು ನಿದರ್ಶಿಸಲು ಹಾರ್ಡಿ ಒಂದು ಆಖ್ಯಾನಕವನ್ನು ಉಲ್ಲೇಖಿಸಿದ್ದಾರೆ. ಮಾಮೂಲಿನಂತೆ ಅವರು ರಾಮಾನುಜನ್ನರನ್ನು ನೋಡಿ ವಿಚಾರಿಸಿಕೊಂಡು ಬರಲು ವಿಶ್ರಾಂತಿ ಧಾಮಕ್ಕೆ ಹೋದರು. ತಾವು ಅಲ್ಲಿಗೆ ಕುಳಿತು ಬಂದಿದ್ದ ಟ್ಯಾಕ್ಸಿಯ ಫಲಕ ಸಂಖ್ಯೆ ೧೭೨೯ (= ೭ × ೧೩ × ೧೯). ಇದೊಂದು ತೀರ ಜಡ ಮತ್ತು ಸಪ್ಪೆ ಸಂಖ್ಯೆ ಎನಿಸುತ್ತದೆಂದು ಹಾರ್ಡಿ ಹೇಳಿದಾಗ ರಾಮಾನುಜನ್ ಸೆಟೆದು ನುಡಿದರು. "ಅಲ್ಲಲ್ಲ, ಇದೊಂದು ಅತಿ ಸ್ವಾರಸ್ಯಕರ ಸಂಖ್ಯೆ: ಎರಡು ಘನಗಳ ಮೊತ್ತವನ್ನು ಎರಡು ಭಿನ್ನ ರೀತಿಗಳಲ್ಲಿ ನಿರೂಪಿಸಬಹುದಾದ ಕನಿಷ್ಠ ಸಂಖ್ಯೆಯೇ ೧೭೨೯."

$$೧೭೨೯ = ೧ + ೧೭೨೮ = ೧^3 + ೧೨^3$$
$$೧೭೨೯ = ೭೨೯ + ೧೦೦೦ = ೯^3 + ೧೦^3$$

"ಹಾಗಾದರೆ ನಾಲ್ಕನೆಯ ಘಾತ ಕುರಿತಂತೆ ಒಂದು ಕನಿಷ್ಠ ಸಂಖ್ಯೆ ಇದೆಯೋ ? ಇದ್ದರೆ ಅದು ಯಾವುದು?" ಹಾರ್ಡಿ ಪ್ರಶ್ನಿಸಿದರು.

ರಾಮಾನುಜನ್ ತುಸು ಚಿಂತಿಸಿ "ಅಂಥ ಸಂಖ್ಯೆಗೆ ಯಾವ ಸ್ಪಷ್ಟ ಉದಾಹರಣೆಯೂ ನನಗೆ ತಿಳಿಯದು. ಅದೇನಾದರೂ ಇರುವುದಾದರೆ ಅದೊಂದು ಬೃಹತ್ಸಂಖ್ಯೆ" ಎಂದರು.

ಈ ಸಂಖ್ಯೆಯನ್ನು ಆಯ್ಲರ್ (೧೭೦೭-೮೩) ಎಂಬ ಸ್ವಿಸ್ ಗಣಿತ ಪ್ರಭೃತಿ ನೀಡಿದ್ದಾನೆ:

$೬೩೫೩೧೮೬೫೭ = ೧೨೧೧೭೩೬೧ + ೬೨೩೨೦೧೨೯೬ = ೫೯^{೪} + ೧೫೮^{೪}$

$೬೩೫೩೧೮೬೫೭ = ೩೧೨೯೦೦೭೨೧ + ೩೨೨೪೧೭೯೩೬ = ೧೩೩^{೪} + ೧೩೪^{೪}$

ಲಿಟಲ್‌ವುಡ್ ಒಮ್ಮೆ ಅರ್ಥಪೂರ್ಣವಾಗಿ ಉದ್ಗರಿಸಿದ್ದರು "ಪ್ರತಿಯೊಂದು ಧನಪೂರ್ಣಾಂಕವೂ ರಾಮಾನುಜನ್ನರ ಆತ್ಮೀಯ ಸ್ನೇಹಿತ."

ಇತರರಿಗೆ ತಿಳಿಯದಂಥ ಗುಪ್ತ ವಿಧಾನವಾಗಲಿ, ಪವಾಡ ಸಾಮರ್ಥ್ಯವಾಗಲಿ ರಾಮಾನುಜನ್ನರಿಗೆ ಇತ್ತೇ, ಅವರಿಂದ ಪ್ರವಹಿಸುತ್ತಿದ್ದ ಮಹಾ ಫಲಿತಾಂಶಗಳ ರಹಸ್ಯವೇನು ಎಂದು ಹಲವಾರು ಮಂದಿ ಹಾರ್ಡಿಯವರನ್ನು ಪ್ರಶ್ನಿಸಿದ್ದಾರೆ. ಇದಕ್ಕೆ ಅವರು ಸ್ಪಷ್ಟ ಅಥವಾ ಖಚಿತ ಉತ್ತರ ಕೊಟ್ಟಿರುವುದಿಲ್ಲ. ಸಾರ್ವತ್ರಿಕವಾದ ಸಮಾಧಾನ ಬರೆದಿರುವರಷ್ಟೆ (೧೯೨೧):

"ಎಲ್ಲ ಗಣಿತವಿದರೂ ತಳದಲ್ಲಿ ಯೋಚಿಸುವ ರೀತಿ ಒಂದೇ ಎಂದು ನನ್ನ ನಂಬಿಕೆ. ರಾಮಾನುಜನ್ನರಾದರೂ ಇದಕ್ಕೆ ಅಪವಾದವಾಗಿರಲಿಲ್ಲ. ಅವರ ಸ್ಮರಣ ಸಾಮರ್ಥ್ಯ ಅತ್ಯಸಾಧಾರಣ ಮಟ್ಟದ್ದಾಗಿತ್ತು. ಸಂಖ್ಯೆಗಳ ವೈಚಿತ್ರ್ಯಗಳನ್ನು ಅವರು ಸ್ಥೂಲವಾಗಿ ನೆನಪಿನಲ್ಲಿಟ್ಟುಕೊಳ್ಳಬಲ್ಲವರಾಗಿದ್ದರು.........ಗಣನೆಗಳನ್ನು ಮಾಡುವಾಗ ಅವರು ಬಲು ಚುರುಕಿನಿಂದ ವ್ಯವಹರಿಸುತ್ತಿದ್ದರೂ ಇದು ಸರ್ವಸಾಧಾರಣ ಎಲ್ಲ ಧೀಮಂತ ಗಣಿತಜ್ಞರ ಮಟ್ಟದಲ್ಲಿಯೇ ಇತ್ತು. ನಿಜವಾದ ವಿಸ್ಮಯಕಾರಿ ಅಂಶವೆಂದರೆ ಬೀಜಗಣಿತೀಯ ಸೂತ್ರಗಳು, ಅನಂತ ಶ್ರೇಣಿಗಳ ಪರಿವರ್ತನೆಗಳು ಇವೇ ಮುಂತಾದ ಕ್ಷೇತ್ರಗಳಲ್ಲಿ ಅವರಿಗಿದ್ದ ತೀಕ್ಷ್ಣ ಅಂತರ್ದೃಷ್ಟಿ. ಈ ವಿಷಯದಲ್ಲಿ ಅವರ ಸಮಾನರನ್ನು ನಾನು ಎಲ್ಲಿಯೂ ಕಂಡಿಲ್ಲ. ಅವರನ್ನು ನಾನು ಆಯ್ಲರ್ ಮತ್ತು ಯಾಕೋಬಿ (೧೮೦೪–೫೧) ಇವರೊಡನೆ ಮಾತ್ರ ಹೋಲಿಸಬಲ್ಲೆನಷ್ಟೆ. ಸಾಂಖ್ಯಿಕ ಉದಾಹರಣೆಗಳನ್ನು ತೆಗೆದುಕೊಂಡು ಗಣಿತೀಯ ಅನುಗಮನ (mathematical induction) ವಿಧಾನದಿಂದ ಅವರು ತಮ್ಮ ಸಂಶೋಧನೆಯನ್ನು ಮಾಡಿದರು. ಅವರ ಈ ಕೃತಿ ಆಧುನಿಕ ಗಣಿತಜ್ಞರಲ್ಲಿ ಹೆಚ್ಚಿನವರದಕ್ಕಿಂತ ಎಷ್ಟೋ ಪಟ್ಟು ಜಾಸ್ತಿ ಇತ್ತು...ನೆನಪು, ಸಹನೆ ಮತ್ತು ಗಣನ ಸಾಮರ್ಥ್ಯಗಳೊಡನೆ ಸಾರ್ವತ್ರೀಕರಣದ ಸೌಲಭ್ಯ, ಅಂತಿಮ ಫಲಿತಾಂಶದ ರೂಪ ಕುರಿತು ಕಾಳಜಿ ಮತ್ತು ಆಧಾರ ಭಾವನೆಗಳನ್ನು ಕ್ಷಿಪ್ರವಾಗಿ ಬದಲಾಯಿಸುವ ಕ್ಷಮತೆ ಯಾರನ್ನೂ ದಂಗುಬಡಿಸುವ ಮಟ್ಟದಲ್ಲಿ ಅವರಿಗಿದ್ದುವು. ಆ ದಿವಸಗಳಲ್ಲಿ ತಮ್ಮ ವಿಶಿಷ್ಟ ಕ್ಷೇತ್ರದಲ್ಲಿ ಇನ್ನೊಬ್ಬ ಎದುರಾಳಿಯಿಲ್ಲದ ಅದ್ವಿತೀಯರಾದವರಾಗಿದ್ದರು".

ಎಫ್. ಆರ್. ಎಸ್. ಗೌರವಕ್ಕೆ ಆಯ್ಕೆಗೊಂಡದ್ದರಿಂದ ರಾಮಾನುಜನ್ನರಿಗೆ ಯಾವ ತೆರನಾದ ನಿರ್ಬಂಧವೂ ಇಲ್ಲದೇ ವಾರ್ಷಿಕ ರೂ ೩೭೫೦ ಬಹುಮಾನಧನ ಆರು ವರ್ಷ ಪರ್ಯಂತ ಮಂಜೂರಾಯಿತು. ಇತ್ತ ಮದ್ರಾಸ್ ವಿಶ್ವವಿದ್ಯಾಲಯವೂ ತತ್ಸಮ ಮೊಬಲಗನ್ನು ಐದು ವರ್ಷ ಪರ್ಯಂತ ಮಂಜೂರು ಮಾಡಿ ತನ್ನ ಅಭಿಮಾನ, ಔದಾರ್ಯಗಳನ್ನು ಪ್ರದರ್ಶಿಸಿತು. ಅಲ್ಲದೆ ರಾಮಾನುಜನ್ ಭಾರತಕ್ಕೆ ಮರಳಿದ ಬಳಿಕ ಅವರನ್ನು ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಸ್ಥಾಪಿಸಬೇಕೆಂದಿದ್ದ ಗಣಿತ ಪ್ರಾಚಾರ್ಯ ಪೀಠಕ್ಕೆ ಆಹ್ವಾನಿಸುವ ಯೋಜನೆಯನ್ನೂ ಹಾಕಿಕೊಂಡಿತು ಮಾತೃ ಸಂಸ್ಥೆಯ ಈ ಧಾರಾಳತನವನ್ನು ಕೃತಜ್ಞತೆಯಿಂದ ಸ್ಮರಿಸುತ್ತ ರಾಮಾನುಜನ್ ಬರೆದರು. (೧೧–೧–೧೯೧೯):

"ನಿಮ್ಮ ತಾರೀಖು ೯–೧೨–೧೯೧೮ರ ಕಾಗದ ಬಂದಿದೆ. ವಿಶ್ವವಿದ್ಯಾಲಯ ಪರಮೌದಾರ್ಯದಿಂದ ಪ್ರದಾನಿಸಿರುವ ಸಹಾಯಧನವನ್ನು ಅತ್ಯಂತ ವಿನಯದಿಂದ ಸ್ವೀಕರಿಸುತ್ತೇನೆ. ಭಾರತಕ್ಕೆ ನಾನು ಮರಳುವುದು ಇನ್ನೇನು ಅವರ ಏರ್ಪಾಡುಗಳು ಮುಗಿದೊಡನೆಯೇ ಸಾಧ್ಯವಾಗುತ್ತದೆ. ನಾನು ಪಡೆಯಲಿರುವ ಒಟ್ಟು ಮೊತ್ತ ಭಾರತಕ್ಕೆ ಮರಳಿದ ಬಳಿಕ ನನಗೆ ತೀರ ಹೆಚ್ಚಾದೀತೆಂದು ಅನ್ನಿಸುತ್ತದೆ. ಇಂಗ್ಲೆಂಡಿನಲ್ಲಿಯ ವೆಚ್ಚ ಕಳೆದ ಮೇಲೆ ನನ್ನ ತಂದೆ ತಾಯಿಯರಿಗೆ ರೂ. ೬೦ ಕೊಡಬೇಕೆಂಬುದು ನನ್ನ ಬಯಕೆ. ಇತರ ಖರ್ಚುಗಳನ್ನು ಪಾವತಿಸಿದ ಬಳಿಕ ಉಳಿಯುವ ಮೊತ್ತವನ್ನು ಯಾವುದೇ ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸಬೇ-

ಗಿಸಬೇಕು. ಉದಾಹರಣೆಗೆ ಬಡ ಹುಡುಗರಿಗೂ ನಿರ್ಗತಿಕರಿಗೂ ಶಾಲಾ ಶುಲ್ಕವನ್ನು (School fee) ಕಡಿಮೆ ಮಾಡುವುದು, ಅವರಿಗೆ ಮುಫತ್ತಾಗಿ ಪುಸ್ತಕ ಒದಗಿಸುವುದು, ಇತ್ಯಾದಿ. ಅಲ್ಲಿಗೆ ನಾನು ಮರಳಿದ ತರುವಾಯ ಸಮಸ್ತ ಏರ್ಪಾಡುಗಳನ್ನೂ ಮಾಡಲು ಸಾಧ್ಯವಾದೀತೆನ್ನುವುದರಲ್ಲಿ ಸಂದೇಹವಿಲ್ಲ. ನನ್ನ ಆರೋಗ್ಯ ಕೆಟ್ಟಿದ್ದುದರಿಂದ ಇದೇ ಕಳೆದ ಎರಡು ವರ್ಷ ಆ ಹಿಂದಿನಂತೆ ನನಗೆ ಗಣಿತದಲ್ಲಿ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಬೇಗನೆ ಅಧಿಕ ಕಾರ್ಯವೆಸಗಲು ಸಮರ್ಥನಾಗುವೆನೆಂಬ ಭರವಸೆ ಉಂಟು. ತಾವು ನೀಡಿದ ನೆರವಿಗೆ ಅರ್ಹರಾಗಲು ಶಕ್ತಿ ಮೀರಿ ದುಡಿಯುತ್ತೇನೆ."

ಕಾಲರಾಯನ ಚಟುಲ ಪದಗಮನ

ವ್ಯಾಧಿ ಜರ್ಜರಿತ ರಾಮಾನುಜನ್ ಸಹಿತ ಹಡಗು ೨೭-೨-೧೯೧೯ರಂದು ಲಂಡನ್ನಿನಿಂದ ನಿಷ್ಕ್ರಮಿಸಿ ಮಾರ್ಚ್ ೨೭ರಂದು ಮುಂಬಯಿಯನ್ನೂ ಏಪ್ರಿಲ್ ಎರಡರಂದು ಮದ್ರಾಸನ್ನೂ ತಲಪಿತು. ಬಂಧು ಬಾಂಧವರು ಆಗ ಕಂಡದ್ದೇನು? ಚರ್ಮ ಮೂಳೆ ಹಂದರದ ರಾಮಾನುಜನ್ ಛಾಯೆ. ಬದಲಾಗದಿದ್ದುದು ಎರಡು: ಕಣ್ಣುಗಳಲ್ಲಿ ಮಿಂಚುತ್ತಿದ್ದ ಅಪೂರ್ವ ಕಾಂತಿ, ವಿಕಿರಣಪಟು ನಿಶಿತ ಮತಿ. ತಾಯಿನೆಲದ ಮೇಲೆಯೇ ಕೊನೆ ಉಸಿರೆಳೆಯಲು ಮರಳಿದರೋ ಎಂಬಂಥ ಕರುಣಾಜನಕ ದೃಶ್ಯ.

ತೀವ್ರವಾದ ದೈಹಿಕ ಯಾತನೆಯಿಂದ ನರಳುತ್ತಿದ್ದಾಗ ಅದನ್ನು ಮರೆಯಲು ಅವರಿಗಿದ್ದ ವಿಮೋಚನ ಮಾರ್ಗ ಒಂದೇ: ಗಣಿತ ಚಿಂತನೆ. ಮೃತ್ಯು ಗುರುತರವಾಗಿ ಕದ ತಟ್ಟುತ್ತಿದ್ದಾಗಲೂ ಅವರ ಮಿದುಳು ಗಣಿತ ಚಿಂತನೆಯಿಂದ ವಿಮುಖವಾಗಲಿಲ್ಲ. "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?"

ಜಾನಕಿ ಪತಿಯ ಬಳಿಯಲ್ಲಿಯೇ ಇದ್ದು ಅವರಿಗೆ ಬರೆಯಲು ಕಾಗದದ ತಾನುಗಳನ್ನೂ, ಸೀಸದ ಕಡ್ಡಿಯನ್ನೂ ಒದಗಿಸುತ್ತಿದ್ದರು, ಮತ್ತು ಬರೆದಾದ ಹಾಳೆಗಳನ್ನು ಜೋಪಾನವಾಗಿರಿಸುತ್ತಿದ್ದರು. ಗಣನೆ ಮಾಡಲು ಅನೇಕ ವೇಳೆ ಬಳಪದ ಹಲಗೆ ಮತ್ತು ಕಡ್ಡಿ ಬಳಸುವುದೂ ಇತ್ತು. ೧೯೧೮-೨೦ರ ಅವಧಿಯಲ್ಲಿ ಪ್ರಕಟವಾದ ರಾಮಾನುಜನ್ ಪ್ರಬಂಧಗಳ ಸಂಖ್ಯೆ ಹನ್ನೆರಡು-ಉತ್ಕೃಷ್ಟ ಗಣಿತ ಪಾಕಗಳು.

ಈ ಗಣಿತ ಶ್ರೀಮಂತನನ್ನು, ಭಾರತ ರತ್ನವನ್ನು, ನವಯುಗ ಪ್ರವರ್ತಕನನ್ನು ಉಳಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನೂ ಮಾಡಲಾಯಿತು: ಅತ್ಯುತ್ಕೃಷ್ಟ ವೈದ್ಯಕೀಯ ನೆರವು, ಯೋಗ್ಯ ಪರಿಸರ, ಬಂಧು ಬಾಂಧವರಿಂದ ಆತ್ಮೀಯ ಸೇವೆ, ಹವಾ ಬದಲಾವಣೆ ಇತ್ಯಾದಿ. ಸಂಸ್ಥೆಗಳಿಂದಲೂ. ಸಾರ್ವಜನಿಕರಿಂದಲೂ ಸ್ವಯಂಪ್ರೇರಿತವಾಗಿ ಒದಗಿ ಬಂದ ಧನ ಸಹಾಯ ಅದೆಷ್ಟೋ.

ಆರ್ಥಿಕ ಸ್ವಾಸ್ಥ್ಯವಾಗಲಿ, ಉತ್ಕೃಷ್ಟ ವೈದ್ಯಕೀಯ ಸೇವೆಯಾಗಲಿ, ಪ್ರಶಸ್ತಿ ಪರಂಪರೆಯಾಗಲಿ, ಸಮಸ್ತ ವಿದ್ವತ್ಪ್ರಪಂಚದ ಪ್ರಾರ್ಥನೆಯಾಗಲೀ ರೋಗದ ಏರುತ್ತಿದ್ದ ಉಲ್ಬಣತೆ ತಡೆಯಲು ಸಮರ್ಥವಾಗಲಿಲ್ಲ. ಈ ಪಾರಲೌಕಿಕ ಪ್ರತಿಭೆ ೨೬-೪-೧೯೨೦ರಂದು ನಂದಿಯೇ ಹೋಯಿತು.

ಪ್ರತಿಭೆ ದೇಶದ ಸಂಪತ್ತು. ನಿಸರ್ಗ ತನ್ನದೇ ಆದ ನಿಗೂಢ ಕಾರಣಕ್ಕಾಗಿ ಪ್ರತಿಭೆಯನ್ನು ಯಾದೃಚ್ಛಿಕವಾಗಿ ವಿತರಿಸುವಂತೆ ತೋರುತ್ತದೆ. ಎಂದೇ ಪ್ರತಿಭೆಯ ಹುಟ್ಟು, ಬೆಳವಣಿಗೆ, ನಡಿಗೆಯ ಜಾಡು ಮುಂತಾದವು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡುವುದಿಲ್ಲ: "ಆವ ಗಾಳಿಯು ದಾವ ಧೂಳ್ಕಣವ ಪೊತ್ತಿಹುದೋ!" ಇದು ಹೇಗೂ ಇರಲಿ. ಪ್ರತಿಭೆಯನ್ನು ಎಳವೆಯಲ್ಲೇ ಗುರುತಿಸುವ, ಪೋಷಿಸುವ ಹಾಗೂ ಸಂರಕ್ಷಿಸುವ ಕರ್ತವ್ಯ ಅವಿಚ್ಛಿನ್ನವಾಗಿ ನಡೆಯಲೇಬೇಕಾದ ವಿಧಿ. ಆಧುನಿಕ ಭಾರತದ ವಿಜ್ಞಾನ ಚೇತನದ ಶ್ರೇಷ್ಠ ಪ್ರತೀಕವಾದ ರಾಮಾನುಜನ್ನರಿಗೆ ಯುಕ್ತ ವೇಳೆಯಲ್ಲಿ ಸಹಾಯ ಮತ್ತು ಪೋಷಣೆ ಒದಗಿದ್ದರೆ ಅವರ ದುರಂತ ಅನಿವಾರ್ಯವಾಗುತ್ತಿರಲಿಲ್ಲವೋ ಏನೋ!

ಮರಣೋತ್ತರ ಪ್ರಶಸ್ತಿ

ಹಾರ್ಡಿಯವರಿಗೆ ಇದೊಂದು ವೈಯಕ್ತಿಕ

ನಷ್ಟ. ಇವರು ಬರೆದರು "ನನ್ನ ವಿಚಾರ ಹೇಳುವುದಾದರೆ ನಾನು ಅವರಿಗೆ ಅದೆಷ್ಟು ಅಭಾರಿಯಾಗಿದ್ದೇನೆ ಎಂದು ಹೇಳುವುದು ಬಲು ಕಷ್ಟ. ಅವರ ಪರಿಚಯ ಆದ ದಿನದಿಂದಲೂ ಅವರ ಸ್ವಂತತ್ವ ನನಗೆ ಸ್ಫೂರ್ತಿಯ ಸ್ಥಿರ ಸೆಲೆಯಾಗಿತ್ತು. ಅವರ ಅತ್ಯಂತ ಗಮನಾರ್ಹ ಗುಣವೆಂದರೆ ಪ್ರಾಯಶಃ ಅನುಪಮ ವಿನಯಶೀಲತೆ. ಅವರಿಗೆ ದೊರೆತಷ್ಟು ಪ್ರಶಂಸೆ ಬೇರೆ ಯಾರಾದರೂ ಭಾರತೀಯರಿಗೆ ಲಭಿಸಿದ್ದರೆ ತಲೆ ಭಾರವಾಗದೇ ಉಳಿಯುತ್ತಿದ್ದವರು ಕೇವಲ ಬೆರಳೆಣಿಕೆಯಲ್ಲಿ ಇರುತ್ತಿದ್ದರಷ್ಟೆ. ರಾಮಾನುಜನ್ ಅವರೋ ಮಹಾನುಭಾವ." ಎಂದರೋ ಮಹಾನುಭಾವುಲು!

ನೆವಿಲ್ ಬರೆದರು "ರಾಮಾನುಜನ್ ಭಾರತದಿಂದ ಹೊರಗೆ ಹೋಗಿರದಿದ್ದರೆ ಇಂದು ಪ್ರಾಯಶಃ ಜೀವಂತರಾಗಿರುತ್ತಿದ್ದರು. ಆದರೆ ಆಗ ಅವರಿಗೆ ತಮ್ಮ ಸಾಮರ್ಥ್ಯದ ಮತ್ತು ವೈಫಲ್ಯದ ಪ್ರಜ್ಞೆ ಇರುತ್ತಿತ್ತು. ಸಾಮರ್ಥ್ಯದ ಮತ್ತು ಸಿದ್ಧಿಯ ಪ್ರಜ್ಞೆ ಅಲ್ಲ. ಮರಣ ಕೂಡ ಒಂದು ವೈಫಲ್ಯವೇ. ಆದರೆ ಅವರ ತಾಯಿಗೆ ಕನಸಿನಲ್ಲಿ ಕಂಡಂತೆ ಅವರ ಜೀವನದ ಉದ್ದೇಶ ಕೊನೆಗಾದರೂ ಸಿದ್ಧಿಸಿತು. ಬಯಸದ ಸಾವಿನಿಂದ ವಿಫಲಗೊಳ್ಳುವುದು ಬಾಳಿದ ಬದುಕಿನ ವಿಫಲತೆಗಿಂತ ಉತ್ತಮವೆಂದು ರಾಮಾನುಜನ್ ನಂಬಿದ್ದರು. ಇಂಗ್ಲಂಡಿನಿಂದ ಭಾರತಕ್ಕೆ ಮರಳಿದ್ದು ಅದೆಷ್ಟು ಯೋಗ್ಯವಾಯಿತು ಎನ್ನುವ ವಿಚಾರದಲ್ಲಿ ತಮಗೆಂದೂ ಸಂದೇಹ ಮೂಡಲಿಲ್ಲ ಎಂದು ಹೇಳಿದರು."

೧೯೨೭ರಲ್ಲಿ ಹಾರ್ಡಿ ಬರೆದರು "ಆಧುನಿಕ ವಿಶ್ಲೇಷಣ ಶಾಸ್ತ್ರದ ಅಡಿಪಾಯಗಳನ್ನು ಕಟ್ಟುತ್ತಿದ್ದ ಆ ಮಹಾ ದಿನಗಳಂದು ಒಬ್ಬ ಗಣಿತಜ್ಞ ಸ್ವಂತತ್ವವನ್ನು ಬಲು ಸುಲಭವಾಗಿ ಪ್ರದರ್ಶಿಸಬಹುದಾಗಿತ್ತು. ಇಂದು ಪರಿಸ್ಥಿತಿ ತದ್ವಿಪರೀತ ಎಂದು ಅನೇಕರು ಹೇಳುವುದುಂಟು. ಒಂದು ದೃಷ್ಟಿಯಿಂದ ಇದು ಸರಿ. ರಾಮಾನುಜನ್ನರ ಸಂಶೋಧನೆಯ ಪ್ರಾಮುಖ್ಯ ಎಷ್ಟು, ಅದನ್ನು ಯಾವ ಶಿಷ್ಟಮಾನದಿಂದ ಅಳೆಯಬೇಕು. ಮತ್ತು ಭವಿಷ್ಯದ ಗಣಿತದ ಮೇಲೆ ಅದರ ಪ್ರಭಾವ ಏನು ಎನ್ನುವ ವಿಚಾರದಲ್ಲಿ ಅಭಿಪ್ರಾಯಭೇದ ಇರುವುದು ಸಾಧ್ಯ. ಅತ್ಯಂತ ಮಹತ್ವವಿರುವ ಸಂಶೋಧನೆಗಳ ಸರಳತೆಯಾಗಲೀ ಅನಿವಾರ್ಯತೆಯಾಗಲಿ, ಇದರಲ್ಲಿಲ್ಲ. ಅವರ ಸಂಶೋಧನೆಯಲ್ಲಿ ಕಂಡುಬರುವ ಒಂದು ಸಿದ್ಧಿಯೆಂದರೆ ಆಳವೂ, ಅಭೇದ್ಯವೂ ಆದ ಸ್ವಂತತ್ವ. ಇವನ್ನು ಯಾರೂ ಅಲ್ಲಗಳೆಯಲಾರರು. ಇನ್ನೂ ಸ್ವಲ್ಪ ತಾರುಣ್ಯದಲ್ಲೇ ಅವರನ್ನು ಹಿಡಿದು ಪಳಗಿಸಿದ್ದರೆ ಅವರು ಇನ್ನೆಷ್ಟು ದೊಡ್ಡವರಾಗುತ್ತಿದ್ದರೋ ಏನೋ! ಆಗ ಅವರು ಈಗ ಆವಿಷ್ಕರಿಸಿದುದಕ್ಕಿಂತಲೂ ಅದೆಷ್ಟೋ ಹೆಚ್ಚು ಹೊಸ ಮತ್ತು ಅಧಿಕ ಪ್ರಾಮುಖ್ಯವಿರುವ ವಿಷಯಗಳನ್ನು ಶೋಧಿಸಿರುತ್ತಿದ್ದರು. ಆದರೆ ಅದೇ ವೇಳೆ ಅವರು ರಾಮಾನುಜನ್ ಆಗಿ ಮಾತ್ರ ಉಳಿದಿರುತ್ತಿರಲಿಲ್ಲ. ಬದಲು, ಒಬ್ಬ ಯುರೋಪಿಯನ್ ಪ್ರಾಧ್ಯಾಪಕರಾಗಿ ಮೆರೆಯುತ್ತಿದ್ದರಷ್ಟೆ, ಮತ್ತು ಇದರಿಂದ ಒದಗುತ್ತಿದ್ದ ಲಾಭಕ್ಕಿಂತ ನಷ್ಟವೇ ಹೆಚ್ಚಾಗಿರುತ್ತಿತ್ತು."

೧೯೩೭ ರಲ್ಲಿ ಮತ್ತೆ ಹಾರ್ಡಿ ಬರೆದರು "ರಾಮಾನುಜನ್ ಕುರಿತಂತೆ ನಿಜವಾದ ದುರಂತ ಅವರ ಎಳೆ ಪ್ರಾಯದ ಮರಣವಲ್ಲ. ಮಹಾಪುರುಷನೊಬ್ಬ ತಾರುಣ್ಯದಲ್ಲಿ ಗತಿಸುವುದು ಘೋರ ನಷ್ಟ ನಿಜ. ಆದರೆ ಹೋಲಿಕೆಯಿಂದ ಹೇಳುವುದಾದರೆ ಒಬ್ಬ ಗಣಿತವಿದ ಮೂವತ್ತರ ವೇಳೆಗಾಗುವಾಗ ಸಾಕಷ್ಟು ವೃದ್ಧನಾಗಿರುತ್ತಾನೆ. ಆದ್ದರಿಂದ ಅವನ ಮರಣ ಅದು ಕಾಣುವಷ್ಟರ ಮಟ್ಟಿಗೆ ದುರಂತವಲ್ಲ. ಏಬೆಲ್ (೧೮೦೨-೨೯) ಇಪ್ಪತ್ತಾರರಲ್ಲಿ ಸತ್ತ. ಈತ ಗಣಿತಕ್ಕೆ ಇನ್ನಷ್ಟು ಕಾಣ್ಕೆ ಸಲ್ಲಿಸಿ, ಜನಾದರಣೀಯನಾಗಿದ್ದರೂ ಇನ್ನಷ್ಟು ಮಹಾವ್ಯಕ್ತಿ ಆಗುತ್ತಿದ್ದನೋ ಎಂಬ ಪ್ರಶ್ನೆಗೆ ಉತ್ತರ ಅನುಮಾನ. ರಾಮಾನುಜನ್ನರ ದುರಂತ ಅವರು ತಾರುಣ್ಯದಲ್ಲೇ ಮಡಿದುದು ಅಲ್ಲ. ಬದಲು, ಆ ಐದು ದುರದೃಷ್ಟಕರ ವರ್ಷಗಳಲ್ಲಿ (೧೯೦೭-೧೧-ಲೇಖಕ) ಅವರ ಪ್ರತಿಭೆ ದಿಕ್ಕೆಟ್ಟು ಹೋಯಿತು, ಅದು ಹಾದಿ ತಪ್ಪಿಯಿತು ಮತ್ತು ಸ್ವಲ್ಪ ಮಟ್ಟಿಗೆ ವಿಕೃತವೂ ಆಯಿತು." ಮುಂದುವರಿ

ಯುತ್ತ ಅವರ ವ್ಯಕ್ತಿತ್ವ ಕುರಿತಂತೆ ಬರೆದಿದ್ದಾರೆಃ

"ರಾಮಾನುಜನ್ನರ ಧರ್ಮಶ್ರದ್ಧೆಯ ಪ್ರಶ್ನೆ ಅದರಷ್ಟಕ್ಕೇ ಮುಖ್ಯವಲ್ಲ. ಆದರೆ ಅದೇನೂ ಪೂರ್ತಿ ಅಸಂಗತವಲ್ಲ. ಏಕೆಂದರೆ ನಾನಿಲ್ಲಿ ಒಂದು ಸಂಗತಿಯನ್ನು ಸಾಕಷ್ಟು ಒತ್ತಿ ಹೇಳಲು ಬಯಸುತ್ತೇನೆ. ಅವರನ್ನು ಕುರಿತಂತೆ ಅರ್ಥವಿಸಲು ಕಠಿಣವಾದದ್ದು ಸಾಕಷ್ಟಿರುವುದರಿಂದ ನಾವೇನೂ ಅಡ್ಡದಾರಿ ಹಿಡಿದು ನಿಗೂಢತೆಯನ್ನು ಸೃಷ್ಟಿಸಬೇಕಾಗಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ನಾನವರನ್ನು ಅವರ ವಿಚಾರಪರತೆಗಾಗಿ ಮೆಚ್ಚಿದೆ ಹಾಗೂ ಗೌರವಿಸಿದೆ. ಅವರು ಕೇಂಬ್ರಿಜ್ಜಿನಲ್ಲಿ ಆರೋಗ್ಯವಂತರಾಗಿ ಹಿತಕರ ಪರಿಸರದಲ್ಲಿ ಬಾಳುತ್ತಿದ್ದಾಗ, ಅವರ ವೈಯಕ್ತಿಕ ವೈಚಿತ್ರ್ಯಗಳು ಏನೇ ಇದ್ದರೂ ಇಲ್ಲಿಯ ಇತರ ಯಾರೇ ವ್ಯಕ್ತಿಯಂತೆ, ವಿಚಾರಪರರೂ ವಿವೇಕಯುತರೂ ವ್ಯವಹಾರ ಕುಶಲಿಯೂ ಆಗಿದ್ದರು. ಆದ್ದರಿಂದ ಅವರನ್ನು ಚಿತ್ರಿಸಲು ನೀವು ಹಿಡಿಯಬಹುದಾದ ಕೊನೆಯ ಹಾದಿ ಎಂದರೆ ಮುಂಗಾಣದೇ ಕೈಯೆತ್ತಿ 'ಇಲ್ಲೊಂದು ಅರ್ಥಗ್ರಾಹ್ಯವಾಗದ್ದು ಇದೆ, ಪೂರ್ವದ ಅತಿ ಪ್ರಾಚೀನ ಧೀಶಕ್ತಿಯ ನಿಗೂಢ ಅವತಾರ' ಎಂದು ಉದ್ಗರಿಸುವುದು. ನಾನು ನಿಮ್ಮ ಮುಂದೆ ಇಡಲು ಆಶಿಸುವ ವ್ಯಕ್ತಿಗೆ ಇತರ ಪ್ರಸಿದ್ಧ ಪುರುಷರಂತೆ, ತನ್ನದೇ ಆದ ವೈಶಿಷ್ಟ್ಯಗಳಿದ್ದುವು. ಆದರೆ ಇವರ ಸಾಹಚರ್ಯದಲ್ಲಿ ನೀವು ಉಲ್ಲಸಿತರಾಗಿರಬಹುದಾಗಿತ್ತು, ಚಹಾ ಸೇವಿಸಿ ರಾಜಕೀಯವನ್ನಾಗಲಿ ಗಣಿತವನ್ನಾಗಲಿ ಚರ್ಚಿಸಬಹುದಾಗಿತ್ತು. ಆದ್ದರಿಂದ ಇಲ್ಲಿಯ ಚಿತ್ರ, ಸಂಕ್ಷೇಪವಾಗಿ, ಪೂರ್ವದ ಒಂದು ಅದ್ಭುತವಲ್ಲ. ಅಥವಾ ಒಬ್ಬ ಸ್ಫೂರ್ತಿವಂತ ಹೆಡ್ಡನಲ್ಲ. ಅಥವಾ ಒಂದು ಮನೋವೈಜ್ಞಾನಿಕ ಅಸಹಜತೆಯೂ ಅಲ್ಲ, ಬದಲು ಮಹಾಪುರುಷನಾಗಿದ್ದ ಒಬ್ಬ ವಿಚಾರಪರ ವ್ಯಕ್ತಿ."

ರಾಮಾನುಜನ್ ಹಿಡಿದ ಜಾಡು, ಸೃಷ್ಟಿಸಿದ ಸಮಸ್ಯೆಗಳು ಮತ್ತು ಪಡೆದ ಫಲಿತಾಂಶಗಳೇ ೧೯೭೩ರ ವೇಳೆಗೆ ಪೂರ್ತಿಯಾಗಿ ವಿಶ್ಲೇಷಿಸಲ್ಪಟ್ಟು ಈ ಕೆರೆ ಬತ್ತಿ ಹೋಯಿತೋ ಎಂಬ ಭಾವ ಮೂಡಿತ್ತು. ಆದರೆ ತರುವಾಯದ ವರ್ಷಗಳಲ್ಲಿ ಗಣಕ ಹಾಗೂ ಗಣಕ ಭಾಷೆ ವಲಯಗಳಲ್ಲಿ



ಯುಗಪ್ರವರ್ತಕ ಬದಲಾವಣೆಗಳಾಗಿ ಈ ನಿಟ್ಟಿನಲ್ಲಿ ರಾಮಾನುಜನ್ ಸಮಸ್ಯೆಗಳಿಗೆ ಅಧಿಕ ಮಹತ್ತ್ವ ಪ್ರಾಪ್ತವಾಗಿದೆ, ಕೆರೆಯಲ್ಲಿ ಹೊಸ ಊಟೆ ಚಿಮ್ಮುತ್ತಿರುವುದು ಗೋಚರವಾಗಿದೆ.

ಸಾಧ್ಯವೂ ಇಲ್ಲ. π ಯ ಬೆಲೆಗೆ ಗಣಿತವಿದರು ಹಲವಾರು ಸೂತ್ರಗಳನ್ನು ನೀಡಿದ್ದಾರೆ. ರಾಮಾನುಜನ್ ಸೂತ್ರ ಹೀಗಿದೆ:

ಅಮೇರಿಕದ ಗಣಿತಜ್ಞನೊಬ್ಬ ೧೯೮೬ ರಲ್ಲಿ

$$\frac{1}{\pi} = 2\sqrt{2} \sum_{n=0}^{\infty} \frac{(\frac{1}{4})_n(\frac{1}{2})_n(\frac{3}{4})_n}{(1)_n(1)_n n!} (1103 + 26390n) (\tfrac{1}{99})^{4n+2}$$

ಯಾವುದೇ ವೃತ್ತದ ಪರಿಧಿಯನ್ನು ಅದರ ವ್ಯಾಸದಿಂದ ಭಾಗಿಸಿದಾಗ, ವೃತ್ತದ ಗಾತ್ರ ಎಷ್ಟೇ ಇದ್ದರೂ, ಒಂದೇ ಸ್ಥಿರಾಂಕ ದೊರೆಯುತ್ತದೆ. ಇದನ್ನು ಗ್ರೀಕ್ ಅಕ್ಷರ π (ಪೈ)ಯಿಂದ ಸೂಚಿಸುವುದು ವಾಡಿಕೆ. ಇದರ ಸ್ಥೂಲ ಬೆಲೆ ೨೨/೭. ಸೂಕ್ಷ್ಮ ಬೆಲೆ? ನಿಷ್ಕೃಷ್ಟ ಬೆಲೆ? ಆಳ ಅಥವಾ ಮೇರೆ ಕಂಡವರಿಲ್ಲ, ಕಾಣುವುದು

ಈ ಸೂತ್ರವನ್ನು ಉಪಯೋಗಿಸಿ ಗಣಕದ ನೆರವಿನಿಂದ π ಯ ಬೆಲೆಯನ್ನು ೧೭೦೦ ಕೋಟಿ ದಶಮಾಂಶ ಸ್ಥಾನಗಳ ವರೆಗೆ ಶೋಧಿಸಿ ಸೂತ್ರ ಸರಿಯಾಗಿದೆಯೆಂದು ಕಂಡುಕೊಂಡ.

ರಾಮಾನುಜನ್ ಎಂಬ ಸ್ಯಮಂತಕಮಣಿ ಉದುರಿಸಬಹುದಾದ ಅನರ್ಘ್ಯ ರತ್ನಗಳು ಎಷ್ಟು ಇವೆಯೋ! ✡



ಮತ್ತೆ ಮತ್ತೆ ಮದುವೆ?

ತಾವು ಸದಾ ನವದಂಪತಿ ಎಂಬುದನ್ನು ಅನುಭವಿಸುವುದಕ್ಕಾಗಿ ಸೀಟಲ್‌ನ ಜಾಕ್ ವಿ. ಮತ್ತು ಎಡ್ನಾ ವೊರಾನ್ ಮತ್ತೆ ಮತ್ತೆ ಒಬ್ಬರನ್ನೊಬ್ಬರು ಮದುವೆಯಾಗುತ್ತಾರೆ. ಈ ವರೆಗೆ ಹೀಗವರು ೪೦ ಸಲ ಮದುವೆ ಮಾಡಿಕೊಂಡಿದ್ದಾರೆ. ಮೊದಲ ಬಾರಿಗೆ ಅವರು ಸತಿ-ಪತಿಯಾದದ್ದು ೧೯೩೭ರ ಜುಲೈ ೨೭ರಂದು. ಮುಂದೆ ಕೆನಡಾ, ಈಜಿಪ್ತ್, ಅಮೇರಿಕ, ಫ್ರಾನ್ಸ್ ಮುಂತಾದ ಕಡೆಗಳಲ್ಲಿ 'ಮನಸ್ಸಾದಾಗ' ಪರಸ್ಪರ ನವದಂಪತಿಯಾಗಿಬಿಟ್ಟಿದ್ದಾರೆ!

Edited, printed and published by M. N. Mahishi on behalf of the Loka Shikshana Trust, Samyukta Karnataka Press, Koppikar Road, Hubli -580020 Phone: 64307, Rept: Bombay: V. Satyamurthi. Phone; 5510502, Madras. S. K. Murthi. Phone: 414870. New Delhi: V. K. Chopra. Phone: 7114785.

Registered with the Registrar of Newspapers for India under No 35/3957




ಬೆಳೆಯಲು ರುಚಿಕರ ಸಾಧನ ಅದುವೆ ಫೆರೆಕ್ಸ್® ವಿಧಾನ !

ನಿಮ್ಮ ಮಗುವಿನ ಎತ್ತರ ಹಾಗೂ ತೂಕ ನೋಡಿರಿ*	ಗಂಡು ಮಗು		ಹೆಣ್ಣು ಮಗು	
	ತೂಕ	ಎತ್ತರ	ತೂಕ	ಎತ್ತರ
3 ತಿಂಗಳು	**5.2** ಕಿಲೊ	59.1 ಸೆಂ.ಮೀ.	**4.9** ಕಿಲೊ	58.4 ಸೆಂ.ಮೀ.
6 ತಿಂಗಳು	**6.7** ಕಿಲೊ	64.7 ಸೆಂ.ಮೀ.	**6.1** ಕಿಲೊ	63.7 ಸೆಂ.ಮೀ.
9 ತಿಂಗಳು	**7.3** ಕಿಲೊ	68.2 ಸೆಂ.ಮೀ.	**6.9** ಕಿಲೊ	67.0 ಸೆಂ.ಮೀ.
12 ತಿಂಗಳು	**8.4** ಕಿಲೊ	73.9 ಸೆಂ.ಮೀ.	**7.8** ಕಿಲೊ	72.5 ಸೆಂ.ಮೀ.

* ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ ಪ್ರಕಟನೆ.

ಭಾರತೀಯ ಮಕ್ಕಳಿಗಾಗಿ ಇದು ಸರಾಸರಿ ತೂಕ, ಎತ್ತರ ಮಾತ್ರ. ಮಗುವಿನ ಬೆಳವಣಿಗೆಯ ಬಗ್ಗೆ ನಿಮ್ಮ ಡಾಕ್ಟರರಿಗೆ ತೃಪ್ತಿಯಿದ್ದರೆ, ನೀವು ಚಿಂತಿಸಬೇಕಾಗಿಲ್ಲ.

ಶಿಶು-ಪಾಲನೆಯ ಬಗ್ಗೆ ಇರುವ ವರ್ಣರಂಜಿತ <u>ಉಚಿತ</u> ಪುಸ್ತಿಕೆಗಾಗಿ ಬರೆಯಿರಿ : ಗ್ಲ್ಯಾಂಡಿಯಾ ಲಿಮಿಟೆಡ್, (FPD/244), ಡಾಕ್ಟರ್ ಎನ್ನಿ ಬೆಸೆಂಟ್ ರೋಡ್, ವರ್ಲಿ, ಬೊಂಬಾಯಿ-400 025



ಸರ್ವಾಂಗೀಣ ವಿಕಾಸ ಹಾಗೂ ಬೆಳವಣಿಗೆಗಾಗಿ ನಿಮ್ಮ ಮಗುವಿಗೆ ಪೋಷಣೆಯಿಂದ ಸಮೃದ್ಧವಾದ ಫೆರೆಕ್ಸ್ ಕೊಡಿರಿ.

ಫೆರೆಕ್ಸ್®

ಬೆಳೆಯಲು ರುಚಿಕರ ಸಾಧನ

KASTURI PRICE : 2-50 Reg. No. KRNG
Licence No. L2120/WPP No.

Cover Printed at. Bharat Photo Offset Works, Dharwad-580 001. Ph. 80